
ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಭಾನುವಾರ, 24 ಮೇ 2026
ಸಂಪುಟ 16, ಸಂಚಿಕೆ 60, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital



ವಿಶ್ವದ ಬೃಹತ್ ಶಸ್ತ್ರಾಸ್ತ್ರ ರಫ್ತುದಾರ ಭಾರತ ಶೀಘ್ರ: ರಾಜನಾಥ್ ಸಿಂಗ್

|೧೦

ಯುದ್ಧದ ತಂತ್ರಗಳಲ್ಲಿ ವೇಗದ ಬದಲಾವಣೆ: ಸಿಡಿಎಸ್



|೧೦

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ:ಪೂರ್ವೆ

ದಿನದ ಮಾತು

ಜಾಣ ಮಾತನ್ನು ಪ್ರಶಂಸಿಸಿ, ಸಜ್ಜನರೊಂದಿಗೆ ಮಾತಾಡಬೇಕೇ ಹೊರತು, ಅಜ್ಞರೊಂದಿಗೆ ಮಾತಾಡುವುದಲ್ಲ.

▲ಚೂಡಾರತ್ನ ಶತಕ

ಸ್ಕೀನನು ಕೊಂಡೀರಾ

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ನಿತಿನ್ ನವೀನ್ ಭೇಟಿ: ಬಿಜೆಪಿಯಲ್ಲಿ ಉತ್ಸಾಹ

• **ಬೆಂಗಳೂರು:** ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ ಇದೇ ಮೊದಲ ಬಾರಿಗೆ ನಿತಿನ್ ನವೀನ್ ಬೆಂಗಳೂರಿಗೆ ಆಗಮಿಸಿದ್ದಾರೆ. ಇದು ಪಕ್ಷದಲ್ಲಿ ಉತ್ಸಾಹಕ್ಕೆ ಕಾರಣವಾಗಿದೆ. ರಾಷ್ಟ್ರೀಯ ಅಧ್ಯಕ್ಷರ ಮಾರ್ಗದರ್ಶನದಲ್ಲಿ ಪಕ್ಷ ಸಂಘಟನೆ ಇನ್ನಷ್ಟು ಬಲವಾಗಲಿದೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ನಿತಿನ್ ನವೀನ್ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ-ಉಸ್ತುವಾರಿ ಸುಧಾಕರ್ ರೆಡ್ಡಿ ಮುಂತಾದವರು ಸ್ವಾಗತಿಸಿದರು.

• ಪುಟ ೮

ಬಿಸಿಗಾಳಿಗೆ ಆಂಧ್ರದಲ್ಲಿ ಒಂದೇ ದಿನ 21 ಸಾವು

• **ಅಮರಾವತಿ:** ಆಂಧ್ರಪ್ರದೇಶದಲ್ಲಿ ಮುಂದುವರಿದಿರುವ ತೀವ್ರ ಬಿಸಿಗಾಳಿ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ್ದು, ಹೆಚ್ಚಿದ ತಾಪಮಾನಕ್ಕೆ ಒಂದೇ ದಿನ 21 ಮಂದಿ ಮೃತಪಟ್ಟಿರುವ ಘಟನೆ ಆತಂಕ ಮೂಡಿಸಿದೆ. ಇನ್ನು ಆಂಧ್ರದ ನೆರೆ ರಾಜ್ಯ ತೆಲಂಗಾಣದಲ್ಲಿ ಬಿಸಿಲಿನ ತಾಪಕ್ಕೆ 16 ಜನ ಮೃತಪಟ್ಟಿದ್ದಾರೆ.

• ಪುಟ ೧೦

ಚೀನಾದ ಗಣಿ ಸ್ಫೋಟ, 90 ಕಾರ್ಮಿಕರ ಸಾವು

• ಪುಟ ೧೦

ಕೈ ಮುಖಂಡ ಅಜಯ್ ರೈ ವಿರುದ್ಧ ಬಿಜೆಪಿ ಕಿಡಿ

• ಪುಟ ೧೦

ಆನೇಕಲ್‌ನ ಇಂಡ್ಲವಾಡಿಯಲ್ಲಿ ದೇಶದ ಎರಡನೇ ಬೃಹತ್ ಕ್ರಿಕೆಟ್ ಕ್ರೀಡಾಂಗಣಕ್ಕೆ ಶಂಕು | 2 ವರ್ಷದಲ್ಲಿ ಪೂರ್ಣ: ಸಿಎಂ ಸಿದ್ದರಾಮಯ್ಯ

ಚಿನ್ನಸ್ವಾಮಿಗೆ ಪರ್ಯಾಯ



ಬೃಹತ್ ಕ್ರಿಕೆಟ್ ಕ್ರೀಡಾಂಗಣಕ್ಕೆ ಶನಿವಾರ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಕ್ರಿಕೆಟ್ ಆಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ.



ಸೂರ್ಯಶೈನ್ ಮತ್ತು ಸೂರ್ಯ ಡಿವೈನ್, ವಸತಿ ಸಮುಚ್ಚಯಗಳಿಗೆ ಹಾಗೂ ವಸತಿ ಯೋಜನೆಗೆ ಭೂಮಿ ನೀಡಿದ ಭೂಮಾಲೀಕರಿಗೆ ಸಾಂಕೇತಿಕ ನಿವೇಶನ ಹಂಚಿಕೆ ಪತ್ರ ವಿತರಿಸಿದ ಸಿದ್ದರಾಮಯ್ಯ. ಜತೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಜಮೀರ್ ಅಹಮದ್ ಖಾನ್ ಮೊದಲಾದವರಿದ್ದರು.

• **ಆನೇಕಲ್:** ಕ್ರೀಡೆ ಹಾಗೂ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ. ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ಬೃಹತ್ ಕ್ರಿಕೆಟ್ ಕ್ರೀಡಾಂಗಣ ಇರಲಿಲ್ಲ. ಹೀಗಾಗಿ ಆನೇಕಲ್ ತಾಲೂಕಿನ ಇಂಡ್ಲವಾಡಿ ಸೂರ್ಯನಗರದ 4ನೇ ಹಂತದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ತಾಲೂಕಿನ ಸೂರ್ಯನಗರದ ನಾಲ್ಕನೇ ಹಂತದ ಇಂಡ್ಲವಾಡಿ ಬಳಿ 80 ಸಾವಿರ ಆಸನಗಳ ಸಾಮರ್ಥ್ಯವಿರುವ 945 ಕೋಟಿ ರೂಪಾಯಿ ವೆಚ್ಚದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಭೂಮಿ ಪೂಜೆ, ಮುಖ್ಯಮಂತ್ರಿಗಳ ನಮ್ಮ ಮನೆ, ಸೂರ್ಯಶೈನ್ ಮತ್ತು ಸೂರ್ಯ ಡಿವೈನ್, ವಸತಿ ಸಮುಚ್ಚಯಗಳಿಗೆ ಹಾಗೂ ವಸತಿ ಯೋಜನೆಗೆ ಭೂಮಿ ನೀಡಿದ ಭೂಮಾಲೀಕರಿಗೆ ಸಾಂಕೇತಿಕ ನಿವೇಶನ ಹಂಚಿಕೆ ಪತ್ರ ನೀಡಿಕೆ ಸೇರಿದಂತೆ ಹಲವು ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ದುರಂತದಲ್ಲಿ ಅನೇಕ ಸಾವು ನೋವು ಉಂಟಾಯಿತು. ಈ ಹಿನ್ನೆಲೆಯಲ್ಲಿ 80 ಸಾವಿರ ಆಸನ ಸಾಮರ್ಥ್ಯವಿರುವ ದೇಶದ ಎರಡನೇ ದೊಡ್ಡ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸಲು ಉದ್ದೇಶಿಸಲಾಯಿತು.

➡ಪುಟ ೭

- ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿರ್ಮಾಣ
- ಸುಮಾರು 75 ಎಕರೆ ಜಾಗದಲ್ಲಿ ಕ್ರೀಡಾಂಗಣ
- 945 ಕೋಟಿ ರೂ. ವೆಚ್ಚದಲ್ಲಿ ಸ್ಟೇಡಿಯಂ
- 80 ಸಾವಿರ ಆಸನಗಳ ಸಾಮರ್ಥ್ಯ

ಶಾಲೆ ನಿರ್ಮಾಣಕ್ಕೆ 10 ಎಕರೆ: ಜಮೀರ್

ಸೂರ್ಯನಗರ ನಾಲ್ಕನೇ ಹಂತಕ್ಕೆ ಸುಮಾರು 3974 ಎಕರೆ ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ರೈತರು ಯಾವುದೇ ತೊಂದರೆ ನೀಡದೆ ಸಹಕಾರ ನೀಡಿದ್ದಾರೆ. ಅಂತಾರಾಷ್ಟ್ರೀಯ ಕ್ರೀಡಾಂಗಣವಲ್ಲದೆ ಶಾಲೆ ನಿರ್ಮಾಣಕ್ಕೆ 10 ಎಕರೆ ಜಾಗ ಮೀಸಲಿಡಲಾಗುವುದು ಎಂದು ವಸತಿ ಸಚಿವ ಜಮೀರ್ ಅಹಮದ್ ಹೇಳಿದರು.

➡ಪುಟ ೭

2 ಸಾವಿರ ಕೋಟಿ ವೆಚ್ಚದಲ್ಲಿ ಕ್ರೀಡಾನಗರ: ಡಿಕೆಶಿ

ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣಕ್ಕೆ ಮಾಜಿ ಸಂಸದ ಡಿ.ಕೆ.ಸುರೇಶ್ ಹಾಗೂ ಶಾಸಕ ಬಿ.ಶಿವಣ್ಣ ಅವರ ಒತ್ತಾಸೆಯೇ ಕಾರಣವಾಗಿದೆ. ಹೀಗಾಗಿ ಸುಮಾರು ಎರಡು ಸಾವಿರ ಕೋಟಿ ರೂ. ವೆಚ್ಚದಲ್ಲಿ ಕ್ರೀಡಾನಗರ ನಿರ್ಮಿಸಲು ಸಾಧ್ಯವಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು. ಸೂರ್ಯನಗರದ 4ನೇ ಹಂತಕ್ಕೆ ಕಾವೇರಿ ನೀರು ಮತ್ತು ಮೆಟ್ರೋ ಸೇರಿದಂತೆ ಇನ್ನು ಹೆಚ್ಚು ಸೌಕರ್ಯಗಳನ್ನು ಒದಗಿಸಲಾಗುವುದು.

➡ಪುಟ ೭

ಶ್ವೇತಭವನಕ್ಕೆ ಮೋದಿ ಆಹ್ವಾನಿಸಿದ ಟ್ರಂಪ್

ಅಮೆರಿಕ-ಭಾರತ ಬಂಧ ವೃದ್ಧಿ ಯತ್ನ

• **ಹೊಸದಿಲ್ಲಿ:** ಭಾರತ ಮತ್ತು ಅಮೆರಿಕ ಜಾಗತಿಕ ಹಿತಾಸಕ್ತಿಗಾಗಿ ಇನ್ನಷ್ಟು ಸಮನ್ವಯದಿಂದ ಕಾರ್ಯನಿರ್ವಹಿಸಲಿವೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ, ಶನಿವಾರ ಪ್ರಧಾನಿ ಮೋದಿಯನ್ನು ಭೇಟಿ ಮಾಡಿ ಪಶ್ಚಿಮ ಏಷ್ಯಾ ಬಿಕ್ಕಟ್ಟು, ರಕ್ಷಣಾ ಸಹಕಾರ, ತಂತ್ರಜ್ಞಾನ, ವ್ಯಾಪಾರ ಮತ್ತು ಇಂಧನ ಭದ್ರತೆ ಕುರಿತು ವಿಸ್ತೃತ ಮಾತುಕತೆ ನಡೆಸಿದರು.



ಭಾರತ ಪ್ರವಾಸಕ್ಕೆ ಬಂದಿರುವ ರೂಬಿಯೊ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪರವಾಗಿ ಪ್ರಧಾನಿ ಮೋದಿಗೆ ಶೀಘ್ರದಲ್ಲೇ ವೈಟ್‌ಹೌಸ್‌ಗೆ ಭೇಟಿ ನೀಡುವಂತೆ ಆಹ್ವಾನ ನೀಡಿದ್ದಾರೆ ಎಂದು ಅಮೆರಿಕ ರಾಯಭಾರಿ ಸರ್ಜಿಯೋ ಗಾರ್ ತಿಳಿಸಿದ್ದಾರೆ.

ಭೇಟಿಯ ಬಳಿಕ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿದ ಮೋದಿ, 'ಭಾರತ-ಅಮೆರಿಕ ಸಮಗ್ರ ಜಾಗತಿಕ ತಂತ್ರಾತ್ಮಕ ಸಹಭಾಗಿತ್ವದ ನಿರಂತರ ಪ್ರಗತಿ ಹಾಗೂ ಪ್ರಾದೇಶಿಕ ಮತ್ತು ಜಾಗತಿಕ ಶಾಂತಿ-ಭದ್ರತೆ ವಿಚಾರಗಳ ಬಗ್ಗೆ ಚರ್ಚೆ ನಡೆಸಿದೆವು' ಎಂದು ತಿಳಿಸಿದ್ದಾರೆ.

➡ಪುಟ ೭

- ಮೋದಿ-ಅಮೆರಿಕ ವಿದೇಶಾಂಗ ಕಾರ್ಯದರ್ಶಿ ರೂಬಿಯೊ ಭೇಟಿ
- ಪಶ್ಚಿಮ ಏಷ್ಯಾ ಬಿಕ್ಕಟ್ಟು, ರಕ್ಷಣಾ ಸಹಕಾರ, ವ್ಯಾಪಾರ ಚರ್ಚೆ



ಪಶ್ಚಿಮ ಏಷ್ಯಾ ಸ್ಥಿತಿ ಕುರಿತು ಚರ್ಚೆ

ಪಶ್ಚಿಮ ಏಷ್ಯಾದ ಇತ್ತೀಚಿನ ಬೆಳವಣಿಗೆಗಳ ಕುರಿತು ರೂಬಿಯೊ, ಪ್ರಧಾನಿ ಮೋದಿ ಅವರಿಗೆ ಅಮೆರಿಕದ ನಿಲುವು ವಿವರಿಸಿದ್ದಾರೆ. ಈ ವೇಳೆ ಶಾಂತಿ ಮತ್ತು ರಾಜತಾಂತ್ರಿಕ ಮಾತುಕತೆಯ ಮೂಲಕ ಸಮಸ್ಯೆಗಳನ್ನು ಬಗೆಹರಿಸಬೇಕೆಂಬ ಭಾರತದ ನಿಲುವನ್ನು ಮೋದಿ ಪುನರುಚ್ಚರಿಸಿದರು.

➡ಪುಟ ೭

ಸಂಬಂಧ ಸುಧಾರಣೆಗೆ ಹೊಸ ಪ್ರಯತ್ನ

ಕಳೆದ ವರ್ಷ ಅಮೆರಿಕ ಭಾರತ ಮೇಲಿನ ಹೆಚ್ಚುವರಿ ಸುಂಕ ಕ್ರಮ ಹಾಗೂ ಭಾರತ-ಪಾಕಿಸ್ತಾನ ಉದ್ವಿಗ್ನತೆ ವಿಚಾರದಲ್ಲಿ ಟ್ರಂಪ್ ನೀಡಿದ್ದ ಹೇಳಿಕೆಗಳಿಂದ ಉಭಯ ರಾಷ್ಟ್ರಗಳ ಸಂಬಂಧದಲ್ಲಿ ಕೆಲ ಮಟ್ಟಿನ ತಣ್ಣನೆ ಉಂಟಾಗಿತ್ತು. ಆದರೆ ಇತ್ತೀಚಿನ ತಿಂಗಳುಗಳಲ್ಲಿ ಸಂಬಂಧ ಪುನಃ ಬಲಪಡಿಸಲು ಎರಡೂ ರಾಷ್ಟ್ರಗಳು ಪ್ರಯತ್ನ ನಡೆಸುತ್ತಿವೆ. ಶೀಘ್ರದಲ್ಲೇ ಪರಸ್ಪರ ಲಾಭದಾಯಕ ವ್ಯಾಪಾರ ಒಪ್ಪಂದ ಅಂತಿಮಗೊಳಿಸುವ ದಿಸೆಯಲ್ಲಿ ಚರ್ಚೆಗಳು ನಡೆಯುತ್ತಿವೆ.

ಮಿಷನ್ 500 ಗುರಿಗೆ ವೇಗ

• ಪುಟ ೭

ಶೇ.60 ಏರಿಕೆ | ವೇತನ ಹೆಚ್ಚಿಸಿದ 3ನೇ ರಾಜ್ಯ ಕರ್ನಾಟಕ

ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳ

• **ಬೆಂಗಳೂರು:** ಕಾರ್ಮಿಕರ ಕನಿಷ್ಠ ವೇತನವನ್ನು ಸರಾಸರಿ ಶೇ.60ರಷ್ಟು ಏರಿಕೆ ಮಾಡಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಈ ಅಧಿಸೂಚನೆಯು ರಾಜ್ಯದ ಅಸಂಘಟಿತ ಮತ್ತು ನಿರ್ದಿಷ್ಟ ವಲಯಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಆರ್ಥಿಕ ಸೌಲಭ್ಯ ಒದಗಿಸಲಿದೆ. ಸುಪ್ರೀಂಕೋರ್ಟ್ ನಿರ್ದೇಶನ ದನ್ವಯ ಈ ವೇತನ ಪರಿಷ್ಕರಣೆ ಮಾಡಲಾಗಿದೆ.



ಇದೇ ಮೊದಲ ಬಾರಿಗೆ ಎಲ್ಲಾ ನಿಗದಿತ ಉದ್ಯೋಗಗಳನ್ನು ಒಂದೇ ಅಧಿಸೂಚನೆಯಲ್ಲಿ ತರಲಾಗಿದೆ. ಈ ಹಿಂದೆ ಇದ್ದ ನಾಲ್ಕು ವಲಯಗಳ ವರ್ಗೀಕರಣವನ್ನು ಮೂರು ವಲಯಗಳಿಗೆ ಪರಿಷ್ಕರಿಸಲಾಗಿದೆ. ಈ ಮೂಲಕ ರಾಜ್ಯದ ಕೋಟ್ಯಂತರ ಕಾರ್ಮಿಕರಿಗೆ ಸರ್ಕಾರ, ಕಾರ್ಮಿಕ ಇಲಾಖೆಯ ಮೂಲಕ ಭರ್ಜರಿ ಕೊಡುಗೆ ನೀಡಿದೆ.

➡ಪುಟ ೭

ಏರಿಕೆ ಲೆಕ್ಕಾಚಾರ ಹೇಗೆ?

ವಲಯ 3 ರಲ್ಲಿನ ಕೌಶಲರಹಿತ ಕಾರ್ಮಿಕರಿಗೆ 19,300 ರೂ.ರಿಂದ ವಲಯ 1ರಲ್ಲಿ ಹೆಚ್ಚು ಕೌಶಲಪೂರ್ಣ ಕಾರ್ಮಿಕರಿಗೆ 31,100 ರೂ.ರವರೆಗೆ ಏರಿಕೆ ಮಾಡಲಾಗಿದೆ. ಎರಡು ವರ್ಷಗಳ 1,030 ರೂ. ಮೊತ್ತದ ವಿಡಿಎಯನ್ನು (ಹಣದುಬ್ಬರಕ್ಕೆ ಅನುಗುಣವಾಗಿ ಭತ್ಯೆ) ಕನಿಷ್ಠ ವೇತನದಲ್ಲಿ ಸೇರಿಸಲಾಗಿದೆ. ಕನಿಷ್ಠ ವೇತನ ಲೆಕ್ಕಾಚಾರ ಮಾಡಲು ರಾಜ್ಯವನ್ನು ಮೂರು ವಲಯಗಳಾಗಿ ವರ್ಗೀಕರಿಸಲಾಗಿದೆ. ಗ್ರೇಟರ್ ಬೆಂಗಳೂರು ಪ್ರದೇಶವು ವಲಯ 1ರ ಅಡಿಯಲ್ಲಿ ಬರಲಿದೆ. ವಲಯ 2ರಲ್ಲಿ ಜಿಲ್ಲಾ ಕೇಂದ್ರಗಳು ಬರಲಿವೆ ಮತ್ತು ಉಳಿದ ಪ್ರದೇಶಗಳು ವಲಯ 3ರ ಅಡಿಯಲ್ಲಿ ವರ್ಗೀಕರಿಸಲಾಗಿದೆ.

51 ಸಾವಿರಕ್ಕೂ ಅಧಿಕ ನೇಮಕ ಪತ್ರ ವಿತರಿಸಿದ ಪ್ರಧಾನಿ ಮೋದಿ

ಭಾರತದ ಯುವಶಕ್ತಿಗೆ ಉದ್ಯೋಗ

• **ಹೊಸದಿಲ್ಲಿ:** ದೇಶದ ಯುವಶಕ್ತಿಗೆ ಪೂರಕವಾಗಲೆಂದೇ ಅಂತಾರಾಷ್ಟ್ರೀಯ ಪಾಲುದಾರಿಕೆಗಳನ್ನು ಉದ್ದೇಶಪೂರ್ವಕವಾಗಿ ಸೃಷ್ಟಿಸಲಾಗಿದೆ. ಭಾರತದಯುವಶಕ್ತಿಗೆಉದ್ಯೋಗದೊರೆಯಬೇಕು ಮತ್ತು ನಮ್ಮ ಯುವಕರು ಜಾಗತಿಕವಾಗಿ ಗುರುತಿಸಲ್ಪಡಬೇಕೆಂಬುದು ಪಾಲುದಾರಿಕೆಗಳ ಹಿಂದಿನ ನೈಜ ಆಶಯ. ಅದೆಷ್ಟೋ ರಾಷ್ಟ್ರಗಳನ್ನು ಪ್ರತಿನಿಧಿಸುವ ಜಾಗತಿಕ ಸಂಸ್ಥೆಗಳ ನಾಯಕರು ಭಾರತದ ಯುವಶಕ್ತಿ ಸಾಮರ್ಥ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಮತ್ತು ರಾಷ್ಟ್ರದ ತಾಂತ್ರಿಕ ಮುನ್ನಡೆಯನ್ನು ಕೊಂಡಾಡಿದ್ದಾರೆ. ಜಗತ್ತು ಭಾರತದ ಅಭಿವೃದ್ಧಿ ಯಾನದ ಭಾಗವಾಗಲು ಆಶಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಇಡೀ ಜಗತ್ತು ಭಾರತದ ಯುವಶಕ್ತಿಯ ಪ್ರತಿಭೆ- ಸಾಮರ್ಥ್ಯಗಳನ್ನು ಕೊಂಡಾಡುತ್ತಿರುವುದು ಪಂಚ ರಾಷ್ಟ್ರಗಳಿಗೆ ಪ್ರವಾಸ ಸಂದರ್ಭ ತನ್ನ ಗಮನಕ್ಕೆ ಬಂತು ಎಂದು ಪ್ರಧಾನಿ ಮೋದಿ ಹೆಮ್ಮೆ ವ್ಯಕ್ತಪಡಿಸಿದರು.

➡ಪುಟ ೭



ಮಂಗಳೂರಲ್ಲಿ 4 ಸಭಾಭವನ ಏಕಕಾಲಕ್ಕೆ ಲೋಕಾರ್ಪಣೆ | ಪಾಲೆಮಾರ್ ಮಾಹಿತಿ

ಸಭಾಭವನ ಲಾಭಾಂಶ ಶಿಕ್ಷಣಕ್ಕೆ ವಿನಿಯೋಗ

• **ಮಂಗಳೂರು:** ಕರಾವಳಿಯ ಹೆಮ್ಮೆಯ ಹಾಗೂ ಅತ್ಯಂತ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಸಂಸ್ಥೆಯಾದ ಲ್ಯಾಂಡ್ ಲಿಂಕ್ಸ್, ಕರಾವಳಿ ಭಾಗದಲ್ಲಿ ಕಳೆದ 45 ವರ್ಷಗಳಿಂದ ತನ್ನ ಪ್ರಾಮಾಣಿಕ ಮತ್ತು ಯಶಸ್ವಿ ಉದ್ಯಮದ ಮೂಲಕ ಲಕ್ಷಾಂತರ ಜನರ ನಂಬಿಕೆಯನ್ನು ಗಳಿಸಿದೆ. ಇದರ ಸವಿನೆನಪಿಗಾಗಿ ಭವ್ಯವಾದ ನಾಲ್ಕು ಸಭಾಭವನಗಳನ್ನು ಸಮಾಜಕ್ಕೆ ಲೋಕಾರ್ಪಣೆ ಮಾಡಲಾಗಿದೆ. ಇದರಿಂದ ಬರುವ ಲಾಭಾಂಶವನ್ನು ವಿದ್ಯಾರ್ಥಿಗಳ ಶಿಕ್ಷಣಕ್ಕೆ ವಿನಿಯೋಗಿಸಲು ಚಿಂತನೆ ನಡೆಸಲಾಗಿದೆ ಎಂದು ಲ್ಯಾಂಡ್ ಲಿಂಕ್ಸ್ ಸಂಸ್ಥೆಯ ರೂವಾರಿ, ಮಾಜಿ ಸಚಿವ ಕೃಷ್ಣ ಜೆ. ಪಾಲೆಮಾರ್ ಹೇಳಿದರು.

ಮಂಗಳೂರಿನ ಪ್ರಮುಖ ನಾಲ್ಕು ಸ್ಥಳಗಳಲ್ಲಿ ಪ್ರಪ್ರಥಮ ಬಾರಿಗೆ ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡ, ನಾಡಿನ ಜನತೆಗೆ ಯೋಗ್ಯವಾದ 4 ಭವ್ಯ ಸಭಾಭವನಗಳನ್ನು ಶನಿವಾರ ಏಕಕಾಲದಲ್ಲಿ ಲೋಕಾರ್ಪಣೆಮಾಡಲಾಗಿದ್ದು, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

➡ಪುಟ ೭



ಮನರೇಗಾಗೆ ಅಧಿಕೃತ ವಿದಾಯ | ಡಿಬಿಟಿ ಮೂಲಕವೇ ವೇತನ ಪಾವತಿ

ವಿಬಿ-ಜಿ ರಾಮ್‌ಜಿ ಜು.1ರಿಂದ ಜಾರಿ

• **ಹೊಸದಿಲ್ಲಿ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ (ಎಂಜಿಎನ್‌ಆರ್ ಇಜಿಎ) ಬದಲಾಗಿ ಜಾರಿಯಾಗಲಿರುವ ವಿಕಸಿತ ಭಾರತ-ಗ್ರಾಮೀಣ ಉದ್ಯೋಗ ಮತ್ತು ಜೀವನೋಪಾಯ ಮಿಷನ್ (ವಿಬಿ-ಜಿ ರಾಮ್ ಜಿ) ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಶನಿವಾರ ಕರಡು ನಿಯಮಾವಳಿ ಪ್ರಕಟಿಸಿದೆ. ಜು.1ರಿಂದ ದೇಶಾದ್ಯಂತ ಹೊಸ ಯೋಜನೆ ಜಾರಿಗೆ ಬರಲಿದ್ದು, ಅಂತಿಮ ಅನುಮೋದನೆಗೂ ಮುನ್ನ ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನಿಸಲಾಗಿದೆ.

2025ರ ಕಾಯ್ದೆಯ ಸೆಕ್ಷನ್ 33 ಸೇರಿದಂತೆ ವಿವಿಧ ವಿಧಿಗಳಲ್ಲಿ ಈ ಕರಡು ನಿಯಮಗಳನ್ನು ರೂಪಿಸಲಾಗಿದ್ದು, ರಾಜ್ಯಗಳು, ತಜ್ಞರು, ಕಾರ್ಮಿಕ ಸಂಘಟನೆಗಳು ಹಾಗೂ ನಾಗರಿಕ ಸಮಾಜ ಸಂಸ್ಥೆಗಳೊಂದಿಗೆ ವ್ಯಾಪಕ ಚರ್ಚೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

➡ಪುಟ ೭



- ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಹೊಸ ರೂಪ
- ಮನರೇಗಾಗೆ ಬದಲಾಗಿ ಹೊಸ ಯೋಜನೆ
- ಉದ್ಯೋಗ ಖಾತರಿ 100 ದಿನಗಳಿಂದ 125 ದಿನಕ್ಕೆ ಏರಿಕೆ
- ಗ್ರಾಮಾಭಿವೃದ್ಧಿ ಮತ್ತು ಹವಾಮಾನ ಸಹಿಷ್ಣುತೆಗೆ ಒತ್ತು
- ತಂತ್ರಜ್ಞಾನ ಆಧಾರಿತ ದೂರು ಪರಿಹಾರ

ಸದ್ಯಕ್ಕೆ ಹಳೆಯ ಕಾರ್ಡ್‌ಗಳೇ ಮಾನ್ಯ

ಈ ಯೋಜನೆಯಲ್ಲಿ ಈಗಿನ ಮನರೇಗಾ ಕೆಲಸಗಳು ಮುಂದುವರಿಯಲಿದ್ದು, ಬಾಕಿ ಬಾಧ್ಯತೆಗಳ ನಿರ್ವಹಣೆ, ದಾಖಲೆಗಳ ವರ್ಗಾವಣೆ ಹಾಗೂ ಕಾರ್ಮಿಕರ ಹಕ್ಕುಗಳಿಗೆ ವ್ಯತ್ಯಯ ಉಂಟಾಗದಂತೆ ಕ್ರಮ ಕೈಗೊಳ್ಳಲಾಗುತ್ತದೆ. ಇ-ಕೆವೈಸಿ ದೃಢೀಕೃತ ಹಳೆಯ ಜಾಬ್ ಕಾರ್ಡ್‌ಗಳು ಹೊಸ ಗ್ರಾಮೀಣ ಉದ್ಯೋಗ ಖಾತರಿ ಕಾರ್ಡ್‌ಗಳು ಬಿಡುಗಡೆವರೆಗೆ ತಾತ್ಕಾಲಿಕವಾಗಿ ಮಾನ್ಯವಾಗಲಿವೆ.

➡ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,85,000**(2,90,000) ಅಪರಂಜಿ ಚಿನ್ನ: **1,59,060**(1,59,490) ಆಭರಣ ಚಿನ್ನ: **1,45,800**(1,46,200) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹96.21

4.26 ಕೋಟಿ ಫಲಾನುಭವಿಗಳಿಗೆ ಆಹಾರ ಭದ್ರತೆ । 'ಹಸಿವು ಮುಕ್ತ ಕರ್ನಾಟಕ'ದ ಕನಸು ನನಸು

ದಾಸೋಹ ಪರಂಪರೆಯ ಆಧುನಿಕ ರೂಪ ಅನ್ನಭಾಗ್ಯ

ಗ್ಯಾರಂಟಿ ವಾರ್ತೆ

ಬೆಂಗಳೂರು: 'ಆಶೆ ಇಚ್ಛೆಗೆನ್ನ ಗಾಸಿ ಮಾಡದಿರಯ್ಯಾ, ದಾಸೋಹಿಯಾಗಿರ್ಪ ದಾಸನಾಗಿರಿಸೆನ್ನ ಕೂಡಲಸಂಗಮದೇವಾ, ನಿಮ್ಮ ಧರ್ಮ'- ಜಗಜ್ಯೋತಿ ಬಸವಣ್ಣನವರ ಈ ಅಮರ ವಚನದ ಸಾಲುಗಳು ಮನುಷ್ಯನಲ್ಲಿರಬೇಕಾದ ಕರುಣೆ ಮತ್ತು ದಾಸೋಹದ ನಿಜವಾದ ಪರಿಕಲ್ಪನೆಯನ್ನು ಎತ್ತಿಹಿಡಿಯುತ್ತವೆ. ಶರಣರ ಈ ಕಲ್ಯಾಣದ ಆಶಯವೇ ಕರ್ನಾಟಕ ಸರ್ಕಾರದ 'ಅನ್ನಭಾಗ್ಯ' ಯೋಜನೆಯಾಗಿ ನಾಡಿನಲ್ಲಿ ಸಾಕಾರಗೊಂಡಿದೆ. 2023ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಪ್ರಕಟಿಸಿದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ 'ಅನ್ನಭಾಗ್ಯ' ಅತ್ಯಂತ ಪ್ರಮುಖ ಹಾಗೂ ತಳಮಟ್ಟದ ಜನರನ್ನು ತಲುಪಿದ ಯೋಜನೆಯಾಗಿ ಯಶಸ್ಸನ್ನೂ ಸಾಧಿಸಿದೆ.

ರಾಜ್ಯದ ಬಡತನ ರೇಖೆಗಿಂತ ಕೆಳಗಿರುವ (BPL) ಮತ್ತು ಅಂತ್ಯೋದಯ ಕಾರ್ಡ್ ಹೊಂದಿರುವ ಕುಟುಂಬಗಳ ಪ್ರತಿಯೊಬ್ಬ ಸದಸ್ಯನಿಗೆ ತಿಂಗಳಿಗೆ ಒಟ್ಟು 10 ಕೆಜಿ ಆಹಾರ ಧಾನ್ಯವನ್ನು ನೀಡುವ ಉದ್ದೇಶದೊಂದಿಗೆ ಈ ಯೋಜನೆಗೆ ಚಾಲನೆ ನೀಡಲಾಗಿತ್ತು. ಕೇಂದ್ರ ಸರ್ಕಾರವು ಬೇಡಿಕೆಯಷ್ಟು ಅಕ್ಕಿಯನ್ನು ಪೂರೈಸಲು ವಿಫಲವಾದಾಗ, ರಾಜ್ಯ ಸರ್ಕಾರವು ಕೈಕಟ್ಟಿ ಕೂರದೆ, ಹೆಚ್ಚುವರಿಯಾಗಿ ಘೋಷಿಸಿದ 5 ಕೆಜಿ ಅಕ್ಕಿಯ ಬದಲಾಗಿ, ಪ್ರತಿ ಕೆಜಿಗೆ 34 ರೂಪಾಯಿಯಂತೆ 2024ರ ಡಿಸೆಂಬರ್‌ವರೆಗೆ ಫಲಾನುಭವಿಗಳ ಬ್ಯಾಂಕ್ ಖಾತೆಗೆ 11,821 ಕೋಟಿ ರೂ. ನೇರವಾಗಿ ನಗದು ವರ್ಗಾವಣೆ (Direct Benefit Transfer - DBT) ಮಾಡುವ ಮೂಲಕ 'ನುಡಿದಂತೆ ನಡೆದ ಸರ್ಕಾರ' ಎಂಬ ಘೋಷವಾಕ್ಯವನ್ನು ಉಳಿಸಿಕೊಂಡಿತ್ತು. ಕಳೆದ ಮೂರು ವರ್ಷಗಳಲ್ಲಿ 4.26 ಕೋಟಿ ಬಡ ಕುಟುಂಬಗಳ ಹಸಿವು ನೀಗಿಸಿರುವ 'ಅನ್ನಭಾಗ್ಯ'ವು, ಮುಖ್ಯಮಂತ್ರಿ ಸಿದ್ದರಾಮಯ್ಯನವರ 'ಹಸಿವು ಮುಕ್ತ ಕರ್ನಾಟಕ'ದ ಕನಸನ್ನು ನನಸಾಗಿಸಿದೆ.





ದಿನಗೂಲಿ ನೌಕರರು, ಆಟೋ ಚಾಲಕರು, ಕೃಷಿ ಕಾರ್ಮಿಕರು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಕುಟುಂಬಗಳಿಗೆ ಅನ್ನಭಾಗ್ಯ ಯೋಜನೆಯಿಂದಾಗಿ ಪ್ರತಿ ತಿಂಗಳು ಆಹಾರಕ್ಕಾಗಿ ವ್ಯಯಿಸುತ್ತಿದ್ದ ಸಾವಿರಾರು ರೂಪಾಯಿಗಳು ಉಳಿತಾಯವಾಗುತ್ತಿವೆ. ಒಂದು ವರ್ಷಗಳವರೆಗೆ ಬ್ಯಾಂಕ್ ಖಾತೆಗೆ ನೇರವಾಗಿ ಜಮೆಯಾದ ನಗದು ಹಣವನ್ನು ಬಡ ಕುಟುಂಬಗಳು ಬೇಳೆಕಾಳು, ಎಣ್ಣೆ, ತರಕಾರಿ ಸೇರಿದಂತೆ ಇನ್ನಿತರ ಪೌಷ್ಟಿಕ ಆಹಾರ ಪದಾರ್ಥಗಳ ಖರೀದಿಗೆ ಹಾಗೂ ಮಕ್ಕಳ ವಿದ್ಯಾಭ್ಯಾಸದ ಖರ್ಚಿಗೆ ಬಳಸಿಕೊಂಡಿದ್ದಾರೆ. ಈ ಯೋಜನೆಯು ರಾಜ್ಯದಲ್ಲಿ ಅಪೌಷ್ಟಿಕತೆಯನ್ನು ನಿವಾರಿಸುವಲ್ಲಿ ಮತ್ತು ಗ್ರಾಮೀಣ ಭಾಗದ ಆರ್ಥಿಕತೆಗೆ ಚೇತರಿಕೆ ನೀಡುವಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದೆ.

ಕೋಟ್ಯಂತರ ಫಲಾನುಭವಿಗಳು: ಸರ್ಕಾರದ ಅಂಕಿ-ಅಂಶಗಳ ಪ್ರಕಾರ, ಅನ್ನಭಾಗ್ಯ ಯೋಜನೆಯಡಿ ರಾಜ್ಯದ 4.26 ಕೋಟಿಗೂ ಅಧಿಕ ಫಲಾನುಭವಿಗಳು ನಿರಂತರವಾಗಿ ಈ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ. 2023- 24ರವರೆಗೆ ಡಿಬಿಟಿಯಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ನೇರವಾಗಿ ಬಡವರ ಖಾತೆಗೆ ವರ್ಗಾಯಿಸುವ ಮೂಲಕ ಪಾರದರ್ಶಕತೆಯನ್ನು ಕಾಯ್ದುಕೊಂಡಿದೆ. ಪಡಿತರ ವಿತರಣಾ ವ್ಯವಸ್ಥೆಯನ್ನು (PDS) ಇನ್ನಷ್ಟು ಬಲಪಡಿಸಲಾಗಿದ್ದು, ಯಾವುದೇ ಸೋರಿಕೆಯಿಲ್ಲದೆ ಅರ್ಹರಿಗೆ ಸೌಲಭ್ಯ ತಲುಪುವಂತೆ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ.

ದೇಶದಲ್ಲೇ ಮಾದರಿ: ಕರ್ನಾಟಕದ 'ಅನ್ನಭಾಗ್ಯ' ಯೋಜನೆಯು ಕೇವಲ ಉಚಿತ ಪಡಿತರ ನೀಡುವುದಕ್ಕೆ ಸೀಮಿತವಾಗಿರದೆ, ಬಡವರ ಆಹಾರದ ಹಕ್ಕನ್ನು ಎತ್ತಿಹಿಡಿದಿದೆ. ದೇಶದ ಯಾವುದೇ ರಾಜ್ಯದಲ್ಲೂ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಉಚಿತ ಆಹಾರ ಧಾನ್ಯ ಮತ್ತು ನಗದು ವರ್ಗಾವಣೆಯ ಸೌಲಭ್ಯವನ್ನು ನೀಡಿದ ಉದಾಹರಣೆಯಿಲ್ಲ. ಕರ್ನಾಟಕದ ಈ ಹಸಿವು ಮುಕ್ತ ಮತ್ತು ಪೌಷ್ಟಿಕ ಭದ್ರತೆಯ ಮಾದರಿಯನ್ನು ಇಂದು ದೇಶದ ಇತರೆ ರಾಜ್ಯಗಳು ಹಾಗೂ ಸಾಮಾಜಿಕ ತಜ್ಞರು ಮುಕ್ತಕಂಠದಿಂದ ಶ್ಲಾಘಿಸುತ್ತಿದ್ದಾರೆ.

'ಇಂದಿರಾ ಕಿಟ್' ಶೀಘ್ರ ಅನುಷ್ಠಾನ

'ಅನ್ನಭಾಗ್ಯ' ಯೋಜನೆಯಡಿ ಹೆಚ್ಚುವರಿ 5 ಕೆ.ಜಿ ಅಕ್ಕಿ ಬದಲಾಗಿ 'ಇಂದಿರಾ' (Integrated Nutrition And Dietary Initiative for Revitalizing Annabhagya Beneficiaries) ಆಹಾರ ಕಿಟ್ ವಿತರಿಸುವ ಕುರಿತು ಈಗಾಗಲೇ ಸಂಪುಟದಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ಯೋಜನೆಯಡಿ ಕುಟುಂಬದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಐದು ಕೆಜಿ ಅಕ್ಕಿ ಬದಲಾಗಿ ತೊಗರಿ ಬೇಳೆ, ಸೂರ್ಯಕಾಂತಿ ಎಣ್ಣೆ, ಸಕ್ಕರೆ, ಉಪ್ಪು ನೀಡಲಾಗುವುದು. ಇದಕ್ಕಾಗಿ ಪ್ರತಿ ತಿಂಗಳು ಒಟ್ಟು 18,628 ಮೆ.ಟನ್ ತೊಗರಿ ಬೇಳೆ ಮತ್ತು ತಲಾ 12,419 ಮೆ.ಟನ್ ಸೂರ್ಯಕಾಂತಿ ಎಣ್ಣೆ,

ದರ ಹೆಚ್ಚಳ ವಂದತಿ: ಬಂಕ್ ಮುಂದೆ ಸರತಿ ಸಾಲು

▸ ಸಂತೋಷ ರಾಯ್ಕರ್

ಮುಂಡಗೋಡ: ಕಳೆದ ಎರಡು ವಾರಗಳಿಂದ ಮಳೆ ಸುರಿಯುತ್ತಿರುವುದರಿಂದ ತಾಲೂಕಿನ ರೈತರ ಗದ್ದೆಗಳಲ್ಲಿ ಕೃಷಿ ಚಟುವಟಿಕೆಗಳು ಆರಂಭವಾಗಿ ರೈತರು ಟ್ರ್ಯಾಕ್ಟರಗಳಿಗೆ ಹಾಕಲು ಡೀಸೆಲ್‌ಗಾಗಿ ಬಹುತೇಕ ಬಂಕ್‌ಗಳಲ್ಲಿ ಸಾಲುಗಟ್ಟಿ, ಡಿಸೇಲ್ ಭರ್ತಿ ಮಾಡಿಸಿಕೊಳ್ಳುತ್ತಿದ್ದ ದೃಶ್ಯ ಕಂಡು ಬಂತು.

ದಿಗಂತ ವಿಶೇಷ

ಇದಲ್ಲದೆ ಡೀಸೆಲ್ ದರ ಹೆಚ್ಚಾಗುವ ಭಯದಿಂದ ರೈತರು, ಕ್ಯಾನ್ ಗಟ್ಟಲೆ ತುಂಬಿಸುತ್ತಿದ್ದಾರೆ. ಪೆಟ್ರೋಲ್, ಡೀಸೆಲ್ ಸಿಗುವುದಿಲ್ಲ ಎಂಬ ವಂದತಿಗೆ ಬೈಕ್ ಸವಾರರು ಮತ್ತು ವಾಹನ ಸವಾರರು ಪೆಟ್ರೋಲ್ ಬಂಕ್‌ಗಳಿಗೆ ಮುಗಿ ಬಿದ್ದಿರುವುದು ಕಂಡುಬಂತು. ಕೆಲವರು ವಾಹನ ಟ್ಯಾಂಕ್ ಭರ್ತಿಮಾಡಿ ಕೊಂಡಿದಲ್ಲದೇ ಟ್ರ್ಯಾಕ್ಟರ್ ಗಳಲ್ಲಿ 100 ಲೀಟರ್ ಪ್ಲಾಸ್ಟಿಕ್ ಬ್ಯಾರಲ್, ಐದು ಲೀಟರ್ ಕ್ಯಾನ್ ಮತ್ತು ಒಂದು, ಎರಡು ಲೀಟರ್ ಪ್ಲಾಸ್ಟಿಕ್ ಬಾಟಲ್ ಗಳನ್ನು ತುಂಬಿಸಿಕೊಳ್ಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.



ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಇಂಧನ ಸರಬರಾಜಿನಲ್ಲಿ ಕೊರತೆ ಉಂಟಾಗುತ್ತಿರುವುದರಿಂದ ಮತ್ತೇಲ್ಲಿ ಪೆಟ್ರೋಲ್, ಡಿಸೇಲ್ ದರ ಹೆಚ್ಚಾಗುತ್ತೊ ಎಂಬ ಭಯವು ತಾಲೂಕಿನ ಜನರಲ್ಲಿ ಹೆಚ್ಚಾಗಿದ್ದು ಕಾರ್, ಟ್ರಕ್ ಹಾಗೂ ಬೈಕ್ ಸೇರಿದಂತೆ ವಿವಿಧ ವಾಹನಗಳ ಸವಾರರು ತಮ್ಮ ವಾಹನಗಳಿಗೆ ಇಂದನಗಳನ್ನು ತುಂಬಿಸುತ್ತಿರುವುದು ಕಂಡು ಬಂದಿತು.

ಇಂದನ ಸರಬರಾಜಿನಲ್ಲಿ ಕೊರತೆ ಇಲ್ಲಾ. ಈಗ ಮಳೆ ಉತ್ತಮವಾಗಿ ಬಿದ್ದಿದ್ದರಿಂದ ಕೃಷಿಕರು ಡೀಸೆಲ್ ಖರೀದಿಗೆ ಬರುವುದು ಸಾಮಾನ್ಯವಾಗಿದೆ.

■ ಸುರೇಶ ಕಲ್ಲೋಳ್ಳಿ . ಪೆಟ್ರೋಲ್ ಬಂಕ್ ಮಾಲೀಕ್

ಟ್ರ್ಯಾಕ್ಟರಗಳನ್ನು ಬಂಕ್ ತಂದು ಡೀಸೆಲ್ ಹಾಕಿ ಕೊಳ್ಳಲು ಬಂದರೆ ಸಮಯ ವ್ಯತ್ಯಯವಾಗುತ್ತದೆ ಎಂದು ನಾವು ಬೈಕ್ ಗಳಲ್ಲಿ ಕ್ಯಾನಗಳನ್ನು ತಂದು ಡೀಸೆಲ್ ಒಯುತ್ತಿದ್ದೇನೆ.

■ ಯಮನಪ್ಪ ಮಾರಂಬೀಡ. ರೈತ. ಇಂದೂರ ಗ್ರಾಮ

ಮಹಿಳೆ ಬಂಧನ: 33,120 ಮೌಲ್ಯದ ಮಾತ್ರೆ ವಶ

ಕಲಬುರಗಿ: ನಗರದ ಬ್ರಹ್ಮಪುರ ಪೊಲೀಸ್ ಠಾಣಾ ವ್ಯಾಪ್ತಿಯ ಬಾಪೂನಗರದ ಮಾಂಗರವಾಡಿ ಗಲ್ಲಿಯಲ್ಲಿ ಪರವಾನಗಿ ಇಲ್ಲದೆ ಅಕ್ರಮವಾಗಿ 'ಶೆಡ್ಯೂಲ್-ಎಚ್' ಮಾದರಿಯ ನಿಷೇಧಿತ ಡ್ರಗ್ಸ್ ಮಾರಾಟ ಮಾಡುತ್ತಿದ್ದ ರೇವಮ್ಮ ದಿ. ಸಾಯಬಣ್ಣ ಕಟ್ಟಿಮನಿ (61) ಎಂಬಾಕೆಯನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತಳಿಂದ 29,160 ಮೌಲ್ಯದ ನೈಟ್ರಾಜೆಪಾಂ ಮಾತ್ರೆಗಳು ಹಾಗೂ 3,960 ಮೌಲ್ಯದ ಕೊಡೆನ್ ಫಾಸ್ಪೇಟ್ ಕಫ್ ಸಿರಪ್ ಸೇರಿದಂತೆ ಒಟ್ಟು 33,120 ಮೌಲ್ಯದ ಔಷಧಗಳನ್ನು ವಶಪಡಿಸಿಕೊಳ್ಳಲಾಗಿದೆ. ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಆವರ ಮಾರ್ಗದರ್ಶನದಲ್ಲಿ, ಬ್ರಹ್ಮಪುರ ಪಿಐ ಮಹಾಂತೇಶ ಪಾಟೀಲ ನೇತೃತ್ವದ ಪರಶುರಾಮ, ಉತ್ತಮ್, ಪ್ರಿಯಾ ಮತ್ತು ಗುರುನಾಥ ಆವರನ್ನೊಳಗೊಂಡ ಪೊಲೀಸ್ ತಂಡ ಈ ಯಶಸ್ವಿ ದಾಳಿ ನಡೆಸಿದ್ದು, ಹಿರಿಯ ಅಧಿಕಾರಿಗಳು ತಂಡವನ್ನು ಶ್ಲಾಘಿಸಿದ್ದಾರೆ.

ಹನುಮಂತ ಬೊಮ್ಮು ಗೌಡಗೆ ಜೀವ ವೈವಿಧ್ಯ ಪ್ರಶಸ್ತಿ

ಅಂಕೋಲಾ: ಪಾರಂಪರಿಕ ನಾಟಿ ವೈದ್ಯಕೀಯ ಪದ್ಧತಿಯ ಮೂಲಕ ಗುರುತಿಸಿಕೊಂಡಿರುವ ತಾಲೂಕಿನ ಬೆಳಂಬಾರದ ಪ್ರಸಿದ್ಧ ನಾಟಿ ವೈದ್ಯ ರಾಜ್ಯ ಪ್ರಶಸ್ತಿ ಪುರಸ್ಕೃತ ಹನುಮಂತ ಬೊಮ್ಮು ಗೌಡ ಅವರಿಗೆ ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಇಲಾಖೆಯ ಜೀವ ವೈವಿಧ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಬೆಂಗಳೂರಿನಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಜೀವ ವೈವಿಧ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆಯನ್ನು ಪರಿಗಣಿಸಿ ಹನುಮಂತ ಗೌಡ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು. ಪೂರ್ವಜರಿಂದ ಬಳುವಳಿಯಾಗಿ ಬಂದ ಪಾರಂಪರಿಕ ವೈದ್ಯ ಪದ್ಧತಿ ಪರಿಣಾಮಕಾರಿಯಾಗಿದ್ದು ನಾಟಿ ವೈದ್ಯರ ಚಿಕಿತ್ಸಾ ಪದ್ಧತಿಗೆ ಅನುಕೂಲ ಕಲ್ಪಿಸಲು ಗಿಡ ಮೂಲಿಕೆಗಳ ರಕ್ಷಣೆಗೆ ಗಿಡ ಮೂಲಿಕೆ ವನ ನಿರ್ವಹಣಾ ಸಮಿತಿಗಳನ್ನು ರಚಿಸಿ ಸರ್ಕಾರ ಕ್ರಮಗಳನ್ನು ಕೈಗೊಂಡಿದೆ ಎಂದು ಈ ಸಂದರ್ಭದಲ್ಲಿ ಅರಣ್ಯ ಸಚಿವರು ತಿಳಿಸಿದರು.

ಜೀವ ವೈವಿಧ್ಯ ಮಂಡಳಿಯ ಅಧ್ಯಕ್ಷ ವಡ್ನಾಲ್ ಜಗದೀಶ, ಪಶ್ಚಿಮ ಘಟ್ಟ ಕಾರ್ಯಪಡೆಯ ಅಧ್ಯಕ್ಷ ಮಹಮದ್ ತಬ್ರೇಜ್ ಶರೀಫ್ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು, ಹನುಮಂತ ಗೌಡ ಅವರ ಕುಟುಂಬದವರು ಉಪಸ್ಥಿತರಿದ್ದರು.

ಕರ್ನಾಟಕ ಜೀವ ವೈವಿಧ್ಯ ಮಂಡಳಿಯು ವಾರ್ಷಿಕವಾಗಿ ಜೀವ ವೈವಿಧ್ಯ ಸಂರಕ್ಷಣೆ, ಸಾವಯವ ಪಾರಂಪರಿಕ ಕೃಷಿ ಪದ್ಧತಿ, ಪರಿಸರ ಸಂರಕ್ಷಣೆ ಅಪರೂಪದ ಔಷಧೀಯ ಗಿಡಮೂಲಿಕೆಗಳ ಸಂರಕ್ಷಣೆಗೆ ಕೊಡುಗೆ ನೀಡಿದವರನ್ನು ಜೀವ ವೈವಿಧ್ಯ ಪ್ರಶಸ್ತಿ ನೀಡಿ ಗೌರವಿಸುತ್ತದೆ.

ಬೆಳಂಬಾರದ ಬುಡಕಟ್ಟು ಹಾಲಕ್ಕಿ ಒಕ್ಕಲಿಗರ ಮನೆತನದ ವಂಶಪಾರಂಪರ್ಯವಾಗಿ ನಡೆದು ಬಂದಿರುವ ಕುಟುಂಬದ ನಾಟಿ ವೈದ್ಯಕೀಯ ಔಷಧೀಯ ಪದ್ಧತಿಯನ್ನು ಮುಂದುವರಿಸುತ್ತಿರುವ ಹನುಮಂತ ಗೌಡ ಅವರು ಔಷಧೀಯ ಗಿಡಮೂಲಿಕೆಗಳನ್ನು ರಕ್ಷಿಸುವ ಕೆಲಸ ಮಾಡಿದ್ದು ಪಾರ್ಶ್ವವಾಯು, ಸಂಧಿವಾತದಂತ ಕಾಯಿಲೆಗೀಡಾದ ರೋಗಿಗಳಿಗೆ ಗಿಡಮೂಲಿಕೆ ಔಷಧೀಯ ಪದ್ಧತಿಯ ಮೂಲಕ ಪರಿಣಾಮಕಾರಿ ಚಿಕಿತ್ಸೆ ನೀಡುತ್ತ ಬಂದಿದ್ದಾರೆ, ದೇಶದ ವಿವಿಧ ಭಾಗಗಳಿಂದ ಪ್ರತಿದಿನ ಕಾಯಿಲೆ ಪೀಡಿತರು ಆಗಮಿಸಿ ಇವರಿಂದ ಚಿಕಿತ್ಸೆ ಪಡೆಯುತ್ತಾರೆ.

ಇವರ ಸೇವೆಗೆ ಹಲವಾರು ಪ್ರಶಸ್ತಿ, ಸನ್ಮಾನಗಳು ಒಲಿದು ಬಂದಿದ್ದು 2015 ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಗೌರವಕ್ಕೂ ಪಾತ್ರರಾಗಿದ್ದು ಪಾರಂಪರಿಕ ನಾಟಿ ವೈದ್ಯಕೀಯ ಪದ್ಧತಿಯ ಉಳಿವಿಗೆ ಗಿಡಮೂಲಿಕೆಗಳ ಸಂರಕ್ಷಣೆ ಅಗತ್ಯವಾಗಿದ್ದು ಆ ದಿಶೆಯಲ್ಲಿ ಸರ್ಕಾರ ಚಿಂತನೆ ನಡೆಸಿರುವುದು ಸಂತಸದ ಸಂಗತಿ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪ್ರತಿಭೆ ಅನಾವರಣಕ್ಕೆ ಸ್ಪರ್ಧೆಗಳು ಸಹಕಾರಿ

ಹುಬ್ಬಳ್ಳಿ: ಕಾನೂನು ವಿದ್ಯಾರ್ಥಿಗಳು ತಮ್ಮಲ್ಲಿ ಅಡಗಿರುವ ಪ್ರತಿಭೆಯನ್ನು ಹೊರ ಹಾಕಲು ಸ್ಪರ್ಧೆಗಳು ಸಹಕಾರಿಯಾಗಲಿವೆ ಎಂದು ಕರ್ನಾಟಕ ಕಾನೂನು ಆಯೋಗದ ಸದಸ್ಯ ಅಶೋಕ ನಿಜಗಣ್ಣವರ ಹೇಳಿದರು.

ನವನಗರದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಶಾಲೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 12 ನೇ ರಾಷ್ಟ್ರೀಯ ಅಣುಕು ನ್ಯಾಯಾಲಯ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಪುಸ್ತಕದ ಜ್ಞಾನದ ಜೊತೆಗೆ ಸ್ಪರ್ಧೆಗಳಿಂದ ಸಾಕಷ್ಟು ವಿಷಯಗಳನ್ನು ಅರಿತುಕೊಳ್ಳಬಹುದು ಎಂದರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಾ.ಸಿ.ಬಸವರಾಜು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಶ್ವವಿದ್ಯಾಲಯದ ಆಡಳಿತ ಕುಲಸಚಿವರಾದ ಗೀತಾ ಕೌಲಗಿ, ಮೌಲ್ಯಮಾಪನ ಕುಲಸಚಿವೆ ಪ್ರೊ.(ಡಾ) ರತ್ನಾ ಆರ್. ಭರಮಗೌಡರ, ವಿಶ್ವವಿದ್ಯಾಲಯದ ಉಪನ್ಯಾಸಕರು, ಸಿಂಡಿಕೇಟ್ ಸದ್ಯಸರು, ಬೋಧಕ, ಬೋಧಕೇತರ ಸಿಬ್ಬಂದಿ, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಇತರರಿದ್ದರು.



ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	2209	6256
ಉದ್ದಿನಕಾಳು	2010	6659
ಒಣ ಮೆಣಸಿನಕಾಯಿ	12000	23000
ನೆಲಗಡಲೆ (ಶೇಂಗಾ)	2510	9099
ಜೋಳ	1010	4666
ಮಡಿಕೆ (ಮಟಕಿ)	14741	14741
ಈರುಳ್ಳಿ	300	1900
ಆಲೂಗಡ್ಡೆ	1100	1700
ಕುಸುಬೆ	4511	6008
ಸೋಯಾಬಿನ್	5559	7525
ಸೂರ್ಯ ಕಾಂತಿ	7059	7059

ಸಕ್ಕರೆ ಮತ್ತು ಉಪ್ಪು ಅಗತ್ಯ ಎಂದು ಅಂದಾಜಿಸಲಾಗಿದೆ. ಆಹಾರ ಕಿಟ್‌ನಲ್ಲಿ ಪೌಷ್ಟಿಕಾಂಶಗಳಿಂದ ಕೂಡಿರುವ ತೊಗರಿ ಬೇಳೆ ಗರಿಷ್ಠ ಪ್ರಮಾಣದಲ್ಲಿ ನೀಡಲು ಈಗಾಗಲೇ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದು, ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿಯೂ ಸಹ ಕ್ಯೂಆರ್ ಸ್ಕ್ಯಾನ್ ಮಾಡಬಹುದಾದ ತಂತ್ರಾಂಶವನ್ನು ಅಳವಡಿಸಿ ಅದರ ಆಧಾರದ ಮೇಲೆ ಪಡಿತರ ಚೀಟಿದಾರರಿಗೆ 'ಇಂದಿರಾ' ಫುಡ್ ಕಿಟ್ ವಿತರಣೆ ಮಾಡಲಾಗುತ್ತದೆ.



'ಅನ್ನರಾಮಯ್ಯ'ರಾದ ಸಿದ್ದರಾಮಯ್ಯ!

2013ರಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಕೆಲವೇ ಗಂಟೆಗಳಲ್ಲಿ ಸಿದ್ದರಾಮಯ್ಯನವರು ಘೋಷಿಸಿದ ಮೊದಲ ಐತಿಹಾಸಿಕ ಯೋಜನೆ 'ಅನ್ನಭಾಗ್ಯ'. ಅಂದು ಕೇವಲ 1 ರೂಪಾಯಿಗೆ ಅಕ್ಕಿ ನೀಡಿ, ನಂತರ ಅದನ್ನು ಸಂಪೂರ್ಣ ಉಚಿತಗೊಳಿಸಿ ಬಡವರ ಹೊಟ್ಟೆ ತಣಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅಂದಿನಿಂದಲೇ ಕರ್ನಾಟಕದ ಜನತೆ ಅವರನ್ನು ಪ್ರೀತಿಯಿಂದ 'ಅನ್ನರಾಮಯ್ಯ' ಎಂದು ಕರೆಯಲಾರಂಭಿಸಿದರು.
ಅಂದು 2013 ರಲ್ಲಿ ಜಾರಿಗೆ ಬಂದ ಅನ್ನಭಾಗ್ಯ ಯೋಜನೆ, 2023 ರ ನಂತರ 'ಪಂಚ ಗ್ಯಾರಂಟಿ'ಗಳಲ್ಲಿ ಒಂದಾಗಿ ಮತ್ತಷ್ಟು ಶಕ್ತಿಶಾಲಿಯಾಗಿ ಮರುಜನ್ಮ ಪಡೆಯಿತು. ಅಂದು ರಾಜಕೀಯ ಇಚ್ಛಾಶಕ್ತಿಯಿಂದ ಆರಂಭವಾದ ಯೋಜನೆ, ಇಂದು ರಾಜ್ಯದ ಕೋಟ್ಯಂತರ ಬಡವರ ಪಾಲಿಗೆ ಬದುಕಿನ ಭರವಸೆಯಾಗಿದೆ.

೨೦೧೩-೨೦೨೬

4.26 ಕೋಟಿಗೂ ಅಧಿಕ
ಒಟ್ಟು ಫಲಾನುಭವಿಗಳು

₹18,897 ಕೋಟಿಗೂ ಅಧಿಕ
ಈವರೆಗೆ 'ಅನ್ನಭಾಗ್ಯ'ಕ್ಕೆ ವ್ಯಯಿಸಲಾದ ಅನುದಾನ

ಯಾರ ಮೇಲೂ ಅವಲಂಬಿಸದೇ ಬದುಕಬೇಕೆಂಬ ನನ್ನ ಕನಸಿಗೆ 'ಅನ್ನಭಾಗ್ಯ' ಯೋಜನೆ ಭದ್ರ ಆಸರೆಯಾಗಿದೆ. ಇದರಿಂದಾಗಿ ಹೊಟ್ಟೆಯ ಪಾಡಿನ ಆತಂಕವಿಲ್ಲದೆ, ಎಲ್ಲಾ ಗ್ಯಾರಂಟಿಗಳಿಂದ ಉಳಿತಾಯವಾದ ಹಣದಿಂದ ಒಂದು ಹಸು ಖರೀದಿಸಿ ಹೈನುಗಾರಿಕೆ ಆರಂಭಿಸಲು ಸಾಧ್ಯವಾಯಿತು. ಇಂದು ದಿನಾ ಹಾಲು ಮಾರಿ ಬರುವ ಆದಾಯದಲ್ಲಿ ನನ್ನ ಬದುಕು ಸ್ವಾಭಿಮಾನದಿಂದ ಸಾಗುತ್ತಿದೆ.
ನೀಲಮ್ಮ, ಬೆಳ್ತಂಗಡಿ



ನನ್ನ ಗಂಡನ ನಿಧನದ ನಂತರ ಬಂಡವಾಳದ ಕೊರತೆಯಿಂದಾಗಿ ನಮ್ಮ ಸಾಂಪ್ರದಾಯಿಕ ಕುಂಬಾರಿಕೆ ಉದ್ಯಮ ನಡೆಸಲಾಗದೆ ಕಂಗಾಲಾಗಿದ್ದೆ. ಆ ಸಮಯದಲ್ಲಿ ಕುಟುಂಬ ನಿರ್ವಹಣೆಗೆ ದೊಡ್ಡ ಆಸರೆಯಾಗಿ ನಿಂತಿದ್ದು 'ಅನ್ನಭಾಗ್ಯ' ಯೋಜನೆ. ಸರ್ಕಾರದ ಉಚಿತ ಅಕ್ಕಿ ಮತ್ತು ದಿನಸಿ ನನ್ನ ಕುಟುಂಬದ ಮೂರೊತ್ತಿನ ಊಟದ ಆತಂಕವನ್ನು ಸಂಪೂರ್ಣವಾಗಿ ದೂರ ಮಾಡಿದೆ.
ಮಹಾದೇವಿ, ಇಂಡಿ



ನನ್ನ ಮಗನಿಗೆ ಆಕ್ಸಿಡೆಂಟ್ ಆಗಿ ಮನೇಲೇ ಇದ್ದಾನೆ. ನಾನೊಬ್ಬಳೇ ದುಡಿದು ಮನೆ ನಡೆಸಬೇಕಾಗಿದೆ. ಮೊದಲೆಲ್ಲಾ ಊಟ ಇಲ್ಲದಿದ್ದಾಗ, ಬರಿ ಕಾಲಲ್ಲೇ ನಡೆದುಕೊಂಡು ಹೋಗಿ ಕಾಡಿನ ಹಣ್ಣು ತಿಂದು ಬದುಕ್ತಿದ್ವಿ. ಈಗ 'ಅನ್ನಭಾಗ್ಯ'ದಿಂದ ಅಕ್ಕಿ ಸಿಗ್ತಿದೆ. ನಮ್ಮಪ್ಪ ಸಿದ್ದರಾಮಯ್ಯ ಪುಣ್ಯಾತ್ಮನಿಂದಾಗಿ ನೆಮ್ಮದಿಯಾಗಿ ಜೀವನ ಮಾಡ್ತಾ ಇದ್ದೀವಿ.
ಜಡೆಮಾದಮ್ಮ, ಚಾಮರಾಜನಗರ





ಬಡತನದ ವಿರುದ್ಧದ ಹೋರಾಟ

ಬಡತನದ ಹಸಿವು ಹೇಗಿರುತ್ತದೆ ಎಂದು ನನಗೆ ಗೊತ್ತು. ಅದಕ್ಕಾಗಿಯೇ ನಾನು ಮುಖ್ಯಮಂತ್ರಿಯಾದ ಮೊದಲ ದಿನವೇ ಅನ್ನಭಾಗ್ಯ ಯೋಜನೆಗೆ ಸಹಿ ಹಾಕಿದ್ದೆ. ರಾಜ್ಯದ ಯಾವುದೇ ವ್ಯಕ್ತಿ ಹಸಿವಿನಿಂದ ಮಲಗಬಾರದು ಎಂಬುದೇ ನನ್ನ ಆಶಯವಾಗಿತ್ತು. ಅಂದು ಆರಂಭವಾದ ಆ ಪವಿತ್ರ ಕಾರ್ಯ ಇಂದು 'ಗ್ಯಾರಂಟಿ'ಯಾಗಿ ಕೋಟ್ಯಂತರ ಮನೆ ತಲುಪಿದೆ ಎನ್ನುವುದೇ ನನಗೆ ತೃಪ್ತಿ.
– ಸಿದ್ದರಾಮಯ್ಯ, ಮುಖ್ಯಮಂತ್ರಿಗಳು



'ಹಸಿವು ಮುಕ್ತ ಸಮಾಜ' ನವ ಕರ್ನಾಟಕದ ಅಡಿಪಾಯ

ಜನರ ಕಷ್ಟಗಳಿಗೆ ಸ್ಪಂದಿಸುವುದು ನಮ್ಮ ಆದ್ಯ ಕರ್ತವ್ಯ. ಹಸಿವು ಮುಕ್ತ ಸಮಾಜದ ನಿರ್ಮಾಣವೇ ನವ ಕರ್ನಾಟಕದ ಅಡಿಪಾಯ. 'ಅನ್ನಭಾಗ್ಯ' ಮತ್ತು 'ಪಂಚ ಗ್ಯಾರಂಟಿ' ಯೋಜನೆಗಳ ಮೂಲಕ ಕರ್ನಾಟಕವನ್ನು ದೇಶದಲ್ಲೇ ಅತ್ಯಂತ ಪ್ರಗತಿಪರ ಹಾಗೂ ಕಲ್ಯಾಣ ರಾಜ್ಯವನ್ನಾಗಿ ಮಾಡುವುದೇ ನಮ್ಮ ಸರ್ಕಾರದ ಸಂಕಲ್ಪ.
– ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು



ಕೊನೆಯ ಪ್ರಜೆಗೂ ಅನ್ನ ಸಿಕ್ಕಿದೆ

ಮುಖ್ಯಮಂತ್ರಿಗಳ ದೂರದರ್ಶಿತ್ವದ 'ಅನ್ನಭಾಗ್ಯ' ಯೋಜನೆಯನ್ನು ಅತ್ಯಂತ ಪಾರದರ್ಶಕವಾಗಿ ಅರ್ಹ ಫಲಾನುಭವಿಗಳಿಗೆ ತಲುಪಿಸುವ ಜವಾಬ್ದಾರಿಯನ್ನು ನಮ್ಮ ಇಲಾಖೆ ಯಶಸ್ವಿಯಾಗಿ ನಿಭಾಯಿಸಿದೆ. ರಾಜ್ಯದ ಕಟ್ಟಕಡೆಯ ವ್ಯಕ್ತಿಗೂ ಆಹಾರ ಭದ್ರತೆ ಸಿಗುವಂತೆ ಮಾಡಲು ನಮ್ಮ ಆಹಾರ ಇಲಾಖೆ ಸದಾ ಬದ್ಧವಾಗಿದೆ.
– ಕೆ.ಎಚ್. ಮುನಿಯಪ್ಪ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು

❀ ಕರ್ನಾಟಕ ವಾರ್ತೆ

ಕಿರುಸುದ್ದಿ

ಶಿಕ್ಷಕರ ಸಂಘಗಳು ಹೋರಾಟ ರೂಪಿಸಲಿ



ಕೆಪಿಎಸ್ ಸಿಯಿಂದ 8 ಸಾವಿರ ಶಾಲೆಗಳು ಬಂದ್

• **ಹುಬ್ಬಳ್ಳಿ:** ರಾಜ್ಯದ ಎಂಟು ಸಾವಿರ ಅಧಿಕ ಶಾಲೆಗಳು ಈಗ ಆರಂಭವಾಗುವ ಕೆಪಿಎಸ್ ಸಿ ಶಾಲೆಗಳಿಂದ ಬಂದ್ ಆಗಲಿವೆ. ಆದ್ದರಿಂದ ಶಿಕ್ಷಕರ ಸಂಘಗಳು ಈಗಲೇ ಎಚ್ಚೆತ್ತುಕೊಂಡು ಹೋರಾಟ ರೂಪಿಸಬೇಕಿದೆ ಎಂದು ವಿಧಾನ ಪರಿಷತ ಸಭಾಪತಿ ಬಸವರಾಜ ಹೊರಟ್ಟಿ ಎಚ್ಚರಿಸಿದರು. ಇಲ್ಲಿನ ಆರ್.ಎನ್.ಶೆಟ್ಟಿ ಕಲ್ಯಾಣಮಂಟಪದ ಸಭಾಭವನದಲ್ಲಿ ಕರ್ನಾಟಕ ಮಾಧ್ಯಮಿಕ ಶಿಕ್ಷಕರ ನೌಕರರ ಸಂಘದ ಹುಬ್ಬಳ್ಳಿ ಘಟಕದ ನೇತೃತ್ವದಲ್ಲಿ ಶನಿವಾರ ನಡೆದ ರಾಜ್ಯ ಘಟಕದ ಕೇಂದ್ರ ಸಮಿತಿ ಸಭೆ ಉದ್ದೇಶಿಸಿ ಮಾತನಾಡಿದರು. ಕೆಪಿಎಸ್ ಶಾಲೆಗಳನ್ನು ಒಂದೇ ಕ್ಯಾಂಪಸ್‌ನಲ್ಲಿ ಇರುವ ಶಾಲೆಗಳು ಇರುವಲ್ಲಿ ಪ್ರಾರಂಭಿಸಲು ಅವಕಾಶವಿದೆ. ಆದರೆ, ಬೇರೆ ಆವರಣದಲ್ಲಿರುವ ಶಾಲೆಗಳನ್ನು ಇದರ ವ್ಯಾಪ್ತಿಗೆ ತರುತ್ತಿರುವುದು ಕಾನೂನಿನ ವಿರುದ್ಧವಾಗಿದೆ ಎಂದು ತಿಳಿಸಿದರು. ಕೂಡಲೇ ಸರಕಾರಿ ಹಾಗೂ ಅನುದಾನಿತ ಶಾಲೆಗಳನ್ನು ಉಳಿಸಿಕೊಳ್ಳುವ ಬಗ್ಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘವು ರಾಜ್ಯ ಮಟ್ಟದಲ್ಲಿ ದೊಡ್ಡ ಪ್ರಮಾಣದ ಹೋರಾಟ ರೂಪಿಸಬೇಕಾದ ಅಗತ್ಯತೆ ಇದೆ. ಅನುದಾನಿತ ಮತ್ತು ಸರಕಾರಿ ಶಾಲಾ ನೌಕರರು ದೊಡ್ಡ ಸಮಸ್ಯೆ ಎದುರಿಸಬೇಕಾಗುತ್ತದೆ ಎಂದರು. ಶಾಲಾ ನೌಕರರ ಹಾವೇರಿ ಜಿಲ್ಲಾ ಸಂಘದ ಗೌರವಾಧ್ಯಕ್ಷ ಎಚ್.ಪಿ. ಬಣಕಾರ ಮಾತನಾಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ಜಿ.ಆರ್. ಭಟ್, ಪ್ರಭಾಕರ ಬಂಟ್, ಜಿ.ಎಸ್. ಹುದ್ದಾರ, ಎನ್.ಎಂ. ಸವಣೂರ, ಎಲ್.ಎಂ. ಹೆಗಡೆ, ಎಂ.ಕೆ. ಲಮಾಣಿ, ಎ.ಎಸ್. ಪಾಟೀಲ, ಕುಂದೂರ, ಅಂಗಡಿ, ಹುಕ್ಕೇರಿ ಸಂಭಾಳ ಸೇರಿದಂತೆ ಇತರರು ಇದ್ದರು.

ಕಳ್ಳತನ: ಇಬ್ಬರ ಬಂಧನ

• **ಭಟ್ಕಳ:** ತಾಲ್ಲೂಕಿನ ಪುರವರ್ಗದಲ್ಲಿ ನಡೆದ ಕಳ್ಳತನಕ್ಕೆ ಸಂಬಂಧ ಪಟ್ಟಂತೆ ನಗರ ಠಾಣೆಯ ಪೊಲೀಸರು ತಕ್ಷಣ ಕಾರ್ಯಾಚರಣೆ ನಡೆಸಿ ಆರೋಪಿಗಳಿಬ್ಬರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಗಣೇಶನಗರದ ನಿವಾಸಿ ಮಹಮದ್ ರಾಹಿಲ್ ಮಹಮದ್ ಮೀರಾ ಸಾಬ ಹಾಗೂ ನೌಶಾದ ಮುಕ್ತಾರ ಅಹಮದ್ ಹಂಚಿ ಬಂಧಿತ ಆರೋಪಿಗಳು ಬಂಧಿತರಿಂದ 2,21,000 ಮೌಲ್ಯದ 17 ಗ್ರಾಂ ಬಂಗಾರದ ಆಭರಣ ಹಾಗೂ 22,860 ನಗದು ವಶಪಡಿಸಿಕೊಳ್ಳಲಾಗಿದೆ.

ಜನರ ಬಹುದಿನದ ಕನಸಿಗೆ ತಣ್ಣೀರು

ಮಹದಾಯಿ ಯೋಜನೆ 'ಡಿ' ಲಿಸ್ಟ್ !

▸ ಮಹಾಂತೇಶ ಕಣವಿ

ದಿಗಂತ ವಿಶೇಷ

• **ಧಾರವಾಡ:** ಉತ್ತರ ಕರ್ನಾಟಕದ ಮಲಪ್ರಭೆ ಅಚ್ಚುಕಟ್ಟು ಪ್ರದೇಶದ ರೈತರ ಜೀವನದಿ ಮಹದಾಯಿ ಮತ್ತು ಕಳಸಾ-ಬಂಡೂರಿ ನಾಲಾ ಯೋಜನೆಯನ್ನು ವನ್ಯಜೀವಿ ಮಂಡಳಿಯ ಅನುಮೋದನೆಯ ಸಭೆಯ ಕಾರ್ಯಸೂಚಿಯಿಂದ (ಡಿ-ಲಿಸ್ಟ್) ಕೈಬಿಟ್ಟಿದೆ !

ದಶಕಗಳಿಂದಲೂ ಕುಡಿಯುವ ನೀರಿಗೆ ಬಿಸಿಲು ನಾಡಿನ ಅನ್ನದಾತರು ನಡೆಸುತ್ತಿದ್ದ ಹೋರಾಟಕ್ಕೆ ಫಲ ಸಿಗದಂತಾಗಿದೆ.

ಲಾಠಿ-ಬೂಟಿನ ಏಟು: ನವಲಗುಂದ, ನರಗುಂದ, ಹುಬ್ಬಳ್ಳಿ, ಧಾರವಾಡ ಮತ್ತು ಗದಗ ಭಾಗರ ರೈತರು ಮಹದಾಯಿ ನೀರಿಗಾಗಿ ಬಿಸಲು, ಮಳೆ ಎನ್ನದೆ ಸಾವಿರಾರು ದಿನಗಳಿಂದ ನಿತ್ಯ ನಿರಂತರ ಧರಣಿ ಕುಳಿತಿದ್ದರು. ಅಲ್ಲದೇ, ಪೊಲೀಸ್ ಲಾಠಿ ಮತ್ತು ಬೂಟಿನ ಏಟು ತಿಂದಿದ್ದರು.

ಕೆಲ ರೈತರು ಜೈಲು ಸೆರೆವಾಸ ಅನುಭವಿಸಿದ್ದರು.



ಯೋಜನೆಗೆ ಕೇಂದ್ರ ಪರಿಸರ-ವನ್ಯಜೀವಿ ಮಂಡಳಿಯ ಕ್ಲಿಯರೆನ್ಸ್ ಸಿಗಲಿದೆಂಬ ಜನರ ನಿರೀಕ್ಷೆ ಹುಸಿಯಾಗಿದೆ. ಗೋವಾದ ರಾಜಕೀಯ ಒತ್ತಡಕ್ಕೆ ಮಣಿದು, ಕರ್ನಾಟಕದ ಹಿತಾಸಕ್ತಿ ಬಲಿಕೊಡಲಾಗಿದೆ ಎಂಬ ಆಕ್ರೋಶ ಕೇಳಿ ಬಂದಿದೆ.

ಚುನಾವಣೆ ಬಂದಾಗೊಮ್ಮೆ ಮಹಾದಾಯಿ ಹೆಸರಲ್ಲಿ ಓಟ್ ಬ್ಯಾಂಕ್ ರಾಜಕಾರಣ ಮಾಡುವ ನಾಯಕರ ನೀತಿಯ ವಿರುದ್ಧ

ಮಹದಾಯಿ ಮಕ್ಕಳ ಮುನಿಸು ತುಸು ಹೆಚ್ಚಾಗಿದೆ. ಹೋರಾಟದ ಕಹಳೆ ಮಹದಾಯಿ ಯೋಜನೆ ಡಿ-ಲಿಸ್ಟ್ ವಿರೋಧಿಸಿ ಮಲಪ್ರಭೆ ಮಕ್ಕಳು ಮತ್ತೊಮ್ಮೆ ಉಗ್ರ ಹೋರಾಟಕ್ಕೆ ಸಜ್ಜಾಗುತ್ತಿವೆ. ರಸ್ತೆ ತಡೆ, ಕಚೇರಿಗಳಿಗೆ ಮುತ್ತಿಗೆ ಮುಂತಾದ ಪ್ರತಿಭಟನೆಯ ಎಚ್ಚರಿಕೆಯನ್ನು ಸಹ ರೈತ ಮುಖಂಡರು ನೀಡಿದ್ದಾರೆ.

ನಮಗೆ ಭರವಸೆ ಬೇಡ, ನೀರು ಬೇಕು. ಯೋಜನೆ ಡಿ-ಲಿಸ್ಟ್ ಮಾಡಿ, ಬದುಕನ್ನೇ ಡಿ-ಲಿಸ್ಟ್ ಮಾಡಿದ್ದಾರೆ. ಯೋಜನೆ ಕಾರ್ಯಸೂಚಿ ಪಟ್ಟಿಗೆ ಸೇರಿಸಿ, ವನ್ಯಜೀವಿ ಮಂಡಳಿ ಅನುಮತಿ ನೀಡದಿದ್ದರೆ, ಪುನಃ ಹೋರಾಟ ಶತಸಿದ್ಧ.
■ ಶಂಕರ ಅಂಬಲಿ, ಮಹದಾಯಿ ಹೋರಾಟಗಾರ

ಉತ್ತರ ಕರ್ನಾಟಕದ ಜನ ಸೌಮ್ಯರು ಹೌದು, ಆದರೆ ಹಕ್ಕಿನ ನೀರಿಗಾಗಿ ಕೆರಳಿದರೆ ಅವರು ಕ್ರಾಂತಿಯ ಕಿಡಿಯಾಗಬಲ್ಲರು. ಮಹದಾಯಿ ಯೋಜನೆ ತಕ್ಷಣವೇ ಮರುಪರಿಶೀಲಿಸಿ, ಕೇಂದ್ರ ಸರ್ಕಾರ ವನ್ಯಜೀವಿ ಮಂಡಳಿ ಅನುಮತಿ ಕೊಡಿಸುವುದೇ ಕಾದುನೋಡಬೇಕಿದೆ.

ಅಗ್ನಿವೀರ ತರಬೇತಿಯಿಂದ ಬದುಕಿಗೆ ಅಗತ್ಯ ಶಿಸ್ತು, ತಾಳ್ಮೆ



• **ಕುಮಟಾ:** ಅಗ್ನಿವೀರ ತರಬೇತಿ ಕೇವಲ ಸೈನ್ಯ ಸೇರುವ ಉದ್ದೇಶಕ್ಕೆ ಮಾತ್ರ ಸೀಮಿತವಲ್ಲ, ಬದುಕಿನಲ್ಲಿ ಯಶಸ್ವಿಯಾಗಲು ಅಗತ್ಯವಾದ ಶಿಸ್ತು, ತಾಳ್ಮೆ ಸಮಯಪಾಲನೆ, ಮಾನಸಿಕ ಸದೃಢತೆ ಹಾಗೂ ಸವಾಲುಗಳನ್ನು ಎದುರಿಸುವ ಶಕ್ತಿಯನ್ನು ಈ ತರಬೇತಿ ಕಲಿಸುತ್ತದೆ ಎಂದು ನಿವೃತ್ತ ಸೇನಾಧಿಕಾರಿ ಲೆಫ್ಟಿನೆಂಟ್ ಜನರಲ್ ಬಿ.ಎಸ್. ರಾಜು ಹೇಳಿದರು.

ರಾಷ್ಟ್ರ ನಿರ್ಮಾಣ ವೇದಿಕೆ, ಕೊಂಕಣ ಎಜ್ಯುಕೇಶನ್ ಟ್ರಸ್ಟ್, ವಿಧಾತ್ರಿ ಫೌಂಡೇಶನ್ ವತಿಯಿಂದ ಒಂದು ತಿಂಗಳುಗಳ ಕಾಲ ತಾಲೂಕಿನ ಸರಸ್ವತಿ ವಿದ್ಯಾ ಕೇಂದ್ರದಲ್ಲಿ ನಡೆದ ಅಗ್ನಿವೀರ ತರಬೇತಿ ಶಿಬಿರದ ಸಮಾರೋಪ ಕಾರ್ಯಕ್ರಮದಲ್ಲಿಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಇಂತಹ ತರಬೇತಿಗಳು ಯುವಕರಲ್ಲಿ ದೇಶಭಕ್ತಿ, ಆತ್ಮವಿಶ್ವಾಸ ಹಾಗೂ ಜವಾಬ್ದಾರಿಯ ಮನೋಭಾವ ಬೆಳೆಸುತ್ತವೆ ಎಂದರು.

ಇಲ್ಲಿ ತರಬೇತಿ ಪಡೆದಎಲ್ಲರೂಸೈನ್ಯಕ್ಕೆ ಸೇರುತ್ತಾರೆಯೇಎಂಬುದುಮುಖ್ಯವಲ್ಲ, ಆದರೆ, ಈ ತರಬೇತಿ ಜೀವನದ ದಿಕ್ಕನ್ನೇ ಬದಲಾಯಿಸುವ ಶಕ್ತಿಯನ್ನು ಹೊಂದಿದೆ. ಕಷ್ಟದ ಸಂದರ್ಭಗಳಲ್ಲಿ ಕುಗ್ಗದೆ ಮುಂದೆ ಸಾಗುವ ಮನೋಸ್ಥೈರ್ಯವನ್ನು ಇದು ನೀಡುತ್ತದೆ ಎಂದು ಅಭಿಪ್ರಾಯಪಟ್ಟರು.

ವಿಜ್ಞಾನಿ ಡಾ. ಸುರೇಂದ್ರ ಕುಲಕರ್ಣಿ ಮಾತನಾಡಿ, ಇಲ್ಲಿಗೆ ಬಂದ ಪ್ರತಿಯೊಬ್ಬರೂ ಸೈನಿಕರಾಗುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ, ಆದರೆ, ಇಲ್ಲಿ ಕಲಿತ ಪಾಠಗಳು ಜೀವನದ ಪ್ರತಿಯೊಂದು ಹಂತದಲ್ಲೂ ಉಪಯೋಗಕ್ಕೆ ಬರುತ್ತವೆ ಎಂದರು. ಕೊಂಕಣ ಎಜುಕೇಶನ್ ಟ್ರಸ್ಟ್‌ನ ಕಾರ್ಯದರ್ಶಿ ಮುರಳೀಧರ್ ಪ್ರಭು ಪ್ರಾಸ್ತಾವಿಕದೊಂದಿಗೆ ಸ್ವಾಗತಿಸಿದರು. ಬಳಿಕ ತರಬೇತಿಯ ಸಂಯೋಜಕ ಗುರುರಾಜ್ ಶೆಟ್ಟಿ ತರಬೇತಿ ಶಿಬಿರದ ರೂಪುರೇಷೆ, ದೈಹಿಕ ಅಭ್ಯಾಸ, ರಾಷ್ಟ್ರಭಕ್ತಿ ಚಟುವಟಿಕೆಗಳು, ಶಿಸ್ತಿನ ಪಾಠಗಳು ಹಾಗೂ ಯುವಕರ ಸಕ್ರಿಯ ಭಾಗವಹಿಸುವಿಕೆ ಕುರಿತು ವಿವರಿಸಿದರು. ಈ ವೇಳೆ ತರಬೇತಿ ಪಡೆದ ವಿದ್ಯಾರ್ಥಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು. ಅಧ್ಯಕ್ಷತೆಯನ್ನು ಕೊಂಕಣ ಎಜುಕೇಶನ್ ಟ್ರಸ್ಟ್‌ನ ಉಪಾಧ್ಯಕ್ಷ ದಾಮೋದರ್ ಭಟ್ ವಹಿಸಿದ್ದರು. ಟ್ರಸ್ಟ್‌ನ ಇನ್ನೋರ್ವ ಉಪಾಧ್ಯಕ್ಷ ರಮೇಶ್ ಪ್ರಭು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ನಿವೃತ್ತ ಸೈನ್ಯಾಧಿಕಾರಿ ವಿಂಗ್ ಕಮಾಂಡರ್ ಗಣೇಶ ಶಾಸ್ತ್ರಿ, ತರಬೇತುದಾರರಾದ ಗಜಾನನ ನಾಯ್ಕ ಹಾಗೂ ಗಿರೀಶ ನಾಯ್ಕ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಎಂ.ಡಬ್ಲ್ಯು.ಒ ಶಾಂತಾರಾಮ ಭಟ್ಕೆರೆ ಹಾಗೂ ರಾಷ್ಟ್ರ ನಿರ್ಮಾಣ ವೇದಿಕೆಯಸಂಯೋಜಕ ಡಾ. ಸುರೇಶ ಹೆಗಡೆ ಉಪಸ್ಥಿತರಿದ್ದರು. ಗಣೇಶ ಜೋಶಿ ಕಾರ್ಯಕ್ರಮ ನಿರೂಪಿಸಿದರು. ಚಿದಾನಂದ ಭಂಡಾರಿ, ಸುಜಾತಾ ನಾಯ್ಕ ಸಹಕರಿಸಿದರು. ಗಣ್ಯರನ್ನು ಹಾಗೂ ತರಬೇತಿಗೆ ಸಹಕರಿಸಿದವರನ್ನು ಗೌರವಿಸಲಾಯಿತು. ವಿದ್ಯಾರ್ಥಿಗಳು ಗಣ್ಯರಿಂದ ತರಬೇತಿ ಪ್ರಮಾಣಪತ್ರ ಪಡೆದುಕೊಂಡರು.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅನುಮೋದನೆ: ಶಾಸಕ ಸೈಲ್

• **ಅಂಕೋಲಾ:** ಶಾಸಕನಾಗಿ ಕಾರವಾರ ಅಂಕೋಲಾ ಕ್ಷೇತ್ರದ ಸಂಪೂರ್ಣ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ನಡೆಸಿದ್ದು ಕಾರವಾರದಲ್ಲಿ 100 ಕೋಟಿ ರೂಪಾಯಿಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿರುವುದು ಜನರ ಆರೋಗ್ಯ ಸೇವೆಗೆ ಮಹತ್ವದ ಕೊಡುಗೆ ನೀಡಿದಂತಾಗಿದೆ ಎಂದು ಕಾರವಾರ ಅಂಕೋಲಾ ಕ್ಷೇತ್ರದ ಶಾಸಕ ಸತೀಶ ಸೈಲ್ ಹೇಳಿದರು.



ತಾಲೂಕಿನಲ್ಲಿಮಾಧ್ಯಮಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅಗತ್ಯತೆ ಕುರಿತಂತೆ ತಾವು ಹಲವು ಬಾರಿ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ, ಜಿಲ್ಲೆಯ ಜನರ ಸಮಸ್ಯೆಯನ್ನು ತಿಳಿಸಿದಾಗ ಸಕಾರಾತ್ಮಕ ಸ್ಪಂದನೆ ದೊರಕಿತ್ತು ಇದೀಗ ಸಚಿವ ಸಂಪುಟ ಸಭೆಯಲ್ಲಿ

ಆಡಳಿತಾತ್ಮಕ ಅನುಮೋದನೆ ದೊರಕಿರುವುದರಿಂದ ಬಹುಜನರ ಬಹುಕಾಲದ ಕನಸು ನನಸಾಗಿದೆ. ಜನಸಾಮಾನ್ಯರ ವೈದ್ಯಕೀಯ ಅಗತ್ಯತೆಗೆ ಸ್ಪಂದಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಂಬಂಧಿಸಿದ ಇಲಾಖೆಗಳ ಸಚಿವರು, ಅಧಿಕಾರಿಗಳು,ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳಿಗೆ ಕ್ಷೇತ್ರದ ಜನತೆಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುವುದಾಗಿ ಶಾಸಕ ಸೈಲ್ ತಿಳಿಸಿದರು.

ಎರಡು ವರ್ಷಗಳ ಹಿಂದೆ ಅಂಕೋಲಾ ತಾಲೂಕಿನ ಶಿರೂರು ಬಳಿ ಗುಡ್ಡ ಕುಸಿತದಿಂದ ಗಂಗಾವಳಿ ನದಿಯಲ್ಲಿ ರಾಶಿಯಾಗಿ ತುಂಬಿರುವ ಮಣ್ಣುರಾಶಿ,ಕಲ್ಲು ಬಂಡೆಗಳು ಸುತ್ತ ಮುತ್ತಲಿನ ನದಿತೀರದ ವಾಸಿಗಳ ಆತಂಕಕ್ಕೆ ಕಾರಣವಾಗಿತ್ತು ಮಳೆಗಾಲದಲ್ಲಿ ಕೃತಕ ಪ್ರವಾಹದ ಭೀತಿಯಿಂದ ಹಲವಾರು ಮನವಿಗಳು ಬಂದಿದ್ದವು ಮಣ್ಣು ತೆರುವು ಕಾರ್ಯಕ್ಕೆ ಇದ್ದ 2 ಕೋಟಿ ರೂಪಾಯಿ ಹಣದಲ್ಲಿ ಸಂಪೂರ್ಣ ಕೆಲಸ ಮುಗಿಸಲು ಸಾಧ್ಯವಿರಲಿಲ್ಲ ಈ ವಿಷಯವನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತಂದಾಗ ಕೇವಲ ಮೂರೇ ದಿನಗಳಲ್ಲಿ ಹೆಚ್ಚುವರಿ 2.34 ಕೋಟಿ ಅನುದಾನ ಬಿಡುಗಡೆಗೊಳಿಸಿದ್ದು, ಸರ್ಕಾರಕ್ಕೆ ಜನಸಾಮಾನ್ಯರ ಪರ ಇರುವ ಕಾಳಜಿಯನ್ನು ತೋರುತ್ತಿದೆ. ಕೆಲವೇ ದಿನಗಳಲ್ಲಿ ಗಂಗಾವಳಿ ನದಿಯ ಮಣ್ಣು ತೆರುವು ಕಾರ್ಯ ಆರಂಭವಾಗಲಿದೆ ಎಂದರು.

» ಬಾವಿಕೇರಿ ಬಳಿ ಅಣುಸ್ಥಾವರ ನಿರ್ಮಾಣದಂತ ಯೋಜನೆಗಳು ಬರಲು ತಾವು ಎಂದಿಗೂ ಅವಕಾಶ ನೀಡುವುದಿಲ್ಲ ಎಂದು ಶಾಸಕ ಸೈಲ್ ತಿಳಿಸಿದರು.

ಅಂಕೋಲಾ ತಾಲೂಕಿನ ಅಭಿವೃದ್ಧಿಗೆ ಪೂರಕವಾದ ಹಲವು ಕನಸುಗಳಿವೆ. ಗಂಗಾವಳಿ ಗೋಕರ್ಣ ಸೇತುವೆಯ ನಿರ್ಮಾಣದ ನಂತರ ಅಂಕೋಲಾ ತಾಲೂಕಿನ ಪ್ರವಾಸೋದ್ಯಮದತ್ತ ಪ್ರವಾಸಿಗರು ಆಕರ್ಷಿತರಾಗುತ್ತಿದ್ದಾರೆ, ಅಲಗೇರಿಯ ವಿಮಾನ ನಿಲ್ದಾಣ ಅಂಕೋಲೆಯ ಚಿತ್ರಣವನ್ನು ಬದಲಿಸಲಿದೆ, ಅದೇ ರೀತಿ ಶೇಡಿಕುಳಿ ಬಳಿ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಪ್ರಯತ್ನ ಮಾಡಲಾಗುತ್ತಿದ್ದು ತಾಲೂಕಿನ ಯುವ ಜನತೆಯ ಉದ್ಯೋಗ ಮತ್ತು ಜಿಲ್ಲೆಯ ಕ್ರೀಡಾಪಟುಗಳ ಭವಿಷ್ಯಕ್ಕೆ ಪೂರಕವಾಗುವಂತ ಕ್ರೀಡಾಂಗಣ ನಿರ್ಮಾಣಕ್ಕೆ ಜಮೀನು ದೊರಕಿಸಿಕೊಡಲು ಅಂಕೋಲಾದ ಜನತೆ,ಯುವ ಜನರು ಜೊತೆ ನೀಡಬೇಕು ಎಂದು ಆಗ್ರಹಿಸಿದರು.

ಅಕ್ರಮ ಜಾನುವಾರು ಸಾಗಾಟ: ಬಂಧನ

• **ಭಟ್ಕಳ :** ತಾಲೂಕಿನ ಹಾಡುವಳ್ಳಿ ಗ್ರಾಮದ ಹಲ್ಯಾಣಿ ಸಮೀಪ ಅಕ್ರಮವಾಗಿ ಜಾನುವಾರು ಸಾಗಾಟ ಮಾಡುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿಯನ್ನು ಗ್ರಾಮೀಣ ಪೊಲೀಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪಟ್ಟಣದ ಮಗ್ದುಮ್ ಕಾಲೋನಿಯ ನಿವಾಸಿ ಮೊಹಮ್ಮದ್ ದಾನಿಶ್ (30) ಬಂಧಿತ ಆರೋಪಿ. ಪ್ರಕರಣ ದಾಖಲಾದ ಎರಡು ದಿನಗಳಲ್ಲೇ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮೇ 17ರಂದು ಬೆಳಗಿನ ಜಾವ 4.15ರ ಸುಮಾರಿಗೆ ಹಲ್ಯಾಣಿ ಪ್ರದೇಶದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಪೆಟ್ರೋಲಿಂಗ್ ನಡೆಸುತ್ತಿದ್ದ ವೇಳೆ ಮಾರುತಿ ಸುಜುಕಿ ಬಲೆನೋ ಕಾರಿನಲ್ಲಿ ಅಕ್ರಮವಾಗಿ ಜಾನುವಾರು ಸಾಗಾಟ ಮಾಡುತ್ತಿದ್ದರು. ಅರಣ್ಯ ಇಲಾಖೆ ವಾಹನವನ್ನು ಗಮನಿಸಿದ ಆರೋಪಿತರು ಕಾರನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದರು. ಪ್ರಕರಣದಲ್ಲಿ ಒಟ್ಟು ನಾಲ್ವರು ಭಾಗಿಯಾಗಿದ್ದು, ಪ್ರಮುಖ ಆರೋಪಿಯನ್ನು ಬಂಧಿಸಲಾಗಿದೆ.

ಭಟ್ಕಳದ ಇಬ್ಬರ ಗಡಿಪಾರು

• **ಭಟ್ಕಳ :** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು ಕ್ರಿಮಿನಲ್ ಚಟುವಟಿಕೆಯ ಹಿನ್ನೆಲೆಯಲ್ಲಿ ಮುರುಡೇಶ್ವರದ ಶೇಖರ ಮಂಜುನಾಥ ನಾಯ್ಕ ಮತ್ತು ಭಟ್ಕಳದ ಕೋಣಾರ ಕೆರೆಹಿತ್ಲುವಿನ ಮಿಥುನ ಕುಪ್ಪಯ್ಯ ನಾಯ್ಕನನ್ನು ಜಿಲ್ಲೆಯಿಂದ 6 ತಿಂಗಳು ಕಾಲ ಗಡಿಪಾರು ಮಾಡಿ ಆದೇಶ ಹೊರಡಿಸಿದ್ದಾರೆ.

ಗಡಿಪಾರು ಆದೇಶದಂತೆ ಶೇಖರ ಮಂಜುನಾಥ ನಾಯ್ಕನನ್ನು ತುಮಕೂರು ಜಿಲ್ಲೆಯ ಹೊಸಬಡಾವಣೆ ಪೊಲೀಸ್ ಠಾಣೆ ವ್ಯಾಪ್ತಿಗೆ ಮತ್ತು ಮಿಥುನ ಕುಪ್ಪಯ್ಯ ನಾಯ್ಕನನ್ನು ವಿಜಯಪುರ ಜಿಲ್ಲೆಯ ಗಾಂಧಿಚೌಕ ಪೊಲೀಸ್ ಠಾಣೆ ವ್ಯಾಪ್ತಿಗೆ 6 ತಿಂಗಳು ಕಾಲ ಗಡಿಪಾರು ಮಾಡಲಾಗಿದೆ. ಇಬ್ಬರ ಮೇಲೂ ಕ್ರಿಮಿನಲ್ ಚಟುವಟಿಕೆ ಹಿನ್ನೆಲೆಯಲ್ಲಿ ಗಡಿಪಾರು ಆದೇಶ ಮಾಡಲಾಗಿದೆ ಎಂದು ತಿಳಿಸಲಾಗಿದೆ.

ಪ್ರಧಾನಿ ಪ್ರವಾಸದ ಹಿಂದಿರುವ ಸತ್ಯ ತಿಳಿದುಕೊಳ್ಳಿ

• **ಕಲಬುರಗಿ:** ಮಧ್ಯ ಪ್ರಾಚ್ಯದ ಸಂಘರ್ಷದಿಂದ ತೈಲದ ಸಮಸ್ಯೆ ಎದುರಾದ ಹಿನ್ನೆಲೆ ಭಾರತಕ್ಕೆ ಭವಿಷ್ಯದಲ್ಲಿ ಯಾವುದೇ ರೀತಿಯ ಸಂಕಷ್ಟಗಳು ಎದುರಾಗಬಾರದು ಎಂಬ ಮುಂದಾಲೋಚನೆಯಿಂದ ತೈಲ ಉತ್ಪನ್ನಗಳ ಬಳಕೆ ಕಡಿಮೆ ಬಳಸಲು ಜನರಿಗೆ ಕರೆ ನೀಡಿರುವ ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿ ಯೋಚನೆಗಳ ಬಗ್ಗೆ ಹಗುರವಾಗಿ ಮಾತನಾಡುವುದು (ಕಿಂಡಲ್) ಮಾಡುವುದು ನಿಮಗೆ ಶೋಭೆ ತರುವಂತಹದಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ವಾಗ್ದಾಳಿ ನಡೆಸಿದರು.



ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯುಎಗೆ ಭೇಟಿ ನೀಡಿದ ಪ್ರಧಾನಿ 30 ಕೋಟಿ ಬ್ಯಾರೆಲ್ ಕಚ್ಚಾತೈಲವನ್ನು ಭಾರತದಲ್ಲಿ ಸಂಸ್ಕರಣೆಗಾಗಿ ಸಹಿ ಹಾಕಿ ಬಂದಿದ್ದಾರೆ.ಜೊತೆಗೆ 5 ಮಿಲಿಯನ್ ಡಾಲರ್ ಇನ್ನಾ ಸ್ಟ್ರಕ್ಚರ್ ವಿನಿಯೋಗ ಕುರಿತು ಚರ್ಚೆ ನಡೆಸಿದ್ದಾರೆ ಎಂದು ಹೇಳಿದರು.

ನೆದರ್ಲ್ಯಾಂಡ್ಸ್ ಭೇಟಿ ನೀಡಿದ ಪ್ರಧಾನಿಯವರು, ಭಾರತದಲ್ಲಿ ಎಲೆಕ್ಟ್ರಾನಿಕ್ ಚಿಪ್ ತಯಾರಿಸುವ ನಿಟ್ಟಿನಲ್ಲಿ ಫಲಪ್ರದವಾದ ಭೇಟಿ ಮಾಡಿ 11 ಬಿಲಿಯನ್ ಡಾಲರ್ ವಿನಿಯೋಗಕ್ಕೆ ಹಸ್ತಾಕ್ಷರ ಮಾಡಿದ್ದಾರೆ. ಇನ್ನೂ ಇಟಲಿ -ರೋಮ್ ಪ್ರವಾಸದ ಕುರಿತು ನಗೆಪಾಟಲಿಗೆ ಮಾಡುವ ಕಾಂಗ್ರೆಸ್, ಇಟಲಿಪ್ರಧಾನಿಮೆಲೋನಿಯೊಂದಿಗೆ ಮಹತ್ವದ ಮಾತುಕತೆ ನಡೆಸುವ ಮೂಲಕ ಐತಿಹಾಸಿಕ ಸಹಿ ಹಾಕಿ, ಮಧ್ಯ ಪ್ರಾಚ್ಯದ ಆರ್ಥಿಕ ಕಾರಿಡಾರ್ ಒಪ್ಪಂದಕ್ಕೆ ಸಹಿ ಹಾಕಿರುವ ಪ್ರಧಾನಿ ಮೋದಿ ಕುರಿತು ಅಪಹಾಸ್ಯ ಮಾಡಿರುವುದು ದೇಶದ ಜನ ಎಂದಿಗೂ ಕ್ಷಮಿಸುವುದಿಲ್ಲ, ಪ್ರಧಾನಿಯವರ ವಿದೇಶ ಪ್ರವಾಸವನ್ನು ಪದೇ ಪದೇ ಪ್ರಶ್ನಿಸುವ ಖರ್ಗೆ ಮತ್ತು ಕಾಂಗ್ರೆಸ್, ನಿಮ್ಮ ಹಿಂದಿನ ಪ್ರಧಾನಿಗಳು ವಿದೇಶ ಪ್ರವಾಸದ ಹಿನ್ನೆಲೆ ಏನು ಎಂಬುದು ತಿಳಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ್,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಬೆಣ್ಣೂರಕರ್ ,ಲಿಂಗರಾಜ ಬಿರಾದಾರ, ಚಂದ್ರಶೇಖರ ಪಸರರೆಡ್ಡಿ,ಸಚಿನ ಕಡಗಂಚಿ, ಮಹೇಂದ್ರ ಪೂಜಾರಿ, ಮಲ್ಲಿಕಾರ್ಜುನ ಇಟಗಿ, ಬಾಬುರಾವ್ ಹಾಗರಗುಂಡಗಿ ಸೇರಿದಂತೆ ಇತರರು ಇದ್ದರು.

ಆಳಂದ ಪಟ್ಟಣದ ಪ್ರಕರಣಗಳು ವಾಪಸ್ ಪಡೆಯಬಾರದು.ಈ ಕುರಿತು ರಾಜ್ಯಪಾಲರಿಗೆ ಮನವಿ ಮಾಡುವ ಕೆಲಸ ಬಿಜೆಪಿ ತಂಡ ಮಾಡಲಿದೆ. ಅಗತ್ಯವಿದ್ದರೆ ಕಾನೂನು ಹೋರಾಟ ಮಾಡುತ್ತೇವೆ.
■ ರಾಜಕುಮಾರ್ ಪಾಟೀಲ್, ಮಾಜಿ ಶಾಸಕ

ತಾಲಿಬಾನ್ ಸರ್ಕಾರ

ಶಾಲಾ ಕಾಲೇಜಿನಲ್ಲಿ ಹಿಜಾಬ್ ಗೆ ಅನುಮತಿ,ಆಳಂದ ಪಟ್ಟಣದ ಲಾಡ್ಲೆ ಮಶಾಕ್ ದರ್ಗಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಗಲಭೆಕೋರರ ಮೇಲಿನ ಪ್ರಕರಣ ವಾಪಸ್, ರಾಜ್ಯದಲ್ಲಿ ಇರೋದು ಮುಸ್ಲಿಂ ಲೀಗ್ , ತಾಲಿಬಾನ್ ಸರ್ಕಾರ ಎಂದು ತೇಲ್ಕೂರ್ ತಿಳಿಸಿದರು.

ಮೀನುಗಾರರ ಪರ ಧ್ವನಿ ಎತ್ತಿದ ಶಾಸಕ ದಿನಕರ ಶೆಟ್ಟಿ

• **ಕುಮಟಾ:** ಬೆಂಗಳೂರಿನ ವಿಕಾಸಸೌಧದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡ ನಾಡದೋಣಿ ಮೀನುಗಾರರ ಸೀಮೆ ಎಣ್ಣೆ ಪೂರೈಕೆ ಕುರಿತ ವಿಶೇಷ ಸಭೆಯಲ್ಲಿ ಶಾಸಕ ದಿನಕರ ಶೆಟ್ಟಿ ಅವರು ಕುಮಟಾ-ಹೊನ್ನಾವರ ವ್ಯಾಪ್ತಿಯ ಮೀನುಗಾರರ ಪರ ಧ್ವನಿ ಎತ್ತಿದರು.

ಸಾಂಪ್ರದಾಯಿಕ ನಾಡದೋಣಿ ಮೀನುಗಾರರಿಗೆ ರಿಯಾಯಿತಿ ದರದಲ್ಲಿ ಸೀಮೆ ಎಣ್ಣೆ ನೀಡುತ್ತಿರುವ ವಿಷಯದ ಕುರಿತು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಶಾಸಕ ದಿನಕರ ಶೆಟ್ಟಿ ಅವರು ಕುಮಟಾ-ಹೊನ್ನಾವರ ಭಾಗದ ಮೀನುಗಾರ ಪ್ರಮುಖರ ಜತೆ ಪಾಲ್ಗೊಂಡು ವಿಶೇಷ ಗಮನ ಸೆಳೆದರು.

'ನಾಡದೋಣಿ ಮೀನುಗಾರಿಕೆ ನಮ್ಮ ಕರಾವಳಿಯ ಹೆಣ್ಣುಮಕ್ಕಳ ಮತ್ತು ಲಕ್ಷಾಂತರ ಕುಟುಂಬಗಳ ಜೀವನಾಡಿಯಾಗಿದೆ. ಸೀಮೆಎಣ್ಣೆ ಕೊರತೆಯಿಂದಾಗಿ ಮೀನುಗಾರರು ಸಮುದ್ರಕ್ಕೆ ಇಳಿಯಲಾಗದ ಪರಿಸ್ಥಿತಿ ನಿರ್ಮಾಣವಾಗಬಾರದು. ತಕ್ಷಣವೇ ಈಗಿರುವ ಎಲ್ಲಾ ತಾಂತ್ರಿಕ ಅಡಚಣೆಗಳನ್ನು ನಿವಾರಿಸಿ, ರಿಯಾಯಿತಿ ದರದ ಸೀಮೆಎಣ್ಣೆಯನ್ನು ಸಮರ್ಪಕವಾಗಿ ವಿತರಿಸಬೇಕು ಎಂದು ಅವರು ಸಚಿವರ ಸಮ್ಮುಖದಲ್ಲಿ ಬಲವಾಗಿ ವಾದಿಸಿದರು. ಶಾಸಕರ ತಾರ್ಕಿಕ ಹಾಗೂ ಪೂರಕ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವ ಮಂಕಾಳ ವೈದ್ಯ ಮೀನುಗಾರರ ಹಿತರಕ್ಷಣೆಗೆ ಸರ್ಕಾರ ಬದ್ಧವಾಗಿದ್ದು, ಎದುರಾಗಿರುವ ಸಮಸ್ಯೆಗಳನ್ನು ಶೀಘ್ರದಲ್ಲೇ ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು.

ಶಿರಸಿ–ಹಾವೇರಿ ಸಾಗರಮಾಲಾ ಹೆದ್ದಾರಿ ಕಾಮಗಾರಿ ಅಧಿಕಾರಿಗಳು, ಗುತ್ತಿಗೆದಾರರಿಂದ ಸ್ಥಳ ಪರಿಶೀಲನೆ

• **ಶಿರಸಿ :** ಸಾಗರಮಾಲಾ ಯೋಜನೆಯಡಿ ಮಂಜೂರಾಗಿ ಸದ್ಯ ಪ್ರಗತಿಯಲ್ಲಿರುವ 766 ಉ ಶಿರಸಿ-ಹಾವೇರಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯು ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಸಂಸದವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಗಮನಕ್ಕೆ ಈ ರಸ್ತೆಯ ಗಂಭೀರತೆಯನ್ನು ತಂದಿದ್ದರು. ಈ ಹಿನ್ನೆಲೆಯಲ್ಲಿ ದೆಹಲಿ ಮಟ್ಟದ ಉನ್ನತ ಅಧಿಕಾರಿಗಳು ಹಾಗೂ ಸಂಸದರ ನಡುವೆ ನಡೆದ ಸಭೆಯ ಫಲವಾಗಿ ಶನಿವಾರ ಬೆಂಗಳೂರಿನ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಾದೇಶಿಕ ಅಧಿಕಾರಿ ಹಾಗೂ ಗುತ್ತಿಗೆದಾರರ ತಂಡ ಜಂಟಿ ಸಮೀಕ್ಷೆ ಮತ್ತು ಸ್ಥಳ ಪರಿಶೀಲನೆ ನಡೆಸಿತು.

ರಾಷ್ಟ್ರೀಯಹೆದ್ದಾರಿಪ್ರಾಧಿಕಾರದಬೆಂಗಳೂರು ಪ್ರಾದೇಶಿಕ ಅಧಿಕಾರಿ ಬ್ರಹ್ಮಾಕರ್ ಹಾಗೂ ಯೋಜನಾಧಿಕಾರಿ ಶಿವಕುಮಾರ್ ಅವರು, ಯೋಜನೆಯ ಗುತ್ತಿಗೆ ವಹಿಸಿಕೊಂಡಿರುವ ಅಮ್ಮಾಪುರ್ ಕನ್ಸ್ಟ್ರಕ್ಷನ್ ಕಂಪನಿ ಹಾಗೂ ಆರ್.ಎನ್.ಎಸ್ ಕಂಪನಿಯ ಪ್ರತಿನಿಧಿಗಳೊಂದಿಗೆ ಜಂಟಿಯಾಗಿ ಶಿರಸಿ-ಹಾವೇರಿ ರಸ್ತೆ ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಭೇಟಿ ನೀಡಿ ಪರಿವೀಕ್ಷಣೆ ನಡೆಸಿದರು.



ಬರುವಮಳೆಗಾಲದಲ್ಲಿಸಾರ್ವಜನಿಕರಹಾಗೂ ವಾಹನಗಳ ಸುಗಮ ಸಂಚಾರಕ್ಕೆ ಯಾವುದೇ ರೀತಿಯ ಅಡಚಣೆಯಾಗದಂತೆ ಸಕಾಲದಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಕಾಮಗಾರಿಯ ವೇಗವನ್ನು ಹೆಚ್ಚಿಸಬೇಕು ಎಂದು ಸ್ಥಳದಲ್ಲಿದ್ದ ಉಭಯ ಗುತ್ತಿಗೆದಾರ ಕಂಪನಿಗಳಿಗೆ ಅಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಮಳೆಗಾಲ ಆರಂಭವಾಗುವ ಮುನ್ನವೇ ರಸ್ತೆಯು ಸುಗಮ ಸಂಚಾರಕ್ಕೆ ಯೋಗ್ಯವಾಗುವಂತೆ ಕೆಲಸ ನಿರ್ವಹಿಸಿ, ಕಾಮಗಾರಿಯಲ್ಲಿ ತ್ವರಿತ ಪ್ರಗತಿ ಸಾಧಿಸಬೇಕೆಂದು ಗುತ್ತಿಗೆದಾರರಿಗೆ ಕಟ್ಟುನಿಟ್ಟಾಗಿ ಆದೇಶಿಸಲಾಗಿದೆ.

ಕಿರುಸುದ್ದಿ

ಚಿತ್ರೀಕರಣ ಆರಂಭ

ಹುಬ್ಬಳ್ಳಿ: ಹುಬ್ಬಳ್ಳಿ ಮಹಾನಗರದಿಂದ ಓಡಿ ಹೋಗೋಣ ಬಾ ಚಿತ್ರದ ಚಿತ್ರೀಕರಣವನ್ನು ಪ್ರಾರಂಭಿಸಲಾಗಿದ್ದು, ಈ ಚಿತ್ರ ಸಂಪೂರ್ಣ ಉತ್ತರ ಕರ್ನಾಟಕ ಶೈಲಿಯ ಭಾಷೆಯಲ್ಲಿ ಇರಲಿದೆ ಎಂದು ಚಿತ್ರದ ನಿರ್ದೇಶಕ ರಾಜು ಮೊಕಾಶಿ ಹೇಳಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರದ ಟೈಟಲ್ ಹೇಳುವಂತೆ ಇದು ಪ್ರೀತಿ ಪ್ರೇಮದ ಸುತ್ತ ಹೆಣೆದಿರುವ ಕಥೆಯಾದರೂ ಓಡಿ ಹೋಗುವುದರಿಂದ ಆಗುವ ಪರಿಣಾಮ, ಕುಟುಂಬ, ಗ್ರಾಮದಲ್ಲಿ ಎದುರಾಗುವ ಸಮಸ್ಯೆಗಳನ್ನು ತೋರಿಸುವ ಜೊತೆಗೆ ಉತ್ತರ ಕರ್ನಾಟಕ ಭಾಗದಲ್ಲಿ ಆಚರಿಸುವ ಸಂಪ್ರದಾಯ, ಕಲೆ, ಸಂಸ್ಕೃತಿಯನ್ನು ಪ್ರೇಕ್ಷಕರ ಮುಂದಿಡುವ ಪ್ರಯತ್ನ ಮಾಡುತ್ತಿದ್ದೇವೆ. ಚಿಗುರಿದ ಕನಸು ಸೇರಿದಂತೆ ಅನೇಕ ಸಿನಿಮಾಗಳಿಗೆ ಸಹಾಯಕ ನಿರ್ದೇಶಕನಾಗಿ, ಧಾರವಾಹಿಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದು, ಒಂದು ವಿಶೇಷ ಚಿತ್ರ ಮಾಡಬೇಕೆಂಬ ಆಶಯದೊಂದಿಗೆ ಇದಕ್ಕೆ ಕೈ ಹಾಕಿದ್ದೇನೆ ಎಂದರು.

ಚಿತ್ರದ ಚಿತ್ರಕಥೆಯನ್ನು ನಾನೇ ಬರೆದು ನಿರ್ಮಾಣ ಮಾಡಿರುವ ಚಲನಚಿತ್ರದಲ್ಲಿ ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಲಾಗಿದೆ. ಉತ್ತರ ಕರ್ನಾಟಕದ 15ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಚಿತ್ರೀಕರಣ ಮಾಡುವ ಯೋಜನೆ ರೂಪಿಸಲಾಗಿದೆ ಎಂದರು. ಚಿತ್ರದ ಚಿತ್ರೀಕರಣ ಮೊದಲ ಹಂತದ ಚಿತ್ರೀಕರಣ ನಡೆದಿದೆ. ಡಿಸೆಂಬರ್ ವೇಳೆಗೆ ಚಿತ್ರದ ಚಿತ್ರೀಕರಣ ಪೂರ್ಣಗೊಳ್ಳಲಿದೆ. ಒಂದು ಡಾಬಾ ಸಾಂಗ್ ಇದ್ದು, ಅದನ್ನು ರಾಣೆಬೆನ್ನೂರಿನ ಸೌಮ್ಯಶ್ರೀ ಹಾಡಿದ್ದಾರೆ. ಎರಡು ರೈಟ್‌ಗಳಿವೆ. ದೈವದ ಆಚರಣೆ ತಿಳಿಸುವ ಕಾಂತಾರ ಸಿನೆಮಾ ನಮಗೆ ಪ್ರೇರಣೆಯಾಗಿದೆ. ಈ ಭಾಗದ ಆಚರಣೆಗಳಾದ ಮಣ್ಣಿನ ಪೂಜೆಯ ಮಹತ್ವ ತಿಳಿಸುವ ಕೆಲಸವನ್ನು ಚಿತ್ರದಲ್ಲಿ ಮಾಡಿದ್ದೇವೆ. ಚಿತ್ರದ ಮೂಲಕ ಮುಂದಿನ ಪೀಳಿಗೆಗೆ ಪರಂಪರೆ ಕೊಂಡೊಯ್ಯುವ ಕೆಲಸವೂ ಆಗಲಿದೆ ಎಂದರು.

ಡ್ಯಾನ್ಸ್ ಮಾಸ್ಟರ್ ಬಾಲಕೃಷ್ಣ, ಕ್ಯಾಮರಾಮೆನ್ ಪವನಕುಮಾರ, ನಟಿಯರಾದ ಅಕ್ಷತಾ, ಅನಿತಾ, ಯಲ್ಲಪ್ಪ ಬದ್ದಿ ಇದ್ದರು.

ಮೇ 29ರಿಂದ ವಿಚಾರ ಸಂಕಿರಣ

ಹುಬ್ಬಳ್ಳಿ: ಇಲ್ಲಿಯ ಕೇಶ್ವಾಪುರದ ಲೆಕ್ಕಪರಿಶೋಧಕ ಸಂಸ್ಥೆ(ಐಸಿಎಐ) ವತಿಯಿಂದ ಮೇ 29 ಹಾಗೂ 30ರಂದು ಹೊಸ ಆದಾಯ ತೆರಿಗೆ ಕಾಯ್ದೆ 2025 ಕುರಿತು ಎರಡು ದಿನಗಳ ವಿಚಾರ ಸಂಕಿರಣ ಐಸಿಎಐ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಯದರ್ಶಿ ಅನಂತ ನ್ಯಾಮಣ್ಣವರ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1961 ಆದಾಯ ತೆರಿಗೆ ಕಾಯ್ದೆ ಬದಲಾಗಿ ಸಂಸತ್ತಿನ ಅಂಗೀಕೃತವಾದ ಆದಾಯ ತೆರಿಗೆ ಕಾಯ್ದೆ 2025 ಏಪ್ರಿಲ್ 1 ರಂದು ಜಾರಿಗೆ ಬಂದಿದೆ. ಈ ಕಾಯ್ದೆ ಕುರಿತು ಸರಳೀಕೃತ ಭಾಷೆ, ಪುನರ್ ರಚಿಸಲಾದ ಅಧ್ಯಾಯಗಳು ಹಾಗೂ ವಾಸ ಸ್ಥಿತಿ, ವ್ಯವಹಾರ ಹಾಗೂ ವೃತ್ತಿ ಆದಾಯ ಸೇರಿದಂತೆ ಹಲವಾರು ಬದಲಾವಣೆಯಾಗಿವೆ. ಇವುಗಳ ಬಗ್ಗೆ ತಿಳಿಸುವ ಉದ್ದೇಶದಿಂದ ಈ ವಿಚಾರ ಸಂಕಿರಣ ಏರ್ಪಡಿಸಲಾಗಿದೆ ಎಂದರು.

ಮೇ 29ರಂದು ಮಧ್ಯಾಹ್ನ 2.15 ಗಂಟೆಗೆ ಮೂಲಧನ ಲಾಭದಿಂದ ಆದಾಯ ಕುರಿತು ಸಿ.ಎ. ಎಸ್. ಕೃಷ್ಣನ್, ಕ್ಲಬ್ಬಿಂಗ್, ಆದಾಯ ಒಕ್ಕೂಟ, ನಷ್ಟಗಳ ಸೆಟ್ ಆಫ್ ಹಾಗೂ ಮುಂದೂಡಿಕೆ, ಮೂಲಧನ, ಲಾಭ ತೆರಿಗೆ ಬಗ್ಗೆ ಸಿದ್ದೇಶ ಗಡ್ಡಿ ಗೋಷ್ಠಿ ನಡೆಯಲಿದ್ದಾರೆ. ಮೇ 30ರಂದು ಬೆಳಗ್ಗೆ 10 ಗಂಟೆಗೆ ಟ್ರಸ್ಟ್‌ಗಳು ಕುರಿತು ಎನ್. ಸುರೇಶ, ಶೋಧ, ವಶಪಡಿಕೆ ಹಾಗೂ ಡೇಟಾ ಗೌಪ್ಯತೆ ಪ್ರಶಾಂತ ಜಿ.ಎಸ್., ತರುಣ್ ಕೋಠಾರಿ ವ್ಯವಹಾರ ಹಾಗೂ ವೃತ್ತಿ ಆದಾಯ ಹಾಗೂ ಇತರೆ ಮೂಲಗಳಿಂದ ಆದಾಯದ ಕುರಿತು ಹಾಗೂ ಟಿಡಿಎಸ್, ಟಿಸಿಎಸ್ ತೆರಿಗೆ, ಸಂಗ್ರಹ ಹಾಗೂ ವಸೂಲಿ, ಬಡ್ಡಿ, ಶುಲ್ಕ ಕುರಿತು ಕೌಶಿಕ್ ರಾಜ್ ವಿಚಾರ ಸಂಕಿರಣ ನಡೆಸಿಕೊಡಲಿದ್ದಾರೆ ಎಂದು ತಿಳಿಸಿದರು.

ವಿರೂಪಾಕ್ಷ ಹಿಪ್ಪರಗಿ, ರೀಶಬ್ ಉಪಾಧ್ಯಾಯ, ವೈ.ಎಂ. ಖಾಟವಾಕರ, ಸಂತೋಷಕುಮಾರ ಪಾಟೀಲ ಇದ್ದರು.

ರೈತ ಆತ್ಮಹತ್ಯೆ

ಕುಂದಗೋಳ: ಸಾಲಬಾಧೆ ಹಾಗೂ ಬೆಳೆ ನಷ್ಟದಿಂದ ಮನನೊಂದ ರೈತರೊಬ್ಬರು ಹೊಲದ ಶೆಡ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಶುಕ್ರವಾರ ತಾಲೂಕಿನ ಹಿರೇಹರಕುಣಿ ಗ್ರಾಮದಲ್ಲಿ ನಡೆದಿದೆ.



ಹಿರೇಹರಕುಣಿ ಗ್ರಾಮದ ಶಿವಾನಂದ ವಿರುಪಾಕ್ಷಪ್ಪ ಹೂಗಾರ (64) ಮೃತ ರೈತ ಎಂದು ಗುರುತಿಸಲಾಗಿದೆ. ಮೃತರು ಕೆ.ವಿ.ಜಿ ಬ್ಯಾಂಕ್‌ನಲ್ಲಿ 2 ಲಕ್ಷ ರೂ. ಬೆಳೆ ಸಾಲ ಪಡೆದಿದ್ದರು ಎನ್ನಲಾಗಿದೆ. ಜೊತೆಗೆ ಬೆಳೆಗೆ ಸೂಕ್ತ ಬೆಲೆ ಸಿಗದೇ ನಷ್ಟ ಅನುಭವಿಸಿದ್ದರಿಂದ ಮಾನಸಿಕವಾಗಿ ನೊಂದಿದ್ದರು ಎಂದು ತಿಳಿದುಬಂದಿದೆ. ಗುಡಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಧಾರವಾಡ: ಇಲ್ಲಿನ ಜನತಾ ಶಿಕ್ಷಣ ಸಮಿತಿ ಕಾಲೇಜಿನಲ್ಲಿ 1998ರಿಂದ 2001ರವರೆಗಿನ ವಿದ್ಯಾರ್ಥಿಗಳ ರಜತ್ ಪುನರ್ ಮಿಲನ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹಾಗೂ ಪ್ರಾಧ್ಯಾಪಕರು ಇದ್ದರು.

ನಾಟಕ ಪರಂಪರೆ ಉಳಿಯಲಿ

ಧಾರವಾಡ: ಕಲಾವಿದರಿಗೆ ಉತ್ತೇಜನ, ಕನ್ನಡ ನಾಟಕ ಪರಂಪರೆ ಉಳಿವಿನಲ್ಲಿ ಕಲಾ ತಂಡಗಳ ರಚನೆ ಬಹಳಷ್ಟು ಸಹಕಾರಿ ಎಂದು ರಂಗಾಯಣದ ನಿರ್ದೇಶಕ ಝುಕೀರ ನದಾಫ್ ಹೇಳಿದರು.

ಪಂ.ಪುಟ್ಟರಾಜ ಗವಾಯಿಗಳ ಕಲಾ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಹಯೋಗದ ಹೇಮರಡ್ಡಿ ಮಲ್ಲಮ್ಮ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕಳೆದ 16 ವರ್ಷಗಳಿಂದ ಪುಟ್ಟರಾಜ ಗವಾಯಿಗಳ ಪ್ರತಿಷ್ಠಾನ ಉತ್ತಮ ಕೆಲಸ ಮಾಡುತ್ತಿದೆ. ಈ ಪ್ರತಿಷ್ಠಾನದಿಂದ ಅತ್ಯುತ್ತಮ ನಾಟಕ ತಂಡವನ್ನು ಕಟ್ಟುವಂತೆ ಆಗಲಿ ಎಂದು ಆಶಿಸಿದರು. ರೆಡ್ಡಿ ಸಮಾಜದ ಮುಖಂಡರಾದ ಶೇಖರಗೌಡ ಮಾಲಿಪಾಟೀಲ, ಸುಜಾತಾ ರೆಡ್ಡಿ, ವಕೀಲ ಕೆ.ಎಲ್.ಪಾಟೀಲ, ಶೋಭಾ ಭೂಮರಡ್ಡಿ, ಕಲಾವಿದೆ ಹೆಲನ್ ಮೈಸೂರು, ಸುನೀಲ ಬಾಗೇವಾಡಿ ಮಾತನಾಡಿದರು. ವಿವಿಧ ಕ್ಷೇತ್ರಗಳ ಗಣ್ಯರಿಗೆ ಹಾಗೂ ಅನೇಕ ಆದರ್ಶ ದಂಪತಿಗಳನ್ನು ಸನ್ಮಾನಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಎಂ.ಎಸ್.ಫರಾಸ್ ಅಧ್ಯಕ್ಷತೆ ವಹಿಸಿದ್ದರು. ಮಾರ್ತಂಡಪ್ಪ ಕತ್ತಿ, ವಿಜಯಲಕ್ಷ್ಮೀ ಶೆಟ್ಟಿ, ಪ್ರಮೀಳಾ ಜಕ್ಕಣ್ಣವರ, ಕೃಷ್ಣಮೂರ್ತಿ ಗೊಲ್ಲರ, ಸುರೇಶ ಬೆಟೇರಿ ಇದ್ದರು. ಕೊನೆಯಲ್ಲಿ ಹೆಲನ್ ಮೈಸೂರ ತಂಡದಿಂದ ಹೆಮರಡ್ಡಿ ಮಲ್ಲಮ್ಮ ನಾಟಕ ಪ್ರದರ್ಶನ ಜರುಗಿತು.



ಪಂ.ಪುಟ್ಟರಾಜ ಗವಾಯಿಗಳ ಕಲಾ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಹಯೋಗದ ಹೇಮರಡ್ಡಿ ಮಲ್ಲಮ್ಮ ನಾಟಕ ಪ್ರದರ್ಶನಕ್ಕೆ ರಂಗಾಯಣದ ನಿರ್ದೇಶಕ ಝುಕೀರ ನದಾಫ್ ಚಾಲನೆ ನೀಡಿದರು.

9ನೇ ದಿನವೂ ಮುಂದುವರಿದ ಸತ್ಯಾಗ್ರಹ | ತೀವ್ರಗೊಳಿಸುವ ಎಚ್ಚರಿಕೆ

ಧಾರವಾಡ ಪ್ರತ್ಯೇಕ ಪಾಲಿಕೆಗೆ ಆಗ್ರಹ

ಧಾರವಾಡ: ಪ್ರತ್ಯೇಕ ಮಹಾನಗರ ಪಾಲಿಕೆಯ ರಚನೆಗೆ ಒತ್ತಾಯಿಸಿ ಧಾರವಾಡ ಪ್ರತ್ಯೇಕ ಪಾಲಿಕೆ ಸ್ವಾಭಿಮಾನಿ ಹೋರಾಟ ಸಮಿತಿ ಕೈಗೊಂಡ ಸತ್ಯಪ್ರತಿಪಾದನೆ ಸತ್ಯಾಗ್ರಹ 9ನೇ ದಿನಕ್ಕೆ ಕಾಲಿಟ್ಟಿದೆ. ಶನಿವಾರ ಮರಾಠಾ ವಿದ್ಯಾಪ್ರಸಾರಕ ಮಂಡಳ ಬೆಂಬಲಿಸಿದೆ. ಹೋರಾಟಕ್ಕೆ ದಿನದಿಂದ ದಿನಕ್ಕೆ ಸಾರ್ವಜನಿಕ ವಲಯ ಹಾಗೂ ವಿವಿಧ ಸಂಘಟನೆಗಳಿಂದ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದ್ದು, ಶನಿವಾರದ ಧರಣಿಗೆ ಮರಾಠಾ ವಿದ್ಯಾಪ್ರಸಾರಕ ಮಂಡಳ ಪದಾಧಿಕಾರಿಗಳು ಮುಂಚೂಣಿಯಲ್ಲಿ ನಿಂತು ಬೆಂಬಲ ಸೂಚಿಸಿದರು.

ಮರಾಠ ಮಂಡಳದ ಮುಖಂಡರು ಮಾತನಾಡಿ, ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಆಗಬೇಕು ಎಂಬುದು ಕೇವಲ ರಾಜಕೀಯ ಬೇಡಿಕೆಯಲ್ಲ, ಇದು ಈ ಭಾಗದ ಪ್ರತಿಯೊಬ್ಬ ನಾಗರಿಕನ ಸ್ವಾಭಿಮಾನ ಹಾಗೂ ಅಭಿವೃದ್ಧಿಯ ಹಕ್ಕಾಗಿದೆ. ಆಡಳಿತ ಹುಬ್ಬಳ್ಳಿ ಕೇಂದ್ರೀಕರಣದಿಂದ ಧಾರವಾಡದ ನಾಗರಿಕರು ಮೂಲಭೂತ ಸೌಕರ್ಯಗಳಿಗೂ ಪರದಾಡುವಂತಾಗಿದೆ. ಈ ತಾರತಮ್ಯ ಕೊನೆ ಆಗಬೇಕಾದರೆ ಧಾರವಾಡಕ್ಕೆ ಸ್ವತಂತ್ರ ಪಾಲಿಕೆ ಅನಿವಾರ್ಯ ಎಂದರು.

ಈ ವೇಳೆ ಮಾತನಾಡಿದ ಸ್ವಾಭಿಮಾನಿ ಹೋರಾಟ ಸಮಿತಿಯ ಬಿ.ಡಿ.ಹಿರೇಮಠ, ಸತ್ಯಾಗ್ರಹ ಆರಂಭವಾಗಿ 9 ದಿನಗಳು ಕಳೆದರೂ ರಾಜ್ಯಪಾಲರು ಅಂಕಿತವೇ ಹಾಕಿಲ್ಲ, ಧಾರವಾಡಕ್ಕೆ ನ್ಯಾಯ ಸಿಗುವವರೆಗೂ, ಸತ್ಯಾಗ್ರಹ ನಿಲ್ಲುವುದಿಲ್ಲ ಎಂದು ಸ್ಪಷ್ಟಪಡಿಸಿದರು. ರಾಜ್ಯಪಾಲರು ಕಡತಕ್ಕೆ ಅಂಕಿತ ಹಾಕದಿದ್ದರೆ ಮುಂದಿನ ದಿನಗಳಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಮತ್ತು ವಿವಿಧ ವಾಣಿಜ್ಯ ಸಂಘಟನೆಗಳು ಹಾಗೂ ನಾಗರಿಕರನ್ನು ಒಟ್ಟುಗೂಡಿಸಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಎಚ್ಚರಿಸಿದರು. ಮುಖಂಡರಾದ ಮೋಹನ ಮೋರೆ, ರಾಜು ಬಿರಜೆನವರ, ಮಂಜುನಾಥ ಕದಂ, ವಿಜಯ ಬೊಸ್ಲೆ, ಭೀಮಪ್ಪ ಕಾಸಾಯಿ, ನವೀನ ಕದಂ, ಈಶ್ವರ ಶಿವಳ್ಳಿ, ಅರವಿಂದ ಏಗನಗೌಡರ, ಶಂಕರ ಅಂಬಲಿ ಇದ್ದರು.



» ಧಾರವಾಡ ಪಾಲಿಕೆ ಕಚೇರಿ ಆವರಣ ಒಳಗಿನ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಕಚೇರಿ ನಾಮಫಲಕದಲ್ಲಿ ಹುಬ್ಬಳ್ಳಿ ಹೆಸರು ಅಳಿಸಿ, ಧಾರವಾಡ ಮಹಾನಗರ ಪಾಲಿಕೆ ಕಚೇರಿ ಹೆಸರು ಕಾಣುವಂತೆ ಮಾಡಿ ಪ್ರತಿಭಟನೆ

ಮಾವು ಮೇಳ ಜನಾಕರ್ಷಿಸಲಿ: ಟೆಂಗಿನಕಾಯಿ

ಹುಬ್ಬಳ್ಳಿ: ರೈತರು ಉತ್ತಮ ಗುಣಮಟ್ಟದ ಮಾವಿನ ಹಣ್ಣು ತಂದಿದ್ದಾರೆ. ರೈತರ ಫಸಲನ್ನು ನೋಡಿ ಸಂತೋಷವಾಯಿತು. ರೈತರಿಗೆ ಬೆಳೆದ ಫಸಲನ್ನು ವಿದೇಶಗಳಿಗೆ ರಫ್ತು ಮಾಡುವ ನಿಟ್ಟಿನಲ್ಲಿ ಮಾಹಿತಿ ಒದಗಿಸುವುದು ಅವಶ್ಯಕವಾಗಿದೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ಹೇಳಿದರು.

ಎಪಿಎಂಸಿಯ ವಿವಿಧೋದ್ದೇಶ ವಸ್ತು ಪ್ರದರ್ಶನ ಆವರಣದಲ್ಲಿ ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ತೋಟಗಾರಿಕೆ ಇಲಾಖೆ, ಕೃಷಿ ಮಾರಾಟ ಇಲಾಖೆ, ಜೀಸ್ ಫೌಂಡೇಶನ್ ಹಾಗೂ ಜಿಲ್ಲಾಡಳಿತ ಸಹಯೋಗದೊಂದಿಗೆ ಮಾರುಕಟ್ಟೆ ಮತ್ತು ಮೌಲ್ಯವರ್ಧನೆ ಎಂಬ ಶೀರ್ಷಿಕೆಯಲ್ಲಿ ಧಾರವಾಡ ಜಿಲ್ಲಾಮಟ್ಟದ ಮಾವು ಮೇಳ ಹುಬ್ಬಳ್ಳಿ -2026 ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ಜನರನ್ನು ಆಕರ್ಷಿಸುವ ನಿಟ್ಟಿನಲ್ಲಿ ಮಾವು ಮೇಳವನ್ನು ಆಯೋಜನೆ ಮಾಡಬೇಕಾಗಿದೆ. ಮೇಳದ ಕುರಿತು ವ್ಯಾಪಕ ಪ್ರಚಾರ ಅಗತ್ಯ. ಧಾರವಾಡ ಜಿಲ್ಲೆಯ ಮಾವುಗಳು ಬೇರೆ ಬೇರೆ ದೇಶಗಳಿಗೆ ರಫ್ತಾಗುತ್ತವೆ. ಪ್ರತಿ ವರ್ಷ ನಿರ್ದಿಷ್ಟ ತಿಂಗಳಲ್ಲಿ ಮಾವು ಮೇಳವನ್ನು ಆಯೋಜಿಸಬೇಕು. ಇದರಿಂದ ಜನರಿಗೆ ಮೇಳದ ಕುರಿತು ಮುಂಚಿತವಾಗಿ ತಿಳಿಯಲಿದೆ ಎಂದರು.

ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಜಿ.ಕೆ.ಆದಪ್ಪಗೌಡರ ಮಾತನಾಡಿ, ಮಾವು ರಾಷ್ಟ್ರೀಯ ಹಣ್ಣು ಆಗಿದೆ. ರೈತರು ವರ್ಷಪೂರ್ತಿ ಶ್ರಮವಹಿಸಿ ಮಾವು ಬೆಳೆಯುತ್ತಾರೆ. ಆದರೆ ರೈತರಿಗೆ ಮಧ್ಯವರ್ತಿಗಳ ಹಾವಳಿಯಿಂದ ಮೋಸವಾಗುತ್ತವೆ. ದೇಶದಲ್ಲಿ ಸಾವಿರಕ್ಕೂ ಅಧಿಕ ಮಾವಿನ ತಳಿಗಳಿವೆ. ಉತ್ತಮ ಬೆಳೆಗೆ ಉತ್ತಮ ಬೆಲೆ ದೊರೆಯಬೇಕು. ಜಿಲ್ಲೆಯ ಮಾವು ಬೇರೆ ದೇಶಗಳಿಗೂ ರಫ್ತಾಗಬೇಕು ಎಂದರು. ಜೀಸ್ ಗ್ಲೋಬಲ್‌ನ ಜೀಶಾನ್ ಸಿರಸಂಗೆ ಮಾತನಾಡಿ, ಹುಬ್ಬಳ್ಳಿ ಧಾರವಾಡದಲ್ಲಿ ಸಾವಿರಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗಿದೆ. ಜಾಗತಿಕವಾಗಿ 30 ಲಕ್ಷ ಸಸಿ ನೆಡುವ ಸಂಕಲ್ಪ ಮಾಡಲಾಗಿದೆ. 14 ಜಿಲ್ಲೆಗಳಲ್ಲಿ 1.60 ಲಕ್ಷ ಹುದ್ದೆ ಸೃಷ್ಟಿಸುವ ಗುರಿ ಹೊಂದಿದ್ದೇವೆ. ರೈತರನ್ನು ಬೆಂಬಲಿಸೋಣ ಎಂದರು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಕೆ.ಹೆಚ್.ಗುರುಪ್ರಸಾದ್, ಕೃಷಿ ಮಾರಾಟ ತರಬೇತಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಆಶಿಕ್ ಆಲಿ ಡಿ.ಎಂ. ಅವರು ಮಾತನಾಡಿದರು. ವಿವಿಧ ರೈತರು ಮೇಳದಲ್ಲಿ ಭಾಗವಹಿಸಿ ಮಾವು ಮಾರಾಟ ಮಾಡಿದರು. ಮೋಹನ ಹೊಸಮನಿ, ಚನ್ನು ಹೊಸಮನಿ, ಮಲ್ಲಿಕಾರ್ಜುನ ಗುಂಡೂರ, ನಿವೃತ್ತ ಪ್ರಾಧ್ಯಾಪಕರಾದ ಬಿ.ಬಿ.ಪಾಟೀಲ, ಚಿದಾನಂದ ಮನಸೂರ ಸೇರಿದಂತೆ ಖರೀದಿದಾರರು, ರಫ್ತುದಾರರು, ಸಾರ್ವಜನಿಕರು ಇತರರಿದ್ದರು.



ಜ್ಞಾನ ದೀವಿಗೆ ಹೊತ್ತಿಸಿದ ಪ್ರೊ. ಪವಾರ್

ಧಾರವಾಡ: ವಿದ್ಯಾರ್ಥಿಗಳಲ್ಲಿ ಜ್ಞಾನದ ದೀವಿಗೆ ಹೊತ್ತಿಸುವಲ್ಲಿ ಪ್ರೊ. ಎಸ್.ಕೆ. ಪವಾರ್ ಅವರ ಕಾರ್ಯ ಅನನ್ಯ. ಶಿಕ್ಷಣದ ಜೊತೆಗೆ ಸಮಾಜ ಸುಧಾರಣೆಗೆ ಶ್ರಮಿಸಿದ್ದಾರೆ ಎಂದು ಶಂಕರಲಿಂಗ ಸಂಸ್ಥಾನದ ಮಠದ ಸೋಮಲಿಂಗ ಸ್ವಾಮೀಜಿ ಹೇಳಿದರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ ಮಾನಸೋಲ್ಲಾಸ ಸಭಾಭವನದಲ್ಲಿ ಹಿಂದಿ ಅಧ್ಯಯನ ವಿಭಾಗದ ವಿದ್ಯಾರ್ಥಿಗಳು ಹಾಗೂ ಅಭಿಮಾನಿ ಬಳಗ ಏರ್ಪಡಿಸಿದ ಪ್ರೊ. ಎಸ್. ಕೆ.ಪವಾರ್ ಅಭಿನಂದನೆ, ಗ್ರಂಥ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದರು. ಉತ್ತಮ ಸಾಹಿತ್ಯ ಸೃಷ್ಟಿಗೆ ಉತ್ತಮ ಆಹಾರ, ವಿಚಾರ-ವಿಹಾರಗಳ ಸಮನ್ವಯ ಅಗತ್ಯ. ಪವಾರ್ ಅವರು ಸಮಾಜಮುಖಿ ಚಿಂತನೆ ಮೂಲಕ ಅನೇಕ ಕೊಡುಗೆ ನೀಡಿದ್ದು, ಅವರ ಕಾರ್ಯ ಲೋಕ ಕಲ್ಯಾಣದ ದಾರಿಯಲ್ಲಿ ಎಲ್ಲರಿಗೂ ಪ್ರೇರಣೆ ಎಂದರು.

ಲೇಖಕಿ ಡಾ. ಬಿ.ಟಿ.ಲಲಿತಾ ನಾಯಕ್, ಪ್ರೊ.ಎಸ್.ಕೆ.ಪವಾರ್ ಅವರು ಅತ್ಯಂತ ಸರಳ ಮತ್ತು ಅದ್ಭುತ ವ್ಯಕ್ತಿ. ಅವರು ಕೇವಲ ಪಾಠ ಬೋಧನೆಗೆ ಸೀಮಿತಗೊಳ್ಳದೆ, ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳು ಹಾಗೂ ಉತ್ತಮ ವಿಚಾರಗಳು ಬಿತ್ತಿದ್ದಾಗಿ ತಿಳಿಸಿದರು.

ನಿವೃತ್ತ ಕುಲಪತಿ ಡಾ. ಡಿ.ಬಿ.ನಾಯಕ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಪ್ರೊ. ಎಸ್. ಕೆ. ಪವಾರ್ ಅವರ ಸಾಧನೆ ಮತ್ತು ಸೇವೆ ಅಪಾರ, ಅವರು ಅಭಿನಂದನೆಗೆ ಅರ್ಹರು ಎಂದು ಹೇಳಿದರು. ಹಿಂದುಳಿದ ಹಾಗೂ ಶೋಷಿತ ವರ್ಗಗಳ ಧ್ವನಿಯಾಗಿ ನ್ಯಾಯಕ್ಕಾಗಿ ಹೋರಾಡಿದ ಪವಾರ್ ಅವರ ನಿವೃತ್ತಿ ಜೀವನವು ಸುಖಕರವಾಗಿರಲಿ ಎಂದರು.

ಅಭಿನಂದನೆ ಸ್ವೀಕರಿಸಿದ ಪ್ರೊ. ಎಸ್. ಕೆ.ಪವಾರ್, ತಮ್ಮ ನಿವೃತ್ತಿ ಜೀವನ ಬದುಕಿನ ಮಹತ್ವದ ಘಟ್ಟಗಳಲ್ಲಿ ಒಂದು. ತಮ್ಮ ಸಾಧನೆಗೆ ತಾಯಿ, ಅಕ್ಕ, ತಂಗಿ ಹಾಗೂ ಬಂಧುಗಳು ಹಾಗೂ ಸಮಾಜ ಮಾಡಿದ ತ್ಯಾಗವೇ ಕಾರಣ ಎಂದು ಭಾವುಕರಾಗಿ ಸ್ಮರಿಸಿದರು.

ಕಾರ್ಯಕ್ರಮದಲ್ಲಿ ವಿಧಾನಸಭೆ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಕವಿವಿ ಕುಲಸಚಿವ ಪ್ರೊ. ಪ್ರೊ. ಎಂ.ಎಚ್.ಅಗಡಿ, ಸಾಹಿತಿ ಪ್ರೊ.ಅರ್ಜುನ ಚವ್ಹಾಣ, ಸಾಹಿತಿಗಳಾದ ಡಾ. ಮಹೇಶ್ ದಿವಾಕರ್, ಇಂದುಮತಿ ಲಮಾಣಿ, ರಾಮಾ ನಾಯಕ ಇತರರಿದ್ದರು.



ಆರೋಗ್ಯದ ವಿಷಯದಲ್ಲಿ ಅಲಕ್ಷ್ಯ ಸಲ್ಲ



ಕುಂದಗೋಳ: ಆರೋಗ್ಯದ ವಿಷಯದಲ್ಲಿ ಅಲಕ್ಷ್ಯ ವಹಿಸದೆ ಸಮಯಕ್ಕೆ ಸರಿಯಾಗಿ ವೈದ್ಯಕೀಯ ಚಿಕಿತ್ಸೆ ಪಡೆದು ಆರೋಗ್ಯವಂತರಾಗಬೇಕು ಎಂದು ಶಾಸಕ ಎಂ.ಆರ್. ಪಾಟೀಲ ಹೇಳಿದರು.

ಅವರು ತಾಲೂಕಿನ ಸಂಶಿ ಗ್ರಾಮದ ಕೆಎಲ್‌ಇ ಸಂಸ್ಥೆಯ ಮಹಾವಿದ್ಯಾಲಯದಲ್ಲಿ ಹುಬ್ಬಳ್ಳಿ ಕೆಎಲ್‌ಇ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರ ಮತ್ತು ಕೆಎಲ್‌ಇ ಸಂಸ್ಥೆಯ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಪದವಿಪೂರ್ವ ಹಾಗೂ ಕಲಾ ವಾಣಿಜ್ಯ ಪದವಿ ಮಹಾವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಶನಿವಾರ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಶಂಕ್ರಣ್ಣ ಮುನವಳ್ಳಿ ಮಾತನಾಡಿ, ಕೆಎಲ್‌ಇ ಸಂಸ್ಥೆ 325ಕ್ಕೂ ಅಧಿಕ ಶಿಕ್ಷಣ ಹಾಗೂ ಸೇವಾ ಸಂಸ್ಥೆಗಳ ಮೂಲಕ ಜನಪರ ಕಾರ್ಯಗಳನ್ನು ನಿರಂತರವಾಗಿ ನಡೆಸುತ್ತಿದೆ. ಸಾರ್ವಜನಿಕರು ಉಚಿತ ಶಿಬಿರಗಳ ಸದುಪಯೋಗ ಪಡೆದು ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು. ಉತ್ತರ ಕರ್ನಾಟಕದ ತಾಲೂಕು ಮಟ್ಟದಲ್ಲಿಯೂ ಇಂತಹ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಜೆಜಿಎಂ ವೈದ್ಯಕೀಯ ಆಸ್ಪತ್ರೆ ನಿರ್ದೇಶಕ ಎಂ.ಜಿ. ಹಿರೇಮಠ ಮಾತನಾಡಿ, ಗಬ್ಬೂರಿನಲ್ಲಿರುವ ನೂತನ ಆಸ್ಪತ್ರೆಯಲ್ಲಿ ವಿವಿಧ ರೀತಿಯ ವೈದ್ಯಕೀಯ ಸೇವೆಗಳನ್ನು ಉಚಿತವಾಗಿ ಒದಗಿಸಲಾಗುತ್ತಿದ್ದು, ಪ್ರತಿದಿನ ನೂರಕ್ಕೂ ಹೆಚ್ಚು ಜನರು ಇದರ ಪ್ರಯೋಜನ ಪಡೆಯುತ್ತಿದ್ದಾರೆ ಎಂದರು. ಸ್ಥಳೀಯ ಆಡಳಿತ ಮಂಡಳಿಯ ಅಧ್ಯಕ್ಷ ಎ.ಬಿ. ಉಪ್ಪಿನ ಮಾತನಾಡಿ, ಸಂಶಿಯಲ್ಲಿ ಆರೋಗ್ಯ ಶಿಬಿರ ಆಯೋಜಿಸುವುದು ನಮ್ಮ ಬಹುಕಾಲದ ಆಶಯವಾಗಿತ್ತು. ಈ ಶಿಬಿರದಿಂದ ಜನರಿಗೆ ಅನುಕೂಲವಾಗಿದೆ ಎಂದರು. ಉಚಿತ ಆರೋಗ್ಯ ಶಿಬಿರದಲ್ಲಿ ವಿವಿಧ ವೈದ್ಯಕೀಯ ಸೇವೆಗಳನ್ನು ನೀಡಲು ಸುಮಾರು 25 ಜನ ನುರಿತ ತಜ್ಞ ವೈದ್ಯರು ಆಗಮಿಸಿದ್ದರು. ಸುಮಾರು 1500 ಜನರಿಗೆ ಚಿಕಿತ್ಸೆ ಮತ್ತು ಉಚಿತ ಔಷಧಿಯನ್ನು ವಿತರಿಸಲಾಯಿತು. 30ಕ್ಕೂ ಹೆಚ್ಚು ಜನರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿ ಆಸ್ಪತ್ರೆಗೆ ಸೂಚಿಸಿದ್ದಾರೆ. ಡಾ.ಶಾರದಾ ಮೆಟಗುಡ, ಡಾ. ಅರುಣಕುಮಾರ ಎಂ., ಆಡಳಿತ ಮಂಡಳಿಯ ನಿರ್ದೇಶಕ ಎಚ್.ಎನ್. ಪಾಟೀಲ, ಬಿ.ಬಿ.ಪಾಟೀಲ, ನಿವೃತ್ತ ಶಿಕ್ಷಕ ಎನ್.ಎಫ್. ನಧಾಪ ಇತರರಿದ್ದರು. ಪ್ರಾಚಾರ್ಯ. ಪ್ರೊ.ರಮೇಶ ಅತ್ತಿಗೇರಿ ಸ್ವಾಗತಿಸಿದರು. ಜಿ.ಜೆ.ಕಟಗಿ ವಂದಿಸಿದರು. ಸಿ.ಎಸ್.ಗುರುಮಠ ನಿರೂಪಿಸಿದರು.



ಹುಬ್ಬಳ್ಳಿ: ಸಮಾಜ ಸೇವಕ ಕಮಲ್ ಮೆಹತಾ ಅವರ ಜನ್ಮದಿನದ ಅಂಗವಾಗಿ ವಿವೇಕಾನಂದ ಆಸ್ಪತ್ರೆ ಸಿಬ್ಬಂದಿ ಹಾಗೂ ರಾಷ್ಟ್ರೋತ್ಥಾನ ರಕ್ತ ಕೇಂದ್ರದಿಂದ ರಕ್ತ ದಾನ ಶಿಬಿರ ನಡೆಯಿತು. ರಕ್ತದಾನ ಶಿಬಿರದ ಆಯೋಜಕರಾದ ಡಾ.ರಾಹುಲ ಮುಂಗೇಕರ, ರಾಷ್ಟ್ರೋತ್ಥಾನ ರಕ್ತ ಕೇಂದ್ರ ಮುಖ್ಯಸ್ಥ ದತ್ತಮೂರ್ತಿಕುಲಕರ್ಣಿ, ಡಾ. ಮಂಜುಳಾ ಇದ್ದರು.

ವಸಂತ ಗಾನಲಹರಿ ಸಂಗೀತ ಮಹೋತ್ಸವ

ಹುಬ್ಬಳ್ಳಿ: ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಪ್ರಸ್ತುತಪಡಿಸುವ ಹುಬ್ಬಳ್ಳಿ-ಧಾರವಾಡ ರಾಷ್ಟ್ರೀಯ ಸಂಗೀತೋತ್ಸವದ-26 ವಸಂತ ಗಾನಲಹರಿ ಸಂಗೀತ ಮಹೋತ್ಸವ ಕಾರ್ಯಕ್ರಮ ಮೇ 30 ರಂದು ಧಾರವಾಡ ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತಿಳಿಸಿದರು.



ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತೀಯ ಶಾಸ್ತ್ರೀಯ ಸಂಗೀತ ಲೋಕದ ಇಂದಿನ ಅತ್ಯುನ್ನತ ದಿಗ್ಗಜ ಕಲಾವಿದರು ಒಂದೇ ವೇದಿಕೆಯಲ್ಲಿ ಜುಗಲ್ ಬಂದಿ ಹಾಗೂ ವೈಯಕ್ತಿಕ ಪ್ರದರ್ಶನ ಮೂಡಿಬರಲಿದೆ ಎಂದರು. ಸವಾಯಿ ಗಂಧರ್ವ, ಪಂ. ಭೀಮಸೇನ ಜೋಶಿ, ಬಸವರಾಜ ರಾಜಗುರು, ಮಲ್ಲಿಕಾರ್ಜುನ ಮನ್ಸೂರ, ಡಾ. ಗಂಗೂಬಾಯಿ ಹಾನಗಲ್ ಅವರಂತಹ ಮಹಾನ್ ಕಲಾವಿದರಿಗೆ ಗೌರವ ಸಲ್ಲಿಸುವುದು ಈ ಮಹೋತ್ಸವದ ಆಶಯವಾಗಿದೆ. ಗಾನ ಸರಸ್ವತಿ ವಿದುಷಿ ಕೌಶಿಕಿ ಚಕ್ರವರ್ತಿ ಅವರ ಶಾಸ್ತ್ರೀಯ ಗಾಯನ ಈ ಉತ್ಸವದ ಪ್ರಮುಖ ಆಕರ್ಷಣೆಯಾಗಿದೆ. ಗಾಯಕ ಪಂ. ಜಯತೀರ್ಥ ಮೇವುಂಡಿ ಅವರ ಪ್ರಖರ ಕಂಠಸಿರಿ ಮತ್ತು ಅಂತರರಾಷ್ಟ್ರೀಯ ಖ್ಯಾತಿಯ ಕೊಳಲು ವಾದಕ ಪಂ.ಪ್ರವೀಣ ಗೋಡಖಿಂಡಿ ಅವರ ಕೊಳಲಿನ ಮಾಂತ್ರಿಕ ನಾದದ ನಡುವೆ ನಡೆಯಲಿದೆ ಎಂದರು. ಗಾಯಕ ಪಂ. ಕುಮಾರ ಮರಡೂರ, ಯುವ ತಬಲಾ ಮಾಂತ್ರಿಕ ಪಂ. ಯಶವಂತ ವೈಷ್ಣವ್, ಉದಯೋನ್ಮುಖ ಯುವ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕರಾಗಿರುವ ಪಂಡಿತ್ ಅನಿರುದ್ಧ ಐತಾಳ, ವಿದುಷಿ ಅನುಪಮಾ ಭಾಗವತ್ ಭಾಗವಹಿಸಲಿದ್ದಾರೆ. ಪ್ರವೇಶ ಉಚಿತವಾಗಿದೆ ಎಂದರು.

ಬಕ್ರೀದ್ ಸೌಹಾರ್ದತೆಯಿಂದ ಆಚರಿಸಿ



ಕಲಘಟಗಿ: ತಾಲೂಕಿನಲ್ಲಿ ಹಿಂದೂ ಮುಸ್ಲಿಂ ಧರ್ಮೀಯರು ಎಲ್ಲ ಹಬ್ಬಗಳನ್ನು ಅಣ್ಣ ತಮ್ಮಂದಿರಂತೆ ಆಚರಿಸುತ್ತಾ ಬಂದಿದ್ದಾರೆ. ಹಾಗೆಯೇ ಈ ಬಾರಿಯ ಬಕ್ರೀದ್ ಹಬ್ಬ ಕೂಡ ಶಾಂತಿ ಸೌಹಾರ್ದತೆಯಿಂದ ಆಚರಿಸಿ ಎಂದು ಸಿಪಿಐ ಶ್ರೀಶೈಲ ಕೌಜಲಗಿ ಹೇಳಿದರು.

ಅವರು ಕಲಘಟಗಿ ಪೊಲೀಸ್ ಠಾಣೆಯಲ್ಲಿ ಜರುಗಿದ ಬಕ್ರಿದ್ ಹಬ್ಬದ ನಿಮಿತ್ತ ಆಯೋಜಿಸಲಾಗಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಯಾವುದೇ ಹಬ್ಬಗಳಂದು ಈ ಕಲಘಟಗಿ ತಾಲೂಕಿನಲ್ಲಿ ಇಲ್ಲಿಯವರೆಗೆ ಯಾವ ಕೆಟ್ಟ ಘಟನೆಗಳು ನಡೆದಿಲ್ಲ, ಪಟ್ಟಣ ಹಾಗೂ ತಾಲೂಕು ಶಾಂತಿಪ್ರಿಯ ತಾಲೂಕಾಗಿದೆ ಎಂದರು.

ಈ ಸಂದರ್ಭದಲ್ಲಿ ವಿ.ಪಿ. ಪಟ್ಟಣಶೆಟ್ಟಿ, ಪ್ರಮೋದ ಪಾಲ್ಕರ್, ಸದಾನಂದ ಚಿಂತಾಮಣಿ, ಶೌಕತ ಅಲಿ ತೆರಗಾವಿ, ಆಜಾದ ಮಲೀಕನವರ, ಅಂಜುಮನ್ ಸಂಸ್ಥೆಯ ಸದಸ್ಯರು, ಮುಸ್ಲಿಂ ಮುಖಂಡರು ಹಾಗೂ ವಿವಿಧ ಸಮಾಜಗಳ ಹಿರಿಯರು, ಪೊಲೀಸ್ ಸಿಬ್ಬಂದಿ ಇದ್ದರು.

33 ಸತ್ಯನಾರಾಯಣ ಕಳಸ ಪೂಜೆ

ಹುಬ್ಬಳ್ಳಿ: ವಿಶ್ವೇಶ್ವರನಗರ ರಾಘವೇಂದ್ರ ಸ್ವಾಮಿಗಳ ವೃಂದಾವನ ಸನ್ನಿಧಿಯಲ್ಲಿ ಅಧಿಕ ಮಾಸದ ಹಾಗು ಗುರು ಪುಶ್ಯಮೃತ ಯೋಗದ ವತಿಯಿಂದ ಮೂವತ್ತು ಮೂರು ಸತ್ಯನಾರಾಯಣ ಕಳಸ ಪೂಜೆ ಮತ್ತು ವ್ರತ ವೈಭವ ಗುರುವಾರ ಜರುಗಿತು.

ಆರಾಧನಾ ಸೇವಾ ಸಮಿತಿ ಅಧ್ಯಕ್ಷ ಹಾಗೂ ಹರಿದಾಸ ಚಿಂತಕರಾದ ವಿಷ್ಣುತೀರ್ಥ ಕಲ್ಲೂರಕರ ಅಧಿಕ ಮಾಸದ ವಿಶೇಷತೆಯನ್ನು ಹಾಗೂ ಅದರ ಫಲದ ಬಗ್ಗೆ ಮಾತನಾಡಿದರು. ಶ್ರೀಮಠದ ಅರ್ಚಕ ಕೇಶವ ಜೋಶಿ ಸತ್ಯನಾರಾಯಣ ವ್ರತದ ಮಹಿಮೆ ಹೇಳಿದರು. ಅಷ್ಟೋತ್ತರ ಮಂಡಳಿ ಸಂಚಾಲಕ ಅನಂತ ಗಿಣಿಗೇರ ಸ್ವಾಗತಿಸಿ ಅಷ್ಟೋತ್ತರ ಕಾರ್ಯಕ್ರಮ ನಡೆಸಿಕೊಟ್ಟರು. ಸಮಿತಿ ನಿರ್ದೇಶಕ ಮೋಹನ ಜಕಾತಿ, ಸದಸ್ಯ ವಾದಿರಾಜ ನಾಡಗೌಡ, ಆನಂದ ರಾವ್ ಜೋಶಿ, ಆಡಿ. ತೆರಗಾವಕರ, ವಾಣಿ ಗಲಗಲಿ, ದೇಸಾಯಿ, ಕೇಶವ ಜೋಶಿ, ಪ್ರಸನ್ನ ದೇಶಪಾಂಡೆ, ಸಮಿತಿ ನಿರ್ದೇಶಕ ರಾಘವೇಂದ್ರ ಕುಲಕರ್ಣಿ, ಅರುಣ ಊರುಣಕರ ಇದ್ದರು.



ಸಿಸಿ ರಸ್ತೆ ಕಾಮಗಾರಿಗೆ ಚಾಲನೆ



ಹುಬ್ಬಳ್ಳಿ: ಉಣಕಲ್ ರೈಲ್ವೆ ಸ್ಟೇಷನ್‌ನಿಂದ ಸಿದ್ಧಕಲ್ಯಾಣ ನಗರ ರಸ್ತೆ ಗಣಪತಿ ದೇವಸ್ಥಾನ ರಸ್ತೆವರೆಗೆ 2 ಕೋಟಿ ರೂ. ವೆಚ್ಚದಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಮಹೇಶ ಟೆಂಗಿನಕಾಯಿ ಚಾಲನೆ ನೀಡಿದರು.

ಭೂಮಿಪೂಜೆ ನೆರವೇರಿಸಿ ಮಾತನಾಡಿದ ಶಾಸಕ ಮಹೇಶ ಟೆಂಗಿನಕಾಯಿ, ಸಾರ್ವಜನಿಕರ ಬಹುದಿನಗಳ ಬೇಡಿಕೆ ಈ ರಸ್ತೆ ಕಾಮಗಾರಿ ಮಾಡೋದು ಜನಸೇವೆಯ ಭಾಗ. ಜನರ ಆಶೋತ್ತರಗಳಿಗೆ ಸ್ಪಂದಿಸುವುದು ನಮ್ಮ ಕೆಲಸ. ಜನರಿಗೆ ಸಿಗಬೇಕಾದ ಮೂಲಭೂತ ಸೌಕರ್ಯಗಳನ್ನು ಕಾಲಕ್ಕೆ ತಕ್ಕಂತೆ ಕ್ಷೇತ್ರದಲ್ಲಿ ಮಾಡುವುದು ನನ್ನ ಕರ್ತವ್ಯ ಎಂದರು. ಜನರ ಬಹುದಿನಗಳ ಬೇಡಿಕೆಯನ್ನು ಭೂಮಿಪೂಜೆ ಮುಖಾಂತರ ಈಡೇರಿಸಿದ್ದೇನೆ. ಗುತ್ತಿಗೆದಾರರು ಉತ್ತಮ ಗುಣಮಟ್ಟದ ಕಾಮಗಾರಿಯನ್ನು ಮಾಡಲು ಸೂಚಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಿಗಿ, ವಾರ್ಡ್ ಅಧ್ಯಕ್ಷ ನವೀನ್ ಮಡಿವಾಳರ, ರಮೇಶ್ ಮಾದಪ್ಪನವರ, ಮಹಾನಗರ ಪಾಲಿಕೆಯ ಅಧಿಕಾರಿಗಳು ಇದ್ದರು.

ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆ ಮುಖ್ಯ

ಹುಬ್ಬಳ್ಳಿ: ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ದೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್. ಕೋಟಂಬ್ರಿ ವಿಜ್ಞಾನಸಂಸ್ಥೆಯ ವತಿಯಿಂದ 2025-26ನೇ ಸಾಲಿನ 74ನೇ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ಮಹಾವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು.

ಮಹಿಳಾ ಪೊಲೀಸ್ ಠಾಣೆಯ ಸಿಪಿಐ ಡಾ. ಜ್ಯೋತಿರ್ಲಿಂಗ ಚಂದ್ರಮ್ ಹೊನಕಟ್ಟಿ ಮಾತನಾಡಿ, ವಿದ್ಯಾರ್ಥಿಗಳು ಪಠ್ಯ ಚಟುವಟಿಕೆಗಳ ಜೊತೆಗೆ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸುವ ಮೂಲಕ ತಮ್ಮ ವ್ಯಕ್ತಿತ್ವವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿಕೊಳ್ಳಬೇಕು ಎಂದರು. ಉತ್ತಮ ನಾಗರಿಕರಾಗಲು ಈ ಮೌಲ್ಯಗಳನ್ನು ಅಳವಡಿಸಿಕೊಳ್ಳುವಂತೆ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕೆ.ಎಲ್.ಇ. ಸಂಸ್ಥೆಯ ನಿರ್ದೇಶಕ ಮಂಜುನಾಥ ಎಸ್. ಮುನವಳ್ಳಿ ಮಾತನಾಡಿ, ವಿದ್ಯಾರ್ಥಿಗಳ ಪ್ರತಿಭೆ ಹಾಗೂ ಸಾಧನೆಗಳನ್ನು ಪ್ರಶಂಸಿಸಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಸಾಧನೆ ಮಾಡಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು. ಸಮಾರಂಭದಲ್ಲಿ 2025-26ನೇ ಸಾಲಿನ ವಿವಿಧ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕಾಲೇಜು ಯೂನಿಯನ್, ಜಿಮ್ಖಾನಾ, ಐಕ್ಯುಎಸಿ, ಎನ್‌ಸಿಸಿ, ಎನ್‌ಎಸ್‌ಎಸ್ ಸೇರಿದಂತೆ ವಿವಿಧ ವಿಭಾಗಗಳ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಸುಮಂಗಲಾ ಬಿ. ಪಾಟೀಲ, ವಿವಿಧ ವಿಭಾಗಗಳ ಮುಖ್ಯಸ್ಥರು, ಉಪನ್ಯಾಸಕರು, ವಿದ್ಯಾರ್ಥಿ ಕಾರ್ಯದರ್ಶಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




ಬಿಜೆಪಿ ಕರ್ನಾಟಕ
ಅತ್ಯಂತ ಕಿರಿಯ ವಯಸ್ಸಿಗೆ ಪಕ್ಷದ ಸಾರಥ್ಯ ವಹಿಸಿ, ಅದ್ಭುತ ಸಂಘಟನಾ ಶಕ್ತಿಯಿಂದ ಪಕ್ಷವನ್ನು ಯಶಸ್ಸಿನ ಉತ್ತುಂಗಕ್ಕೆ ಕೊಂಡೊಯ್ಯುತ್ತಿರುವ, ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳ ಐತಿಹಾಸಿಕ ಗೆಲುವಿನ ನಂತರ ರಾಜ್ಯಕ್ಕೆ ಪ್ರಥಮ ಬಾರಿಗೆ ಆಗಮಿಸುತ್ತಿರುವ
ನಮ್ಮ ಹೆಮ್ಮೆಯ ರಾಷ್ಟ್ರೀಯ ಅಧ್ಯಕ್ಷರಾದ
ಶ್ರೀ ನಿತಿನ್ ನಬಿನ್
ಅವರಿಗೆ
ಹೃತ್ಪೂರ್ವಕ ಸುಸ್ವಾಗತ
24 ಮೇ 2026
ಭಾನುವಾರ
ಬಿ. ವೈ. ವಿಜಯೇಂದ್ರ
ರಾಜ್ಯಾಧ್ಯಕ್ಷರು, ಬಿ.ಜೆ.ಪಿ ಕರ್ನಾಟಕ
ಶಾಸಕರು, ಶಿಕಾರಿಪುರ ವಿಧಾನಸಭಾ ಕ್ಷೇತ್ರ

ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಎಲ್ಲಿ ವಾಸ ಮಾಡಬೇಕು?

▸ಸಜ್ಜನರ ಸನಿಹ ಅಥವಾ ಕಾಶಿಯಲ್ಲಿ.

ಈ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಾವು ಏಕೆ ಬದುಕಬೇಕು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಈ ಬದುಕು ಎಂಬುದು ಜನನ ಮತ್ತು ಮರಣದ ನಡುವಿನ ವ್ಯಾಪಾರ ಎಂಬುದಾಗಿ ನಾವು ತಿಳಿದಿದ್ದೇವೆ. ಆದರೆ ಈ ಅರಿವು ಬದಲಾಗಬೇಕಾಗಿದೆ. ಭಾರತೀಯರ ಜೀವನ ಎಂದರೆ ಕೇವಲ ಹುಟ್ಟು ಸಾವುಗಳ ನಡುವಿನ ವ್ಯಾಪಾರ ಅಲ್ಲ. ಜೀವಭಾವ ಎಲ್ಲಿಂದ ಆರಂಭವಾಗುತ್ತದೆಯೋ ಮತ್ತು ಆ ಜೀವಭಾವ ಯಾವಾಗ ಮುಕ್ತಾಯವಾಗುತ್ತದೆಯೋ ಅವೆಡರ ನಡುವಿನ ವ್ಯಾಪಾರವನ್ನೇ 'ಜೀವನ' ಎಂಬುದಾಗಿ ಕರೆಯಬೇಕು ಎಂಬುದಾಗಿ ಶ್ರೀರಂಗ ಮಹಾಗುರುಗಳ ಆಶಯವಾಗಿತ್ತು. ಹಾಗಾದರೆ ಈ ಜೀವಭಾಗವೂ ಕಳೆಯುವುದು ಎಂದರೇನು? ಜೀವಭಾವವು ಕಳೆಯಲು ಯಾವ ಉಪಾಯವನ್ನು ಮಾಡಬೇಕು ಎಂಬುದು ಇಲ್ಲಿನ ವಿಷಯವಾಗಿದೆ. ಜೀವಭಾವ ಕಳೆಯುವುದನ್ನೇ 'ಮೋಕ್ಷ' ಎಂಬುದಾಗಿ ಕರೆಯಲಾಗಿದೆ. ಸಂಸಾರ ಭಾವವು ಕಳೆಯಬೇಕು. ಸಂಸಾರದಿಂದ ಮುಕ್ತಿಯಾಗಿ ಮತ್ತೆ ಜನ್ಮ ಎಂಬ ಹೊಸತನವನ್ನು ಪಡೆದುಕೊಳ್ಳದೇ ಇರುವಂತಾಗಬೇಕು. ಇದನ್ನೇ ಮಾನವಜೀವನ ಎಂಬುದಾಗಿ ಕರೆದಿದ್ದಾರೆ. ಇಂತಹ ಉತ್ಕೃಷ್ಟವಾದ ಮಾನವಜನ್ಮ ಸಾರ್ಥಕವಾಗಬೇಕಾದರೆ ಅದಕ್ಕೆ ಇರುವ ಅತ್ಯಂತ ಶ್ರೇಷ್ಠವಾದ ಸಾಧನ ಎಂದರೆ ಸಜ್ಜನರ ಸಾನ್ನಿಧ್ಯ. ನಾವು ಎಷ್ಟೆಷ್ಟು ಸುಜನರ ಸಂಬಂಧವನ್ನು ಬೆಳೆಸಿಕೊಳ್ಳುತ್ತೇವೋ ಅಷ್ಟಷ್ಟು ನಮ್ಮ ಜೀವನ ಸುಲಭವಾಗುತ್ತದೆ. ಏಕೆಂದರೆ ಆ ಸಜ್ಜನರು ಜೀವನದ ಸಾರ್ಥಕ್ಯವನ್ನು ಪಡೆಯುವುದು ಹೇಗೆ ಎಂಬುದನ್ನು ಅವರು ತಮ್ಮ ಜೀವನದುದ್ದಕ್ಕೂ ಸಾಧಿಸಿ ತೋರಿಸಿದವರು. ಹಾಗಾಗಿ ಅವರು ನಡೆದ ಹಾದಿಯಲ್ಲಿ ನಡೆದರೆ ನಮಗೆ ಗಮ್ಯವೂ ಅತ್ಯಂತ ಸುಲಭವಾಗಿ ಲಭಿಸುತ್ತದೆ ಎಂಬುದು ಇದರ ತಾತ್ಪರ್ಯ. ಹಾಗಾಗಿ ಸಜ್ಜನರ ಸಂಬಂಧ ಅತ್ಯಂತ ಅಗತ್ಯವಾದ್ದು. ಹಾಗಾದರೆ ಸಜ್ಜನರು ಯಾರು? ಯಾವ ನಿತ್ಯವಾದ ಸಚ್ಚಿದಾನಂದ ರೂಪವಾದ ಯಾವ ಪರಬ್ರಹ್ಮ ಇದೆಯೋ, ಅದನ್ನೇ 'ಸತ್' ಎಂದು ಕರೆದು ಆ ಸತ್ತಿನಲ್ಲೇ ಯಾವಾಗಲೂ ತಮ್ಮ ಮನಸ್ಸನ್ನು ಇಡುವವರು ಸಜ್ಜನರು. ಅವರ ನಡೆ ನುಡಿ ಯಾವಾಗಲೂ ಆ ಪರಬ್ರಹ್ಮದ ಕಡೆಗೆ ಇರುತ್ತದೆ. ಹಾಗಾಗಿ ಎಲ್ಲೂ ಅವರು ಚ್ಯುತರಾಗುವುದಿಲ್ಲ ಅಂತಹ ಜೀವನಕ್ರಮ ಅವರದ್ದಾಗಿರುತ್ತದೆ.

ಈ ಪ್ರಶ್ನೆಯ ಇನ್ನೊಂದು ಭಾಗ ಕಾಶಿಯಲ್ಲಿ ವಾಸ ಮಾಡಬೇಕು ಎಂಬುದಾಗಿ. ಈಗ ನಾವು ಯಾವ ಭಾರತದ ಭೂಗೋಳದಲ್ಲಿ ಕಾಶಿ ಎಂಬ ನಗರವನ್ನು ನೋಡುತ್ತೇವೋ ಅದರಲ್ಲಿ ವಾಸ ಮಾಡಬೇಕು ಎಂಬ ಅರ್ಥದಲ್ಲಿ ಈ ವಾಕ್ಯ ಬಂದಿದ್ದಲ್ಲ. ಸನಾತನ ಭಾರತದ ಮಹರ್ಷಿಗಳು ಯಾವ ಯಾವ ಭ್ರೂಮಧ್ಯದಲ್ಲಿ ಇರುವ 'ಕಾಶೀ' ಎಂಬ ಭಾಗವಿದೆಯೋ, ಅಲ್ಲಿ ಯಾವ ವಿಶ್ವನಾಥನನ್ನು ದರುಶನವನ್ನು ಮಾಡಿದರೋ, ಅಂತಹ ದರ್ಶನಕ್ಕೆ ಯೋಗ್ಯವಾದ ಕ್ಷೇತ್ರ ಯಾವುದೋ, ಅದೂ ಕೂಡ ಭಾರತದ ಉತ್ತರ ಭಾಗದಲ್ಲಿರುವ ಕಾಶಿ ಎಂಬುದಾಗಿ ಅವರು ಉದ್ಘೋಷಿಸಿದರು. 'ಕಾಶ್ಯಾಂ ತು ಮರಣಾತ್ ಮುಕ್ತಿಃ' ಎಂಬುದಾಗಿ ಅಂದರೆ ಮುಕ್ತಿ ಪಡೆಯಬೇಕಾದರೆ ಕಾಶಿಯಲ್ಲಿ ಮರಣವನ್ನು ಹೊಂದಬೇಕು. ಅಂದರೆ ಜೀವನದಲ್ಲಿ ತನ್ನ ಪ್ರಾಣವನ್ನು ಅಲ್ಲಿ ಲಯಗೊಳಿಸಿಕೊಂಡರೆ ಆಗ ಜೀವಭಾವವು ನಷ್ಟವಾಗುತ್ತದೆ; ದೇವಭಾವವು ಪ್ರಾಪ್ತವಾಗುತ್ತದೆ. ಇದರಿಂದಲೇ ಅವನ ಜನ್ಮ ಸಾರ್ಥಕ ಎಂಬ ಅರ್ಥದಲ್ಲಿ ಈ ಪ್ರಶ್ನೋತ್ತರವನ್ನು ನಾವು ಗಮನಿಸಬೇಕಾಗಿದೆ.

ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಪಾಂಡವರ ದಿಗ್ವಿಜಯ

ಕೃಷ್ಣ-ಭೀಮಾರ್ಜುನರು ಜರಾಸಂಧವಧಾನಂತರ ಹಿಂತಿರುಗಿ ಬಂದರಷ್ಟೆ. ಅತ್ತ ಕೃಷ್ಣನೂ ಹೊರಟಮೇಲೆ ಪಾಂಡವರಲ್ಲೇ ಮಾತುಕತೆಗಳಾದವು.

ಶ್ರೇಷ್ಠವಾದ ಧನುಸ್ಸನ್ನೂ ಅಕ್ಷಯವಾದ ಬತ್ತಳಿಕೆಗಳನ್ನೂ ದಿವ್ಯವೆನಿಸುವ ರಥ-ಧ್ವಜಗಳನ್ನೂ ಅದ್ಭುತವಾದ ಸಭೆಯನ್ನೂ ಪಡೆದವನಾಗಿದ್ದ ಅರ್ಜುನನು ಯುಧಿಷ್ಠಿರನನ್ನು ಕುರಿತು ಹೀಗೆ ಹೇಳಿದನು: ರಾಜನೇ ಬಹಳ ವಿಶೇಷವಾದ ಧನುಸ್ಸು, ಅಸ್ತ್ರ, ಬಾಣ, ಪರಾಕ್ರಮ, ಕೃಷ್ಣನಂತಹ ಜೊತೆಗಾರ, ರಾಜ್ಯ ಹಾಗೂ ಇಂದ್ರಪ್ರಸ್ಥಭೂಮಿ, ಯಶಸ್ಸು ಹಾಗೂ ಸೈನ್ಯ-ಹೀಗೆ ನನಗೆ ಏನೇನು ಬಹಳವಾಗಿ ಅಪೇಕ್ಷೆಯಾಗಿತ್ತೋ ಹಾಗೂ ಪಡೆಯಲು ಸುಲಭವಲ್ಲವೋ ಅದೆಲ್ಲವೂ ಈಗ ದೊರೆತಿದೆ. ನಮ್ಮ ಈಗಿನ ಕರ್ತವ್ಯವೆಂದರೆ ಕೋಶದ ಪರಿವರ್ಧನೆಯೆಂಬುದೇ ನನ್ನ ಅಭಿಪ್ರಾಯ. ಆದ್ದರಿಂದ ರಾಜರೆಲ್ಲರೂ ಕರವನ್ನೊಪ್ಪಿಸುವಂತೆ ಮಾಡಿಬಿಡುವೆ. ಅದಕ್ಕಾಗಿ ನಾನು ಮೊದಲು ಕುಬೇರ ದಿಕ್ಕಿಗೆ ಹೊರಡಲಿರುವೆ. ಅದಕ್ಕಾಗಿ ಅಭಿಪೂಜಿತವಾದ ತಿಥಿಮುಹೂರ್ತಗಳಲ್ಲಿ ಹಾಗೂ ಅಭಿಪೂಜಿತವಾದ ನಕ್ಷತ್ರದಲ್ಲಿ ಹೊರಡುವೆ.

ಇದನ್ನು ಕೇಳಿ ಧರ್ಮರಾಜನು ಸಂತುಷ್ಟನಾದನು. ತಮ್ಮಂದಿರು, ಮಂತ್ರಿಗಳು ಇವರೊಂದಿಗೆ, ವ್ಯಾಸರನ್ನೂ ಧೌಮ್ಯರನ್ನೂ ಕಾಣಲು ಹೊರಟನು. ಆಗ ಮಹಾಬುದ್ಧಿಶಾಲಿಗಳಾದ ವ್ಯಾಸರು ಅರ್ಜುನನನ್ನು ಕುರಿತು ಹೀಗೆ ಹೇಳಿದರು: ಭೇಷ್ ಅರ್ಜುನ, ನಿನಗೆ ಇಂತಹ ಬುದ್ಧಿ ಬಂದುದೇ ಶ್ಲಾಘ್ಯ. ಏಕೆಂದರೆ ಅಖಂಡ ಭೂಮಂಡಲವನ್ನೇ ನೀನು ಜಯಿಸಲು ಸಂಕಲ್ಪಿಸಿರುವೆ. ಪಾಂಡುಮಹಾರಾಜನೇ ಧನ್ಯ. ಏಕೆಂದರೆ ಆತನ ಪುತ್ರನಾದ ನೀನು ಇಂತಹವನಾಗಿರುವೆ! ನಿನ್ನ ವೀರ್ಯದಿಂದಾಗಿ ಆ ಧರ್ಮಾತ್ಮನು ಸಾರ್ವಭೌಮ ಪದವಿಯನ್ನು ಹೊಂದಲಿರುವನು. ನಿನ್ನ ಬಾಹುಬಲವನ್ನು ಆಶ್ರಯಿಸಿ ಆತನು ರಾಜಸೂಯವನ್ನು ನೆರವೇರಿಸುವನು. ಶ್ರೀಕೃಷ್ಣನ ನೀತಿ, ಭೀಮ-ಅರ್ಜುನರ ಬಲ ಹಾಗೂ ನಕುಲ-ಸಹದೇವರ ವೀರ್ಯಗಳಿಂದಾಗಿ ಧರ್ಮರಾಜನು ಎಲ್ಲವನ್ನೂ ಹೊಂದುವನು.

ಆದ್ದರಿಂದ ಅರ್ಜುನನೇ, ದೇವತೆಗಳು ಕಾಪಾಡಿರುವ ಉತ್ತರ ದಿಕ್ಕಿಗೆ ನೀನು ಹೊರಡು, ಫಾಲ್ಗುನ! ನೀನು ದೇವತೆಗಳನ್ನೂ ಜಯಿಸಿ ಬಲಪ್ರಯೋಗದಿಂದ ರತ್ನಗಳನ್ನು ತರಲು ಸಮರ್ಥನೇ ಸರಿ.

ಬಲವನ್ನು ಮೆಚ್ಚುವ ಭೀಮಸೇನನು ಪೂರ್ವದಿಕ್ಕಿಗೆ ಹೋಗಲಿ. ಮಹಾರಥನಾದ ಸಹದೇವನು ಯಮನ ದಿಕ್ಕಿಗೆ ಹೋಗಲಿ. ವರುಣರಕ್ಷಿತವಾದ ಪಶ್ಚಿಮಕ್ಕೆ ನಕುಲನು ಹೋಗಲಿ. ನನ್ನ ಬುದ್ಧಿ ಹೀಗೆ ನಿಶ್ಚಯಿಸಿದೆ. ಭರತವಂಶದ ಶ್ರೇಷ್ಠರಾದ ಪಾಂಡವರೇ, ಇದನ್ನು ಕಾರ್ಯಗತಗೊಳಿಸಿರಿ. ವ್ಯಾಸರ ಈ ಮಾತುಗಳನ್ನು ಕೇಳಿ ಪಾಂಡವರು ಸಂತೋಷಗೊಂಡರು. ಅರ್ಜುನನು ಮೊದಲಾಡಿದ ಮಾತಿಗೆ ಯುಧಿಷ್ಠಿರನು ಪ್ರತಿಭಾಷಣವನ್ನು ಮಾಡಿದನು. ಆತನ ಮಾತು ಸ್ನಿಗ್ಧವೂ ಗಂಭೀರವೂ ಆಗಿತ್ತು. ಅರ್ಜುನನೇ, ಸ್ವಸ್ತಿವಾಚನ ಮಾಡತಕ್ಕ ಬ್ರಾಹ್ಮಣರಲ್ಲಿಗೆ ಮೊದಲು ಹೋಗು. ನಿನ್ನ ಜೈತ್ರಯಾತ್ರೆಯೆಂಬುದು ನಮ್ಮ ಬಗ್ಗೆ ದ್ವೇಷವಿರತಕ್ಕವರಿಗೆ ಶೋಕವನ್ನೂ, ನಮ್ಮ ಮಿತ್ರರಿಗೆ ಸಂತೋಷವನ್ನೂ ಉಂಟುಮಾಡಲಿ. ಪಾರ್ಥನೇ, ನಿನಗೆ ವಿಜಯವೆಂಬುದು ಸಿದ್ಧವೇ ಸರಿ. ನಿನಗೆ ಅಭೀಷ್ಟವಾದದ್ದನ್ನು ಪಡೆದೇ ಪಡೆಯುತ್ತೀಯೇ.

ಈ ಮಾತುಗಳನ್ನು ಕೇಳಿದ ಬಳಿಕ ದೊಡ್ಡ ಸೈನ್ಯದೊಂದಿಗೆ ಅರ್ಜುನನು ಹೊರಟನು. ಆತನ ರಥವು ಅದ್ಭುತವಾದ ಕರ್ಮವನ್ನು ಮಾಡುವುದಾಗಿತ್ತು. ಎಷ್ಟಾದರೂ ಅದು ಅಗ್ನಿದತ್ತವಾದುದಲ್ಲವೇ? ಅವನು ಮಾತ್ರವಲ್ಲದೆ ಧರ್ಮರಾಜನಿಂದ ಸಂಮಾನಿತರಾದ ಭೀಮನೂ, ನಕುಲ-ಸಹದೇವರೂ ಸೈನ್ಯಸಮೇತರಾಗಿ ಹೊರಟುಬಂದರು.

ಸ್ಕ್ರೀನನು ಕೊಂಡೀರಾ

ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com

'ಮಿಕ್ಕಿದ್ದೆಲ್ಲ ಆಯ್ತು. ಸ್ಕ್ರೀನಿಂಗ್ ಒಂದು ಬಾಕಿ' ಎಂದೆ.

'ಸ್ಕ್ರೀನಿಂಗ್? ಯಾವ ಫಿಲ್ಮ್ ಅಪ್ಪ?' ಎಂದಳು ಮಗಳು.

'ಏನಾಯ್ತಪ್ಪ? ಯಾವ ಸ್ಕ್ಯಾನ್ ಆಗಬೇಕು? ಸಿಟಿ ಸ್ಕ್ಯಾನೋ, ಕ್ಯಾಟ್ ಸ್ಕ್ಯಾನೋ? ಇಂಷುರೆನ್ಸ್ ಪ್ರೀಮಿಯಮ್ ಅಪ್ ಟು ಡೇಟ್ ಇದೆಯಾ?' ಆತಂಕದಿಂದ ಕೇಳಿದ ಮಗ.

'ಫಿಲ್ಮ್‌ದೂ ಅಲ್ಲ, ರೋಗದ್ದೂ ಅಲ್ಲ, ಮನೆಯದು. ಮನೆಯ ಕಿಟಕಿಗಳಿಗೆ ಸ್ಕ್ರೀನ್ ತರಬೇಕು. The act of providing screensಗೆ ನಾನು ಸ್ಕ್ರೀನಿಂಗ್ ಅನ್ನೋ ಪದವನ್ನ ಹುಟ್ಟುಹಾಕಿದೆ ಅಷ್ಟೆ' ಎಂದೆ.

'ಅಂಗಡಿಗೆ ಹೋದಾಗಲೂ ನಿನ್ನ 'ಪದಜನಕತನ'ವನ್ನ ಬದಿಗಿಟ್ಟು ಪರದೆ ಆರಿಸಿಕೊಂಡು ಬಾ' ಎಂದಳು ಮಗಳು.

ಮಡದಿಯೊಡನೆ 'ಹೈಡ್ ಅಂಡ್ ಸೀಕ್' ಸ್ಕ್ರೀನ್ ಶಾಪ್‌ಗೆ ಹೋದೆ. ಬಳಿ ಸಾರಿದ ಅಂಗಡಿಯವನನ್ನು ಕುರಿತು 'ತೆರೆ ಬೇಕು' ಎಂದೆ.

'ಅದು ಎರಡು ವಾಕ್ಯಗಳೋ, ಒಂದೋ?' ಎಂದನವ.

'ಇದು ಎರಡು ಪದಗಳ ವಾಕ್ಯವಲ್ಲವೆ?' ಮಾತಾಡಿದ ನನಗೇ ಸಂಶಯ ಮೂಡುವ ಸ್ಥಿತಿ!

'ಇದ್ದೀತು. ಒಂದೊಂದು ಪದಗಳ ಎರಡು ವಾಕ್ಯವೂ ಆದೀತು. ತೆರೆ ಬೇಕು ಎಂದರೆ ಪರದೆ ಬೇಕು ಎಂದಾಗುತ್ತದೆ. ತೆರೆ ಎಂದರೆ ತೆರವುಗೊಳಿಸು, ಮುಸುಕು ಸರಿಸು ಎಂದಾಗುತ್ತದೆ, ಬೇಕು ಎಂಬುದು ಬೇಡಿಕೆಯನ್ನು ಸಲ್ಲಿಸಿದಂತಾಗುತ್ತದೆ. ನಿಮಗೆ ಇರುವ ಪರದೆಯ ಸರಿಸುವಿಕೆ ಆಗಬೇಕೋ ಅಥವಾ ಪರದೆಯ ಅವಶ್ಯಕತೆಯೋ?'

'ಇದ್ಯಾವುದೋ ಶುದ್ಧಕನ್ನಡದ ಶನಿ ಒಕ್ಕರಿಸಿತು' ಎಂದು ಮನದಲ್ಲೇ ಹಳಿಯುತ್ತಾ 'ನಿಮ್ಮ ಲವ್ ಆಫ್ ಲಾಂಗ್ವೇಜ್ ನನಗೆ ವೆರಿ ಮಚ್ ಲೈಕ್ ಆಯ್ತು' ಎಂದೆ. 'ವಿಚ್ ಸ್ಕ್ರೀನ್ ಡು ಯೂ ವಾಂಟ್ ಸರ್?' ಎನ್ನುತ್ತಾ ಶುದ್ಧಕನ್ನಡಿಗನು ಕೈಲಾಸಂ ವ್ಯಾಖ್ಯಾನ ನೀಡಿದ ಕನ್ನಡಿಗನಾದ. ಅವರವರೊಡನೆ ಅವರವರ ಭಾಷೆಯಲ್ಲಿ ಮಾತನಾಡಿ ಕನ್ನಡಿಗನೊಡನೆ ಇಂಗ್ಲಿಷ್‌ನಲ್ಲಿ ಮಾತನಾಡುವವನೇ ಕನ್ನಡಿಗನೆಂದು ಕೈಲಾಸಂ ನುಡಿದಿದ್ದರು.

'ನಮ್ಮ ಮನೆಗೆ ಮಾಟಗಾತಿಯರೇನೂ ಬರುವುದಿಲ್ಲವಾದ್ದರಿಂದ witch screen ಅವಶ್ಯವಿಲ್ಲ' ಎಂದು ನುಡಿಯೇಟಿಗೆ ನುಡಿಯೇಟು ಬೀರಿದೆ.

'ಗುಡ್. ಇಲ್ಲಿ ಸ್ಕ್ರೀನ್‌ಗಳ ಡಿಸ್‌ಪ್ಲೇ ಇದೆ. ನೋಡಿ ಸೆಲೆಕ್ಟ್ ಮಾಡಿ' ಎಂದನವ. 'ಅವರಿಗೇನೂ ಗೊತ್ತಾಗಲ್ಲ, ನೀವೇ ಸೂಟೆಬಲ್ಲಾದ್ದನ್ನ ಸೆಲೆಕ್ಟ್ ಮಾಡಿಕೊಡಿ' ಎಂದಳು ಮಡದಿ. ಪುರುಷನ ಅಹಂಕಾರದ ಬಲೂನಿಗೆ ಸತ್ಯದ ಸೂಜಿಯಿಂದ ಚುಚ್ಚುವವಳೇ ಮಡದಿ! 'ನಿಮ್ಮ ಫರ್ನೀಚರ್ ಕಲರ್ ಯಾವುದು?' ಎಂದ ಮಾರಪ್ಪ. ಆಂಗ್ಲದ ಸೇಲ್ಸ್‌ಮೆನ್‌ಗೆ ಕನ್ನಡದ 'ಮಾರಪ್ಪ' ಸರಿಯಾದ ಪದ!

'ಏಂತು ಪೇಳ್ವುದು? ನನ್ನ ಮೇಜಿನ ಬಣ್ಣ ಕಪ್ಪು; ಕುರ್ಚಿಗಳದು ತೇಗದ ಬಣ್ಣ. ಹಾಂ! ತೇಗುವ ಬಣ್ಣವೂ ಇದೆಯೇ ಎಂದು ಕೇಳಬೇಡಿ' ಎಂದೆ.

'ನೀವು ಟೀಕ್ ವುಡ್ ಎಂದಿದ್ದರೂ 'ಗಲತ್' ವುಡ್ ಇರತ್ತಾ ಅಂತ ಕೇಳಬಹುದಾಗಿತ್ತು. ಟೀಕ್ ಎಂದರೆ ಸರಿ, ಗಲತ್ ಎಂದರೆ ತಪ್ಪು ಅಂತ ಅರ್ಥಗಳಿವೆಯಲ್ಲ ಹಿಂದಿಯಲ್ಲಿ. ಪನ್ ಅತ್ತ ಬಿಟ್ಟು ಮಾ ಪನಿ ಚೂಸ್ತಾಮಾ (ನಮ್ಮ ಕೆಲಸ ನೋಡೋಣವೇ)?' ಎಂದನವ. ಮಡದಿಯ ಗೋಣು ಸಮ್ಮತಿ ಸೂಚಿಸಿತು.

'ಸ್ಕ್ರೀನ್ ಪ್ಲೇನೋ ಪ್ಲೀಟೆಡ್ಡೋ?'

'ಏನು ವ್ಯತ್ಯಾಸ?'

'ಪ್ಲೇನ್ ಆದರೆ ಹೊರಗಿನದು ಸ್ಪಷ್ಟವಾಗಿ ಕಾಣತ್ತೆ. ನೆರಿಗೆ ಇರುವುದಾದರೆ ಕಾಣಲ್ಲ.'

'ಪ್ಲೇನೇ ಇರಲಿ' ಎಂದೆ.

'ಪ್ಲೀಟೆಡ್ಡೇ ಇರಲಿ. ಪ್ಲೇನ್ ಆದರೆ ಹೋಗಿಬರುವವರಿಗೆಲ್ಲ ನಮ್ಮ ಮನೆ ಪೀಪಿಂಗ್ ಪ್ಲೇಸ್ ಆಗತ್ತೆ' ಎಂದಳು ಮಡದಿ.

'ಓಲ್ಡನ್ ಡೇಸಲ್ಲಿ ಹಾಗಿತ್ತು ಮೇಡಂ. ಈಗ ಯಾರಂದ್ರೆ ಯಾರೂ ನಿಮ್ಮ ಮನೆಯೊಳಕ್ಕೆ ಇಣುಕುವುದಿಲ್ಲ' ಮಾರಪ್ಪ ಉವಾಚ.

'ಅದು ಹೇಗೆ ಅಷ್ಟು ಖಚಿತವಾಗಿ ಹೇಳುತ್ತೀರಿ?'

'ಈಗಿನವರು ತಲೆ ತಗ್ಗಿಸಿಯೇ ನಡೆಯುವ ಮೊಬೈಲಾಕ್ಷರು. ಮಳೆ ಬರುತ್ತಿದೆ ಎಂದು ಅವರಿಗೆ ತಿಳಿಯಬೇಕಾದರೂ ಮೊಬೈಲಲ್ಲಿ ವೆದರ್ ರಿಪೋರ್ಟ್ ನೋಡಿದಾಗಲೇ' ಎಂದನವ.

'ಮಾಮೂಲಿ ಜನರು ಹಾಗಿದ್ದಾರು. ಮನೆಗಳ್ಳರು?'

'ಹ್ಯಾಗೋ ಮನೆಯಲ್ಲಿ ಸೇರಿ ಕದಿಯುವುದಕ್ಕಿಂತ ಕುಳಿತಲ್ಲೇ ಹ್ಯಾಕ್ ಮಾಡಿ ಕದಿಯೋದು ಸುಲಭ ಅಂತ ಕಂಡ್ಕೊಂಡಿದಾರೆ. ತೆರೆ ತೆರೆದಿದ್ದರೂ ಜನರ ದೃಷ್ಟಿ ಒಳಕ್ಕೆ ಸರಿಯುವುದಿಲ್ಲ.'

'ಮನೆಯಲ್ಲಿ ಟೀನೇಜ್ಡ್ ಡಾಟರ್ ಇದ್ದಾಳೆ.'

'ಓಹ್! ಹಾಗಿದ್ದರೆ ಇಣುಕುವೀರರು ಇದ್ದಾರು. ಮೊಬೈಲ್ ಸ್ಕ್ರೀನಿನಿಂದ ಮನೆಯ ಸ್ಕ್ರೀನಿನ ಕಡೆಗೆ ಗಮನ ಸೆಳೆಯಲು ಟೀನೇಜಿಗೆ ಮಾತ್ರ ಸಾಧ್ಯ.'

ನನಗೆ ಈ ಮಾತು ಸರಿಕಾಣಲಿಲ್ಲ. ಹೋದವಾರ ನಮ್ಮ ಮನೆಯಲ್ಲಿ ಟೀನೇಜರ್ಸ್ ಫೋರಂ ಸೇರಿತ್ತು. ಆರು ಜನರು ಆರು ಮೊಬೈಲುಗಳಲ್ಲಿ ಆರು ಗಂಟೆಗಳ ಕಾಲ ತಮ್ಮ ಕತ್ತನ್ನು ಹುದುಗಿಸಿ ಕುಳಿತಿದ್ದರು. ಆಗಾಗ್ಗೆ ಓಹ್! ಆಹ್! ಎಂಬ ಉದ್ಗಾರಗಳು ಹೊರಟರೂ ಅವು ಸ್ಕ್ರೀನ್ ರಿಲೇಟೆಡ್ಡೇ ಆಗಿದ್ದ ಸ್ಕ್ರೀಮುಗಳಾಗಿದ್ದವು. ಪರಸ್ಪರರು ಮಾತನಾಡಿದ್ದು ವಾಟ್ಸಪ್ ಸಂದೇಶಗಳ ಮೂಲಕ! 'ಡಾಟರ್ ತಲೆ ತಗ್ಗಿಸಿಯೇ ಕುಳಿತಿರುತ್ತಾಳೆ. ಮೊಗ ತೋರದ ಹುಡುಗಿಯನ್ನು ನೋಡಲು ಯಾವ ಹುಡುಗರೂ ಕ್ಯೂ ನಿಲ್ಲುವುದಿಲ್ಲ. ಪ್ಲೇನ್ ಪರದೆಯೇ ಇರಲಿ' ಎಂದೆ ನಾನು. 'ಪ್ಲೀಟೆಡ್' ಎಂದಳು ಮಡದಿ.

'ಕಾಂಬೋ ಇರಲಿ. ಒಂದು ಶೀರ್ (ತೆಳು), ಒಂದು ಪ್ಲೀಟ್ ಹಾಕಿಕೊಳ್ಳಿ. ಈಗ ಡಬಲ್ ಕರ್ಟನ್ನೇ ಫ್ಯಾಶನ್' ಎಂದ ಮಾರಪ್ಪ. ಆ ಒಂದು ವಾಕ್ಯದಿಂದ ನನ್ನ ಬ್ಯಾಂಕ್ ಅಕೌಂಟ್‌ಗೆ ತಗಲುವ ಕ್ಷಯದ ತೀವ್ರತೆ ದುಪ್ಪಟ್ಟಾಯಿತು.

ನನ್ನಜ್ಜನ ಕಾಲದ ಪರದೆಗಳು ಮನಃಪಟಲದಲ್ಲಿ ಮೈದೋರಿದವು. ಬಾಗಿಲುಗಳಿಗೆ ಗೌನಿನಂತೆ ಅಪ್ಪುದ್ದವೂ ಇರುತ್ತಿದ್ದ ಪರದೆಗಳು ಕಿಟಕಿಯ ವಿಷಯದಲ್ಲಿ ಸ್ಕರ್ಟ್‌ಗಳಂತೆ ಇದ್ದು, ಜೋರುಗಾಳಿ ಬೀಸಿದಾಗ ಮರ್ಲಿನ್ ಮನ್ರೋಳ ಸ್ಕರ್ಟಿನಂತೆಯೇ ಹಾರಾಡುತ್ತಿದ್ದವು. ಆಗಿನ ಪರದೆಗಳದು ಕೇವಲ ನೋಟನಿರೋಧಕ ಕಾಯಕವಲ್ಲ, ಕಿಟಕಿಯ ಗೂಡಿನಲ್ಲಿರಿಸಿದ ಎಂಜಲು ಲೋಟಗಳು, ಪೆನ್ಸಿಲ್ಲಿನ ಹೆರೆದ ತುಣುಕುಗಳು, ತುಂಡಾದ ಹೇರ್ ಕ್ಲಿಪ್ ಮೊದಲಾದವು ಇತರರಿಗೆ ಕಾಣದಂತಾಗಿಸುವ ಮರೆಗಳೂ ಆಗಿದ್ದವು. ಕೆಲವೊಮ್ಮೆ ತಳದಲ್ಲಿಷ್ಟು ಕಾಫಿಯನ್ನು ಬಿಟ್ಟು, ಅಂತಹ ಲೋಟವು ಗೂಡಿನಲ್ಲಿದ್ದು, ಗಾಳಿಗೆ ತೆರೆಯ ಚುಂಗು ಕಾಫಿಲೋಟದ ತಳಕ್ಕೆ ಮುತ್ತಿಕ್ಕಿ, ತೆರೆಗೆ ವಿಶೇಷ ಕರೆಗಳು ಮೂಡಿ, ಮಾಮೂಲಿ ಪರದೆಗಳು 'ಕಲಾಪರದೆ'ಗಳಾಗುತ್ತಿದ್ದವು. ಈಗಿನ ಕಿಟಕಿಗಳ ಬುಡದಲ್ಲಿನ ಜಾಗವು ಎರಡು ಇಂಚಿಗಿಂತ ಕಡಿಮೆ ಇರುವುದರಿಂದ ಆ 'ಮರುತಚಾಲಿತ ಕಲಾವಂತಿಕೆ'ಯ ಭಾಗ್ಯವು ಇಂದಿನ ಪರದೆಗಳಿಗೆ ದೊರಕುವುದಿಲ್ಲ.

'ಮನೆಗೆ ಟೂ ಟ್ರ್ಯಾಕ್ ಕರ್ಟನ್ ರಾಡ್ ಹಾಕ್ಸಿದೀವಿ' ಎಂದಳು ಮಡದಿ. ನನ್ನ ಹಣಕ್ಕೆ ಖೆಡ್ಡಾವನ್ನು ಮೊದಲೇ ತೋಡಿದ್ದದ್ದು ನನ್ನ ಗಮನಕ್ಕೆ ಬಂದದ್ದು ಆಗಲೇ. ಡಬಲ್ ಕರ್ಟನ್ ಖರೀದಿಗೆ ಸಮ್ಮತಿಸಿದ್ದರಿಂದ ನನ್ನ ಉಳಿತಾಯಬುದ್ಧಿಗೆ ತೆರೆ ಎಳೆದಂತಾಯಿತು. ಮಾರಪ್ಪ ತನ್ನ ಮಾರು-ವೇಷವನ್ನು ಪ್ರದರ್ಶಿಸಲಾರಂಭಿಸಿದ.

'ಸ್ಕ್ರೀನ್ ಕ್ಲಾತ್ ಕಾಟನ್ ಫೀಲ್ ಇರಲೀನೋ, ಫ್ಯಾಬ್ರಿಕ್ ಫೀಲ್ ಇರಲೀನೋ?'

ನಾನು ಅವರೆಗೆ ಕಾಟನ್ ಸಹ ಫ್ಯಾಬ್ರಿಕ್ ಎಂದೇ ತಿಳಿದಿದ್ದೆ.

'ಫ್ಯಾಬ್ರಿಕ್' ಎಂದಳು ಮಡದಿ.

'ಒರಟು ಫೀಲ್ ಇರಲೀನೋ, ಸಾಫ್ಟೋ?'

'ನೋಡಕ್ಕೆ ಒರಟು, ಮುಟ್ಟಕ್ಕೆ ಸಾಫ್ಟು.'

'ಸೌಂಡ್ ಪ್ರೂಫೋ, ಸೌಂಡ್ ಫ್ರೆಂಡ್ಲೀನೋ?'

'ಸೌಂಡ್ ಪ್ರೂಫ್.'

ನನಗೆ ಒಳಗೇ ತಳಮಳ. ಮಡದಿ ಸೀರಿಯಲ್ ನೋಡುವಾಗ ಪಕ್ಕದ ಮನೆಯವನು ನೋಡುವ ಐಪಿಎಲ್‌ನ ಸೌಂಡನ್ನಾದರೂ ಕೇಳಿ ಸ್ಕೋರ್ ತಿಳಿಯುವ ಅವಕಾಶವು ಕರ್ಟನ್ ಸೌಂಡೂಪ್ರೂಫ್ ಆದರೆ ತಪ್ಪಿಹೋಗುವುದಲ್ಲ!

'ಕರ್ಟನ್ ಫುಲ್ ಲೆಂತ್ ಇರಲಿ.'

'ಇರಲಿ.'

'ಛೆ! ಬಟ್ಟೆ ದಂಡವಷ್ಟೆ. ಕಿಟಕಿಯಿಂದ ಒಂದು ಅಡಿ ಕೆಳಗಿದ್ದರೆ ಸಾಕು' ಎಂದೆ.

'ಛೆ! ಸುಮ್ಮನಿರ್ರಿ! ಅಷ್ಟು ಪುಟ್ಟದಾದ ವಸ್ತ್ರಗಳನ್ನು ತೊಡಕ್ಕೆ ಕಿಟಕಿಗಳೇನು ಟೀನೇಜರ್ಸಾ?' ಗುಡುಗಿದಳು ಮಡದಿ.

ಮಾರಪ್ಪ ವಿವಿಧ ಪರದೆಗಳ ತುಣುಕುಗಳಿರುವ ಬೃಹತ್ ಆಲ್ಬಮ್ ಅನ್ನು ಮುಂದಿರಿಸಿದ. ಮಡದಿಯು ಪ್ರತಿಯೊಂದನ್ನೂ ಮುಟ್ಟಿ, ಸವರಿ, ನೇವರಿಸಿ, ಪ್ರತಿಯೊಂದಕ್ಕೂ 'ಇದು ತುಂಬಾ ಸಾಫ್ಟ್', 'ಇದು ಸೂಪರ್ ಫೀಲ್, ಬಟ್ ನೋಡಕ್ಕೆ ಅಗ್ಲಿ', 'ಇದು ಓಕೆ; ಆದರೆ ಕಲರ್ ನನ್ನ ಹತ್ತಿರ ಇರುವ ಯಾವ ಡ್ರೆಸ್‌ಗೂ ಮ್ಯಾಚ್ ಆಗಲ್ಲ' ಎನ್ನುತ್ತಾ ಸಾಗಿ, ಕಡೆಗೆ ಎರಡು ವಿಧದ ಪರದೆಗಳನ್ನು ಆಯ್ಕೆ ಮಾಡಿದಳು.

ಮಾರಪ್ಪ ಅವುಗಳ ಬೆಲೆ ಹೇಳಿದ. ನಾನು ಹೌಹಾರಿದೆ. ಮಡದಿಯ ಮುಖ ಉಬ್ಬಿತು. ಮಗನಿಗೆ ಫೋನ್ ಹೋಯಿತು.

'ಅಮ್ಮ ಹೇಳಿದ್ದನ್ನ ತೊಗೊ' ಎಂದ ಮಗ.

'ಅಪ್ಪ ಹೇಳೋದನ್ನ ಕೇಳು' ಎಂದಳು ಮಗಳು.


'ನೀವಿಬ್ಬರೂ ಸ್ಕ್ರೀನಿಂಗ್ ಕಮಿಟಿ ಆಗಕ್ಕೆ ನಾಲಾಯಕ್ಕು. ನಿಮ್ಮ ಮಕ್ಕಳನ್ನು ಕಳುಹಿಸಿ' ಎಂದ ಮಾರಪ್ಪ. ಅವನು ಹೇಳಿದ್ದು ನಮಗೆ ವೇದವಾಕ್ಯವಾಯಿತು.

ಪ್ರಧಾನಿ ಮನವಿಯ ಹಿಂದಿನ ಕಾರಣಗಳು

▸ಪ್ರಸನ್ನ ಕಂಬದಮನೆ

ಪ್ರಧಾನಮಂತ್ರಿಗಳು ಇತ್ತೀಚೆಗೆ ದೇಶದ ಜನರಿಗೆ ಒಂದು ವರ್ಷದ ಕಾಲ ಚಿನ್ನ ಖರೀದಿಸಬೇಡಿ, ವಿದೇಶಿ ಪ್ರವಾಸಗಳನ್ನು ಕಡಿಮೆ ಮಾಡಿ, ಸಾಧ್ಯವಾದರೆ ಮನೆಯಿಂದಲೇ ಕೆಲಸ ಮಾಡಿ ಮತ್ತು ಇಂಧನ ಉಳಿಸುವ ಕ್ರಮಗಳನ್ನು ಅನುಸರಿಸಿ ಎಂದು ಮನವಿ ಮಾಡಿದರು. ಸಾಮಾನ್ಯವಾಗಿ ಸರ್ಕಾರಗಳು ಜನರಿಗೆ ನೇರವಾಗಿ ಇಂತಹ ಸಲಹೆಗಳನ್ನು ನೀಡುವುದಿಲ್ಲ. ಅದರಲ್ಲೂ ದೇಶದಲ್ಲಿ ಆಗುತ್ತಿರುವ ಆರ್ಥಿಕ ಬದಲಾವಣೆಗೆ ಸಂಬಂಧಿಸಿ 'ಪ್ರಧಾನಿ'ಯವರೇ ಸಂದೇಶ ನೀಡುವುದು ವಿರಳಾತಿ ವಿರಳ. ವಿಶೇಷವಾಗಿ ಜಗತ್ತಿನ ದೊಡ್ಡ ಆರ್ಥಿಕತೆಗಳಲ್ಲಿ ಒಂದಾದ ಭಾರತದಲ್ಲಿ ಇಂತಹ ಮನವಿಗಳು ಕೇಳಿಬಂದಾಗ, ಅದರ ಹಿಂದೆ ಕೇವಲ ರಾಜಕೀಯ ಸಂದೇಶವಷ್ಟೇ ಅಲ್ಲ, ಆರ್ಥಿಕ ಹೊಣೆಗಾರಿಕೆಯೂ ಅಡಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಕಳೆದ ಕೆಲವು ತಿಂಗಳಿಂದ ದೇಶದಲ್ಲಿ ನಡೆಯುತ್ತಿರುವ ಆರ್ಥಿಕ ಚರ್ಚೆಗಳಲ್ಲಿ ''ರೂಪಾಯಿ ಮೌಲ್ಯ ಕುಸಿತ'', ''ತೈಲ ಬೆಲೆ ಏರಿಕೆ'', ''ಜಾಗತಿಕ ಯುದ್ಧದ ಪರಿಣಾಮ'' ಎಂಬ ಪದಗಳು ಹೆಚ್ಚಾಗಿ ಕೇಳಿಬರುತ್ತಿವೆ. ಆದರೆ ಈ ಘಟನೆಗಳನ್ನು ಪ್ರತ್ಯೇಕವಾಗಿ ನೋಡುವುದಕ್ಕಿಂತ, ಅವುಗಳ ನಡುವೆ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು ಹೆಚ್ಚು ಮುಖ್ಯ. ಮಧ್ಯಪ್ರಾಚ್ಯದಲ್ಲಿ ಉಂಟಾದ ಉದ್ವಿಗ್ನತೆ, ಹೋರ್ಮುಜ್ ಜಲ ಮಾರ್ಗದಲ್ಲಿನ ಅಸ್ಥಿರತೆ, ಜಾಗತಿಕ ತೈಲ ಸರಬರಾಜಿನ ವ್ಯತ್ಯಯ, ಭಾರತದ ಹೆಚ್ಚುತ್ತಿರುವ ಆಮದು ವೆಚ್ಚ, ರೂಪಾಯಿ ಮೇಲಿನ ಒತ್ತಡ ಮತ್ತು ಸರ್ಕಾರದ ಕ್ರಮಗಳು ಇವೆಲ್ಲವೂ ಒಂದೇ ಆರ್ಥಿಕ ಸರಪಳಿಯ ವಿಭಿನ್ನ ಹಂತಗಳಾಗಿವೆ. ಮೊದಲು ಸರ್ಕಾರಗಳು ಆರ್ಥಿಕ ನೀತಿಗಳ ಮೂಲಕ ಇಂತಹ ಸಮಸ್ಯೆಗಳನ್ನು ಸರಿ ಮಾಡಲು ಪ್ರಯತ್ನಿಸುತ್ತವೆ. ನಂತರ ಆಡಳಿತಾತ್ಮಕವಾಗಿ ಪ್ರಯತ್ನ ಮಾಡುತ್ತವೆ. ಮುಂದುವರೆದು ಜನರ ಬಳಿ ವಿನಂತಿ ಮಾಡಲು ಪ್ರಯತ್ನಿಸುತ್ತದೆ ಮತ್ತು ಇವೆಲ್ಲವೂ ಆದ ನಂತರ ಕೊನೆಯದಾಗಿ ಒಂದಿಷ್ಟು ಕಠಿಣ ನಿಯಮಗಳು ಜಾರಿ ಆದರೆ ಅಚ್ಚರಿಯಿಲ್ಲ.



ಜಗತ್ತಿನ ಒಟ್ಟು ಕಚ್ಚಾ ತೈಲ ಸಾಗಣೆಯ ಸುಮಾರು 20 ಶೇಕಡಾ ಹೊರ್ಮುಜ್ ಜಲಸಂಧಿಯ ಮೂಲಕ ಸಾಗುತ್ತದೆ. 2026ರ ಫೆಬ್ರವರಿ ಕೊನೆಯಲ್ಲಿ ಇರಾನ್, ಅಮೆರಿಕಾ ಮತ್ತು ಕೆಲವು ದೇಶಗಳ ನಡುವೆ ಉಂಟಾದ ಯುದ್ಧದ ಉದ್ವಿಗ್ನತೆ ಈ ಮಾರ್ಗವನ್ನು ಅಸ್ಥಿರಗೊಳಿಸಿತು. ಅನೇಕ ವಾಣಿಜ್ಯ ಹಡಗುಗಳಿಗೆ ಭದ್ರತಾ ಆತಂಕ ಎದುರಾಯಿತು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಸರಬರಾಜಿನ ಬಗ್ಗೆ ಭಯ ಹೆಚ್ಚಾಯಿತು. ಪರಿಣಾಮವಾಗಿ 2025ರಲ್ಲಿ ಸುಮಾರು 70 ರಿಂದ 80 ಡಾಲರ್ ನಡುವೆ ಸ್ಥಿರವಾಗಿದ್ದ ಬ್ರೆಂಟ್ ಕ್ರೂಡ್ ಬೆಲೆ ಕೆಲವೇ ವಾರಗಳಲ್ಲಿ 100 ರಿಂದ 115 ಡಾಲರ್ ಮಟ್ಟಕ್ಕೆ ಏರಿತು.

ಈ ಬೆಳವಣಿಗೆಗಳು ಭಾರತಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದವು. ಭಾರತ ತನ್ನ ಅಗತ್ಯದ ಸುಮಾರು 85 ಶೇಕಡಾ ಕಚ್ಚಾ ತೈಲವನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ಅದರಲ್ಲಿ ಅರ್ಧದಷ್ಟು ತೈಲ ಹೋರ್ಮುಜ್ ಮಾರ್ಗದ ಮೂಲಕವೇ ಬರುತ್ತದೆ. 2025.26 ಹಣಕಾಸು ವರ್ಷದಲ್ಲಿ ಭಾರತ ಸುಮಾರು 174.9 ಬಿಲಿಯನ್ ಡಾಲರ್ ಮೌಲ್ಯದ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿತ್ತು. ಇದು ದೇಶದ ಒಟ್ಟು ಆಮದು ವೆಚ್ಚದ ಸುಮಾರು 22 ಶೇಕಡಾ. ತೈಲದ ಬೆಲೆ ಪ್ರತಿ 10 ಡಾಲರ್ ಏರಿದಾಗ ಭಾರತದ ವಾರ್ಷಿಕ ಆಮದು ಬಿಲ್ ಸುಮಾರು 15 ರಿಂದ 20 ಬಿಲಿಯನ್ ಡಾಲರ್ ಹೆಚ್ಚಾಗುತ್ತದೆ ಎಂದು ಅಂದಾಜಿಸಲಾಗಿದೆ. ಅಂದರೆ ಜಾಗತಿಕ ಮಾರುಕಟ್ಟೆಯ ಅಸ್ಥಿರತೆ ನೇರವಾಗಿ ಭಾರತದ ಹಣಕಾಸಿನ ಮೇಲೆ ಪರಿಣಾಮ ಬೀರುತ್ತದೆ.

ತೈಲದ ಬೆಲೆ ಏರಿದಂತೆ ಭಾರತಕ್ಕೆ ಹೆಚ್ಚು ಡಾಲರ್ ಅಗತ್ಯವಾಗುತ್ತದೆ. ತೈಲ ಖರೀದಿಸಲು ಭಾರತೀಯ ಕಂಪನಿಗಳು ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚು ಡಾಲರ್ ಖರೀದಿಸಬೇಕಾಗುತ್ತದೆ. ಡಾಲರ್‌ಗೆ ಬೇಡಿಕೆ ಹೆಚ್ಚಿದಂತೆ ರೂಪಾಯಿ ಮೌಲ್ಯ ಕುಸಿಯುವುದು ಸಹಜ. 2026ರ ಆರಂಭದಲ್ಲಿ ಒಂದು ಡಾಲರ್‌ಗೆ ಸುಮಾರು 85.64 ರೂಪಾಯಿ ಇದ್ದ ಮೌಲ್ಯ, ಮಾರ್ಚ್ ವೇಳೆಗೆ 90 ದಾಟಿ, ತಿಂಗಳ ಅಂತ್ಯದ ವೇಳೆಗೆ 95.22 ಎಂಬ ಐತಿಹಾಸಿಕ ಕನಿಷ್ಠ ಮಟ್ಟವನ್ನು ತಲುಪಿತು. ಪ್ರಸ್ತುತ ರೂಪಾಯಿ ಸುಮಾರು 95ರ ಮಟ್ಟದಲ್ಲಿ ವಹಿವಾಟು ನಡೆಸುತ್ತಿದೆ. ಕೇವಲ ಐದು ತಿಂಗಳಲ್ಲಿ ಸುಮಾರು 6.5 ಶೇಕಡಾ ಮೌಲ್ಯ ಕುಸಿತ ಕಂಡಿರುವುದು ಏಷ್ಯಾದ ಪ್ರಮುಖ ಕರೆನ್ಸಿಗಳಲ್ಲಿ ಅತ್ಯಂತ ದುರ್ಬಲ ಪ್ರದರ್ಶನವಾಗಿದೆ. ಹೋಲಿಕೆಗೆ ಥಾಯ್ಲೆಂಡ್‌ನ ಬಾಟ್ ಕೇವಲ 3.5 ಶೇಕಡಾ ಕುಸಿದರೆ, ಚೀನಾದ ಯುವಾನ್ ಮೌಲ್ಯದಲ್ಲಿ ಸ್ವಲ್ಪ ಏರಿಕೆಯೇ ಕಂಡಿದೆ.

ರೂಪಾಯಿ ಕುಸಿತ ಎಂದರೆ ಕೇವಲ ಕರೆನ್ಸಿ ಮೌಲ್ಯದ ಪ್ರಶ್ನೆಯಲ್ಲ. ಅದರ ಪರಿಣಾಮ ಸಾಮಾನ್ಯ ಜನರ ದೈನಂದಿನ ಜೀವನದ ಮೇಲೆ ಬೀಳುತ್ತದೆ. ಪೆಟ್ರೋಲ್ ಮತ್ತು ಡೀಸೆಲ್ ದುಬಾರಿಯಾಗುತ್ತದೆ. ಆಮದು ಮಾಡಿಕೊಂಡ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ಬೆಲೆ ಏರಿಕೆಯಾಗುತ್ತದೆ. ವಿದೇಶಿ ಶಿಕ್ಷಣ ಮತ್ತು ಪ್ರವಾಸ ವೆಚ್ಚ ಹೆಚ್ಚುತ್ತದೆ. ರೂಪಾಯಿ ಕುಸಿತವನ್ನು ನಿಯಂತ್ರಿಸಲು ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ವಿದೇಶಿ ವಿನಿಮಯ ಸಂಗ್ರಹವನ್ನು ಬಳಸತೊಡಗಿತು. ಆರ್‌ಬಿಐ ಮಾರುಕಟ್ಟೆಯಲ್ಲಿ ಡಾಲರ್ ಮಾರಾಟ ಮಾಡಿ ರೂಪಾಯಿಯನ್ನು ಸಪೋರ್ಟ್ ಮಾಡುತ್ತಿದೆ. 2026ರ ಫೆಬ್ರವರಿ 27ರಂದು ಭಾರತದ ವಿದೇಶಿ ವಿನಿಮಯ ಸಂಗ್ರಹ 728.5 ಬಿಲಿಯನ್ ಡಾಲರ್ ಮಟ್ಟದಲ್ಲಿತ್ತು. ಆದರೆ ಮೇ 1ರ ವೇಳೆಗೆ ಅದು 690.7 ಬಿಲಿಯನ್ ಡಾಲರ್‌ಗೆ ಇಳಿದಿದೆ. ಅಂದರೆ ಕೇವಲ ಒಂಬತ್ತು ವಾರಗಳಲ್ಲಿ ಸುಮಾರು 38 ಬಿಲಿಯನ್ ಡಾಲರ್ ಸಂಗ್ರಹ ಕಡಿಮೆಯಾಗಿದೆ. ಮೇ 1ರಂದು ಕೊನೆಯಾದ ವಾರದಲ್ಲೊಂದರಲ್ಲೇ 7.79 ಬಿಲಿಯನ್ ಡಾಲರ್ ಕುಸಿತ ದಾಖಲಾಗಿದೆ.

ಈಗಿನ ಪರಿಸ್ಥಿತಿಯನ್ನು ಕೆಲವರು 1991ರ ಆರ್ಥಿಕ ಬಿಕ್ಕಟ್ಟಿನೊಂದಿಗೆ ಹೋಲಿಸುತ್ತಿದ್ದರೂ, ವಾಸ್ತವದಲ್ಲಿ ಪರಿಸ್ಥಿತಿ ಅದಕ್ಕಿಂತ ಭಿನ್ನವಾಗಿದೆ. 1991ರಲ್ಲಿ ಭಾರತದ ಬಳಿ ಕೇವಲ ಮೂರು ವಾರಗಳ ಆಮದಿಗೆ ಸಾಕಾಗುವಷ್ಟು ಮಾತ್ರ ವಿದೇಶಿ ವಿನಿಮಯ ಸಂಗ್ರಹ ಇತ್ತು. ಆದರೆ ಈಗಲೂ ಭಾರತಕ್ಕೆ ಸುಮಾರು 10 ರಿಂದ 11 ತಿಂಗಳ imports cover ಇದೆ. ಹೀಗಾಗಿ ಇದು ತಕ್ಷಣದ S0lvency crisis ಅಲ್ಲ. ಆದರೆ ಸಮಸ್ಯೆ ಸಂಗ್ರಹದ ಪ್ರಮಾಣದಲ್ಲಲ್ಲ; ಅದು ಕಡಿಮೆಯಾಗುತ್ತಿರುವ ವೇಗದಲ್ಲಿದೆ. ಆರ್‌ಬಿಐ ನಿರಂತರವಾಗಿ ವಾರಕ್ಕೆ 5 ರಿಂದ 8 ಬಿಲಿಯನ್ ಡಾಲರ್ ಬಳಸಬೇಕಾದರೆ, ಸರ್ಕಾರ ಮತ್ತು ಹಣಕಾಸು ವ್ಯವಸ್ಥೆಯ ಮೇಲೆ ಒತ್ತಡ ಹೆಚ್ಚಾಗುವುದು ಅನಿವಾರ್ಯ.

ಈ ಒತ್ತಡದ ಹಿನ್ನೆಲೆಯಲ್ಲಿ ಸರ್ಕಾರ ಕ್ರಮೇಣ ತನ್ನ ನೀತಿಗಳನ್ನು ಗಟ್ಟಿಗೊಳಿಸುತ್ತಿದೆ. ಮೊದಲ ಹಂತದಲ್ಲಿ ಆರ್‌ಬಿಐ ಮಾರುಕಟ್ಟೆಯಲ್ಲಿ ಹಸ್ತಕ್ಷೇಪ ನಡೆಸಿತು. ನಂತರ ಬ್ಯಾಂಕ್‌ಗಳ foreign exchange positions ಮೇಲೆ ನಿಯಂತ್ರಣ ತರಲಾಯಿತು. ರಫ್ತುದಾರರು ತಮ್ಮ ಡಾಲರ್ ಆದಾಯವನ್ನು ತಕ್ಷಣ ಭಾರತಕ್ಕೆ ತರಬೇಕು ಎಂಬ ಚರ್ಚೆಗಳು ಆರಂಭವಾದವು. ಈಗ ಸರ್ಕಾರ ಜನರ ಮಟ್ಟಕ್ಕೆ ಸಂದೇಶ ಕಳುಹಿಸುತ್ತಿದೆ. ಚಿನ್ನ ಖರೀದಿ ಕಡಿಮೆ ಮಾಡಿ, ವಿದೇಶಪ್ರವಾಸ ತಪ್ಪಿಸಿ, ಇಂಧನ ಉಳಿಸಿ ಎಂಬ ಮನವಿಗಳು ಇದೇ ಭಾಗ. ಈ ಪರಿಸ್ಥಿತಿಯ ಪರಿಣಾಮ ವಿವಿಧ ಕ್ಷೇತ್ರಗಳ ಮೇಲೆ ವಿಭಿನ್ನ ರೀತಿಯಲ್ಲಿ ಕಾಣಿಸಿಕೊಳ್ಳುತ್ತಿದೆ. ಭಾರತವು ಜಗತ್ತಿನ ಅತಿದೊಡ್ಡ ಚಿನ್ನ ಬಳಕೆದಾರ ರಾಷ್ಟ್ರಗಳಲ್ಲಿ ಒಂದಾಗಿರುವುದರಿಂದ, ಚಿನ್ನದ ಆಮದು ಕಡಿಮೆ ಮಾಡುವ ಸರ್ಕಾರದ ಪ್ರಯತ್ನ ಮಾರುಕಟ್ಟೆಯ ಮೇಲೆ ಪರಿಣಾಮ ಬೀರುತ್ತಿದೆ. ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲೂ ಅನಿಶ್ಚಿತತೆ ಹೆಚ್ಚಾಗಿದೆ. ಭಾರತದಲ್ಲಿ assemble ಆಗುವ ಅನೇಕ ಮೊಬೈಲ್, ಲ್ಯಾಪ್‌ಟಾಪ್ ಮತ್ತು ಟಿವಿಗಳು port restrictions ಮೇಲೆ ಅವಲಂಬಿತವಾಗಿವೆ. ಸರ್ಕಾರ import restrictions ತಂದರೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಬೆಲೆ ಎರಡೂ ಏರಬಹುದು. ಆದರೆ ಪ್ರತಿಯೊಂದು ಕ್ಷೇತ್ರಕ್ಕೂ ಈ ಪರಿಸ್ಥಿತಿ ಒಂದೇ ರೀತಿಯ ಪರಿಣಾಮ ಬೀರುವುದಿಲ್ಲ. ಭಾರತೀಯ ಐಟಿ ಕಂಪನಿಗಳಿಗೆ ದುರ್ಬಲ ರೂಪಾಯಿ ಕೆಲ ಮಟ್ಟಿಗೆ ಲಾಭಕರವಾಗಬಹುದು. ಏಕೆಂದರೆ ಅವರ ಆದಾಯದ ಬಹುಪಾಲು ಡಾಲರ್‌ನಲ್ಲಿ ಬರುತ್ತದೆ, ಆದರೆ ವೆಚ್ಚಗಳು ರೂಪಾಯಿಯಲ್ಲಿ ಇರುತ್ತವೆ. ಹೀಗಾಗಿ ರೂಪಾಯಿ ಕುಸಿತದಿಂದ ಅವರ operating margins ಹೆಚ್ಚಾಗುವ ಸಾಧ್ಯತೆ ಇದೆ.

ಮುಂದಿನ ಕೆಲವು ವಾರಗಳು ಮತ್ತು ತಿಂಗಳುಗಳು ಭಾರತದ ಆರ್ಥಿಕತೆಗೆ ಅತ್ಯಂತ ಮಹತ್ವದ್ದಾಗಿರಬಹುದು. ಪರಿಸ್ಥಿತಿ ಸುಧಾರಿಸಬೇಕಾದರೆ ಮಧ್ಯಪ್ರಾಚ್ಯದ ಉದ್ವಿಗ್ನತೆ ಕಡಿಮೆಯಾಗಬೇಕು ಮತ್ತು ಹೋರ್ಮುಜ್ ಮಾರ್ಗ ಪುನಃ ಸ್ಥಿರವಾಗಬೇಕು. ಒಂದು ವೇಳೆ ತೈಲದ ಬೆಲೆ 90 ಡಾಲರ್‌ಗಿಂತ ಕೆಳಗೆ ಇಳಿದರೆ ರೂಪಾಯಿ ಸ್ಥಿರವಾಗಬಹುದು ಮತ್ತು ಸರ್ಕಾರದ ಕಠಿಣ ಕ್ರಮಗಳ ಅಗತ್ಯವೂ ಕಡಿಮೆಯಾಗಬಹುದು. ಆದರೆ ತೈಲದ ಬೆಲೆ 110 ಡಾಲರ್ ಮೇಲಾಗಿಯೇ ಉಳಿದರೆ ಸರ್ಕಾರ ಚಿನ್ನ ಮತ್ತು ಎಲೆಕ್ಟ್ರಾನಿಕ್ ಆಮದಿನ ಮೇಲೆ ಗಟ್ಟಿಯಾದ ನಿಯಂತ್ರಣ ತರಬಹುದು. ಇಂಧನ ಬೆಲೆ ಏರಿಕೆ ಮತ್ತು ವಿದೇಶಿ ವಿನಿಮಯ ನಿಯಂತ್ರಣಗಳ ಸಾಧ್ಯತೆಯನ್ನೂ ತಳ್ಳಿಹಾಕಲು ಸಾಧ್ಯವಿಲ್ಲ. ಭಾರತ ಇಂದು 1991ರಂತಿಲ್ಲ. ದೇಶದ IT exports, banking system, domestic consumption ಎಲ್ಲವೂ ಬಹಳ ಬಲಿಷ್ಠವಾಗಿವೆ. ಆದರೆ ಇದೊಂದು ಸಾಮಾನ್ಯ ಪರಿಸ್ಥಿತಿ ಕೂಡ ಅಲ್ಲ. ಇದು ಜಾಗತಿಕ ರಾಜಕೀಯ ಸಂಘರ್ಷದಿಂದ ಭಾರತದ ಆರ್ಥಿಕತೆಯ ಮೇಲೆ ಬಂದಿರುವ ದೊಡ್ಡ ಒತ್ತಡ ಪರೀಕ್ಷೆ ಅಷ್ಟೆ. ಈ ಸಂದರ್ಭದಲ್ಲಿ ಅತ್ಯಂತ ಮುಖ್ಯವಾದುದು ಬ್ರೇಕಿಂಗ್ ನ್ಯೂಸ್ ನೋಡಿ ಆತಂಕಪಡುವುದಲ್ಲ; ಬದಲಾಗಿ ಆರ್ಥಿಕ ಸಂಕೇತಗಳನ್ನು ಗಮನಿಸುವುದು ಬಹಳ ಮುಖ್ಯ. ಏಕೆಂದರೆ ಆರ್ಥಿಕತೆಯ ನಿಜವಾದ ಕಥೆ ಯಾವಾಗಲೂ ಸುದ್ದಿಶೀರ್ಷಿಕೆಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಅದು ಅಂಕಿ ಸಂಖ್ಯೆಗಳ ಒಳಗೆ ಅಡಗಿರುತ್ತದೆ.

ಮೋದಿಯವರ ಈ ಮನವಿಯನ್ನು ಕೆಲವರು ಬೇರೆ ದೃಷ್ಟಿಕೋನದಲ್ಲಿ ವಿಶ್ಲೇಷಿಸಲು ಶುರು ಮಾಡಿಯಾಗಿದೆ. ಭಾರತವನ್ನು 'ದುರ್ಬಲ ದೇಶ' ಎಂದು ಬಿಂಬಿಸುವ ಕೆಲಸವೂ ನಡೆದಿದೆ. ಸರ್ಕಾರ ಯಾವುದಾದರೂ ಇರಲಿ, ದೇಶದ ನಾಗರಿಕನಿಗೆ ತನ್ನ ದೇಶದ ಮೇಲೆ 'ನಂಬಿಕೆ' ಮತ್ತು ಪ್ರೀತಿ ಎರಡೂ ಇರಬೇಕು, ಅಷ್ಟೇ!

ಸೈದ್ಧಾಂತಿಕ ಶೂನ್ಯದಲ್ಲಿ ಮೇಲೆದ್ದು ಬಂದ ವಿಜಯ್

▸ಪೂರ್ಣಿಮಾ

ವಿಜಯ್ ಈಗ ತಮಿಳ್ನಾಡು ರಾಜಕೀಯದ ಕೇಂದ್ರ ಬಿಂದುವಾಗಿದ್ದಾರೆ. ಆಡಳಿತ ವಿರೋಧಿ ರಾಜಕೀಯ ಮತ್ತು ನವಪೀಳಿಗೆಯ ಆಕ್ರೋಶದ ಸಂಕೇತವಾಗಿದ್ದಾರೆ. ಆದರೆ ಅವರ ಏಳಿಗೆಯು ರಾಜಕೀಯ ಶೂನ್ಯವೊಂದನ್ನೂ ತೋರಿಸುತ್ತಿದೆ. ಹಳೆಯ ದ್ರಾವಿಡ ವ್ಯವಸ್ಥೆಯು ವಿಶ್ವಾಸ ಕಳಕೊಳ್ಳುತ್ತಿದೆ. ಇದೇವೇಳೆ, ನೂತನ ಪರ್ಯಾಯ ವ್ಯವಸ್ಥೆಯು ಇನ್ನೂ ಅನನುಭವಿಯಾಗಿ ಮತ್ತು ಸಂಘಟನಾತ್ಮಕವಾಗಿ ದುರ್ಬಲವಾಗಿ ಕಂಡುಬರುತ್ತಿದೆ.

ಜೋಸೆಫ್ ವಿಜಯ್ ಈಗ ಸಿನಿಮೀಯ ಕಲ್ಪನೆಗಿಂತಲೂ ಕಠಿಣವಾದ ವಾಸ್ತವಿಕತೆಯೆಗೆ ಕಣ್ಣು ತೆರೆಯುತ್ತಿದ್ದಾರೆ. ತಮಿಳ್ನಾಡು ರಾಜ್ಯವು ಹೀರೋ ಒಬ್ಬನ ಪ್ರವೇಶಕ್ಕೆ ತೆರವಾಗಿ ನಿಂತ ಥಿಯೇಟರ್ ಅಲ್ಲ. ತಮಿಳ್ನಾಡು ದೇಶದ ಅತ್ಯಂತ ರಾಜಕೀಯ ಸೂಕ್ಷ್ಮತೆಯ ರಾಜ್ಯವೂ ಹೌದು. ದಶಕಗಳ ಕಾಲದ ಸೈದ್ಧಾಂತಿಕ ಸಂಘರ್ಷಗಳು, ಭಾಷಾಭಿಮಾನ ಮುಂತಾದವು ಅದನ್ನು ರೂಪಿಸಿದೆ. ವಿಜಯ್ ಚುನಾವಣೆ ಗೆದ್ದಿರಬಹುದು, ಆದರೆ ಆಡಳಿತ ಯಂತ್ರವನ್ನು ಸುಗಮವಾಗಿ ನಡೆಸುವುದು ಅವರಿಗೆ ಸವಾಲು ಒಡ್ಡಲಿದೆ.

ತಮಿಳ್ನಾಡು ಈಗ ಐತಿಹಾಸಿಕ ಕವಲುದಾರಿಯಲ್ಲಿದೆ. ಆರು ದಶಕಗಳ ಕಾಲ ರಾಜ್ಯವನ್ನು ಪ್ರಭಾವಿಸಿದ ದ್ರಾವಿಡ ವ್ಯವಸ್ಥೆಯು ಈಗ ದುರ್ಬಲಗೊಳ್ಳುತ್ತಿದೆ. ಹಾಗೆಂದು ಅದಕ್ಕೆ ಪ್ರಭಾವಿ ಪರ್ಯಾಯ ವ್ಯವಸ್ಥೆಯೂ ಬೆಳೆದಿಲ್ಲ. ಸಂಘಟನಾ ಶಕ್ತಿ ಇನ್ನೂ ಡಿಎಂಕೆಯಲ್ಲೇ ಉಳಿದಿದೆ. ಎಐಎಡಿಎಂಕೆ ಪಕ್ಷವು ಎಂಜಿಆರ್, ಜಯಲಲಿತಾ ಕಾಲದ ನಿಷ್ಠಾವಂತರನ್ನು ಮತ್ತು ಜಾತಿ ಸಮೀಕರಣವನ್ನು ನಂಬಿಕೊಂಡು ಉಳಿದಿದೆ. ಆದರೆ ಇವೆರಡೂ ಪಕ್ಷಗಳು ಸೈದ್ಧಾಂತಿಕವಾಗಿ ಬಸವಳಿದಿವೆ. ಸಾಮಾಜಿಕ ನ್ಯಾಯ, ಗಣರಾಜ್ಯ ವ್ಯವಸ್ಥೆ, ತಮಿಳು ಅಸ್ಮಿತೆ ಮುಂತಾಗಿ ಅವು ಮಾತನಾಡುತ್ತಲೇ ಇರುತ್ತವಾದರೂ ಅವುಗಳ ರಾಜಕೀಯವು ಬಹುವಾಗಿ ಅಧಿಕಾರಶಾಹಿ ಮ್ಯಾನೇಜ್‌ಮೆಂಟ್ ನಂತೆ ಕಾಣುತ್ತದೆಯೇ ಹೊರತು ಜನರನ್ನು ಒಳಗೊಳ್ಳುವ ನೀತಿಯಾಗಿ ಅಲ್ಲ. ಈ ಶೂನ್ಯದ ಕಾರಣದಿಂದಲೇ ವಿಜಯ್ ಎದ್ದುಬರುವಂತಾದುದು.

ತಮಿಳ್ನಾಡು ಸಿನಿಮಾ ರಾಜಕೀಯಕ್ಕೆ ಅಂಟಿಕೊಂಡಿದೆ ಎಂಬುದಾಗಿ ರಾಷ್ಟ್ರೀಯ ರಾಜಕೀಯ ವಿಶ್ಲೇಷಕರು ಹೇಳುವುದಿದೆ. ಆದರೆ ಈ ವ್ಯಾಖ್ಯಾನವು ಆಳವಾದ ಐತಿಹಾಸಿಕ ಸತ್ಯವನ್ನು ಮರೆಮಾಚುತ್ತದೆ. ಎಂಜಿಆರ್ ಮತ್ತು ಜಯಲಲಿತಾ ತಾವು ಸಿನಿಮಾ ತಾರೆಯರೆಂಬ ಕಾರಣಕ್ಕಷ್ಟೇ ಯಶಸ್ಸು ಕಂಡುದಲ್ಲ. ದ್ರಾವಿಡ ಆಂದೋಲನವು ರೂಪಿಸಿದ ಭಾವನಾತ್ಮಕ ಮತ್ತು ಸೈದ್ಧಾಂತಿಕ ಚೌಕಟ್ಟಿನೊಳಗೆ ತಮ್ಮನ್ನು ತೊಡಗಿಸಿಕೊಂಡ ಕಾರಣಕ್ಕಾಗಿ ಕೂಡಾ ಅವರು ಯಶಸ್ಸು ಕಂಡರು. ತಮಿಳ್ನಾಡಿನಲ್ಲಿ ಸಿನಿಮಾಗಳು ರಾಜಕೀಯ ಪ್ರತಿರೂಪಗಳಾಗಿವೆ. ಸಿನಿಮಾ ಡೈಲಾಗ್‌ಗಳು ರಾಜಕೀಯ ಸಂದೇಶ ಸಾರುತ್ತವೆ. ಸಾಮಾನ್ಯ ಜನರ ಆಶೋತ್ತರಗಳನ್ನು ಭಾವನೆಗಳನ್ನು ಬಿಂಬಿಸಿದಾಗಲಷ್ಟೇ ಯಾವುದೇ ನಟನ 'ತಾರಾಗಿರಿ'ಗೆ ಅರ್ಥ ಬರುತ್ತದೆ. ಅದನ್ನು ಸಮರ್ಥವಾಗಿ ಬಳಸಿಕೊಂಡವರು ಮಾತ್ರ ರಾಜಕೀಯದಲ್ಲೂ ಮಿಂಚುತ್ತಾರೆ.



ಜನಪರ ಕಲ್ಯಾಣ ಕಾರ್ಯಕ್ರಗಳನ್ನು ಅಳವಡಿಸುವಲ್ಲಿ ತಮಿಳ್ನಾಡು ಯಾವತ್ತೂ ಮುಂದೆ. ಕಾಮರಾಜ್ ಆರಂಭಿಸಿದ ಮಧ್ಯಾಹ್ನದೂಟ ಯೋಜನೆ ಇದಕ್ಕೆ ನಿದರ್ಶನ. ಅದನ್ನು ಎಂಜಿಆರ್ ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೆ ತಂದರು.

ಕರುಣಾನಿಧಿ ಮತ್ತು ಬಳಿಕ ಅವರ ಪುತ್ರ ಸ್ಟಾಲಿನ್ ಅವಧಿಯಲ್ಲಿ ಡಿಎಂಕೆ ಪಕ್ಷವು ಆಡಳಿತ ವ್ಯವಸ್ಥೆಯಲ್ಲೇನೂ ಹಿಂದೆ ಬೀಳಲಿಲ್ಲ. ಕಲ್ಯಾಣ ಕಾರ್ಯಕ್ರಮಗಳನ್ನು ಅದೂ ಜಾರಿಗೆ ತಂದ ನಿದರ್ಶನಗಳಿವೆ. ಆಡಳಿತ ವೈಫಲ್ಯಕ್ಕಿಂತಲೂ ಹೆಚ್ಚಾಗಿ ಡಿಎಂಕೆಯು ಭಾವನಾತ್ಮಕ ಮತ್ತು ಸೈದ್ಧಾಂತಿಕ ದಿವಾಳಿತನವು ಅದರ ಪತನಕ್ಕೆ ಕಾರಣವಾಯಿತು. ಯುವ ಪೀಳಿಗೆಯ ಜನರನ್ನು ದ್ರಾವಿಡ ರಾಜಕೀಯ ಸೆಳೆಯುವುದಿಲ್ಲ. ಅವರಿಗೆ ಅದರಲ್ಲಿ ಆಸಕ್ತಿಯೂ ಮೂಡುವುದಿಲ್ಲ. ಐಟಿ ಜಗತ್ತಿನಲ್ಲಿ ಬದುಕುವ ಝುನ್-ಜಿ ಮಂದಿಗೆ ಬ್ರಾಹ್ಮಣ ವಿರೋಧಿ ಹೇಳಿಕೆಗಳು ರೋಮಾಂಚಕವೆನಿಸುವುದಿಲ್ಲ. ನಿರುದ್ಯೋಗ ಸಮಸ್ಯೆ ಎದುರಿಸುತ್ತಿರುವ ಯುವಕರಿಗೂ ಬ್ರಾಹ್ಮಣ ವಿರೋಧಿ, ಹಿಂದಿ ವಿರೋಧಿ, ಸನಾತನ ವಿರೋಧಿ ಭಾವಕ್ಕಿಂತಲೂ ವಾಸ್ತವಿಕ ಜೀವನ ಹೆಚ್ಚು ಮುಖ್ಯವಾಗುತ್ತದೆ. ಹಾಗಾಗಿ ಡಿಎಂಕೆ, ಎಐಎಡಿಎಂಕೆಗಳನ್ನು ತಿರಸ್ಕರಿಸಲು ಜನರು ಕಾದಿದ್ದರು. ಅವರಿಗೆ ಪರ್ಯಾಯವಾಗಿ ವಿಜಯ್ ಒದಗಿದರು ಅಷ್ಟೆ.

ಚಿತ್ರನಟ ಕಮಲಹಾಸನ್ ರಾಜಕೀಯ ಪಕ್ಷ ಕಟ್ಟಿದರೂ ಅವರು ರಾಜಕೀಯದಲ್ಲಿ ಯಶಸ್ವಿಯಾಗಲಿಲ್ಲವೇಕೆಂದರೆ ಅವರು ರಾಜ್ಯದ ಜನರ ಭಾವನಾತ್ಮಕ ಮಿಡಿತ ಅರಿಯಲಿಲ್ಲ. ಅವರು ಸಿದ್ಧಾಂತವಾದಿಯಾಗಿ ವರ್ತಿಸಿದರು. ವಿಜಯ್ ಭಾವನಾತ್ಮಕ ಜನಪ್ರಿಯತೆಗೆ ಆದ್ಯತೆ ನೀಡಿದರು. ವಿಜಯ್ ದೊಡ್ಡ ಸಿದ್ಧಾಂತಗಳನ್ನು ಮಂಡಿಸಲಿಲ್ಲ. ಅವರು ಜನರ ಆವಶ್ಯಕತೆಗಳನ್ನು ಪೂರೈಸುವ ಮಾತನಾಡಿದರು. ವಂಶ ರಾಜಕೀಯ ವಿರೋಧಿಸುವ, ಭ್ರಷ್ಟಾಚಾರ ಕಿತ್ತೊಗೆಯುವ ಮಾತನಾಡಿದರು. ಅವರು ದ್ರಾವಿಡ ಸಿದ್ಧಾಂತವನ್ನೆ ಮುಂದುವರಿಸುವ ಮಾತನಾಡಲಿಲ್ಲ.

ವಿಜಯ್‌ರ ರಾಜಕೀಯ ಅನುಭವದ ಕೊರತೆಯು ಸರಕಾರ ರಚನೆಯ ಪ್ರಕ್ರಿಯೆಯಲ್ಲಿ ಎದ್ದು ಕಂಡಿತು. ಸಿನಿಮಾ ವರ್ಚಸ್ಸು ಬೇರೆ, ರಾಜಕೀಯದ ಹೊಂದಾಣಿಕೆಗಳು ಬೇರೆ ಎಂಬುದು ಅವರ ಅರಿವಿಗೆ ಈಗಾಗಲೆ ಬಂದಿರಬಹುದು.

ಒಟ್ಟಿನಲ್ಲಿ ವಿಜಯ್ ರಾಜಕೀಯ ಪ್ರಗತಿಯು ಪವಾಡಸದೃಶವೂ ಅಲ್ಲ, ಆಕಸ್ಮಿಕವೂ ಅಲ್ಲ. ತಮಿಳ್ನಾಡಲ್ಲಿ ಉಂಟಾದ ಸೈದ್ಧಾಂತಿಕ ಶೂನ್ಯದಿಂದಾಗಿ ಅವರ ಪಕ್ಷವು ಹಠಾತ್ತನೆ ಮೇಲೇಳುವಂತಾಯಿತು. ಹಳೆಯ ಸ್ಲೋಗನ್‌ಗಳಿಂದ ರೋಸಿ ಹೋದ ಸಮಾಜವು ಹೊಸ ಸಿದ್ಧಾಂತಗಳನ್ನು ಕಂಡುಕೊಳ್ಳದಾಗ ಹೀಗೆ ಯಾವುದಾದರೊಂದು ಹೊಸ ವ್ಯವಸ್ಥೆಯನ್ನು ಅಧಿಕಾರಕ್ಕೇರಿಸುವುದಿದೆ. ಅಪಾಯವೇನೆಂದರೆ ತಮಿಳ್ನಾಡು ಮತ್ತೆ ವ್ಯಕ್ತಿ ಕೇಂದ್ರಿತ ರಾಜಕೀಯದೆಡೆಗೆ ಹೊರಳುವ ಸಾಧ್ಯತೆಯಿದೆ. ಆಗ ಸಿದ್ಧಾಂತ ಮರೆಗೆ ಸರಿಯುತ್ತದೆ. ಅದು ಕೂಡಾ ರಾಜಕೀಯಕ್ಕೆ ಒಳಿತೇನಲ್ಲ.

ಭಾರತದ ಯುವಶಕ್ತಿಗೆ ಉದ್ಯೋಗ


ಪುಟ 1ರಿಂದ ಮುಂಬರುವ ವರ್ಷಗಳಲ್ಲಿ ವಿಕಸಿತ ಭಾರತದ ಸಾಕಾರದಲ್ಲಿ ದೇಶದ ಯುವಶಕ್ತಿ ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರೋಜ್‌ಗಾರ್ ಮೇಳದಲ್ಲಿ 51 ಸಾವಿರಕ್ಕೂ ಅಧಿಕ ಯುವಶಕ್ತಿಗೆ ನೇಮಕಾತಿ ಪತ್ರಗಳನ್ನು ವರ್ಚುವಲ್ ಆಗಿ ಪ್ರಧಾನಿ ಮೋದಿ ವಿತರಿಸಿದರು.

ಯಾವ ರಾಷ್ಟ್ರದ ಜತೆ ಯಾವ ಒಪ್ಪಂದ: ಸೆಮಿಕಂಡಕ್ಟರ್‌ಗಳು ಜಲ, ಕೃಷಿ ಮತ್ತು ಅತ್ಯಾಧುನಿಕ ಉತ್ಪಾದನಾ ಪ್ರಕ್ರಿಯೆಗೆ ಸಂಬಂಧಿಸಿ ನೆದರ್‌ಲ್ಯಾಂಡ್ ಜತೆ ಚರ್ಚೆ ನಡೆಯಿತು. ಕೃತಕ ಬುದ್ಧಿಮತ್ತೆ, ಡಿಜಿಟಲ್ ಆವಿಷ್ಕಾರ ಕುರಿತು ಸ್ವೀಡನ್ ಜತೆ, ಹಸಿರು ತಂತ್ರಜ್ಞಾನ ಮತ್ತು ಸಾಗರ ಸಂಬಂಧಿತ ಸಹಕಾರಗಳ ಬಗ್ಗೆ ನಾರ್ವೆ ನಾಯಕರ ಜತೆ ಮಾತುಕತೆ ನಡೆಸಿದ್ದೇನೆ. ವ್ಯೂಹಾತ್ಮಕ ಇಂಧನ ಮತ್ತು ತಂತ್ರಜ್ಞಾನ ಪಾಲುದಾರಿಕೆ ಬಗ್ಗೆ ಯುಎಇ ಜತೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ರಕ್ಷಣೆ, ಅಪೂರ್ವ ಖನಿಜಗಳು ಮತ್ತು ವಿಜ್ಞಾನ-ತಂತ್ರಜ್ಞಾನ ರಂಗಗಳಲ್ಲಿ ಸಹಕಾರ ವರ್ಧನೆಗೆ ಸಂಬಂಧಿಸಿ ಇಟಲಿ ಜತೆ ಮಹತ್ತ್ವದ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ ಎಂದು ಪಂಚ ರಾಷ್ಟ್ರಗಳ ಪ್ರವಾಸದಿಂದಾದ ರಾಜತಾಂತ್ರಿಕ ಮತ್ತು ಆರ್ಥಿಕ ಪರಿಣಾಮಗಳ ಕುರಿತು ಪ್ರಧಾನಿ ಮೋದಿ ಮಾಹಿತಿ ನೀಡಿದರು. ಮುಂದಿನ 25 ವರ್ಷಗಳ ಅವಧಿಗೆ ಜಾಗತಿಕ ಪ್ರಗತಿಯನ್ನು ವ್ಯಾಖ್ಯಾನಿಸಬಲ್ಲ ಉದ್ದಿಮೆಗಳಿಗೆ ರೂಪು ನೀಡಲು ಪ್ರಸ್ತುತ ಸಹಕಾರ -ಸಹಯೋಗಗಳು ಪೂರಕವಾಗಲಿವೆ ಎಂದು ಒಪ್ಪಂದಗಳ ದೀರ್ಘಕಾಲೀನ ಮಹತ್ತ್ವವನ್ನು ಪ್ರಧಾನಿ ವಿವರಿಸಿದರು. ಎಐ ರಂಗದಲ್ಲಿ ಸ್ವೀಡನ್ ಜತೆ ಪಾಲುದಾರಿಕೆ ಮತ್ತು ಸೂಪರ್‌ಕಂಪ್ಯೂಟಿಂಗ್‌ನಲ್ಲಿ ಯುಎಇ ಜತೆಗಿನ ಸಹಕಾರವು ಭಾರತದ ತಂತ್ರಜ್ಞಾನೀಯ ಸಾಮರ್ಥ್ಯಗಳನ್ನು ಮತ್ತಷ್ಟು ಬಲಿಷ್ಠಗೊಳಿಸಲಿದೆ ಎಂದು ಹೇಳಿದರು.

ವಿಶ್ವಾಸಾರ್ಹ ಜಾಗತಿಕ ಪೂರೈಕೆ ಪಾಲುದಾರ

ಅತ್ಯಂತ ವಿಶ್ವಾಸಾರ್ಹ ಜಾಗತಿಕ ಪೂರೈಕೆ ಪಾಲುದಾರನಾಗಿ ಭಾರತದ ಸ್ಥಾನಮಾನ ಬೆಳೆಯುತ್ತಿರುವುದಕ್ಕೆ ಎಎಸ್‌ಎಂಎಲ್-ಟಾಟಾ ಇಲೆಕ್ಟ್ರಾನಿಕ್ಸ್ ಜತೆ ಏರ್ಪಟ್ಟ ಒಪ್ಪಂದ ರಚನಾತ್ಮಕ ನಿದರ್ಶನವಾಗಿದೆ. ಸೆಮಿಕಂಡಕ್ಟರ್ ರಂಗದಲ್ಲಿ ಮುಂಚೂಣಿಯಲ್ಲಿರುವ ಡಚ್ ರಾಷ್ಟ್ರ ಒಪ್ಪಂದ ಮಾಡಿಕೊಂಡಿರುವ ಬೆರಳೆಣಿಕೆಯ ರಾಷ್ಟ್ರಗಳಲ್ಲಿ ಭಾರತ ಒಂದೆಂದು ಪ್ರಧಾನಿ ಮೋದಿ ಹೆಮ್ಮೆ ವ್ಯಕ್ತಪಡಿಸಿದರು.

ರಾಮಬಾಣ



ಪೊಲೀಸ್ ಅಧಿಕಾರಿ ಅಮಾನತು!

ಕಾಸರಗೋಡು: ಕೇರಳದ ಸ್ಥಳೀಯಾಡಳಿತ ಸಚಿವ ಹಾಗೂ ಮುಸ್ಲಿಂಲೀಗ್ ನಾಯಕ ಕೆ.ಎಂ.ಶಾಜಿಯ ವಿರುದ್ಧ ಪೊಲೀಸ್ ಸಿಬ್ಬಂದಿಗೆ ಸಂಬಂಧಿಸಿದ ವಾಟ್ಸಾಪ್ ಗ್ರೂಪಿನಲ್ಲಿ ಸಂದೇಶವೊಂದನ್ನು ಹಾಕಿದ್ದಾಗಿ ಆರೋಪಿಸಿ ವೆಳ್ಳರಿಕುಂಡು ಪೊಲೀಸ್ ಠಾಣೆಯ ನಾಗರಿಕ ಆರಕ್ಷಕ ಅಧಿಕಾರಿಯೊಬ್ಬರನ್ನು ಅಮಾನತುಗೊಳಿಸಲಾದ ಘಟನೆ ನಡೆದಿದೆ.

'ಪೊಲೀಸ್ ಫ್ರೆಂಡ್ಸ್'ಹೆಸರಿನ ವಾಟ್ಸಾಪ್ ಗ್ರೂಪಿನಲ್ಲಿ, ಸಚಿವ ಶಾಜಿ ಅವರನ್ನು 'ಕೋಮುವಾದಿ' ಎಂಬುದಾಗಿ ಹೇಳಿದ್ದಾರೆಂದು ಆರೋಪಿಸಿ ನಾಗರಿಕ ಪೊಲೀಸ್ ಅಧಿಕಾರಿ ಸುಜಿತ್ ಅವರನ್ನು ಅಮಾನತುಗೊಳಿಸಲಾಗಿದೆ.ಸಚಿವರ ಕುರಿತು ಅವರು ಹೇಳಿದ್ದಾರೆನ್ನಲಾದ ಸಂದೇಶ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾಗಿ ವಿವಾದ ಸೃಷ್ಟಿಸಿದ್ದು, ಅವರನ್ನೀಗ ಕಾಸರಗೋಡು ಜಿಲ್ಲಾ ಪೊಲೀಸ್ ಮುಖ್ಯಸ್ಥರಾದ ಬಿ.ವಿ.ವಿಜಯ ಭರತ್ ರೆಡ್ಡಿ ಅವರು ಅಮಾನತುಗೊಳಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕೇರಳದ ನೂತನ ಸರಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಂಡಿದ್ದನ್ನು ಉಲ್ಲೇಖಿಸುವ ಮೂಲಕ ಆರಂಭಗೊಂಡ ಪೋಸ್ಟ್‌ನಲ್ಲಿ ಸಚಿವ ಶಾಜಿ ಅವರನ್ನು 'ಕೋಮುವಾದಿ' ಎಂದು ಕರೆಯಲಾಗಿತ್ತು. ಈ ಸಂಬಂಧದ ಸ್ಕ್ರೀನ್‌ಶಾಟ್ ಆನ್‌ಲೈನ್‌ನಲ್ಲಿ ಪ್ರಸಾರಗೊಂಡ ಬಳಿಕ ಟೀಕೆಗಳು ವ್ಯಕ್ತವಾಗಿ, ಪೊಲೀಸ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವವರು ರಾಜಕೀಯ ಕಮೆಂಟ್ ಹಾಕಿದ್ದಾರೆಂದು ಆಕ್ಷೇಪಿಸಿ ಅವರ ವಿರುದ್ಧ ಕ್ರಮಕ್ಕೆ ಒತ್ತಡ ಹೇರಲಾಗಿತ್ತು. ಇದೀಗ ಇದರ ಪರಿಣಾಮ ಪೊಲೀಸ್ ಅಧಿಕಾರಿಯ ಅಮಾನತಾಗಿದೆ.

ಅಲ್ಲದೆ ಜಿಲ್ಲಾ ಪೊಲೀಸ್ ಮುಖ್ಯಸ್ಥರ ಆದೇಶದಂತೆ ಜಿಲ್ಲಾ ಕ್ರೈಮ್ ಬ್ರಾಂಚ್ ಡಿವೈಎಸ್‌ಪಿ ಬಾಲಚಂದ್ರನ್ ಅವರು ಪ್ರಾಥಮಿಕ ತನಿಖೆಯೊಂದನ್ನು ನಡೆಸಿ ವರದಿ ನೀಡಿದ್ದು, ಇದರಂತೆ ಶಿಸ್ತುಕ್ರಮ ಕೈಗೊಳ್ಳಲಾಗಿರುವುದಾಗಿ ಹೇಳಲಾಗಿದೆ.ಶಾಜಿ ಹಿಂದೆ ಅಯಿಕೋಡ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರೆ, ಈ ಬಾರಿ ಮಲಪ್ಪುರಂ ಜಿಲ್ಲೆಯ ವೆಂಗರಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ನಾನು ಮುಖ್ಯಮಂತ್ರಿ ಆಗುವುದನ್ನು ಕಾಲವೇ ತೀರ್ಮಾನಿಸುತ್ತದೆ - ಡಿಕೆಶಿ
- ಅಂದರೆ ಪ್ರಯತ್ನ ಮಾಡಬೇಕು, ಫಲಕ್ಕಾಗಿ ಕಾಯಬೇಕು. ಮಾವಿನ ಗಿಡವನ್ನು ನೆಡಬಹುದು, ಆದರೆ ಮಾವಿನಹಣ್ಣು ಯಾವಾಗ ಆಗುತ್ತೆ ಎಷ್ಟು ಆಗುತ್ತೆ ಎನ್ನುವುದು ನಮ್ಮ ಕೈಯಲ್ಲಿ ಇಲ್ಲ. ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ಎಂಬುದು ಶ್ರೀಕೃಷ್ಣನ ಬೋಧನೆ!

ದಿನ ಭವಿಷ್ಯ

ಮೇಷ ಕೌಟುಂಬಿಕವಾಗಿ ಹೊಸ ಸಮಸ್ಯೆ ಸಂಭವ. ಸೌಹಾರ್ದತೆಗೆ ಧಕ್ಕೆ. ಕಾಪಾಡಿ. ದುಡುಕಿನಿಂದ ಪ್ರತಿಕ್ರಿಯಿಸಬೇಡಿ. ಹಣದ ಕೊರತೆ.

ವೃಷಭ ಇಲ್ಲದ ವಿಷಯಕ್ಕೆ ಚಿಂತೆ ಮಾಡುವಿರಿ. ಎಲ್ಲ ಸರಿಯಿದ್ದರೂ ಏನೋ ಕೊರತೆಯ ಭಾವ. ಧ್ಯಾನ ನಿಮಗೆ ಸಹಕಾರಿಯಾದೀತು.

ಮಿಥುನ ನಿಮ್ಮ ವರ್ತನೆಯಿಂದ ಎಲ್ಲರ ಮನ ಗೆಲ್ಲುವಿರಿ. ಪ್ರೀತಿಯಲ್ಲಿ ಯಶಸ್ಸು. ಮಕ್ಕಳಿಂದ ಸಂತೋಷ. ಹೆಚ್ಚುತ್ತಿರುವ ಖರ್ಚು ಚಿಂತೆಗೆ ಕಾರಣವಾದೀತು.

ಕಟಕ ನಿರಾಳವಾಗಿರಲು ಅವಕಾಶ ಸಿಗದು. ಅನವಶ್ಯ ಚಿಂತೆ. ದೃಢವಾಗಿ ವರ್ತಿಸಿದರೆ ಎಲ್ಲವನ್ನು ನಿಭಾಯಿಸಬಲ್ಲಿರಿ. ಆರೋಗ್ಯ ಸುಸ್ಥಿರ.

ಸಿಂಹ ಪ್ರತಿಕೂಲ ಪರಿಸ್ಥಿತಿ ಇದ್ದರೂ ಅದನ್ನು ನಿಮ್ಮ ಪರವಾಗಿ ಬದಲಿಸಲು ಯತ್ನಿಸಿ. ಕೌಟುಂಬಿಕ ಭಿನ್ನಾಭಿಪ್ರಾಯ ಸಂಭವ. ಪ್ರಬುದ್ಧವಾಗಿ ವರ್ತಿಸಿ.

ಕನ್ಯಾ ಗುರಿ ಸಾಧನೆಗೆ ಪೂರಕ ದಿನ. ಸಂಬಂಧದಲ್ಲಿ ಒಡಕು ಮೂಡದಂತೆ ಎಚ್ಚರದಿಂದ ನಡಕೊಳ್ಳಿ. ವೃದ್ಧರು ಆಹಾರದಲ್ಲಿ ಎಚ್ಚರ ವಹಿಸಿ.

ತುಲಾ ನಿಮ್ಮ ಕಾರ್ಯದಲ್ಲಿ ದಿನವಿಡೀ ವ್ಯಸ್ತ. ಇತರರೂ ತಮ್ಮ ಸಮಸ್ಯೆ ಹಿಡಿದುಕೊಂಡು ನಿಮ್ಮ ಬಳಿ ಬರುತ್ತಾರೆ. ನೆಮ್ಮದಿ, ವಿರಾಮ ದೂರ.

ವೃಶ್ಚಿಕ ಬಿಡುವಿರದ ದಿನ. ಹೆಚ್ಚು ಹೊಣೆಗಾರಿಕೆ. ಸಂಬಂಧದಲ್ಲಿ ಮೂಡಿದ ಬಿಕ್ಕಟ್ಟು ಬಗೆಹರಿಸಲು ಹೆಚ್ಚು ಸಮಯ ವ್ಯಯ. ಖರೀದಿಯಿಂದ ಖರ್ಚು.

ಧನು ನಿಮ್ಮ ಬದುಕಲ್ಲಿ ಕೆಲವು ಬದಲಾವಣೆ ಉಂಟಾದೀತು. ಗುಣಾತ್ಮಕ ಪ್ರಗತಿ. ಸಂಬಂಧ ಗಟ್ಟಿಗೊಳ್ಳಲಿದೆ. ದೈಹಿಕ ಶ್ರಮ ಅತಿಯಾಗಿಸಬೇಡಿ.

ಮಕರ ಹಳೆಯ ಚಿಂತೆ ಮರೆತು ಮುಂದೆ ಸಾಗಿರಿ. ಒತ್ತಡವನ್ನು ನಿಭಾಯಿಸುವ ಕಲೆ ಅರಿಯಿರಿ. ಸಣ್ಣ ವಿಷಯಕ್ಕೆ ದುಡುಕಿನ ವರ್ತನೆ ತೋರದಿರಿ.

ಕುಂಭ ಕುಟುಂಬ, ಸ್ನೇಹಿತರ ಜತೆ ಆತ್ಮೀಯವಾಗಿ ಕಾಲ ಕಳೆಯುವ ಅವಕಾಶ. ಆದರೂ ಯಾವುದೋ ಕೊರಗು ಮನದೊಳಗೆ ಕಾಡುತ್ತಿರುತ್ತದೆ.

ಮೀನ ಸಣ್ಣ ವಿಷಯಕ್ಕೂ ಅತಿರೇಕದ ಪ್ರತಿಕ್ರಿಯೆ ತೋರದಿರಿ. ಸಮಾಧಾನದ ನಡೆ ಅವಶ್ಯ. ಇತರರ ಜತೆ ಅನ್ಯೋನ್ಯತೆ ಸಾಧಿಸಿ, ಅದರಿಂದ ಕಾರ್ಯಸಿದ್ಧಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 3,7,2,9

ಜಾಗತಿಕ ಬೆಳವಣಿಗೆಯಿಂದ ಬೆಲೆ ಹೆಚ್ಚಳ: ವಿಜಯೇಂದ್ರ

ಸಿಎಂ ತೈಲ ಸುಂಕ ಇಳಿಸಲಿ: ಬಿವೈವಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಹಿಂದೆ ತೈಲ ಬೆಲೆ ಹತ್ತು ರೂಪಾಯಿ ಕಡಿಮೆ ಮಾಡುತ್ತೇನೆ ಎಂದಿದ್ದರು. ಈಗ ರಾಜ್ಯದ ಜನರ ಒಳಿತಿಗಾಗಿ ತೈಲದ ಮೇಲಿನ ತೆರಿಗೆ ಕಡಿಮೆ ಮಾಡಲಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸವಾಲು ಹಾಕಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕೇಂದ್ರದಿಂದ ಮೂರನೇ ಬಾರಿಗೆ ತೈಲ ಬೆಲೆ ಏರಿಕೆ ಆಗಿದೆ. ಜಾಗತಿಕ ಬೆಳವಣಿಗೆಯಿಂದ ಅನಿವಾರ್ಯವಾಗಿ ಕೇಂದ್ರ ಸರ್ಕಾರ ತೈಲ ಬೆಲೆ ಏರಿಸಿದೆ. ಸರ್ಕಾರಕ್ಕೆ ಇಷ್ಟ ಇಲ್ಲದೇ ಇದ್ದರೂ ಕಠಿಣ ನಿರ್ಧಾರ ಕೈಗೊಂಡಿದೆ. ಜಾಗತಿಕ ಸ್ಥಿತಿಗತಿಯನ್ನು ಸಿದ್ದರಾಮಯ್ಯ ಅವರು ಅರ್ಥ ಮಾಡಿಕೊಂಡು ತೈಲದ ಮೇಲಿನ ಹೆಚ್ಚುವರಿ ತೆರಿಗೆಯನ್ನು ಇಳಿಸಲಿ ಎಂದು ಆಗ್ರಹಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ಅವರು ಬಿಜೆಪಿಗೆ ಬುದ್ಧಿ ಹೇಳುವುದು ಬಿಟ್ಟು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಹೆಚ್ಚುವರಿ ತೆರಿಗೆಯನ್ನು ಕಡಿಮೆ ಮಾಡಿ ದೇಶಕ್ಕೆ ಮಾದರಿಯಾಗುವ ಕೆಲಸ ಮಾಡಿಸಲಿ. ಈ ವಿಷಯದಲ್ಲಿ ಅವರು ಮುಖ್ಯಮಂತ್ರಿಯವರಿಗೆ ಬುದ್ಧಿ ಹೇಳಲಿ ಎಂದರು.

ರೈತರ ಕುರಿತು ಕಾಳಜಿಯಿಲ್ಲ: ಆನೇಕಲ್ ಸಮೀಪ ರೈತರ ಫಲವತ್ತಾದ ಜಮೀನನ್ನು ಪಡೆದು ಕ್ರಿಕೆಟ್ ಸ್ಟೇಡಿಯಂ ನಿರ್ಮಿಸುತ್ತಿರುವ ಸಂಬಂಧ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ವಿಜಯೇಂದ್ರ, ಕಾಂಗ್ರೆಸ್ ಸರ್ಕಾರಕ್ಕೆ ರೈತರ ಬಗ್ಗೆ ಅಸಡ್ಡೆ ಇದೆ. ಅವರ ಸಮಸ್ಯೆ ತಿಳಿದಿಲ್ಲ, ಬದಲಿಗೆ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿದೆ. ರಾಜ್ಯದಲ್ಲಿ ನೆರೆ ಬಂದಾಗ ಸರ್ಕಾರ ರೈತರ ಪರವಾಗಿ ನಿಲ್ಲಲಿಲ್ಲ, ಬರಗಾಲ ಇದ್ದಾಗಲೂ ಸಹಾಯ ಮಾಡಲಿಲ್ಲ, ಉಸ್ತುವಾರಿ ಸಚಿವರು ಹಾಗೂ ಕ್ಷೇತ್ರದ ಶಾಸಕರು ತಮ್ಮ ಜನರ ನೋವು ಆಲಿಸಲಿಲ್ಲ ಎಂದು ಟೀಕಿಸಿದರು.

ಬೆಂಗಳೂರು ವಿಮಾನನಿಲ್ದಾಣದ ಸಮೀಪ ಸಾವಿರಾರು ಎಕರೆ ಜಾಗವಿದೆ. ಅಲ್ಲೇ ಸ್ಟೇಡಿಯಂ ನಿರ್ಮಿಸಬಹುದಿತ್ತು. ಅದು ಬಿಟ್ಟು ಆನೇಕಲ್‌ನಲ್ಲಿ ಫಲವತ್ತಾದ ಜಮೀನು ಪಡೆದು ರೈತರಿಗೆ ಪದೇ ಪದೇ ತೊಂದರೆ ಕೊಡುತ್ತಿದ್ದಾರೆ. ಅನ್ನದಾತರ ಹಿತಾಸಕ್ತಿ ಕಡೆಗಣಿಸಲು ಅವಕಾಶ ನೀಡುವುದಿಲ್ಲ, ರೈತರ ಪರವಾಗಿ ಬಿಜೆಪಿ ನಿಲ್ಲಲಿದೆ ಎಂದು ಹೇಳಿದರು.



ರಾಜ್ಯಸಭೆ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಚರ್ಚೆ ಆಗಿದೆ. ಒಬ್ಬರಿಗೆ ಅವಕಾಶವಿದೆ. ದೇವೇಗೌಡರನ್ನು ರಾಜ್ಯಸಭೆಗೆ ಕಳಿಸಲು ಬಿಜೆಪಿ ವಿರೋಧಿಸಿಲ್ಲ, ದೇವೇಗೌಡರಿಗೆ ಅವಕಾಶ ನೀಡುವ ನಿರ್ಧಾರ ರಾಷ್ಟ್ರೀಯ ನಾಯಕರದ್ದು. ಈ ಸಂಬಂಧ ಯಾವುದೇ ಸೂಚನೆ ಸಿಕ್ಕಿಲ್ಲ.
■ **ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

ಅಮೆರಿಕ-ಭಾರತ ಬಂಧ ವೃದ್ಧಿ ಯತ್ನ

ಪುಟ 1ರಿಂದ ಅಮೆರಿಕದ ವಿದೇಶಾಂಗ ಇಲಾಖೆ ಬಿಡುಗಡೆ ಮಾಡಿದ ಮಾಹಿತಿ ಪ್ರಕಾರ, ಎರಡೂ ರಾಷ್ಟ್ರಗಳು ವ್ಯಾಪಾರ, ರಕ್ಷಣಾ ಸಹಕಾರವನ್ನು ಮತ್ತಷ್ಟು ಗಟ್ಟಿಗೊಳಿಸುವುದರ ಜತೆಗೆ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಯೋಗ ವೇಗಗೊಳಿಸಲು ಒಪ್ಪಿಕೊಂಡಿವೆ.

ಕ್ವಾಡ್ ಸಭೆಗೆ ಸಜ್ಜು: ಭಾರತದಲ್ಲಿ ನಡೆಯಲಿರುವ ಕ್ವಾಡ್ ವಿದೇಶಾಂಗ ಸಚಿವರ ಸಭೆಯನ್ನು ಯಶಸ್ವಿಯಾಗಿ ಆಯೋಜಿಸುತ್ತಿರುವುದಕ್ಕೆ ರೂಬಿಯೊ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇಂಡೋ-ಪೆಸಿಫಿಕ್ ಪ್ರದೇಶವನ್ನು ಮುಕ್ತ ಮತ್ತು ಸಮತೋಲನಯುತವಾಗಿಡಲು ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ಸಹಕಾರ ಮುಂದುವರಿಸಲಿದೆ ಎಂದು ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾ ಸ್ಥಿತಿ ಕುರಿತು ಚರ್ಚೆ

ಪುಟ 1ರಿಂದ ಮಾರುಕಟ್ಟೆಯನ್ನು ಇರಾನ್ ಒತ್ತೆಯಾಳಾಗಿಸಲು ಅಮೆರಿಕ ಅವಕಾಶ ನೀಡುವುದಿಲ್ಲ ಎಂದು ರೂಬಿಯೊ ಸ್ಪಷ್ಟಪಡಿಸಿದ್ದು, ಅಮೆರಿಕದ ಇಂಧನ ಉತ್ಪನ್ನಗಳು ಭಾರತದ ಇಂಧನ ಮೂಲಗಳನ್ನು ವೈವಿಧ್ಯಗೊಳಿಸಲು ನೆರವಾಗಲಿವೆ ಎಂದಿದ್ದಾರೆ.

ಮದರ್ ಹೌಸ್‌ಗೆ ಭೇಟಿ

ಇದಕ್ಕೂ ಮುನ್ನ ಕೋಲ್ಕತ್ತಾಗೆ ಆಗಮಿಸಿದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಮತ್ತು ಆ ದೇಶದ ಉನ್ನತ ರಾಜತಾಂತ್ರಿಕರು ಸೇಂಟ್ ತೆರೇಸಾ ಅವರ ಮಿಷನರೀಸ್ ಆಫ್ ಚಾರಿಟಿಯ ಪ್ರಧಾನ ಕಚೇರಿಯಾದ ಮದರ್ ಹೌಸ್‌ಗೆ ಭೇಟಿ ನೀಡಿದರು. ಬಳಿಕ ಅವರು ಹೊಸದಿಲ್ಲಿಗೆ ತೆರಳಿದರು.

ಮಿಷನ್ 500 ಗುರಿಗೆ ವೇಗ

2030ರೊಳಗೆ ದ್ವಿಪಕ್ಷೀಯ ವ್ಯಾಪಾರವನ್ನು ದ್ವಿಗುಣಗೊಳಿಸುವ ಮಿಷನ್ 500 ಗುರಿ ಸಾಧನೆಗೆ ಮಹತ್ವದ ಹೂಡಿಕೆಗಳ ಬಗ್ಗೆ ಉಭಯ ನಾಯಕರು ಚರ್ಚೆ ನಡೆಸಿದರು ಎಂದು ಅಮೆರಿಕದ ವಿದೇಶಾಂಗ ಇಲಾಖೆ ತಿಳಿಸಿದೆ.

ಅಮೆರಿಕಗೆ ಭೇಟಿ ನೀಡುವಂತೆ ಮೋದಿಗೆ ಟ್ರಂಪ್ ಆಹ್ವಾನ

ಅಮೆರಿಕಗೆ ಭೇಟಿ ನೀಡುವಂತೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಿ ಮೋದಿ ಅವರನ್ನು ಆಮಂತ್ರಿಸಿದ್ದಾರೆ. ಈ ಕುರಿತು ಶನಿವಾರ ಭಾರತಕ್ಕೆ ಭೇಟಿ ನೀಡಿರುವ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಪ್ರಸ್ತುತ ವಿಚಾರವನ್ನು ಪ್ರಧಾನಿ ಮೋದಿ ಅವರಿಗೆ ಹೇಳಿದ್ದಾರೆ. ದಿಲ್ಲಿಗೆ ಬಂದಿಳಿದ ಬೆನ್ನಲ್ಲೇ ರುಬಿಯೊ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿದ್ದು ರಕ್ಷಣೆ, ವ್ಯಾಪಾರ, ಇಂಧನ ಮತ್ತು ತಂತ್ರಜ್ಞಾನ ರಂಗಗಳಲ್ಲಿ ಭಾರತ-ಅಮೆರಿಕ ದ್ವಿಪಕ್ಷೀಯ ಬಾಂಧವ್ಯಗಳ ಕುರಿತು ಚರ್ಚಿಸಿದ್ದಾರೆ.

ಎಸ್ಸಿ, ಎಸ್ಟಿ ಮೀಸಲಾತಿಯಲ್ಲಿ ಸರ್ಕಾರಗಳ ಚೆಲ್ಲಾಟ: ಉಗ್ರಪ್ಪ

ವಿಜಯನಗರ: ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಹೆಚ್ಚಿಸಿ, ತಟ್ಟೆಗೆ ಅನ್ನ ಇಟ್ಟಂತೆ ಮಾಡಿದ್ದ ಸರ್ಕಾರಗಳು, ಈಗ ಅದಕ್ಕೆ ಕೋರ್ಟ್ ತಡೆಯಾಜ್ಞೆ (ಸ್ಟೇ) ಬರುವಂತೆ ಮಾಡಿ ನಮ್ಮ ಬದುಕಿನೊಂದಿಗೆ ಆಟವಾಡುತ್ತಿವೆ ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಬಸವರಾಜ್ ಬೊಮ್ಮಾಯಿ ಅವರು ಸಿಎಂ ಆಗಿದ್ದಾಗ ನಾಗ ಮೋಹನ್ ದಾಸ್ ಸಮಿತಿ ವರದಿ ಆಧರಿಸಿ ಮೀಸಲಾತಿ ಹೆಚ್ಚಿಸಲಾಯಿತು. ಇದನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಲು 2023ರ ಕೇಂದ್ರಕ್ಕೆ ಪತ್ರ ಬರೆಯಲಾಗಿತ್ತು ಎಂದರು.

ವಿಬಿ-ಜಿ ರಾಮ್‌ಜಿ ಜು.1ರಿಂದ ಜಾರಿ

ಪುಟ 1ರಿಂದ **ವಿಕಸಿತ ಭಾರತಕ್ಕಾಗಿ ಬದಲಾವಣೆ:** ವಿಕಸಿತ ಭಾರತ 2047 ದೃಷ್ಟಿಕೋನಕ್ಕೆ ಹೊಂದಿಕೊಳ್ಳುವಂತೆ ಗ್ರಾಮೀಣ ಅಭಿವೃದ್ಧಿಗೆ ಹೊಸ ತಲೆಮಾರಿನ ರೂಪರೇಷೆಯಾಗಿ ಈ ಕಾಯ್ದೆ ರೂಪಿಸಲಾಗಿದೆ. ಉದ್ಯೋಗ ಖಾತರಿ ಅವಧಿಯನ್ನು 100 ದಿನಗಳಿಂದ 125 ದಿನಗಳಿಗೆ ಹೆಚ್ಚಿಸಲಾಗಿದ್ದು, ಗ್ರಾಮೀಣ ಮೂಲಸೌಕರ್ಯ ನಿರ್ಮಾಣ, ಹವಾಮಾನ ಸಹಿಷ್ಣುತೆ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

ಮಾರ್ಗದರ್ಶಕ ಸಮಿತಿ ರಚನೆ: ಹೊಸ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಮಟ್ಟದ ಮಾರ್ಗದರ್ಶಕ ಸಮಿತಿ ರಚನೆಯಾಗಲಿದ್ದು, ಯೋಜನೆ ಅನುಷ್ಠಾನ, ಹಣಕಾಸು ಹಂಚಿಕೆ, ತಂತ್ರಜ್ಞಾನ ಆಧಾರಿತ ಮೇಲ್ವಿಚಾರಣೆ ಮತ್ತು ವಿವಿಧ ಇಲಾಖೆಗಳ ಸಮನ್ವಯಕ್ಕೆ ಮಾರ್ಗದರ್ಶನ ನೀಡಲಿದೆ. ಈ ಸಮಿತಿಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ, ನೀತಿ ಆಯೋಗ, ವಿವಿಧ ಕೇಂದ್ರ ಸಚಿವಾಲಯಗಳು, ರಾಜ್ಯ ಸರ್ಕಾರಗಳು ಹಾಗೂ ತಾಂತ್ರಿಕ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ತಂತ್ರಜ್ಞಾನ ಆಧರಿತ: ದೂರು ಪರಿಹಾರ ವ್ಯವಸ್ಥೆಯನ್ನು ಸಂಪೂರ್ಣ ತಂತ್ರಜ್ಞಾನ ಆಧಾರಿತವಾಗಿ ರೂಪಿಸುವ ಉದ್ದೇಶವಿದ್ದು, ನೋಂದಣಿ, ಮೇಲ್ದರ್ಜೆ ಅಪೀಲಾತ್ಮಕ ವ್ಯವಸ್ಥೆ ಹಾಗೂ ಮೇಲ್ವಿಚಾರಣೆಗೆ ಡಿಜಿಟಲ್ ಮೂಲಸೌಕರ್ಯ ಬಳಸಲಾಗುತ್ತದೆ.

ವೇತನ ಮತ್ತು ನಿರುದ್ಯೋಗ ಭತ್ಯೆಯನ್ನು ನೇರ ಲಾಭ ವರ್ಗಾವಣೆ (ಡಿಬಿಟಿ) ಮೂಲಕವೇ ಪಾವತಿಸಲಾಗುವುದು. ಕೆಲಸಕ್ಕೆ ಬೇಡಿಕೆ ಬಂದ 15 ದಿನಗಳೊಳಗೆ ಉದ್ಯೋಗ ಒದಗಿಸಬೇಕು. ವಿಫಲವಾದರೆ ನಿರುದ್ಯೋಗ ಭತ್ಯೆ ನೀಡಬೇಕಾಗುತ್ತದೆ ಎಂದು ಕರಡು ನಿಯಮಗಳಲ್ಲಿ ಸ್ಪಷ್ಟಪಡಿಸಲಾಗಿದೆ.

ಸದ್ಯಕ್ಕೆ ಹಳೆಯ ಕಾರ್ಡ್‌ಗಳೇ ಮಾನ್ಯ

ಪುಟ 1ರಿಂದ ಕರಡು ನಿಯಮಗಳ ಕುರಿತು ಆಕ್ಷೇಪಣೆ ಹಾಗೂ ಸಲಹೆಗಳನ್ನು ಜೂನ್ 21ರವರೆಗೆ ಸಲ್ಲಿಸಲು ಅವಕಾಶ ನೀಡಲಾಗಿದ್ದು, ಬಳಿಕ ಅಂತಿಮ ನಿಯಮಾವಳಿ ಪ್ರಕಟವಾಗಲಿದೆ.

ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳ

ಪುಟ 1ರಿಂದ ನೂತನ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳ ಅಧಿಸೂಚನೆಯು ಖಾಸಗಿ ಶಾಲೆ- ಕಾಲೇಜು ಬೋಧಕೇತರ ಸಿಬ್ಬಂದಿ, ಇ-ಕಾಮರ್ಸ್ ವಲಯದ ನೌಕರರು ಮತ್ತು ಕೊರಿಯರ್ ಸಂಸ್ಥೆಗಳ ನೌಕರರು ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ದುಡಿಯುವ ಸಿಬ್ಬಂದಿಗೂ ಲಾಭ ಮಾಡಿಕೊಟ್ಟಿದೆ. ಒಟ್ಟಾರೆಯಾಗಿ ಕರ್ನಾಟಕದಲ್ಲಿನ 81 ಅನುಸೂಚಿತ ಉದ್ಯೋಗಗಳಲ್ಲಿ ದುಡಿಯುವ ಶ್ರಮಿಕರಿಗೆ ಅನುಕೂಲವಾಗಲಿದೆ. ಕನಿಷ್ಠ ವೇತನ ಪರಿಷ್ಕರಣೆ ಮಾಡಬೇಕು ಎಂಬುದು ಬಹುದಿನಗಳ ಬೇಡಿಕೆಯಾಗಿತ್ತು.

ವಿವಿಧ ಸಂಘಟನೆಗಳು, ಕಾರ್ಮಿಕರ ಒಕ್ಕೂಟಗಳು ಇದಕ್ಕಾಗಿ ಬೇಡಿಕೆ ಇಟ್ಟಿದ್ದವು. ಇದೀಗ ಕಾರ್ಮಿಕ ಇಲಾಖೆ ಸ್ಪಂದಿಸಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಜೀವನ ನಡೆಸಲು ಕಷ್ಟಪಡುತ್ತಿದ್ದ ಕಾರ್ಮಿಕ ವಲಯಕ್ಕೆ ಈ ಕನಿಷ್ಠ ವೇತನ ಪರಿಷ್ಕರಣೆಯು ದೊಡ್ಡ ಮಟ್ಟದ ಅನುಕೂಲ ಮಾಡಿಕೊಡಲಿದೆ. ಪರಿಷ್ಕೃತ ಕನಿಷ್ಠ ವೇತನದ ಕರಡು ಅಧಿಸೂಚನೆಯನ್ನು ಕಳೆದ ವರ್ಷದ ಏಪ್ರಿಲ್ 11ರಂದು ಹೊರಡಿಸಲಾಗಿತ್ತು. 2016-2017ರಲ್ಲಿ ಜಾರಿಗೆ ಬಂದ ಕೊನೆಯ ಪರಿಷ್ಕರಣೆಯ ಒಂದು ದಶಕದ ನಂತರ ಈ ಪರಿಷ್ಕರಣೆ ಜಾರಿಗೆ ಬಂದಿದೆ. ಕಾರ್ಮಿಕ ಸಂಘಗಳು ಕನಿಷ್ಠ ವೇತನ ಅಧಿಸೂಚನೆ ಹೊರಡಿಸಲು ಒತ್ತಾಯಿಸುತ್ತಿದ್ದವು. ಆದರೆ ಕೈಗಾರಿಕೆಗಳು, ವಿಶೇಷವಾಗಿ ಎಂಎಸ್‌ಎಂಇ ವಲಯದಿಂದ ವಿರೋಧ ವ್ಯಕ್ತವಾಗಿತ್ತು.

ಇಎಸ್‌ಐ ಮತ್ತು ಪಿಎಫ್‌ಗಳಿಗೆ ವೇತನ ಕಡಿತ ಮಾಡಿದ ನಂತರ ಕಾರ್ಮಿಕರಿಗೆ ಕಡಿಮೆ ವೇತನ ಉಳಿಯುತ್ತಿತ್ತು. ಕೆಲವರು ಬಿಪಿಎಲ್ ವ್ಯಾಪ್ತಿಯಿಂದಲೂ ಹೊರಗಿದ್ದರು. ಅಂತಹವರಿಗೆಲ್ಲ ಈ ಕನಿಷ್ಠ ವೇತನ ಹೆಚ್ಚಳದಿಂದ ಸಹಾಯವಾಗಲಿದೆ. ಇದೊಂದು ಕ್ರಾಂತಿಕಾರಕ ಕ್ರಮವೆಂದೇ ಹೇಳಬಹುದು. ಹೊಸ ಕನಿಷ್ಠ ವೇತನ ಜಾರಿಯಿಂದ ರಾಜ್ಯದಲ್ಲಿನ ಸಾಕಷ್ಟು ಕಾರ್ಮಿಕರಿಗೆ ಅನುಕೂಲವಾಗಲಿದೆ.
■ **ಸಂತೋಷ್ ಎಸ್. ಲಾಡ್, ಕಾರ್ಮಿಕ ಸಚಿವ**

ಕನಿಷ್ಠ ವೇತನ ಹೆಚ್ಚಿಸಿದ ದೇಶದ 3ನೇ ರಾಜ್ಯ: ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳದ ಅಧಿಸೂಚನೆಯನ್ನು ಹೊರಡಿಸಿದ ದೇಶದ ಮೂರನೇ ರಾಜ್ಯ ಎಂಬ ಕೀರ್ತಿಗೆ ಕರ್ನಾಟಕ ಈಗ ಪಾತ್ರವಾಗಿದೆ. ಈಗಾಗಲೇ ಉತ್ತರ ಪ್ರದೇಶ ಮತ್ತು ಹರಿಯಾಣದಲ್ಲಿ ಈ ಸಂಬಂಧ ಅಧಿಸೂಚನೆ ಹೊರಡಿಸಲಾಗಿದೆ. ಈಗಿನ ಪ್ರಸ್ತುತ ಪರಿಷ್ಕರಣೆಯು 1991ರ ರೆಪ್ಟಕೋಸ್ ಬ್ರೆಟ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನಿಗದಿಪಡಿಸಿರುವ ಮಾರ್ಗಸೂಚಿಗಳ ಪ್ರಕಾರವೇ ಏರಿಕೆ ಮಾಡಲಾಗಿದೆ. ಮನೆಗಳಲ್ಲಿ ದಿನನಿತ್ಯದ ವೆಚ್ಚದ ಲೆಕ್ಕಾಚಾರದ ಮೇಲೆ ಇದನ್ನು ಜಾರಿ ಮಾಡಲಾಗಿದೆ.

ಮುಸ್ಲಿಂ ಲೀಗ್ ಆಗುತ್ತಿರುವ ಕಾಂಗ್ರೆಸ್: ಜೋಶಿ

ಹುಬ್ಬಳ್ಳಿ: ಮುಸ್ಲಿಂ ಸಮುದಾಯ ಓಲೈಕೆಗೆ ಕಾಂಗ್ರೆಸ್ ರಾಜ್ಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ, ಮತಾಂಧ ಶಕ್ತಿಗಳ ಮೇಲಿನ ಪ್ರಕರಣ ಹಿಂಪಡೆಯುವುದು, ವಿಶೇಷ ಅನುದಾನ ಬಿಡುಗಡೆ ಮಾಡುವ ಮೂಲಕ ತುಷ್ಟೀಕರಣ ಮಾಡುತ್ತಿದೆ. ಕಾಂಗ್ರೆಸ್ ಈಗ ಸ್ವಾತಂತ್ರ್ಯೋತ್ತರ, ಆಧುನಿಕ ಮುಸ್ಲಿಂ ಲೀಗ್ ಆಗಿ ಪರಿವರ್ತನೆ ಆಗುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕಿಡಿಕಾರಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್ ಐ ಆರ್ ಮೂಲಕ ಮತದಾರರ ಪಟ್ಟಿಯನ್ನು ಶುದ್ಧೀಕರಿಸಿದ್ದರೆ ಪಶ್ಚಿಮ ಬಂಗಾಳದಲ್ಲಿ 90 ಲಕ್ಷ ಮಂದಿ ಹೊರಗೆ ಹೋಗುತ್ತಿರಲಿಲ್ಲ, ಬಾಂಗ್ಲಾ ನುಸುಳುಕೋರರು ದೇಶದ್ರೋಹ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿರುವುದು, ಪೊಲೀಸರು ಅವರನ್ನು ಬಂಧಿಸಿ ಗಡಿಪಾರು ಮಾಡುತ್ತಿರುವುದು ಕಾಂಗ್ರೆಸ್‌ಗೆ ಗೊತ್ತಿಲ್ಲವೇ? ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಎಸ್ ಐ ಆರ್ ವಿರೋಧಿಸುವ ಕಾಂಗ್ರೆಸ್, ಕೇರಳದಲ್ಲಿ ಎಸ್‌ಐಆರ್ ಬೆಂಬಲಿಸಿ, ತಮಿಳುನಾಡಿನಲ್ಲಿ ಆ ಕುರಿತು ಯಾವುದೇ ಆಕ್ಷೇಪ ವ್ಯಕ್ತಪಡಿಸಿಲ್ಲ, ಅದಕ್ಕೆ ನಿರ್ದಿಷ್ಟ ನೀತಿಯೇ ಇಲ್ಲವಾಗಿದ್ದು, ಭೌತಿಕವಾಗಿ ದಿವಾಳಿಯಾಗಿದೆ ಎಂದು ಹೇಳಿದರು.

ಸಭಾಭವನ ಲಾಭಾಂಶ ಶಿಕ್ಷಣಕ್ಕೆ ವಿನಿಯೋಗ

ಪುಟ 1ರಿಂದ ಸಾಮಾಜಿಕ ಬದ್ಧತೆಯೇ ನಮ್ಮ ಧ್ಯೇಯ. ಪಾಲೆಮಾರ್ ಕನ್ವೆನ್ಶನ್ ಸೆಂಟರ್ ವಿಕಾಸ್ ಎಜುಕೇಷನ್ ಟ್ರಸ್ಟ್‌ನಲ್ಲಿ ಕಾರ್ಯ ನಿರ್ವಹಿಸಲಿದೆ. ಈ ಮೂಲಕ ವಿದ್ಯೆಗೆ ಪ್ರೋತ್ಸಾಹ ನೀಡಲಾಗುವುದು. ಹಿಂದಿನಿಂದಲೂ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲಾಗುತ್ತಿದ್ದು, ಅದನ್ನು ಮುಂದುವರಿಸಲಾಗುವುದು. ನೂತನ ಸಭಾಭವನದಲ್ಲಿ ಹೆಚ್ಚು ಹೆಚ್ಚು ಕಾರ್ಯಕ್ರಮಗಳು ನಡೆದರೆ ಅದರ ಲಾಭಾಂಶ ಸಮಾಜಕ್ಕೇ ವಾಪಸು ಸಿಗಲಿದೆ ಎಂದವರು ಹೇಳಿದರು. ಕರಾವಳಿಯ ಸಾಂಸ್ಕೃತಿಕ ಶ್ರೀಮಂತಿಕೆಗೆ ಒತ್ತು ನೀಡುವುದು ಮತ್ತು ಇಲ್ಲಿನ ಜನರಿಗೆ ಸುಲಭವಾಗಿ ಕೈಗೆಟಕುವ ದರದಲ್ಲಿ ಅತ್ಯುನ್ನತ ಸೌಲಭ್ಯಗಳ ಸಭಾಂಗಣಗಳನ್ನು ಒದಗಿಸುವುದು ನಮ್ಮ ಮೂಲ ಉದ್ದೇಶವಾಗಿದೆ. ಜನರ ಪ್ರೀತಿ, ವಿಶ್ವಾಸದಿಂದ ಈ ಕಾರ್ಯ ಸಾಧನೆ ಆಗಿದೆ ಎಂದು ಪಾಲೆಮಾರ್ ಹೇಳಿದರು. ಈ ಸಭಾಭವನಗಳು ವಿವಾಹ ಕಾರ್ಯಕ್ರಮಗಳು, ಸಾಮೂಹಿಕ ವಿವಾಹಗಳು, ಧಾರ್ಮಿಕ-ಸಾಂಸ್ಕೃತಿಕ ಕಾರ್ಯಕ್ರಮಗಳು, ಉದ್ಯೋಗ ಮೇಳ ಗಳು, ವಸ್ತು ಪ್ರದರ್ಶನಗಳು, ಸಾರ್ವಜನಿಕ ಕಾರ್ಯಕ್ರಮಗಳು ಹಾಗೂ ಮಹಿಳಾ ಸಬಲೀಕರಣದಂತಹ ಸಮಾಜಮುಖಿ ಚಟುವಟಿಕೆಗಳಿಗೆ ಮುಕ್ತವಾಗಿರಲಿವೆ ಎಂದು ಕೃಷ್ಣ ಜೆ. ಪಾಲೆಮಾರ್ ತಿಳಿಸಿದರು.

ಜೈಲಿನಲ್ಲಿ ಯಾವುದೇ ಘಟನೆ ನಡೆದಿಲ್ಲ: ಸಚಿವ

ಬೆಂಗಳೂರು: ಜೈಲಿನಲ್ಲಿ ದರ್ಶನ್ ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂಬ ವದಂತಿ ಹರಡಿದ ವಿಚಾರ ತಿಳಿದ ತಕ್ಷಣವೇ ನಾನು ಕಾರಾಗೃಹದ ಅಧಿಕಾರಿಗಳಿಂದ ಮೌಖಿಕವಾಗಿ ಮಾಹಿತಿ ಪಡೆದಿದ್ದೇನೆ. ಅಂತಹ ಯಾವುದೇ ಘಟನೆ ನಡೆದಿಲ್ಲ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಸ್ಪಷ್ಟಪಡಿಸಿದರು. ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದರ್ಶನ್ ಅವರು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಎನ್ನುವುದು ಸತ್ಯಕ್ಕೆ ದೂರ. ಆ ರೀತಿ ಯಾವ ಘಟನೆಗಳು ನಡೆದಿಲ್ಲ ಎಂದರು. ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಕುರ್ಬಾನಿಗೆ ರಕ್ಷಣೆ ನೀಡುವಂತೆ ವಕ್ಫ್ ಬೋರ್ಡ್ ಪತ್ರ ಬರೆದಿರುವ ಕುರಿತು ಮಾತನಾಡಿದ ಸಚಿವರು, ದೊಡ್ಡ ಹಬ್ಬಗಳ ಸಂದರ್ಭಗಳಲ್ಲಿ ಪೊಲೀಸರು ಹೆಚ್ಚುವರಿ ಎಚ್ಚರಿಕೆ ವಹಿಸುವುದು ಸಾಮಾನ್ಯ. ಅಗತ್ಯವಿದ್ದರೆ ಹೆಚ್ಚಿನ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ವಕ್ಫ್ ಬೋರ್ಡ್‌ಗೆ ಯಾವ ಆತಂಕವಿದೆಯೋ ಗೊತ್ತಿಲ್ಲ, ಅವರು ಪತ್ರ ಬರೆದಿದ್ದರೆ, ಅದರ ಪ್ರಕಾರ ಪೊಲೀಸರು ಸ್ಪಂದಿಸುತ್ತಾರೆ ಎಂದು ತಿಳಿಸಿದರು. ಆಳಂದ ಲಾಡ್ಲೆ ಮಶಾಕ್ ದರ್ಗಾ ಪ್ರಕರಣಗಳನ್ನು ವಾಪಸ್ ಪಡೆಯುವ ವಿಚಾರಕ್ಕೆ ಬಿಜೆಪಿ ಹಾಗೂ ಹಿಂದುಪರ ಸಂಘಟನೆಗಳು ವಿರೋಧ ವ್ಯಕ್ತಪಡಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ವಿರೋಧ ಮಾಡುವುದು ಅವರಿಗೆ ಬಿಟ್ಟ ವಿಚಾರ. ಎಲ್ಲರನ್ನೂ ಸಮಾನವಾಗಿ ಕಾಣಬೇಕು ಎಂದು ಸಂವಿಧಾನ ಹೇಳುತ್ತದೆ. ಕಾಂಗ್ರೆಸ್ ಪಕ್ಷವು ಅದನ್ನೇ ಅನುಸರಿಸುತ್ತಿದೆ ಎಂದು ಹೇಳಿದರು.

ಚಿನ್ನಸ್ವಾಮಿಗೆ ಪರ್ಯಾಯ

ಪುಟ 1ರಿಂದ ಇದು ಇನ್ನೆರಡು ವರ್ಷದಲ್ಲಿ ಪೂರ್ಣಗೊಳ್ಳಲಿದ್ದು, ಭವಿಷ್ಯದಲ್ಲಿ ಎಂ.ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಪರ್ಯಾಯ ಆಯ್ಕೆಯಾಗಲಿದೆ ಎಂದರು. ಕ್ರೀಡಾಂಗಣ ನಿರ್ಮಾಣದಿಂದ ಈ ಭಾಗದಲ್ಲಿ ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕ ಅಭಿವೃದ್ಧಿಗೆ ಹೆಚ್ಚು ಸಹಕಾರಿಯಾಗಲಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಸೂರು ಇಲ್ಲದ ಬಡವರಿಗೆ ಕಡಿಮೆ ದರದಲ್ಲಿ ಸೂರು ಕಲ್ಪಿಸುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಸಾವಿರಾರು ನಿವೇಶನ ಹಾಗೂ ಮನೆಗಳನ್ನು ನಿರ್ಮಾಣ ಮಾಡಿ ಕಡಿಮೆ ಬೆಲೆಗೆ ಆರ್ಥಿಕವಾಗಿ ಹಿಂದುಳಿದ ಬಡವರಿಗೆ ಹಂಚಿಕೆ ಮಾಡಲಾಗಿದೆ. ಈ ಕ್ರೀಡಾಂಗಣವನ್ನು ಗೃಹ ಮಂಡಳಿ ವತಿಯಿಂದ ನಿರ್ಮಾಣ ಮಾಡಲಾಗುತ್ತಿದೆ. ಇನ್ನು ಕೆಹೆಚ್‌ಬಿ ಬಡಾವಣೆಯಲ್ಲಿ ಮೂಲೆ ನಿವೇಶನಗಳನ್ನು ಹರಾಜು ಹಾಕುವ ಮೂಲಕ ಸುಮಾರು 20 ಸಾವಿರ ಕೋಟಿ ಹಣ ಮಂಡಳಿಗೆ ಬರುತ್ತದೆ ಈ ಮೂಲಕ ಮಂಡಳಿಯ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ ಎಂದರು. ಈ ಹಿಂದೆ ಸರ್ಕಾರ ಫಲಾನುಭವಿಗಳಿಗೆ 5 ಲಕ್ಷ ರೂ.ಗಳಿಗೆ ಮನೆ ನೀಡುತ್ತಿತ್ತು. ಇಷ್ಟು ಹಣ ಪಾವತಿಸಲು ಬಡವರಿಗೆ ಸಾಧ್ಯವಿಲ್ಲ ಎಂದು ಭಾವಿಸಿ ನಮ್ಮ ಕಾಂಗ್ರೆಸ್ ಸರ್ಕಾರ ಒಂದು ಲಕ್ಷ ರೂ. ಮಾತ್ರ ಪಡೆದು ಫಲಾನುಭವಿಗಳಿಗೆ ಮನೆ ನೀಡುತ್ತಿದೆ. ಉಳಿದ ಹಣವನ್ನು ಸರ್ಕಾರವೇ ಭರಿಸುತ್ತದೆ. ನಮ್ಮ ಸರ್ಕಾರವು ಈವರೆಗೆ ಒಂದು ಲಕ್ಷ ಮನೆಗಳನ್ನು ಬಡವರಿಗೆ ನೀಡಿದೆ ಎಂದರು. ವಡೇರ ಮಂಚನಹಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿಗೆ 9 ಕೋಟಿ ಹಣ ಮಂಜೂರು ಮಾಡಿ ಕೆಲಸ ಪ್ರಾರಂಭಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

2 ಸಾವಿರ ಕೋಟಿ ವೆಚ್ಚದಲ್ಲಿ ಕ್ರೀಡಾನಗರ: ಡಿಕೆಶಿ

ಪುಟ 1ರಿಂದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅನೇಕ ಜನಪರ ಯೋಜನೆಗಳನ್ನು ಜಾರಿ ಮಾಡಿ ಜನರ ಆಶೋತ್ತರಗಳಿಗೆ ಸ್ಪಂದಿಸಿದೆ. ಐದು ಗ್ಯಾರಂಟಿ ಯೋಜನೆಗಳ ಜತೆ ಭೂ ಗ್ಯಾರಂಟಿಯನ್ನೂ ನೀಡಲಾಗಿದೆ ಎಂದು ಹೇಳಿದರು.



ಶಾಲೆ ನಿರ್ಮಾಣಕ್ಕೆ 10 ಎಕರೆ: ಜಮೀರ್

ಪುಟ 1ರಿಂದ ಈ ಬಡಾವಣೆಯ 2500 ನಿವೇಶನಗಳಿಗೆ ಸುಮಾರು 16 ಸಾವಿರ ಅರ್ಜಿಗಳು ಬಂದಿವೆ. ಅಭಿವೃದ್ಧಿಪಡಿಸಿದ 4 ಸಾವಿರ ನಿವೇಶನಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಲಾಗಿದೆ. ಕೆಎಚ್‌ಬಿ ನಿರ್ಮಿಸಿದ ಈ ಬಡಾವಣೆಯ ನಿವೇಶನಗಳಿಗೆ ಹೆಚ್ಚು ಬೇಡಿಕೆಯಿದ್ದು, ಸ್ಥಳೀಯರಿಗೆ ಶೇ.50 ನಿವೇಶನ ನೀಡಬೇಕು ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಹಾಗೂ ಶಾಸಕ ಬಿ.ಶಿವಣ್ಣ ಮನವಿ ಮಾಡಿದ್ದು, ಮುಂದಿನ ದಿನಗಳಲ್ಲಿ ಇದನ್ನು ಪರಿಗಣಿಸಲಾಗುವುದು ಎಂದರು.

ನಾಲ್ಕೂ ದಿಕ್ಕಲ್ಲಿ ಕ್ರೀಡಾಂಗಣ- ಡಿ.ಕೆ.ಸುರೇಶ್ ಮನವಿ

ಮಾಜಿ ಸಂಸದ ಡಿ.ಕೆ. ಸುರೇಶ್ ಮಾತನಾಡಿ, ಬೆಂಗಳೂರು ನಗರ ಜಿಲ್ಲೆ ಅರ್ಧಭಾಗ ಆನೇಕಲ್ ತಾಲ್ಲೂಕಿಗೆ ಸೇರಿದೆ. ಈ ಭಾಗದಲ್ಲಿ ಕ್ರೀಡಾಂಗಣ ಮಾಡಬೇಕೆಂದು ಮನವಿ ಮಾಡಿದ್ದೆವು. ಇದರೊಂದಿಗೆ ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲಿಯೂ ಕ್ರೀಡಾಂಗಣ ನಿರ್ಮಾಣ ಮಾಡಬೇಕೆಂಬುದು ನನ್ನ ಒತ್ತಾಯವಾಗಿದೆ ಎಂದು ಹೇಳಿದರು. ಶಾಸಕ ಬಿ.ಶಿವಣ್ಣ ಮಾತನಾಡಿ, ನಮ್ಮ ಕ್ಷೇತ್ರದಲ್ಲಿ ಸಾವಿರಾರು ಎಕರೆ ಭೂಮಿಯನ್ನು ಗೃಹ ಮಂಡಳಿಗೆ ನೀಡಲಾಗಿದ್ದು, ಈ ಕ್ರೀಡಾಂಗಣ ನಿರ್ಮಾಣದಿಂದ ಅನೇಕ ಅಭಿವೃದ್ಧಿ ಕೆಲಸಗಳು ನಡೆಯುತ್ತವೆ ಎಂದರು. ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಶಾಸಕರಾದ ಜಯಚಂದ್ರ, ಕೃಷ್ಣಪ್ಪ, ಮಂಡಳಿಯ ಅಧ್ಯಕ್ಷ ಶಿವಲಿಂಗೇಗೌಡ, ಮಾಜಿ ಸಚಿವ ಎಚ್.ಎಂ.ರೇವಣ್ಣ, ವಿಧಾನಪರಿಷತ್ ಮಾಜಿ ಸದಸ್ಯರಾದ ರಾಮೋಜಿಗೌಡ, ಮಾಜಿ ಸದಸ್ಯರಾದ ವೇಣುಗೋಪಾಲ್, ಮನೋಹರ್, ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮೋಹನ್ ರಾಜು, ಆಯುಕ್ತ ಕೆ.ಎ.ದಯನಂದ, ಜಿಲ್ಲಾಧಿಕಾರಿ ಜಗದೀಶ್, ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ್ ಮತ್ತಿತರರು ಭಾಗವಹಿಸಿದ್ದರು.



ಏನೇನಿರಲಿದೆ?

ಈ ಅತ್ಯಾಧುನಿಕ ಕ್ರೀಡಾಂಗಣದ ಒಳಾಂಗಣ ಬ್ಯಾಡ್ಮಿಂಟನ್, ಬಾಸ್ಕೆಟ್ ಬಾಲ್, ವಾಲಿಬಾಲ್ ಮತ್ತು ಹ್ಯಾಂಡ್ ಬಾಲ್, ಟೇಬಲ್ ಟೆನ್ನಿಸ್, ಸ್ಕ್ವ್ಯಾಷ್, ಕಬಡ್ಡಿ, ಖೋ-ಖೋ, ಜುಡೋ, ಟೈಕ್ವಾಂಡೋ, ಕುಸ್ತಿ, ಫೆನ್ಸಿಂಗ್ ಕೋರ್ಟ್ ಸೌಲಭ್ಯ ಹೊಂದಿರಲಿದೆ. ಹೊರಾಂಗಣವು ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್, ಪಾಡೆಲ್ ಮತ್ತು ಪಿಕಲ್‌ಬಾಲ್ ಆಟಗಳಿಗೂ ಅವಕಾಶ ಇರಲಿದೆ. ಅಂತಾರಾಷ್ಟ್ರೀಯ ಗುಣಮಟ್ಟದ ಈಜುಕೊಳ, ಹೈ-ಡೈವಿಂಗ್ ಪೂಲ್ ಸಹ ನಿರ್ಮಾಣವಾಗಲಿದೆ.

ಬಹು ಮಹಡಿ ಪಾರ್ಕಿಂಗ್: ಏಕಕಾಲದಲ್ಲಿ 500ಕ್ಕೂ ಅಧಿಕ ವಾಹನಗಳ ನಿಲುಗಡೆ ಮಾಡಬಹುದಾದ ಸುಸಜ್ಜಿತ ಬಹುಮಹಡಿ ಪಾರ್ಕಿಂಗ್ ವ್ಯವಸ್ಥೆ ಇರಲಿದೆ. ಮಳಿಗೆಗಳು, ಕ್ರೀಡಾ ಪರಿಕರಗಳ ಅಂಗಡಿ ಮತ್ತು ವಿಶಾಲವಾದ ಉಪಾಹಾರ ಗೃಹಗಳು, ಆಟಗಾರರು ಹಾಗೂ ಕ್ರೀಡಾ ಸಿಬ್ಬಂದಿ ವಾಸ್ತವ್ಯಕ್ಕೆ ಹೈಟೆಕ್ ವಸತಿಗೃಹಗಳು, ಹೆಲಿಪ್ಯಾಡ್ ನಿರ್ಮಾಣವಾಗಲಿದೆ.

ಕೇಂದ್ರೀಯ ವಿದ್ಯಾಲಯಗಳಲ್ಲಿ ಕೇಸರಿ ಶಾಲು ಹಾಕಿಸಲಿ: ಮಧು

ಮೈಸೂರು: ಬಿಜೆಪಿ ನಾಯಕರು ಮೊದಲು ಕೇಂದ್ರೀಯ ವಿದ್ಯಾಲಯಗಳಲ್ಲಿ ಶಾಲು ಹಾಕಿ ಬರಲಿ, ಬಳಿಕ ಉತ್ತರ ಕೊಡ್ತೀನಿ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಕಿಡಿಕಾರಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಹಿರಿಯ ಸಾಹಿತಿ ದೇವನೂರು ಮಹದೇವ ಅವರ ಆರೋಗ್ಯ ವಿಚಾರಿಸಿದ ಬಳಿಕ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಹಿಜಾಬ್‌ಗೆ ಅವಕಾಶ ನೀಡಿರುವ ಕುರಿತು ಬಿಜೆಪಿ ಮಾಡುತ್ತಿರುವ ಟೀಕೆಗಳ ಬಗ್ಗೆ ಪ್ರತಿಕ್ರಿಯಿಸಿ ವಿದ್ಯಾರ್ಥಿಗಳ



ಸಮವಸ್ತ್ರ ವಿಷಯದಲ್ಲಿ ಕೇಂದ್ರೀಯ ವಿದ್ಯಾಯಲಕ್ಕೆ, ಮಹಾರಾಷ್ಟ್ರಕ್ಕೆ, ಕರ್ನಾಟಕಕ್ಕೆ ಪ್ರತ್ಯೇಕ ನಿಯಮ ಇದೆಯೇ ರಾಜ್ಯದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.95ರಷ್ಟು ಹಿಂದೂ ವಿದ್ಯಾರ್ಥಿಗಳು ಇದ್ದಾರೆ. ಸರ್ಕಾರಿ ನೌಕರರ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸುವುದನ್ನು ಕಡ್ಡಾಯ ಮಾಡುವುದು ಸಾಧ್ಯವಿಲ್ಲ ಎಂದರು.

ಯಾವ ಶಾಲೆಗೆ ಸೇರಿಸಬೇಕು ಎಂಬುದು ಪೋಷಕರು ಹಾಗೂ ಮಕ್ಕಳ ಹಕ್ಕು. ಈ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ಸ್ಪಷ್ಟ ಅಭಿಪ್ರಾಯ ನೀಡಿದೆ. ಆದರೆ ಎಲ್ಲರೂ ಕನ್ನಡ ಶಾಲೆಗಳತ್ತ ಮುಖ ಮಾಡಬೇಕು ಎಂಬುದು ನಮ್ಮ ಆಶಯ ಎಂದು ತಿಳಿಸಿದರು. ಸಾಹಿತಿ ದೇವನೂರು ಮಹದೇವ ಅವರೊಂದಿಗೆ ನಡೆದ ಚರ್ಚೆಯಲ್ಲಿ ಮಕ್ಕಳಿಗೆ ಕಲೆ, ನಾಟಕ ಹಾಗೂ ಸಾಹಿತ್ಯದ ಅರಿವು ಮೂಡಿಸುವ ಕುರಿತು ಸಲಹೆ ಪಡೆದಿರುವುದಾಗಿ ಹೇಳಿದರು. ಜತೆಗೆ ಕೆಪಿಎಸ್ ಶಿಕ್ಷಣದ ಕುರಿತು ಮಹತ್ವದ ಸಲಹೆ ನೀಡಲಾಗಿದೆ ಎಂದು ತಿಳಿಸಿದರು. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿ ಐದಾರು ಮಂದಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರದಾನ್ ಅವರು ಎಲ್ಲಿಗೆ ಹೋಗಿದ್ದರು. ನಾನು ಮೂರ್‍ನಾಲ್ಕು ಪರೀಕ್ಷೆಗಳನ್ನು ನಡೆಸಿದ್ದೇನೆ. ಎಲ್ಲಿಯೂ ಕೂಡ ಸೋರಿಕೆ ಆಗಿಲ್ಲ. ಧರ್ಮೇಂದ್ರ ಪ್ರದಾನ್ ಅವರು ಪರೀಕ್ಷೆ ನಡೆಸುವುದು ಹೇಗೆ ಎಂದು ಕಲಿತಿಲ್ಲ ಎಂದರೆ, ನನ್ನ ಬಳಿಗೆ ಬರಲಿ, ನಾನು ಕಲಿಸಿಕೊಡುತ್ತೇನೆ ಎಂದರು.

ತಿಮ್ಮಪ್ಪನ ದರ್ಶನ



ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಶನಿವಾರ ತಿರುಮಲ ತಿರುಪತಿಯ ಶ್ರೀ ವೆಂಕಟೇಶ್ವರ ಸ್ವಾಮಿ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು. ಸಂಸದ ಬಿ.ವೈ. ರಾಘವೇಂದ್ರ, ಟಿಟಿಡಿ ಸದಸ್ಯ ನರೇಶ್ ಮತ್ತಿತರರು ಜತೆಯಲ್ಲಿದ್ದರು.

ನಿತಿನ್ ಭೇಟಿ: ಪಕ್ಷದಲ್ಲಿ ಉತ್ಸಾಹ

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ ಇದೇ ಮೊದಲ ಬಾರಿಗೆ ನಿತಿನ್ ನವೀನ್ ಬೆಂಗಳೂರಿಗೆ ಆಗಮಿಸಿದ್ದಾರೆ. ಇದು ಪಕ್ಷದಲ್ಲಿ ಉತ್ಸಾಹಕ್ಕೆ ಕಾರಣವಾಗಿದೆ. ರಾಷ್ಟ್ರೀಯ ಅಧ್ಯಕ್ಷರ



ಮಾರ್ಗದರ್ಶನದಲ್ಲಿ ಪಕ್ಷ ಸಂಘಟನೆ ಇನ್ನಷ್ಟು ಬಲವಾಗಲಿದೆ.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ನಿತಿನ್ ನವೀನ್ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಪ್ರತಿಪಕ್ಷ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ರಾಜ್ಯ ಉಸ್ತುವಾರಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ-ಉಸ್ತುವಾರಿ ಸುಧಾಕರ್ ರೆಡ್ಡಿ ಸ್ವಾಗತಿಸಿದ್ದಾರೆ.

15 ದಿನಗಳ ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಚಿತ್ರದುರ್ಗಕ್ಕೆ ಆಗಮಿಸಿ ಕಾರ್ಯಕರ್ತರಲ್ಲಿ ರಣೋತ್ಸಾಹ ತುಂಬಿಸಿದ್ದರು. ಅಲ್ಲದೇ ಪ್ರಧಾನಿ ಮೋದಿ ಅವರೂ ಬೆಂಗಳೂರಿಗೆ ಆಗಮಿಸಿ ಸ್ಫೂರ್ತಿ ನೀಡಿದ್ದರು. ಇದೀಗ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರೇ ಆಗಮಿಸುತ್ತಿರುವುದು ಪಕ್ಷ ಸಂಘಟನೆಗೆ ಟಾನಿಕ್ ಆಗಲಿದೆ. ವಿಧಾನಸಭಾ ಚುನಾವಣೆಗೆ ಎರಡು ವರ್ಷ ಬಾಕಿಯಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆ ಇನ್ನೆರಡು ತಿಂಗಳಲ್ಲಿ ನಡೆಯಲಿದೆ. ಈ ಎಲ್ಲಾ ಚುನಾವಣೆಗಳ ಮೇಲೆ ಕಣ್ಣಿಟ್ಟಿರುವ ಬಿಜೆಪಿ ಸಂಘಟನೆಗೆ ಆದ್ಯತೆ ನೀಡುತ್ತಿದೆ. ಇದಕ್ಕಾಗಿ ಎಲ್ಲಾ ರೀತಿಯ ಕಸರತ್ತುಗಳನ್ನೂ ಮಾಡುತ್ತಿದೆ.

ರಾಷ್ಟ್ರೀಯ ಅಧ್ಯಕ್ಷರ ಕಾರ್ಯಕ್ರಮ

ಬೆಂಗಳೂರಿಗೆ ಆಗಮಿಸಿದ ನಿತಿನ್ ನಬಿನ್ ಅವರು ಜಕ್ಕೂರಿನಲ್ಲಿರುವ ತಮ್ಮ ಸಹೋದರಿ ಮನೆಗೆ ತೆರಳಲಿದ್ದಾರೆ. ಭಾನುವಾರ ಬೆಳಗ್ಗೆ 9 ಗಂಟೆಗೆ ಡಾಲರ್ಸ್ ಕಾಲೊನಿಯಲ್ಲಿರುವ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ನಿವಾಸಕ್ಕೆ ಭೇಟಿ, ನಂತರ 10.45ಕ್ಕೆ ಮಲ್ಲೇಶ್ವರದ ಶ್ರೀ ಕಾಡು ಮಲ್ಲೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ಕೊಡುತ್ತಾರೆ. 11.10ಕ್ಕೆ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನಕ್ಕೆ ಆಗಮಿಸುತ್ತಾರೆ. 11.30ರಿಂದ ಜಗನ್ನಾಥ ಭವನದಲ್ಲಿ ವಿವಿಧ ಮೋರ್ಚಾಗಳ ಅಧ್ಯಕ್ಷರು, ಜಾಲತಾಣ, ಐಟಿ ವಿಭಾಗದ ಸಂಚಾಲಕರು ಮತ್ತು ಜಿಲ್ಲಾಧ್ಯಕ್ಷರು ಸೇರಿದಂತೆ ಒಟ್ಟು 235 ಸದಸ್ಯರ ಬೃಹತ್ ಸಭೆ ಏರ್ಪಡಿಸಲಾಗಿದೆ.

ಕಿರುಸುದ್ದಿ

ನಾಳೆಯಿಂದ ಮಂಥನ ಕಾರ್ಯಾಗಾರ

ಬೆಂಗಳೂರು: ಕೌನ್ಸಿಲಿಂಗ್ ಪ್ರಕ್ರಿಯೆ ಕುರಿತು ಜಾಗೃತಿ ಮೂಡಿಸಲು ರಾಜ್ಯದ 65 ಸರ್ಕಾರಿ ಇಂಜಿನಿಯರಿಂಗ್, ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ ಮೇ 25ರಿಂದ 30ರವರೆಗೆ ಸಿಇಟಿ ಸೀಟು ಹಂಚಿಕೆ ಮಂಥನ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ (ಕೆಇಎ) ಎಚ್.ಪ್ರಸನ್ನ ತಿಳಿಸಿದ್ದಾರೆ. ಮೇ 28ರಂದು ಹೊರತುಪಡಿಸಿ ಎಲ್ಲ ದಿನ ನಿತ್ಯ ಎರಡು ಸೆಷನ್ (ಬೆಳಗ್ಗೆ 10ರಿಂದ 12, ಮಧ್ಯಾಹ್ನ 2ರಿಂದ ಸಂಜೆ 4 ಗಂಟೆವರೆಗೆ) ನಡೆಯಲಿದೆ. ನುರಿತ ಹಾಗೂ ಕೆಇಎಯಿಂದ ತರಬೇತಿ ಪಡೆದ ಸಂಪನ್ಮೂಲ ವ್ಯಕ್ತಿಗಳು ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಲಿದ್ದಾರೆ ಎಂದು ಹೇಳಿದ್ದಾರೆ. ಮಂಥನದಲ್ಲಿ ಭಾಗವಹಿಸಲು ಇಚ್ಛಿಸುವ ವಿದ್ಯಾರ್ಥಿಗಳು/ಪೋಷಕರು ಕೆಇಎ ವೆಬ್‌ಸೈಟ್‌ನಲ್ಲಿ ಸ್ಲಾಟ್ ಬುಕ್ ಮಾಡಿಕೊಂಡೇ ಕಾಲೇಜುಗಳಿಗೆ ಹೋಗಬೇಕು. ಇದಕ್ಕೆ ವೆಬ್‌ಸೈಟ್‌ನಲ್ಲಿ ಲಿಂಕ್ ಬಿಟ್ಟಿದ್ದು ಅದರಲ್ಲಿ ಸಮಯ ಹಾಗೂ ಕಾರ್ಯಕ್ರಮ ನಡೆಯುವ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಕೇಂದ್ರ ಅನುಮತಿ ನೀಡಿದ್ರೆ ರಾಜ್ಯ ಮಟ್ಟದಲ್ಲೇ ನೀಟ್

ಬೆಂಗಳೂರು: ಕೇಂದ್ರ ಸರ್ಕಾರ ಅನುಮತಿ ನೀಡಿದರೆ ರಾಜ್ಯ ಮಟ್ಟದಲ್ಲೇ ನೀಟ್ ಪರೀಕ್ಷೆ ನಡೆಸಲು ರಾಜ್ಯ ಸರ್ಕಾರ ಸಿದ್ಧವಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ನೀಟ್ ಪರೀಕ್ಷೆ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಪ್ರತಿ ವರ್ಷವೂ ನೀಟ್ ಪರೀಕ್ಷೆಯಲ್ಲಿ ಒಂದಲ್ಲ ಒಂದು ಎಡವಟ್ಟು ನಡೆಯುತ್ತಿದೆ. ವಿದ್ಯಾರ್ಥಿಗಳು ಹಾಗೂ ಪೋಷಕರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಪರೀಕ್ಷೆಗಳನ್ನು ಜವಾಬ್ದಾರಿಯುತವಾಗಿ ನಡೆಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು. ಹಲವಾರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ಘಟನೆಗಳು ನಡೆದಿವೆ. ಪೋಷಕರ ನೋವು ಕೇಳುವವರೇ ಇಲ್ಲದಂತಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು. ರಾಜ್ಯ ಸರ್ಕಾರ ನಡೆಸುತ್ತಿರುವ ಸಿಇಟಿ ಪರೀಕ್ಷೆ ಮಾದರಿಯಾಗಿ ಯಶಸ್ವಿಯಾಗಿ ನಡೆಯುತ್ತಿದೆ. ಇದೇ ಮಾದರಿಯಲ್ಲಿ ನೀಟ್ ಪರೀಕ್ಷೆಯನ್ನೂ ಸಮರ್ಪಕವಾಗಿ ನಡೆಸುವ ಸಾಮರ್ಥ್ಯ ರಾಜ್ಯಕ್ಕಿದೆ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ದೇಶದ ಮತದಾರರಿಗೆ ಅವಕಾಶ: ಪೂಜಾರಿ

ಬೆಂಗಳೂರು: ಬಡವರು ಮತ್ತು ದುರ್ಬಲರ ಮತವನ್ನು ಕಸಿಯುವ ತಂತ್ರದ ಭಾಗವಾಗಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಇಲ್ಲ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಈ ದೇಶದಲ್ಲಿ ವಾಸವಿದ್ದು, ದೇಶದ ಮತದಾರ ಅಲ್ಲದವರಿಗೆ ಮತ ನಿರಾಕರಿಸಿ, ನೈಜ ಭಾರತೀಯರಿಗೆ ಮಾತ್ರ ಮತದಾನದ ಅವಕಾಶ ಕೊಡುವ ಪ್ರಕ್ರಿಯೆ ಇದಾಗಿದೆ. ದಾಖಲೆ ಕೊಡದವರಿಗೆ ಭಾರತೀಯರೆಂದು ದಾಖಲೆ ಕೊಡುವಂತೆ ನೋಟಿಸ್ ಕೊಡಲಾಗುತ್ತದೆ ಎಂದರು. ವಿದೇಶದಿಂದ ಬಂದು ಅಕ್ರಮವಾಗಿ ನೆಲೆಸಿದವರು, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರುವವರಿಗೆ ಮತ ನಿರಾಕರಿಸುವುದು ಇದರ ಮೂಲ ಉದ್ದೇಶಗಳಲ್ಲಿ ಒಂದು. ಕಾಂಗ್ರೆಸ್ಸಿಗರು ಎಸ್‌ಐಆರ್ ಅನ್ನು ಸ್ವಾಗತಿಸಬೇಕು. ಅಪಪ್ರಚಾರ ಮಾಡಬಾರದು. ಎಸ್‌ಐಆರ್ ಜಾರಿಗೆ ಸಹಕರಿಸಿ ಎಂದು ಮನವಿ ಮಾಡಿದರು. ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ಟೀಕೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಸಿದ್ದರಾಮಯ್ಯ ಅವರು ಪ್ರಧಾನಿ ಮೋದಿ ಅವರನ್ನು ಟೀಕಿಸಲು ಏನು ಸಿಗುತ್ತದೆ ಎಂದು ಹುಡುಕುತ್ತಿರುತ್ತಾರೆ ಎಂದರು.

943 ಕೋಟಿ ರೂ. ವೆಚ್ಚದಲ್ಲಿ ಅಂತಾರಾಷ್ಟ್ರೀಯ ಕ್ರೀಡಾಂಗಣ: ಸಿಎಂ
ಆರ್ಥಿಕ ಬೆಳವಣಿಗೆಗೆ ಸಹಕಾರಿ

ಆನೇಕಲ್: ಸೂರ್ಯನಗರದಲ್ಲಿ ಕ್ರೀಡಾಂಗಣ ನಿರ್ಮಾಣವಾಗುತ್ತಿರುವುದು ಈ ಪ್ರದೇಶದಲ್ಲಿ ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಬೆಳವಣಿಗೆಗೆ ಚಾಲನೆ ನೀಡುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇದೇ ವೇಳೆ ಮುಖ್ಯಮಂತ್ರಿಗಳು ಸರ್ಕಾರದ 'ನಮ್ಮ ಮನೆ' ವಸತಿ ಯೋಜನೆ, ಸೂರ್ಯ ಶೈನ್ ಮತ್ತು ಸೂರ್ಯ ಡಿವೈನ್ ವಸತಿ ಸಂಕೀರ್ಣಗಳಿಗೆ ಶಿಲಾನ್ಯಾಸ , ವಸತಿ ಯೋಜನೆಗೆ ಭೂಮಿಯನ್ನು ಒದಗಿಸಿದ ಭೂಮಾಲೀಕರಿಗೆ ಸ್ಥಳಗಳ ಸಾಂಕೇತಿಕ ಹಂಚಿಕೆಯನ್ನು ಉದ್ಘಾಟಿಸಿದ ಬಳಿಕ ಮಾತನಾಡಿ, ಇಲ್ಲಿಯವರೆಗೆ ಬೆಂಗಳೂರು ನಗರ ಮತ್ತು ರಾಜ್ಯವು ಅಂತಾರಾಷ್ಟ್ರೀಯ ಗುಣಮಟ್ಟದ ಕ್ರಿಕೆಟ್ ಕ್ರೀಡಾಂಗಣವನ್ನು ಹೊಂದಿರಲಿಲ್ಲ. ಇಂದು, ಸುಮಾರು 943 ಕೋಟಿ ರೂ. ಅಂದಾಜು ವೆಚ್ಚದಲ್ಲಿ, ರಾಜ್ಯ ಸರ್ಕಾರವು ಆನೇಕಲ್ ತಾಲ್ಲೂಕಿನ ಸೂರ್ಯನಗರ ಲೇಔಟ್‌ನಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಕ್ರಿಕೆಟ್ ಕ್ರೀಡಾಂಗಣವನ್ನು ನಿರ್ಮಿಸುತ್ತಿದೆ ಎಂದರು.

ಈ ಕ್ರೀಡಾಂಗಣ ಯೋಜನೆಯನ್ನು ವಸತಿ ಇಲಾಖೆ ಮತ್ತು ಕರ್ನಾಟಕ ವಸತಿ ಮಂಡಳಿ (ಕೆಎಚ್‌ಬಿ) ಜಂಟಿಯಾಗಿ ಕೈಗೆತ್ತಿಕೊಳ್ಳುತ್ತಿದ್ದು, ಸುಮಾರು 80 ಸಾವಿರ ಆಸನ ಸಾಮರ್ಥ್ಯವನ್ನು ಹೊಂದುವ ನಿರೀಕ್ಷೆಯಿದೆ, ಇದು ಗುಜರಾತ್ನ ನಂತರ ದೇಶದ ಎರಡನೇ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣವಾಗಿದೆಂದು ಹೇಳಿದರು. ಚಿನ್ನಸ್ವಾಮಿ ಕ್ರೀಡಾಂಗಣದ ಬಗ್ಗೆ ನಿಮಗೆ ತಿಳಿದಿದೆ. ಒಂದು ವರ್ಷದ ಹಿಂದೆ ಅಲ್ಲಿ ಒಂದು ದುರಂತ ಸಂಭವಿಸಿತ್ತು. ಆನಂತರ ರಾಜ್ಯದಲ್ಲಿ ಒಂದು ಗುಣಮಟ್ಟದ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣವನ್ನು ನಿರ್ಮಿಸುವುದು ಅತ್ಯಗತ್ಯ ಎಂದು ನಾನು ಅರಿತುಕೊಂಡೆ ಎಂದು ಹೇಳಿದರು.



ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧ: ಸಿದ್ದರಾಮಯ್ಯ

ಸೂರ್ಯನಗರದಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗುವ ಮೂಲಕ ಕ್ರೀಡೆ, ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ, ಆರ್ಥಿಕ ಬೆಳವಣಿಗೆ ಸೇರಿ ಎಲ್ಲಾ ದೃಷ್ಟಿಯಿಂದ ಈ ಭಾಗದ ಸಮಗ್ರ ಅಭಿವೃದ್ಧಿಗೆ ನಾವು ಮುಂದಡಿ ಇಟ್ಟಿದ್ದೇವೆ. ಇಲ್ಲಿಯವರೆಗೂ ಕೇವಲ ವಸತಿ ನಿರ್ಮಾಣ ಮಾಡುತ್ತಿದ್ದ ವಸತಿ ಇಲಾಖೆ ಮತ್ತು ಕೆಹೆಚ್‌ಬಿ ಈಗ 80 ಸಾವಿರ ಆಸನ ವ್ಯವಸ್ಥೆಯ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗಿರುವುದು ದೂರದೃಷ್ಟಿ ಹೆಜ್ಜೆಯಾಗಿದೆ. ಗುಜರಾತ್ ನಲ್ಲಿರುವ ಕ್ರೀಡಾಂಗಣ 90 ಸಾವಿರ ಆಸನ ವ್ಯವಸ್ಥೆ ಇರುವಂಥದ್ದು. ನಮ್ಮ ರಾಜ್ಯದ್ದು ಎರಡನೇ ದೊಡ್ಡ ಕ್ರೀಡಾಂಗಣವಾಗಿದೆ.

ಇಂತಹ ಅಂತಾರಾಷ್ಟ್ರೀಯ ಗುಣಮಟ್ಟದ ಕ್ರೀಡಾಂಗಣದ ನಿರ್ಮಾಣದೊಂದಿಗೆ, ಈ ಪ್ರದೇಶದಲ್ಲಿ ಪ್ರವಾಸೋದ್ಯಮ ಬೆಳೆಯುತ್ತದೆ. ಸುತ್ತಮುತ್ತಲಿನ ಹಳ್ಳಿಗಳ ಆರ್ಥಿಕತೆಯೂ ಸುಧಾರಿಸುತ್ತದೆ ಎಂದರು. ಈ ಹಿಂದೆ ಪ್ರತಿ ಚದರ ಅಡಿಗೆ ಸುಮಾರು 1,500 ರೂ.ಗಳಷ್ಟಿದ್ದ ಭೂಮಿಯ ಬೆಲೆಗಳು ಈಗ ಪ್ರತಿ ಚದರ ಅಡಿಗೆ 4,000-5,000 ರೂ.ಗಳಿಗೇರಿದೆ ಎಂದು ನಿಮ್ಮ ಹಳ್ಳಿಯ ಜನರು ನನಗೆ ಹೇಳಿದರು. ಏಕೆಂದರೆ ಅಂತರರಾಷ್ಟ್ರೀಯ ಕ್ರೀಡಾಂಗಣ ಬರುತ್ತಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಈ ಯೋಜನೆಯನ್ನು ಸರ್ಕಾರದ ಆರ್ಥಿಕ ಸಹಾಯವಿಲ್ಲದೆ ಸಂಪೂರ್ಣವಾಗಿ ಕೆಎಚ್‌ಬಿ ನಿಧಿಯನ್ನು ಬಳಸಿಕೊಂಡು ನಿರ್ಮಿಸಲಾಗುವುದು ಎಂದು ಸಿಎಂ ಹೇಳಿದರು. ಖಾಲಿ ನಿವೇಶನಗಳನ್ನು ಹರಾಜು ಮಾಡುವ ಮೂಲಕ ವಸತಿ ಮಂಡಳಿಯು 20,000 ಕೋಟಿ ರೂ.ಗಳನ್ನು ಗಳಿಸುವ ನಿರೀಕ್ಷೆಯಿದೆ ಎಂದರು. ವಸತಿ ಮಂಡಳಿ ಮತ್ತು ವಸತಿ ಇಲಾಖೆಯು ವಸತಿ ಯೋಜನೆಗಳು ಮತ್ತು ಸಂಬಂಧಿತ ಯೋಜನೆಗಳಿಗಾಗಿ ಇಲ್ಲಿಯವರೆಗೆ ರೂ. 7,800 ಕೋಟಿ ಖರ್ಚು ಮಾಡಿದೆ ಎಂದು ಸಿಎಂ ಹೇಳಿದರು.

ಅಲ್ಪಸಂಖ್ಯಾತರ ಓಲೈಕೆ ಸಲ್ಲ: ಬಿವೈವಿ

ಬೆಂಗಳೂರು: ರಾಜ್ಯದಲ್ಲಿ ಹಿಂದುಗಳ ಮೇಲೆ ನಿರಂತರ ದೌರ್ಜನ್ಯ ನಡೆಸುವ ರಾಜ್ಯ ಸರ್ಕಾರ ಅಲ್ಪಸಂಖ್ಯಾತರನ್ನು ಓಲೈಸಲು ಯಾವ ಮಟ್ಟಕ್ಕಾದರೂ ಇಳಿಯಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.



ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಆಳಂದ ಗಲಭೆ ಪ್ರಕರಣವನ್ನು ಕೈ ಬಿಡಲು ಸಚಿವ ಸಂಪುಟ ತೀರ್ಮಾನ ಕೈಗೊಂಡಿದೆ. ದೇಶದ್ರೋಹಿಗಳ ವಿರುದ್ಧ ಕಾನೂನು ಹಾಳು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಸರ್ಕಾರ ಹಾಗೂ ಕಾಂಗ್ರೆಸ್ ತಮ್ಮ ಓಟ್ ಬ್ಯಾಂಕ್ ಸುಭದ್ರ ಮಾಡಿಕೊಳ್ಳುತ್ತಿದೆ ಎಂದು ದೂರಿದರು.

ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರ ಅಧಿಕಾರ ಬಂದಾಗಿನಿಂದ ತುಷ್ಟೀಕರಣದ ಎಲ್ಲ ಮಿತಿಗಳನ್ನು ದಾಟಿ ಅಲ್ಪಸಂಖ್ಯಾತರ ಓಲೈಕೆ ಮಾಡುತ್ತಿದೆ. ಹಿಂದುಗಳಿಗೆ ಪದೇ ಪದೇ ಅಪಮಾನ ಮಾಡುತ್ತಿರುವ ಕಾಂಗ್ರೆಸ್ ನೀತಿಯನ್ನು ರಾಜ್ಯದ ಜನ ಗಮನಿಸಿದ್ದಾರೆ. ಪ್ರತಿಪಕ್ಷವಾಗಿ ನಾವೂ ಹೋರಾಟ ಮಾಡುತ್ತೇವೆ. ಹಿಂದು ವಿರೋಧ ನೀತಿ ಅನುಸರಿಸುತ್ತಿರುವುದರ ವಿರುದ್ಧ ಬೀದಿಗಿಳಿದು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

> **ರಾಜ್ಯದಲ್ಲಿ ವಿನಾಕಾರಣ ದೊಂಬಿ ಸೃಷ್ಟಿ, ಪೊಲೀಸ್ ಠಾಣೆಗೆ ಬೆಂಕಿ ಹಾಕುವವರು, ಶಿವಲಿಂಗ ಇರುವ ದೇವಸ್ಥಾನದಲ್ಲಿ ಭಕ್ತರಿಗೆ ಅಪಮಾನ ಮಾಡಿ ಭಕ್ತೆಯರಿಗೆ ಬೆದರಿಸುವುದು - ಇಂಥ ಸಮಾಜದ್ರೋಹಿಗಳ ವಿರುದ್ಧದ ಪ್ರಕರಣ ವಾಪಸ್ ಪಡೆದಿದ್ದಾರೆ. ಸಮಾಜದ್ರೋಹಿಗಳ ವಿರುದ್ಧದ ಪ್ರಕರಣಗಳನ್ನು ರದ್ದು ಮಾಡಿರುವ ರಾಜ್ಯ ಸರ್ಕಾರದ ಕ್ರಮ ಸರಿಯಲ್ಲ.**
> ■ ಕೋಟ ಶ್ರೀನಿವಾಸ ಪೂಜಾರಿ, ಸಂಸದ

ಪ್ರಕರಣ ಹಿಂಪಡೆತ ರಾಜ್ಯದ ಭದ್ರತೆಗೆ ಅಪಾಯ: ಕಲಬುರಗಿಯಲ್ಲಿ ಕೋಮುಗಲಭೆ ಮಾಡಿದ ಆರೋಪಿಗಳ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯುವ ಮೂಲಕ ಕಾಂಗ್ರೆಸ್ ಸರ್ಕಾರ ಮತ್ತೆ ಮತಬ್ಯಾಂಕ್ ರಾಜಕಾರಣ ಮಾಡಿದೆ. ಇದು ರಾಜ್ಯದ ಭದ್ರತೆಗೆ ಅಪಾಯ ತಂದೊಡ್ಡಿದೆ. ಪೊಲೀಸರ ಮೇಲೆ ಹಲ್ಲೆ ಮಾಡಿದವರ ಮೇಲಿನ, ಕೇಂದ್ರ ಸಚಿವರ ಕಾರು ಒಡೆದವರ ಮೇಲಿನ ಪ್ರಕರಣ ಕೈ ಬಿಟ್ಟಿದ್ದಾರೆ. ಕೋಮುಗಲಭೆ ಸೃಷ್ಟಿಸುವವರ ಮೇಲಿನ ಕೇಸ್ ವಾಪಸ್ ಪಡೆದಿರುವುದು ಸರಿಯಲ್ಲ ಎಂದು ಪ್ರತಿಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದ್ದಾರೆ.

ಬೆಳಗಾವಿಯಲ್ಲಿ ಮಳೆಗಾಲದ ಅಧಿವೇಶನ ನಡೆಸಲು ಚಿಂತನೆ

ಬೆಂಗಳೂರು: ಕುಂದಾನಗರಿ ಬೆಳಗಾವಿಯಲ್ಲಿ ಈ ಬಾರಿ ಮಳೆಗಾಲದ ಅಧಿವೇಶನವನ್ನು ನಡೆಸುವುದಕ್ಕೆ ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸುತ್ತಿದೆ. ಅಲ್ಲದೇ ವಿಧಾನಸೌಧ ಸಚಿವಾಲಯ ಕೂಡ ತನ್ನ ಸಿದ್ಧತೆಗಳನ್ನು ಆರಂಭಿಸಿದೆ.



ಎಲ್ಲವೂ ಯೋಜಿಸಿದಂತೆ ನಡೆದರೆ ಬೆಳಗಾವಿಯ ಬೆಳಗಾವಿಯ ಸುವರ್ಣವಿಧಾನಸೌಧದಲ್ಲಿ ಇದೇ ಮೊದಲ ಬಾರಿಗೆ ಮಳೆಗಾಲದ ಅಧಿವೇಶನ ನಡೆಯಲಿದೆ. 2012ರಲ್ಲಿ ಸುವರ್ಣ ವಿಧಾನಸೌಧ ಉದ್ಘಾಟನೆಯಾದಾಗಿನಿಂದ ಈವರೆಗೆ ಅಲ್ಲಿ 11 ಬಾರಿ ಚಳಿಗಾಲದ ಅಧಿವೇಶನಗಳು ನಡೆದಿವೆ. ಈ ಬಾರಿ ಮಳೆಗಾಲದ ಅಧಿವೇಶನ ನಡೆಸಲು ಚಿಂತನೆ ನಡೆಸುತ್ತಿರುವುದು ಉತ್ತರ ಕರ್ನಾಟಕ ಭಾಗದ ದೃಷ್ಟಿಯಿಂದ ಅತ್ಯಂತ ಮಹತ್ವದ ನಿರ್ಧಾರವಾಗಿದೆ. ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಹಾಗೂ ವಿಧಾನಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಅವರು ಜಂಟಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆಗೆ ಈ ಕುರಿತು ವಿಸ್ತೃತ ಸಮಾಲೋಚನೆ ನಡೆಸಿದ್ದಾರೆ. ಅಧಿವೇಶನವನ್ನು ಬೆಂಗಳೂರಿನ ಬದಲು ಬೆಳಗಾವಿಗೆ ಸ್ಥಳಾಂತರಿಸುವುದರಿಂದ ಆಗುವ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಲಾಗಿದೆ.

ಇಡೀ ಆಡಳಿತ ಯಂತ್ರದ ಸ್ಥಳಾಂತರ: ಬೆಳಗಾವಿಯಲ್ಲಿ ಅಧಿವೇಶನ ನಡೆಸುವುದರಿಂದ ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳು, ನೀರಾವರಿ ಯೋಜನೆಗಳು ಹಾಗೂ ಪ್ರಾದೇಶಿಕ ಅಸಮತೋಲನ ನಿವಾರಣೆಯ ಕುರಿತು ಹೆಚ್ಚು ಸಮಯ ವಿನಿಯೋಗಿಸಿ ಚರ್ಚಿಸಲು ಅನುಕೂಲವಾಗುತ್ತದೆ ಎಂಬುದು ಸರ್ಕಾರದ ಆಶಯ. ಆದರೆ, ಅಧಿವೇಶನದ ಹಿನ್ನೆಲೆಯಲ್ಲಿ ಇಡೀ ರಾಜ್ಯ ಸರ್ಕಾರದ ಆಡಳಿತ ಯಂತ್ರ, ಸಚಿವರು, ಮುಖ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಅಧಿಕಾರಿಗಳ ದಂಡು ಕೆಲವು ವಾರಗಳ ಕಾಲ ಬೆಳಗಾವಿಯಲ್ಲೇ ಬೀಡುಬಿಡಬೇಕಾಗುತ್ತದೆ.

ಸಮಸ್ಯೆ ನಿವಾರಿಸಲು ನಿಯಮಗಳಲ್ಲಿ ವರ್ಗೀಕರಣ
ಇ-ಸ್ವತ್ತು 2.0 ತಂತ್ರಾಂಶ ಮಾರ್ಪಾಡು

ಬೆಂಗಳೂರು: ಸಾರ್ವಜನಿಕರು ಇ-ಸ್ವತ್ತು ತಂತ್ರಾಂಶದ ಮೂಲಕ ತಮ್ಮ ಆಸ್ತಿಗೆ ಸಂಬಂಧಿಸಿದಂತೆ ನಮೂನೆಗಳನ್ನು ಪಡೆಯಲು ಅರ್ಜಿಗಳನ್ನು ಸಲ್ಲಿಸುವಾಗ ಎದುರಾಗುತ್ತಿದ್ದ ಸಮಸ್ಯೆಗಳನ್ನು ನಿವಾರಿಸಲು ಹಾಗೂ ನಿಯಮಗಳಲ್ಲಿ ಸೂಕ್ತ ವರ್ಗೀಕರಣ ಮತ್ತು ಪರಿಷ್ಕರಣೆ ಮಾಡುವಂತೆ ಬಂದ ಬೇಡಿಕೆಗಳನ್ನು ಆಧರಿಸಿ ಇ-ಸ್ವತ್ತು 2.0 ತಂತ್ರಾಂಶದಲ್ಲಿ ಮಾರ್ಪಾಡು ತರಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ಅನ್ನು ಅಧಿಸೂಚಿಸಲಾಗಿದ್ದು, ಈ ನಿಯಮಗಳನ್ವಯ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಈ ಹಿಂದೆ ಇದ್ದ ಇ-ಸ್ವತ್ತು ತಂತ್ರಾಂಶವನ್ನು ನಾಗರಿಕ ಸ್ನೇಹಿಯಾಗಿ ಮಾರ್ಪಡಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಈ ಹಿಂದೆ ಅಧಿಸೂಚಿಸಲಾಗಿದ್ದ ನಿಯಮಗಳಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಲಾಗಿದ್ದು, ಕಂದಾಯ ಇಲಾಖೆಯಿಂದ ಕರ್ನಾಟಕ ಭೂ- ಕಂದಾಯ ಅಧಿನಿಯಮದಡಿ ವಿತರಿಸಲಾಗಿದ್ದ ಹಕ್ಕು ಪತ್ರಗಳು, ಮನೆದಳ ಮತ್ತು ಕಣಮನೆ ಪ್ರಮಾಣ ಪತ್ರಗಳ ಅನ್ವಯ ನಮೂನೆಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗುತ್ತದೆ.

ಸ್ವಯಂ ಚಾಲಿತ ಅನುಮೋದನೆ ಸಾರ್ವಜನಿಕರು ನಮೂನೆಗಳನ್ನು ಪಡೆಯಲು ಸಲ್ಲಿಸುವ ಅರ್ಜಿಗಳನ್ನು ನಿಗದಿತ ಸಮಯದೊಳಗೆ ಇತ್ಯರ್ಥಪಡಿಸಲು ಎಲ್ಲಾ ಹಂತದಲ್ಲಿಯೂ ಕಾಲಮಿತಿಯನ್ನು ನಿಗದಿ ಪಡಿಸಲಾಗುವುದು. ಒಂದು ವೇಳೆ ನಿಗದಿತ ಅವಧಿಯಲ್ಲಿ ಇತ್ಯರ್ಥವಾಗದಿದ್ದಲ್ಲಿ, ಸ್ವಯಂ ಚಾಲಿತ ಅನುಮೋದನೆ ಪ್ರಕ್ರಿಯೆಯನ್ನು ಜಾರಿಗೊಳಿಸಲಾಗುತ್ತದೆ. ಸಾರ್ವಜನಿಕರು ತಮ್ಮ ಆಸ್ತಿಗೆ ಹೊಸದಾಗಿ ನಮೂನೆ-11ಬಿ ಪಡೆಯಲು ನಿಗದಿಪಡಿಸಲಾಗಿದ್ದ ಮೇಲ್ಮನವಿ ಅವಧಿಯನ್ನು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲಾಗುತ್ತಿದೆ.

ತೆರಿಗೆ ವ್ಯಾಪ್ತಿಗೆ ಸೇರ್ಪಡೆ

ಕೃಷಿ ಭೂಮಿಯಲ್ಲಿ ವಾಸ ಅಥವಾ ಕೃಷಿ ಉದ್ದೇಶಕ್ಕೆ ಮೂಲ ಮಾಲೀಕರು ಕಟ್ಟಿರುವ ಕಟ್ಟಡಗಳು, ವಸತಿ ಯೋಜನೆಯಡಿ ಕೃಷಿ ಭೂಮಿಯಲ್ಲಿ ಸೃಜನೆಯಾಗಿರುವ ಕಟ್ಟಡಗಳು, ಗ್ರಾಮ ಠಾಣಾದಲ್ಲಿ ನೋಂದಾಯಿತ ದಾಖಲೆಗಳಿಲ್ಲದ ಕಟ್ಟಡಗಳು ಹಾಗೂ ಅರಣ್ಯ ಹಕ್ಕು ಕಾಯ್ದೆಯಡಿ ಮಂಜೂರಾಗಿರುವ ಆಸ್ತಿಗಳನ್ನು ಇ-ಸ್ವತ್ತು 2.0 ತಂತ್ರಾಂಶದ ಮೂಲಕ ನಮೂನೆಗಳನ್ನು ವಿತರಿಸುವ ಮೂಲಕ ಗ್ರಾಮ ಪಂಚಾಯತ್‌ನ ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಅವಕಾಶ ಕಲ್ಪಿಸುವ ಬಗ್ಗೆ ಚರ್ಚಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಭೀಕರ ಅಪಘಾತ: ಐವರ ಸಾವು

ಕಲಬುರಗಿ: ಜಿಲ್ಲೆಯ ಚಿತ್ತಾಪುರ ತಾಲೂಕಿನ ವಾಡಿ ಸಮೀಪದ ರಾಷ್ಟ್ರೀಯ ಹೆದ್ದಾರಿ-150 ರಲ್ಲಿ ಶುಕ್ರವಾರ ತಡರಾತ್ರಿ ಕ್ರೂಸರ್ ಹಾಗೂ ತಮಿಳುನಾಡು ಮೂಲದ ಲಾರಿ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಕ್ರೂಸರ್ ಚಾಲಕ ಸೇರಿದಂತೆ ಒಂದೇ ಕುಟುಂಬದ ನಾಲ್ವರು ಸ್ಥಳದಲ್ಲೇ ಭೀಕರವಾಗಿ ಮೃತಪಟ್ಟಿದ್ದಾರೆ.



ಮೃತರನ್ನು ಚಿತ್ತಾಪುರ ತಾಲೂಕಿನ ಇಂಗಳಗಿ ಗ್ರಾಮದ ನಿವಾಸಿಗಳಾದ ಕ್ರೂಸರ್ ಚಾಲಕ ತೋಲ ಭಾಷಾ ಮಶಾಕ (30), ಒಂದೇ ಕುಟುಂಬದ ಸದಸ್ಯರಾದ ಮೆಹ್ಮದ್ ಹುಸೇನ್ ಇಮಾಮಸಾಬ ಶಾಪುರ (48), ಫಾತಿಮಾ ಮಹೆಬೂಬ್ ಅಲಿ (40), ರಸೂಲ್ ಬೀ ಮುಹಮ್ಮದ್ ಇಸ್ಮಾಯಿಲ್ (40) ಮತ್ತು ಮಹೆಬೂಬ್ ಅಲಿ (45) ಎಂದು ಗುರುತಿಸಲಾಗಿದೆ.

ದುರಂತದ ಹಿನ್ನೆಲೆ: ಪಾರ್ಶ್ವವಾಯುವಿಗೆ ತುತ್ತಾಗಿದ್ದ ಯುವಕನೋರ್ವನನ್ನು ಯಾದಗಿರಿ ನಗರದ ಆಸ್ಪತ್ರೆಗೆ ದಾಖಲಿಸಲು ಇಂಗಳಗಿ ಗ್ರಾಮದ ಒಂಬತ್ತು ಜನರು ಕ್ರೂಸರ್ ವಾಹನದಲ್ಲಿ ತೆರಳಿದ್ದರು. ರೋಗಿಯನ್ನು ಆಸ್ಪತ್ರೆಗೆ ದಾಖಲಿಸಿ, ನಾಲ್ವರು ಅಲ್ಲಿಯೇ ನೆರವಿಗಾಗಿ ಉಳಿದುಕೊಂಡಿದ್ದರು. ಇನ್ನುಳಿದ ಐವರು ಕ್ರೂಸರ್‌ನಲ್ಲಿ ಮರಳಿ ಊರಿಗೆ ಬರುತ್ತಿದ್ದಾಗ ರಾತ್ರಿ 11:40 ರ ಸುಮಾರಿಗೆ ಲಾಡ್ಲಾಪುರ ಸಮೀಪ ಈ ಭೀಕರ ಅಪಘಾತ ಸಂಭವಿಸಿದೆ. ಡಿಕ್ಕಿ ರಭಸಕ್ಕೆ ಕ್ರೂಸರ್ ವಾಹನ ಸಂಪೂರ್ಣ ನಜ್ಜುಗುಜ್ಜಾಗಿದ್ದು, ವಾಹನದಲ್ಲಿದ್ದ ಐವರೂ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಈ ಕುರಿತು ವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿವಮೊಗ್ಗ-ಶೃಂಗೇರಿ-ಮಂಗಳೂರು ಹೊಸ ರೈಲು ಮಾರ್ಗ ಸಮೀಕ್ಷೆ ಪೂರ್ಣ: ಸೋಮಣ್ಣ
ಬೆಂಗಳೂರು-ಮಂಗಳೂರು ವಂದೇ ಭಾರತ್ ರೈಲು

ಮಂಗಳೂರು: ಕುಕ್ಕೆ ಸುಬ್ರಹ್ಮಣ್ಯ- ಸಕಲೇಶಪುರ ನಡುವೆ ರೈಲ್ವೆ ವಿದ್ಯುದ್ದೀಕರಣ ನಡೆಸಲಾಗಿದ್ದು,ಶೀಘ್ರ ಬೆಂಗಳೂರು-ಮಂಗಳೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಆರಂಭಕ್ಕೆ



ಪ್ರಧಾನಿ ಸೂಚನೆ ನೀಡಿದ್ದಾರೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ಮಂಗಳೂರು ಜಂಕ್ಷನ್ ರೈಲು ನಿಲ್ದಾಣಕ್ಕೆ ಶನಿವಾರ ಭೇಟಿ ನೀಡಿದ ವೇಳೆ ಅವರು ಅಮೃತ ಭಾರತ್ ಯೋಜನೆಯಡಿ ಇಲ್ಲಿನ ರೈಲು ನಿಲ್ದಾಣದ ಅಭಿವೃದ್ಧಿ ಕಾಮಗಾರಿಯ ಪರಿಶೀಲನೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು. ಮಂಗಳೂರು-ಬೆಂಗಳೂರು ನಡುವೆ ಬಹು ನಿರೀಕ್ಷಿತ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಜೂನ್ ತಿಂಗಳಲ್ಲಿ ಸಂಚಾರ ಆರಂಭಿಸಲಿದೆ. ಪ್ರಧಾನಿ ಮೋದಿ ಮಂಗಳೂರು ಸೇರಿದಂತೆ ದೇಶದ ವಿವಿಧ ಕಡೆಗಳಲ್ಲಿ ಹೊಸ ರೈಲು ಸಂಚಾರಗಳಿಗೆ ಚಾಲನೆ ನೀಡಲಿದ್ದಾರೆ. ಸಕಲೇಶಪುರ-ಕುಕ್ಕೆ ಸುಬ್ರಹ್ಮಣ್ಯ ಮಾರ್ಗವರೆಗೆ 55 ಕಿ.ಮೀ. ದೂರ ವಿದ್ಯುದೀಕರಣ ಕಾಮಗಾರಿ ಮುಕ್ತಾಯಗೊಂಡಿದೆ. ಹೀಗಾಗಿ ಬೆಂಗಳೂರು- ಮಂಗಳೂರು ನಡುವೆ ಪೂರ್ತಿಯಾಗಿ ವಿದ್ಯುದೀಕರಣವಾಗಿದ್ದು, ಹೆಚ್ಚುವರಿ ರೈಲು ಸಂಚಾರಕ್ಕೆ ಅವಕಾಶಗಳು ತೆರೆದುಕೊಂಡಿವೆ ಎಂದರು.

ಬೆಂಗಳೂರು-ಕಾರವಾರ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಬೇಡಿಕೆ ಬಗ್ಗೆ ಮಾತನಾಡಿದ ಸಚಿವರು, ಕರಾವಳಿಯ ಮೂರು ಜಿಲ್ಲೆಗಳಲ್ಲಿ ಬಿಜೆಪಿ ಸಂಸದರು ಇದ್ದಾರೆ. ಅವರ ಬೇಡಿಕೆಯನ್ನು ಪರಿಶೀಲಿಸಬೇಕಾಗುತ್ತದೆ ಎಂದರು.

ಶಿವಮೊಗ್ಗ-ಶೃಂಗೇರಿ-ಮಂಗಳೂರು ಹೊಸ ರೈಲು ಮಾರ್ಗ ರಚನೆ ಬಗ್ಗೆ ಸಮೀಕ್ಷೆ ಪೂರ್ಣಗೊಂಡಿದ್ದು, ಟೆಂಡರ್ ಬಾಕಿ ಇದೆ. ಪ್ರಸ್ತಾವಿತ ಶಿವಮೊಗ್ಗ-ಮಂಗಳೂರು ರೈಲು ಮಾರ್ಗ 332 ಕಿ.ಮೀ. ಇರಲಿದ್ದು, 3,300 ಕೋಟಿ ರೂ. ಯೋಜನಾ ವೆಚ್ಚ ಅಂದಾಜಿಸಲಾಗಿದೆ. ಈ ಮಾರ್ಗದ ಎಫ್‌ಎಲ್‌ಸಿ ನಡೆದು ಅನುಮೋದನೆಗೊಂಡಿದ್ದು, ಶೀಘ್ರವೇ ಟೆಂಡರ್ ಕರೆಯಲಾಗುವುದು ಎಂದರು.

ರಾಜ್ಯ ಸರ್ಕಾರ ನಿಂತ ನೀರಾಗಿದೆ: ಕೇಂದ್ರ ಸಚಿವ ಆರೋಪ

ರಾಜ್ಯದಲ್ಲಿ ಸರ್ಕಾರ ಇದೆ ಎಂಬುದನ್ನು ನಿರೀಕ್ಷೆ ಮಾಡುತ್ತೀರಾ. ಇದೊಂದು ತೊಗಲುಗೊಂಬೆ ಸರ್ಕಾರ. ಯಾವಾಗ ತೊಲಗುತ್ತದೆಯೋ ಗೊತ್ತಿಲ್ಲ. ಈ ಸರ್ಕಾರ ನಿಂತ ನೀರಾಗಿದೆ. ಈ ಸರ್ಕಾರದಲ್ಲಿ ಇಚ್ಛಾಶಕ್ತಿ ಕೊರತೆ ಇದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಟೀಕಿಸಿದ್ದಾರೆ. ಇಂತಹ ನಿರ್ಲಿಪ್ತ ಸರ್ಕಾವನ್ನು ನಾನು ಇದುವರೆಗೆ ನೋಡಿಲ್ಲ. ಬಡವರನ್ನು, ಸಾಮಾನ್ಯ ಜನರನ್ನು ಅವರದ್ದೇ ಆದ ಟಾಸ್ಕ್‌ಗಳನ್ನು ಹಾಕಿಕೊಂಡು ಸಂದಿಗ್ಧ ಪರಿಸ್ಥಿತಿಯಲ್ಲೂ ದಾರಿತಪ್ಪಿಸುತ್ತಿದೆ ಎಂದರು. ರಾಜ್ಯ ಸರ್ಕಾರ 55 ಕೇಸ್ ವಾಪಸ್ ಪಡೆದ ವಿಚಾರಕ್ಕೆ ಪ್ರತಿಕ್ರಿಯಿಸಿ, ರಾಜ್ಯ ಸರ್ಕಾರದ ತಲೆಯಲ್ಲಿ ಏನಿದೆಯೋ ಗೊತ್ತಿಲ್ಲ. ಡಿಕೆ ಶಿವಕುಮಾರ್ ತಲೆಯಲ್ಲಿರುವ ಭಾವನೆಗಳು ಏನು ಗೊತ್ತಿಲ್ಲ. ಜನ ಉತ್ತರ ಕೊಡುವ ಕಾಲ ಹತ್ತಿರ ಬರುತ್ತಿದೆ. ಅವರು ಮಾಡುತ್ತಿರುವ ಪಾಪದ ವ್ಯವಸ್ಥೆಗಳು ಪ್ರಪಂಚಕ್ಕೆ ಗೊತ್ತಿದೆ. ಪಾಪಕ್ಕೆ ಪ್ರಾಯಶ್ಚಿತವಾಗುತ್ತೆ, ಯಾರ ಯಾರ ಓಲೈಕೆ ಮಾಡುತ್ತಿದ್ದಾರೆ ಅನ್ನೊದಕ್ಕಿಂತ ಹೆಚ್ಚಾಗಿ ಅವರು ಮಾಡುತ್ತಿರುವ ಪಾಪದ ವ್ಯವಸ್ಥೆಗಳು ಪ್ರಪಂಚಕ್ಕೆ ಗೊತ್ತಾಗುತ್ತಿದೆ. ಪಾಪದ ವ್ಯವಸ್ಥೆಗೆ ಪ್ರಾಯಶ್ಚಿತ ಕೂಡ ಆಗುತ್ತದೆ. ರಾಜ್ಯದ ಜನರನ್ನು ಸಾಲದ ಕೂಪಕ್ಕೆ ತಳ್ಳಿದ್ದಾರೆ. ಇನ್ನೊಂದೆಡೆ ರಾಜ್ಯದ ಜನರನ್ನು ಕೂಪಮಂಡೂಕ ಮಾಡಿದ್ದಾರೆ. ಅದಕ್ಕೆ ತಕ್ಕುದಾದ ಪ್ರತಿಫಲ ರಾಜ್ಯದ ಜನ ನೀಡಲಿದ್ದಾರೆ ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚನೆ
ಇಬೋಲಾ ಸೋಂಕು ತಡೆಗೆ ಜಾಗೃತಿ

ಬೆಂಗಳೂರು: ಇಬೋಲಾ ಸೋಂಕು ಕುರಿತು ಸಾರ್ವಜನಿಕರು ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ, ಆದರೆ, ಜಾಗೃತಿಯಿಂದಿರಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರೋಗ್ಯ ಇಲಾಖೆ ಅಧಿಕಾರಿಗಳು ಕೇಂದ್ರ ಸರ್ಕಾರದ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಪರಿಸ್ಥಿತಿಯನ್ನು ಸಮೀಕ್ಷೆ ಮಾಡುತ್ತಿದ್ದಾರೆ ಎಂದು ಹೇಳಿದರು.

ದೇಶದಲ್ಲಿ ಈವರೆಗೆ ಇಬೋಲಾ ಪ್ರಕರಣ ದಾಖಲಾಗಿಲ್ಲ, ಆದರೂ ಮುನ್ನೆಚ್ಚರಿಕಾ ಕ್ರಮವಾಗಿ ಆಫ್ರಿಕಾದ ಉಗಾಂಡಾ, ಕಾಂಗೋ ಮುಂತಾದ ದೇಶಗಳಿಂದ ರಾಜ್ಯಕ್ಕೆ ಆಗಮಿಸುವವರನ್ನು 21 ದಿನಗಳ ಕಾಲ ನಿಗಾದಲ್ಲಿಡಲಾಗುವುದು ಎಂದು ವಿವರಿಸಿದರು. ಯಾರಿಗಾದರೂ ರೋಗಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಆರೋಗ್ಯ ಇಲಾಖೆಗೆ ಮಾಹಿತಿ ನೀಡುವಂತೆ ಸೂಚಿಸಲಾಗಿದೆ. ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡಬಾರದು. ರಾಜ್ಯ ಸರ್ಕಾರ ಎಲ್ಲ ರೀತಿಯ ಮುಂಜಾಗೃತಾ ಕ್ರಮಗಳನ್ನು ಕೈಗೊಂಡಿದ್ದು, ಕೇಂದ್ರ ಸರ್ಕಾರವೂ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ ಎಂದು ತಿಳಿಸಿದರು.

ಪೆಟ್ರೋಲ್ ದರ ಏರಿಕೆ ವಿರುದ್ಧ ವಾಗ್ದಾಳಿ

ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳಿಂದ ದೇಶ ದೊಡ್ಡ ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಅನಗತ್ಯ ಯುದ್ಧ ಪರಿಸ್ಥಿತಿಗಳ ಪರಿಣಾಮವಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲದರ ಏರಿಕೆಯಾಗಿದೆ. ಹಿಂದೆ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ಕಚ್ಚಾ ತೈಲದ ದರ ಬ್ಯಾರಲ್‌ಗೆ 120 ರೂ. ಡಾಲರ್ ತಲುಪಿದ್ದರೂ, ಜನರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗಿತ್ತು. ಆದರೆ, ಈಗ ಕಡಿಮೆ ದರದ ಅವಧಿಯಲ್ಲಿಯೂ ಕೇಂದ್ರ ಸರ್ಕಾರ ತೈಲದರ ಇಳಿಸದೆ ಲಾಭ ಮಾಡಿಕೊಂಡಿದ್ದು, ಈಗ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಏರಿದ ಬಳಿಕವೂ ತೆರಿಗೆ ಕಡಿತಗೊಳಿಸಿ ಜನರಿಗೆ ನೆರವಾಗುವ ಬದಲು ನಿರಂತರವಾಗಿ ದರ ಹೆಚ್ಚಿಸುತ್ತಿದೆ ಎಂದು ಟೀಕಿಸಿದರು.

ಕಿರುಸುದ್ದಿ

ವೇತನ ಬಿಡುಗಡೆಗೊಳಿಸಿ

ನರಗುಂದ: ಸರ್ಕಾರದಿಂದ ಮಾಸಿಕವಾಗಿ ಬರುವ ಸಂಧ್ಯಾ ಸುರಕ್ಷಾ, ವೃದ್ಧಾಪ್ಯ ವೇತನ ಹಾಗೂ ಅಂಗವಿಕಲರ ವೇತನವನ್ನು ಕಳೆದ 2-3 ತಿಂಗಳುಗಳಿಂದ ಬಿಡುಗಡೆ ಮಾಡಿಲ್ಲ. ಇದರಿಂದ ವಿಶಿಷ್ಟಚೇತನರಿಗೆ ಹಾಗೂ ವಯಸ್ಸಾದವರಿಗೆ ಆರ್ಥಿಕವಾಗಿ ಬಹಳ ತೊಂದರೆಯಾಗಿದೆ. ಹೀಗಾಗಿ ಕೂಡಲೇ ಮಾಶಾಸನ ಬಿಡುಗಡೆ ಮಾಡಬೇಕೆಂದು ಸಾರ್ವಜನಿಕರು ಆಗ್ರಹಿಸಿದರು.

ಫಕೀರಸಾಬ ನಧಾಪ, ಅಬ್ದುಲಸಾಬ ನದಾಫ, ರುದ್ರಯ್ಯ ಮಠದ, ನಿಂಗಪ್ಪ ಆದೇಪ್ಪನವರ, ಚೆನ್ನಪ್ಪ ಶಾನವಾಡ, ಬೀಮಪ್ಪ ತಳವಾರ, ನಾಗಪ್ಪ ಬಾರಕೇರ, ಯಲ್ಲಪ್ಪ ತಳವಾರ, ಹನಮಪ್ಪ ನಾಗನೂರ, ಶಾಂತವ್ವ ಹಿರೇಗೌಡ್ರ, ಕಲ್ಲವ್ವ ಬುಳ್ಳನ್ನವರ, ರುದ್ರಪ್ಪ ತಳವಾರ, ಮಲ್ಲವ್ವ ಮಠದ, ಲಕ್ಷ್ಮವ್ವ ತಳವಾರ, ರುದ್ರವ್ವ ತಳವಾರ, ಶಾಂತವ್ವ ಆದೇಪ್ಪನವರ, ಹನಮಪ್ಪ ನಾಗನೂರ, ಬಾಲಪ್ಪ ಕಿಳ್ಳಿಕೇತರ, ದೊಡ್ಡಪ್ಪ ಮಾದರ, ಅಣ್ಣಪ್ಪಗೌಡ ಪಾಟೀಲ, ವೀರನಗೌಡ ಮೂಗನೂರ ಹಾಗೂ ಗ್ರಾಮಸ್ಥರು ಇದ್ದರು.

ವಾರ್ಷಿಕೋತ್ಸವ ಇಂದು

ಗದಗ: ರಾಜೀವಗಾಂಧಿ ನಗರದ ಈಶ್ವರ ಬಡಾವಣೆಯಲ್ಲಿರುವ ಈಶ್ವರ ದೇವಸ್ಥಾನದ ಸಭಾಭವನದಲ್ಲಿ ಮೇ 24 ರಂದು ಬೆಳಗ್ಗೆ 10ಕ್ಕೆ ಎಸ್.ಎಸ್. ಆಡಿನ ಜನಸೇವಾ ಸಂಸ್ಥೆ ವತಿಯಿಂದ ಸಂಸ್ಥೆಯ ಪ್ರಥಮ ವಾರ್ಷಿಕೋತ್ಸವ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ್ ಉದ್ಘಾಟಿಸುವರು. ಸಾಧಕರಿಗೆ ಪ್ರಶಸ್ತಿ ಪ್ರದಾನವನ್ನು ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯ ಜಿಲ್ಲಾ ಅಧ್ಯಕ್ಷ ಬಸವರಾಜ ಕಡೆಮನಿ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್. ಬುರಡಿ ಮಾಡುವರು. ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಸಾಧನೆಗೈದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ ಅನರ್ಘ್ಯ ರತ್ನ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷೆ ಶೋಭಾ ಆಡಿನ ಅಧ್ಯಕ್ಷತೆ ವಹಿಸುವರು. ಸಾಹಿತಿ ಎಸ್.ಕೆ.ಆಡಿನ ಭಾಗವಹಿಸುವರು. ಅಕ್ಬರಸಾಬ ಬಬರ್ಚಿ, ಬಿ.ಬಿ. ಆಸೂಟಿ, ಎಲ್.ಡಿ. ಚಂದಾವರಿ, ಎಸ್.ಎನ್. ಬಳ್ಳಾರಿ, ಅಶೋಕ ಮಂದಾಲಿ, ಬಸವರಾಜ ಬಳ್ಳಾರಿ, ಆನಂದ ಸಿಂಗಾಡಿ ಭಾಗವಹಿಸುವರು.

ಜೂ.7ಕ್ಕೆ ಪ್ರತಿಮೆ ಅನಾವರಣ

ರೋಣ: ಮೇ 24ರಂದು ತಾಲೂಕಿನ ಅಬ್ಬಿಗೇರಿ ಗ್ರಾಮದಲ್ಲಿ ಜರುಗಬೇಕಿದ್ದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣ ಕಾರ್ಯಕ್ರಮ ಕೆಲ ಕಾರಣಗಳಿಂದ ಜೂ.7ಕ್ಕೆ ಮುಂದೂಡಲಾಗಿದ್ದು, ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಅನಾವರಣ ಕಾರ್ಯಕ್ರಮ ಜೂ.7ರಂದು ನಿಗದಿಪಡಿಸಿದ ಸಭೆಯಂತೆ ನಡೆಸಲಾಗುವುದು ಎಂದು ರೋಣ ತಾಲೂಕು ದಲಿತ ಮುಖಂಡ ಮೌನೇಶ ಹಾದಿಮನಿ ತಿಳಿಸಿದ್ದಾರೆ.

ರಾಮಣ್ಣ ಡಂಬಳ ನಿಧನ

ಶಿರಹಟ್ಟಿ: ಕುರುಬ ಸಮಾಜದ ಹಿರಿಯ ಹಾಗೂ ಬಿಜೆಪಿ ಮುಖಂಡ ಮತ್ತು ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ರಾಮಣ್ಣ ಡಂಬಳ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ರಾಮಣ್ಣ ಡಂಬಳ ಅವರ ನಿಧನಕ್ಕೆ ಶಾಸಕ ಡಾ. ಚಂದ್ರು ಲಮಾಣಿ, ವಿಶ್ವನಾಥ ಕಪ್ಪತ್ತನವರ, ಮಂಜುನಾಥ ಗಂಟಿ, ರಾಮಣ್ಣ ಕಂಬಳಿ, ಫಕೀರೇಶ ರಟ್ಟಿಹಳ್ಳಿ, ಸಂತೋಷ ಕುರಿ, ದೇವಪ್ಪ ಬಟ್ಟೂರ, ಜಾನು ಲಮಾಣಿ, ಗೂಳಪ್ಪ ಕರಿಗಾರ, ನಾಗರಾಜ ಲಕ್ಕುಂಡಿ ಸಂತಾಪ ಸೂಚಿಸಿದ್ದಾರೆ.



ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	3592-8189
ಅಜವಾನ	8509-10422
ಅಲಸಂದಿ	2609-6800
ಕಡಲೆ	1611-6289
ಉದ್ದು	2509-6844
ಹವೀಜ	7069-10219
ಒಣಮೆಣಸಿನಕಾಯಿ	2099-48009
ಹೆಸರು	1609-10112
ಹುರಳಿ	3569-4237
ಜೋಳ	1712-4737
ಗೋವಿನಜೋಳ	1669-2180
ಮಡಕಿ	8509-8569
ಸಾಸವಿ	4139-4519
ನವಣಿ	2877-2877
ಕುಸಬಿ	2709-5369
ಸೊಯಾಬಿನ	3269-3269
ಸೂರ್ಯಕಾಂತಿ	6082-7160
ತೊಗರಿ	2109-5612
ಗೋಧಿ	1259-6333
ನವನಕ್ಕಿ	4300-4300



ನರಗುಂದ: ಸರ್ಕಾರದಿಂದ ಮಾಸಿಕವಾಗಿ ಬರುವ ಸಂಧ್ಯಾ ಸುರಕ್ಷಾ, ವೃದ್ಧಾಪ್ಯ ವೇತನ ಹಾಗೂ ಅಂಗವಿಕಲರ ವೇತನವನ್ನು ಕಳೆದ 2-3 ತಿಂಗಳುಗಳಿಂದ ಬಿಡುಗಡೆ ಮಾಡಿಲ್ಲ. ಇದರಿಂದ ವಿಶಿಷ್ಟಚೇತನರಿಗೆ ಹಾಗೂ ವಯಸ್ಸಾದವರಿಗೆ ಆರ್ಥಿಕವಾಗಿ ಬಹಳ ತೊಂದರೆಯಾಗಿದೆ. ಹೀಗಾಗಿ ಕೂಡಲೇ ಮಾಶಾಸನ ಬಿಡುಗಡೆ ಮಾಡಬೇಕೆಂದು ಸಾರ್ವಜನಿಕರು ಆಗ್ರಹಿಸಿದರು.

ಡೆಂಘೀ ಜ್ವರ ನಿಯಂತ್ರಣಕ್ಕೆ ಜನಜಾಗೃತಿ ಅವಶ್ಯ

ಲಕ್ಷ್ಮೇಶ್ವರ: ಡೆಂಘೀ ಜ್ವರ ನಿಯಂತ್ರಣಕ್ಕೆ ಜನರ ಸಹಕಾರ, ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನೆ ಹಾಗೂ ಜನಜಾಗೃತಿಯೊಂದೇ ಪರಿಹಾರವಾಗಿದೆ ಎಂದು ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ. ಬೆನ್ನೂರ ಹೇಳಿದರು.

ಅವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಗದಗ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಶಿರಹಟ್ಟಿ-ಲಕ್ಷ್ಮೇಶ್ವರ ಆಶ್ರಯದಲ್ಲಿ ಲಕ್ಷ್ಮೇಶ್ವರದ ಬಾಪೂಜಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಆಯೋಜಿಸಿದ್ದ ಡೆಂಘೀ ಅರಿವು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಪ್ರಸ್ತುತ ಪೂರ್ವ ಮುಂಗಾರು ಮಳೆಗಾಲ ಪ್ರಾರಂಭವಾಗಿದ್ದು ಅಲ್ಲಲ್ಲಿ ನಿಂತ ನೀರು, ಶೇಖರಣಾ ಸಲಕರಣೆಗಳಲ್ಲಿ ಸೊಳ್ಳೆ ಉತ್ಪತ್ತಿಯಾಗುತ್ತದೆ. ಈಡಿಸ್ ಸೊಳ್ಳೆ ಕಡಿತದಿಂದ ಡೆಂಘೀ, ಚಿಕೂನ್ ಗುನ್ಯಾ ಹರಡುವ ಸಾಧ್ಯತೆ ಇರುತ್ತದೆ. ಹಾಗಾಗಿ ಜ್ವರ ಪ್ರಕರಣ ಕಂಡು ಬಂದ ಕೂಡಲೇ ಹತ್ತಿರದ ಆರೋಗ್ಯ ಕೇಂದ್ರಗಳಲ್ಲಿ ರಕ್ತ ಪರೀಕ್ಷೆ ಮಾಡಿಸಿ ಉಚಿತ ಚಿಕಿತ್ಸೆ ಪಡೆಯಬೇಕು ಹಾಗೂ ಮಲಗುವಾಗ ಸೊಳ್ಳೆ ಪರದೆ ಬಳಸಿ, ಮನೆಯಲ್ಲಿಯ ನೀರಿನ ಪರಿಕರಗಳನ್ನು ವಾರಕ್ಕೊಮ್ಮೆ ತಿಕ್ಕಿ ತೊಳೆದು ನೀರನ್ನು ಭರ್ತಿ ಮಾಡಿ ಭದ್ರವಾಗಿ ಮುಚ್ಚಿಡಿ ಸೊಳ್ಳೆ ಕಡಿತದಿಂದ ದೂರವಿರಲು ಸಾಧ್ಯವಾಗುವ ಎಲ್ಲಾ ರಕ್ಷಣಾ ವಿಧಾನಗಳನ್ನು ಅನುಸರಿ ಎಂದರು.

ಆರೋಗ್ಯ ಶಿಕ್ಷಣಾಧಿಕಾರಿ ಎಸ್. ಎಫ್. ಹನಕನಹಳ್ಳಿ, ಪ್ರಾಚಾರ್ಯ ಕೆ.ನಾಗರಾಜಪ್ಪ ಹಾಗೂ ಸಿಬ್ಬಂದಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಫ್. ಬಿ. ಹೂಗಾರ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಫ್.ಸಿ. ಹಿರೇಮಠ, ಆರೋಗ್ಯ ನಿರೀಕ್ಷಣಾಧಿಕಾರಿ ಜಿ.ಬಿ. ಬಣಗಾರ, ಕೃಷ್ಣಕುಮಾರ ಕುಲಕರ್ಣಿ ಇತರರಿದ್ದರು.



ಲಕ್ಷ್ಮೇಶ್ವರ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಗದಗ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಶಿರಹಟ್ಟಿ-ಲಕ್ಷ್ಮೇಶ್ವರ ಆಶ್ರಯದಲ್ಲಿ ಲಕ್ಷ್ಮೇಶ್ವರದ ಬಾಪೂಜಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಆಯೋಜಿಸಿದ್ದ ಡೆಂಘೀ ಅರಿವು ಕಾರ್ಯಕ್ರಮ.

ಅಂತಾರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ | ಸಸಿ ನಾಟಿ | ಚವ್ಹಾಣ ಅಭಿಮತ

ನೈಸರ್ಗಿಕ ಜೀವಸಂಕುಲ ರಕ್ಷಿಸಿ

ಮುಂಡರಗಿ: ಭೂಮಿಯ ಮೇಲಿನ ನೈಸರ್ಗಿಕ ಜೀವಸಂಕುಲವನ್ನು ರಕ್ಷಿಸುವುದು ಮತ್ತು ಪರಿಸರದ ಸಮತೋಲನ ಕಾಪಾಡುವುದು, ಜೀವವೈವಿಧ್ಯದ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಪ್ರಾಣಿ ಹಾಗೂ ಸಸ್ಯ ಸಂಕುಲಗಳು ಸೇರಿದಂತೆ ಅಳಿವಿನಂಚಿನಲ್ಲಿರುವ ಎಲ್ಲ ಜೀವವೈವಿಧ್ಯಗಳ ಕುರಿತು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಕಾರ್ಯವಾಗಬೇಕೆಂದು ಗ್ರಾಮ ಪಂಚಾಯತಿ ಆಡಳಿತಾಧಿಕಾರಿ ಗುರುರಾಜ ಚವ್ಹಾಣ ಹೇಳಿದರು.

ತಾಲೂಕಿನ ಡಂಬಳ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯ ಪ್ರಯುಕ್ತ ಗ್ರಾಮ ಪಂಚಾಯತಿ ಹಾಗೂ ಅಹಿಂದ ಜನ ಸಂಘದ ಸಹಯೋಗದಲ್ಲಿ ಗ್ರಾಮ ಪಂಚಾಯತಿ ಆವರಣದಲ್ಲಿ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಅರಣ್ಯನಾಶ ಮತ್ತು ಹವಾಮಾನ ಬದಲಾವಣೆಯಿಂದಾಗಿ ಲಕ್ಷಾಂತರ ಜೀವ ಪ್ರಬೇಧಗಳು ಅಳಿವಿನ ಭೀತಿಯಲ್ಲಿವೆ. ಸ್ಥಳೀಯ ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಗ್ರಾಮದಲ್ಲಿ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡುವ ಮೂಲಕ ಜನಜಾಗೃತಿ ಮೂಡಿಸುವ ಕಾರ್ಯವಾಗಬೇಕು ಎಂದರು.

ಅಹಿಂದ ಜನತಾ ಸಂಘದ ಅಧ್ಯಕ್ಷ ಪ್ರಕಾಶ ಮೇಗೂರ ಹಾಗೂ ಸಂಘದ ಪ್ರಧಾನ ಕಾರ್ಯದರ್ಶಿ ಗೋಪಾಲ ಗದಗಿನ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ಲಾಸ್ಟಿಕ್ ಮುಕ್ತ ಪರಿಸರ ನಮ್ಮದಾಗಬೇಕು. ಕಾಡು ಮತ್ತು ಸಮುದ್ರ ಸೇರುತ್ತಿರುವ ಪ್ಲಾಸ್ಟಿಕ್ ಅನ್ನು ತಡೆಗಟ್ಟಬೇಕು. ಶಾಲಾಕಾಲೇಜುಗಳಲ್ಲಿ ವನ್ಯಜೀವಿಗಳ ಮಹತ್ವದ ಬಗ್ಗೆ ಜಾಗೃತೆ ಮೂಡಿಸುವ ಶಿಕ್ಷಣ ನೀಡಬೇಕು. ಕೇವಲ ಕಾನೂನುಗಳಿಂದ ಜೀವವೈವಿಧ್ಯ ಉಳಿಸಲು ಸಾಧ್ಯವಿಲ್ಲ. ವಿಜ್ಞಾನ, ತಂತ್ರಜ್ಞಾನ ಮತ್ತು ಜನ ಸಾಮಾನ್ಯರ ಸಹಭಾಗಿತ್ವ ಸೇರಿದಾಗ ಮಾತ್ರ ಭೂಮಿಯನ್ನು ಮುಂದಿನ ಪೀಳಿಗೆಗೆ ಉಳಿಸಿ ಕೊಡಬಹುದು ಎಂದರು.

ತಾಲೂಕು ಯೋಜನಾಧಿಕಾರಿ ವಿಜಯಕುಮಾರ ಬೆಣ್ಣಿ, ಪಿಡಿಒ ಪಾರ್ವತಿ ಹೊಂಬಳ, ಕಾರ್ಯದರ್ಶಿ ಚಾಂಧಮುನ್ನಿ ಅಣ್ಣಿಗೇರಿ, ಸಂಘದ ಪದಾಧಿಕಾರಿಗಳಾದ ಮಂಜುನಾಥ ನರಗುಂದ, ಶ್ರೀಕಾಂತ ಸಿರಗೇರಿ, ವೆಂಕಟೇಶ ಗದಗಿನ, ಭರಮಪ್ಪ ಮಂಗೋಜಿ, ರಾಜಾಭಕ್ಷಿ ಡಾಲಾಯತ, ಆದಿತ್ಯ ಗದಗಿನ, ಹರೀಶ ಯಲಬೋವಿ, ದಾವಲ ಬೆನಕೊಪ್ಪ, ಆಸೀಫ ತಾಂಬೋಟಿ, ಸಮೀರ ತಾಂಬೋಟಿ, ಬುಡ್ನೆಸಾಬ ಜಲಾಲನವರ, ಪ್ರವೀಣ ಅಡವಿಸೋಮಾಪುರ, ಶಬ್ಬೀರ ನಮಾಜಿ, ಅರುಣ ಚಿಲಕವಾಡ, ಶ್ರೀಧರ ಮಾಳಗಿ, ಅನೀಸ್ ತಾಂಬೋಟಿ, ಸೋಹಿಲ್ ದೊಡ್ಡಮನಿ, ಸಂತೋಷ ಸೂರಟೂರ ಸೇರಿದಂತೆ ಗ್ರಾಮ ಪಂಚಾಯತಿ ಸಿಬ್ಬಂದಿ, ಇತರರಿದ್ದರು.



ಜೀವವೈವಿಧ್ಯದ ಸಂರಕ್ಷಣೆ ಸರ್ವರ ಹೊಣೆ

ರಾಜ್ಯದಲ್ಲಿ 20 ವರ್ಷಗಳಿಂದ ಜೀವ ವೈವಿಧ್ಯ ಸಂರಕ್ಷಣಾ ಕಾಯ್ದೆ ಜಾರಿಯಲ್ಲಿದ್ದರೂ ಅದರ ಅನುಷ್ಠಾನದಲ್ಲಿ ಅರಣ್ಯ ಇಲಾಖೆ ಸಂಪೂರ್ಣ ವಿಫಲವಾಗಿದೆ. ಜೀವವೈವಿಧ್ಯ ಎನ್ನುವುದು ಕೇವಲ ಕಾಡಿನ ಪ್ರಾಣಿಗಳಿಗೆ ಸಂಬಂಧಿಸಿದ್ದಲ್ಲ. ಅದು ಮನುಕುಲದ ಅಸ್ತಿತ್ವದ ಪ್ರಶ್ನೆಯು ಆಗಿದೆ. ಶುದ್ಧ ಗಾಳಿ, ನೀರು ಮತ್ತು ಆಹಾರಕ್ಕಾಗಿ ನಾವು ಈ ಸಮತೋಲನದ ಮೇಲೆ ಅವಲಂಬಿತರಾಗಿದ್ದೇವೆ. ಜೀವವೈವಿಧ್ಯದ ಸಂರಕ್ಷಣೆಯ ಹೊಣೆ ಪ್ರತಿಯೊಬ್ಬರದ್ದಾಗಿದೆ ಎಂದು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಲಕ್ಷ್ಮಣ ದೊಡ್ಡಮನಿ ಹೇಳಿದರು.

ಗೋವುಗಳ ಅಕ್ರಮ ಸಾಗಾಟ, ಹತ್ಯೆ ತಡೆಯಿರಿ

ಗಜೇಂದ್ರಗಡ: ಗೋವುಗಳ ಅಕ್ರಮ ಸಾಗಾಟ ಮತ್ತು ಹತ್ಯೆಯನ್ನು ಕಟ್ಟುನಿಟ್ಟಾಗಿ ತಡೆಗಟ್ಟಬೇಕು ಎಂದು ವಿಶ್ವ ಹಿಂದೂ ಪರಿಷದ್ ಭಜರಂಗದಳ ಗೋ ರಕ್ಷಾ ವಿಭಾಗ ಕರ್ನಾಟಕ ಉತ್ತರ ಪ್ರಾಂತದ ಗಜೇಂದ್ರಗಡ ತಾಲೂಕು ಘಟಕದ ವತಿಯಿಂದ ಅನೇಕ ಹಿಂದೂ ಮುಖಂಡರು ತಹಶೀಲ್ದಾರರಿಗೆ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹಿಂದೂ ಪರ ಸಂಘಟನೆ ಮುಖಂಡ ಬಾಲಾಜಿರಾವ್ ಬೋಸ್ಲೆ, ಗೋವುಗಳು ರೈತರ ಜೀವನಾಡಿ. ಹಿಂದೂಗಳು ಗೋವುಗಳ ಸೆಗಣಿಯನ್ನು ಹಣೆಗೆ ವಿಭೂತಿ ರೂಪದಲ್ಲಿ ಧರಿಸಿದರೆ ಗೋಮೂತ್ರವನ್ನು ಔಷಧಿ ರೂಪದಲ್ಲಿ ಉಪಯೋಗಿಸುತ್ತಾರೆ . ಗೋವುಗಳನ್ನು ಹಿಂದೂಗಳು ತಾಯಿ ಸ್ವರೂಪದಲ್ಲಿ ಕಾಣುತ್ತೇವೆ. ಅಂತಹ ಪೂಜ್ಯನಿಯ ಗೋವುಗಳನ್ನು ಕಾನೂನು ಬಾಹಿರವಾಗಿ ಸಾಗಾಣಿಕೆ ಮಾಡಿ ಹತ್ಯೆ ಗೈದು ಆಹಾರ ರೂಪದಲ್ಲಿ ಸೇವನೆ ಮಾಡಲಾಗುತ್ತಿದೆ .ಅಂತಹ ಸಂದರ್ಭದಲ್ಲಿ ಹಿಂದೂಪರ ಸಂಘಟನೆ ಕಾರ್ಯಕರ್ತರು ತಡೆಯಲು ಪ್ರಯತ್ನಿಸಿದರೆ ನಮ್ಮ ಹಿಂದೂ ಕಾರ್ಯಕರ್ತರ ಮೇಲೆಯೇ ಉಲ್ಟಾ ಕೇಸ್ ಗಳನ್ನು ದಾಖಲಿಸಲಾಗುತ್ತಿದೆ. ಕೂಡಲೇ ಇಂತಹ ಕಾನೂನು ಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಹಿಂದೂ ಪರ ಸಂಘಟನೆ ಮುಖಂಡ ಸಂಜೀವ ಕುಮಾರ ಜೋಷಿ ಮಾತನಾಡಿ, ಅಕ್ರಮ ಕಸಾಯಿಖಾನೆಗಳನ್ನು ತೆರವುಗೊಳಿಸಬೇಕು ಹಾಗೂ ಗೋವುಗಳ ಅಕ್ರಮ ಸಾಗಾಣಿಕೆ, ಹತ್ಯೆಗಳನ್ನು ಗ್ರಾಮ ಪಂಚಾಯತ್ ಪಿಡಿಒ ಸೇರಿದಂತೆ ತಾಲೂಕಿನ ತಹಶೀಲ್ದಾರ್ ಮತ್ತು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಮೂಲಕ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ವಿಶ್ವನಾಥ ಕುಷ್ಟಗಿ ಮಾತನಾಡಿ, ಗೊಹತ್ಯೆ ನಿಷೇದ ಕಾಯಿದೆ ಇದ್ದರೂ ಸಹ ನಿರಂತರವಾಗಿ ಗೋವುಗಳ ಹತ್ಯೆ ನಡೆಯುತ್ತಿರುವದು ಹಿಂದೂಗಳ ಭಾವನೆಗಳಿಗೆ ಧಕ್ಕೆ ಯಾಗುತ್ತಿದೆ. ಸರ್ಕಾರಿ ಅಧಿಕಾರಿಗಳು ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸಿ ಅಕ್ರಮ ಗೋ ಸಾಗಾಣಿಕೆ ಮತ್ತು ಹತ್ಯೆಯನ್ನು ತಡೆಗಟ್ಟಬೇಕು ಎಂದು ಆಗ್ರಹಿಸಿದರು. ಗಜೇಂದ್ರಗಡ ಠಾಣೆ ಪಿಎಸ್ಐ ಪ್ರಕಾಶ್. ಡಿ. ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರಸಾದ ಬಡಿಗೇರ, ಮಹಾಂತೇಶ ಗಂಧದ, ಕಿರಣಕುಮಾರ, ರುದ್ರಮುನಿ ಹಿರೇಮಠ, ಆಕಾಶ ಆಂಬೋರೆ, ರಾಮು ಪವಾರ, ಪ್ರಶಾಂತ ಬಡಿಗೇರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯ

ಗದಗ: ರೈತರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಶಾಶ್ವತ ಪರಿಹಾರಕ್ಕಾಗಿ ಮತ್ತು ಕೃಷಿ ವಲಯದ ಅಭಿವೃದ್ಧಿಗಾಗಿ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಹಾಗೂ ತಾಲೂಕು ಘಟಕದ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಎಫ್ಐಡಿ ಮೂಲಕ ರಸಗೊಬ್ಬರ ವಿತರಣೆ ಮಾಡುವ ಪದ್ಧತಿಯನ್ನು ರದ್ದುಪಡಿಸಬೇಕು. ನೇರವಾಗಿ ರೈತರಿಗೆ ಸಂಪೂರ್ಣ ರಸಗೊಬ್ಬರವನ್ನು ಪೂರೈಸಬೇಕು. ಕೃಷಿ ಉತ್ಪನ್ನಗಳಿಗೆ ಎಂ.ಎಸ್.ಪಿ. ಬೆಂಬಲ ಬೆಲೆ ನೀಡುವ ಕೇಂದ್ರಗಳನ್ನು ವರ್ಷದ 12 ತಿಂಗಳು ತೆರೆಯಬೇಕು. ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ರೈತರ ಅನುಕೂಲಕ್ಕಾಗಿ ಸುಸಜ್ಜಿತ ಗೋದಾಮುಗಳನ್ನು ನಿರ್ಮಿಸಬೇಕು. ದೇಸಿ ಹಸುಗಳನ್ನು ಸಾಕುವ ರೈತರಿಗೆ ಸರ್ಕಾರದಿಂದ ಹೆಚ್ಚಿನ ಪ್ರೋತ್ಸಾಹಧನ ನೀಡಬೇಕು. ರೈತರ ಬೆಳೆಗಳನ್ನು ನಾಶಪಡಿಸುತ್ತಿರುವ ಮಂಗಗಳ ಮತ್ತು ಪ್ರಾಣಿಗಳ ಹಾವಳಿಯನ್ನು ನಿಯಂತ್ರಿಸಲು ಅರಣ್ಯ ಇಲಾಖೆಯು ಕೂಡಲೇ ಅವುಗಳನ್ನು ಸೆರೆಹಿಡಿದು ಸುರಕ್ಷಿತ ಅರಣ್ಯ ಪ್ರದೇಶಗಳಿಗೆ ಸ್ಥಳಾಂತರಿಸಬೇಕು. ಫಸಲ್ ಭೀಮಾ ಯೋಜನೆಯಡಿಯಲ್ಲಿ ಬೆಳೆವಿಮೆಯ ಯೋಜನೆಯನ್ನು ಸ್ಯಾಟ್‌ಲೈಟ್ ಮತ್ತು ಬಯೋಮೆಟ್ರಿಕ್ ಸರ್ವೇ ಮೂಲಕ ವೈಜ್ಞಾನಿಕವಾಗಿ ಬೆಳೆಹಾನಿ ಸಮೀಕ್ಷೆ ನಡೆಸಿ ಅರ್ಹ ರೈತರಿಗೆ ಬೆಳೆವಿಮೆ ಮಂಜೂರು ಮಾಡಬೇಕು. ಮಾರುಕಟ್ಟೆಯಲ್ಲಿ ಲಭ್ಯವಿರುವ ಕಳಪೆ ಬೀಜಗಳ ಮಾರಾಟವನ್ನು ತಡೆಗಟ್ಟಬೇಕು. ಪ್ರತಿ ಗ್ರಾಮಗಳ ನಮ್ಮ ಹೊಲ, ನಮ್ಮ ದಾರಿ ಯೋಜನೆಯಡಿ ಪ್ರತಿ ರೈತನ ಜಮೀನಿಗೆ ಸೂಕ್ತ ಸಂಪರ್ಕ ದಾರಿಗಳನ್ನು ನಿರ್ಮಿಸಿಕೊಡಬೇಕೆಂದರು. ಜಿಲ್ಲೆಯ ಕೃಷಿ ಮಾರುಕಟ್ಟೆಗಳಲ್ಲಿ ಕಾಯಿಪಲ್ಲೆ ಮತ್ತು ಹಸೆ ಮಾಲಿನ ವ್ಯಾಪಾರವು ರಾತ್ರಿವೇಳೆ ಮಾರಾಟವಾಗುವುದರಿಂದ ರೈತರಿಗೆ ತೊಂದರೆಯುಂಟಾಗುತ್ತಿದ್ದು, ರೈತರ ಕಾಯಿಪಲ್ಲೆ ಮಾಲುಗಳು ಹಂದಿ ಮತ್ತು ದನಕರುಗಳಿಂದ ನಷ್ಟವುಂಟಾಗುತ್ತಿದೆ. ಬೆಳಗಿನ ಜಾವ 6 ರಿಂದ 9ರವರೆಗೆ ರೈತರ ಕಾಯಿಪಲ್ಲೆ, ಹಸೆ ಮಾಲುಗಳನ್ನು ಬೆಳಗಿನ ಜಾವ 6ರಿಂದ ಹರಾಜು ಮಾಡುವುದರಿಂದ ಯಾವುದೇ ತೊಂದರೆಯಾಗುವುದಿಲ್ಲ. ಮೇ25ರಂದು ಗದಗ ಕೃಷಿ ಮಾರುಕಟ್ಟೆ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದರು.

ಶಂಕರಗೌಡ ಜಯನಗೌಡರ, ಮಹಾದೇವ ವೇರ್ಣೇಕರ, ಆದೇಶ ಹುಲಗೂರು, ಗೂಳಪ್ಪ ಗುಡದೂರ, ಗಿರೀಶ ಹೊಸಮನಿ, ಅಂದಪ್ಪ ಅಂಗಡಿ, ರಾಮಣ್ಣ ಕಮ್ಮಾರ, ಶಂಕರಗೌಡ ಪಾಟೀಲ, ಶಿವಮೂರ್ತಿ ದೊಡ್ಡವಾಡ, ರಾಮನಗೌಡ ಪಾಟೀಲ, ಪ್ರವೀಣ ಕರ್ಜೆ, ಪ್ರಕಾಶ ಹಡಗಲಿ, ರವಿ ವಗ್ಗಣ್ಣವರ, ಬಸವರಾಜ ಮರಾಠಿ, ಸಂತೋಷ ಮಠದ, ಮಲ್ಲಪ್ಪ ಮಠದ ಇದ್ದರು.



ಸರ್ವಾಂಗೀಣ ಅಭಿವೃದ್ಧಿಗೆ ರೈತರ ಶ್ರಮ



ನರಗುಂದ: ಭಾರತಕ್ಕೆ ಸ್ವಾತಂತ್ರ ಸಿಕ್ಕಾಗ ನಮ್ಮ ದೇಶ ಸಂಪೂರ್ಣ ಖಾಲಿಯಾದ ಬಾಡಿಗೆ ಮನೆಯಂತಿತ್ತು. ಇಲ್ಲಿರುವ ದೇಶಭಕ್ತ ಜನರು, ವಿದ್ವಾಂಸರು, ಜಾನಪದ ಸಾಹಿತಿಗಳು ನವ ಭಾರತ ನಿರ್ಮಾಣದ ಅಭಿವೃದ್ಧಿಗೆ ಶ್ರಮಿಸಿದರು. ಸೈನಿಕರಷ್ಟೇ ದೇಶದ ಸರ್ವಾಂಗೀಣ ಅಭಿವೃದ್ಧಿಗೆ ರೈತರು ಶ್ರಮಿಸಿದ್ದಾರೆ. ಕಲ್ಯಾಣದ ಶರಣರು ಅನೇಕ ಒಳ್ಳೆಯ ಸಂಗತಿಗಳನ್ನು ನಮಗೆ ತಿಳಿಸಿಕೊಟ್ಟಿದ್ದಾರೆ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಬಿಳಗಿ ಜಾನಪದ ಕವಿ ಸಿದ್ದಪ್ಪ ಬಿದರಿ ಹೇಳಿದರು.

ಪಟ್ಟಣದ ಶ್ರೀ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಆಡಿಟೋರಿಯಂನಲ್ಲಿ ಜರುಗಿದ 2025-26ನೇ ಸಾಲಿನ ಒಕ್ಕೂಟ, ಎನ್.ಎಸ್.ಎಸ್. ಎನ್.ಸಿ.ಸಿ, ರೋವರ್ ರೇಂಜರ್ಸ್ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ನಿವೃತ್ತ ಉಪನ್ಯಾಸಕ ಎಂ.ಎಸ್. ಯಾವಗಲ್ಲ ಮಾತನಾಡಿ, ಕೇವಲ ಅಕ್ಷರಸ್ಥರಷ್ಟೇ ಜ್ಞಾನಿಗಳಲ್ಲ. ಗ್ರಾಮೀಣ ಬದುಕಿನ ವಿಚಾರವುಳ್ಳ ಅನೇಕ ವಿಷಯಗಳ ಕುರಿತು ತಮ್ಮದೇ ಶೈಲಿಯಲ್ಲಿ ಕವಿತೆಗಳನ್ನು ರಚಿಸಿರುತ್ತಾರೆ. ಅಂಥವರನ್ನು ಗುರುತಿಸಿ ಗೌರವಿಸಬೇಕಾಗಿದೆ. ಇವುಗಳನ್ನು ಜನಪದ ಕವಿ ಸಿದ್ದಪ್ಪ ಬಿದರಿ ಅವರು ತಮ್ಮಲ್ಲಿರುವ ಅನುಭವ ಸಾಹಿತ್ಯದಿಂದ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಡಾ.ಆನಂದಕುಮಾರ ಲಾಲಸಂಗಿ ಹಾಗೂ ಸಿಡಿಸಿ ಸದಸ್ಯ ಸಿ ಎಸ್.ಸಾಲೂಟಗಿಮಠ ಮಾತನಾಡಿದರು. ಗಣರಾಜ್ಯೋತ್ಸವದ ಆರ್.ಡಿಸಿ ಪಥಸಂಚಲನಕ್ಕೆ ಆಯ್ಕೆಗೊಂಡ ವಿದ್ಯಾರ್ಥಿಗಳಾದ ಯಲ್ಲಮ್ಮ ಜಾಧವ, ಅಕ್ಷತಾ ಹುಚ್ಚಪ್ಪಯ್ಯನಮಠ, ಕಬಡ್ಡಿ ಸ್ಪರ್ಧೆಯಲ್ಲಿ ಧಾರವಾಡದ ಕೆ.ವಿ.ವಿ ಬ್ಲೂ ಆಗಿ ಆಯ್ಕೆಯಾದ ನಿರ್ಮಲಾ ಪರಮೇಶ್ವರ, ರಾಜೇಶ್ವರಿ ಅಂಕಲಿ, ಭವಾನಿ ಮಣಕವಾಡ, ಖೋ-ಖೋ ಸ್ಪರ್ಧೆಯಲ್ಲಿ ಸಾಧನೆಗೈದ ಸಂಜಯ ಜಂಗೀನ, ದಿವ್ಯಾನಂದ ಜಿ.ಆರ್., ಎನ್ನೆಸ್ಸೆಸ್‌ನಲ್ಲಿ ಅತ್ಯುತ್ತಮ ಸೇವೆಗೈದ ಎಂ.ಎಂ. ವಡೇಕಾರ ಮತ್ತು ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಸತ್ಕರಿಸಲಾಯಿತು. ಜಿ.ಟಿ.ಗುಡಿಸಾಗರ, ಶ್ರೀಶೈಲಪ್ಪ ಬ್ಯಾಹಟ್ಟಿ, ಪ್ರೊ. ಜಗದೀಶ ತಳವಾರ, ಪ್ರೊ. ಚಿತ್ತಯ್ಯ, ಶಂಕರ ಲಮಾಣಿ, ಪ್ರೊ. ಭೀಮನಗೌಡ ಕೊಣ್ಣೂರ, ಯಶೋದಾ ಅಂಗಡಿ, ಡಾ.ರಾಮು ಎಂ.ಎಸ್., ಡಾ.ಪವಿತ್ರಾ ಎಸ್., ಡಾ.ಸಿದ್ದಲಿಂಗಪ್ಪ, ಡಾ.ದುಂಡಪ್ಪ ದೊಡಮನಿ, ಪ್ರೊ. ಆರ್.ಎಚ್.ತಿಗಡಿ, ರಮೇಶ ಗಂಗೂರ, ಎಸ್.ವಿ.ಮನಗುಂಡಿ, ಪ್ರೊ. ಗಂಗಾಧರಯ್ಯ ಹಾಗೂ ಇತರರಿದ್ದರು.

ಕಾಳ ಸಂತೆಯಲ್ಲಿ ರಸಗೊಬ್ಬರ ಮಾರಾಟ ಸಲ್ಲ

ರೋಣ: ಕಾಳಸಂತೆಯಲ್ಲಿ ಇನ್ಮುಂದೆ ರಸಗೊಬ್ಬರ ಮಾರಾಟ ಮಾಡಿದರೆ ಕಠಿಣ ಕ್ರಮ ನಿಶ್ಚಿತವಾಗಿದ್ದು, ಮಾರಾಟಗಾರರು ಎಚ್ಚರಿಕೆಯಿಂದ ಇರಬೇಕು ಎಂದು ಕೃಷಿ ಉಪನಿರ್ದೇಶಕ ಬಿ.ಆರ್.ಪಾಲಾಕ್ಷಗೌಡ ಎಚ್ಚರಿಕೆ ನೀಡಿದರು.

ಅವರು ಶುಕ್ರವಾರ ತಾಪಂ ಸಭಾಭವನದಲ್ಲಿ ಜರುಗಿದ ಅಧಿಕಾರಿಗಳ ಮತ್ತು ರಸಗೊಬ್ಬರ ಮಾರಾಟಗಾರರ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ವಿಶ್ವದ ವಿವಿಧ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ರಸಗೊಬ್ಬರದ ಕೊರತೆ ಉಂಟಾಗಿದ್ದು, ರೈತರು ಮುಂಗಾರು ಹಂಗಾಮಿನಲ್ಲಿ ಗೊಬ್ಬರವನ್ನು ಮಿತವಾಗಿ ಬಳಕೆ ಮಾಡಬೇಕು. ಈ ಬಾರಿ ರೈತರು ರಸಗೊಬ್ಬರ ಪಡೆಯಬೇಕಾದರೆ ಎಫ್ ಐಡಿ ಕಡ್ಡಾಯವಾಗಿರಬೇಕು. ಇಲ್ಲದಿದ್ದರೆ ಗೊಬ್ಬರ ಸಿಗುವುದಿಲ್ಲ. ರೈತರು ಬಿತ್ತನೆ ಮಾಡಿದ ಕ್ಷೇತ್ರದ ಆಧಾರದಡಿಯಲ್ಲಿ ಕೆ.ಕಿಸಾನ್ ತಂತ್ರಜ್ಞಾನದ ಮೂಲಕ ರಸಗೊಬ್ಬರವನ್ನು ವಿತರಣೆ ಮಾಡಲಾಗುತ್ತದೆ. ಜೊತೆಗೆ ರಸಗೊಬ್ಬರ ಮಾರಾಟಗಾರರು ತಮ್ಮ ಓ ಫಾರಂಗಳ ಮೂಲಕ ನೋಂದಣಿ ಮಾಡಿಸಿ ನಿಗದಿ ಪಡಿಸಿದ ಬೆಲೆಯಲ್ಲಿ ಮಾರಾಟ ಮಾಡಬೇಕು ಮತ್ತು ಹೆಚ್ಚಿನ ಬೆಲೆಯಲ್ಲಿ ರಸಗೊಬ್ಬರವನ್ನು ಮಾರಾಟ ಮಾಡಿದರೆ ದಂಡ ವಿಧಿಸಲಾಗುವುದು ಹಾಗೂ ಅಂಗಡಿ ಪರವಾನಗಿ ರದ್ದು ಪಡಿಸಲಾಗುವುದು. ಗೊಬ್ಬರ ವಿತರಣೆ ಸಂದರ್ಭದಲ್ಲಿ ಗದ್ದಲ ಉಂಟಾಗದಂತೆ ನಿಗಾವಹಿಸಬೇಕು ಎಂದರು.

ಸಹಾಯಕ ನಿರ್ದೇಶಕ ಎಸ್. ಎಫ್.ತಹಶೀಲ್ದಾರ ಮಾತನಾಡಿ, ರೈತರು ಅಗತ್ಯಕ್ಕೆ ತಕ್ಕಂತೆ ರಸಗೊಬ್ಬರ ಪಡೆದುಕೊಂಡು ಇಲಾಖೆಯ ಜೊತೆಗೆ ಸಹಕರಿಸಬೇಕು. ರಸಗೊಬ್ಬರದ ಕೊರತೆ ಉಂಟಾಗದಂತೆ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಂಡಿದ್ದರೂ ಸಹ ಸ್ವಲ್ಪ ಮಟ್ಟಿನ ಆತಂಕದ ಛಾಯೇ ಇದೆ. ಹೀಗಾಗಿ ರೋಣ ಮತ್ತು ಗಜೇಂದ್ರಗಡ ತಾಲೂಕಿನ ರೈತರು ಈ ಬಾರಿ ರಸಗೊಬ್ಬರದ ಬಳಕೆಯನ್ನು ಸ್ವಲ್ಪ ಮಟ್ಟಿಗೆ ತಗ್ಗಿಸಬೇಕು ಎಂದರು.

ತಾಂತ್ರಿಕ ಅಧಿಕಾರಿ ಗೋಣೆಬಸಪ್ಪ, ಎ.ಎ.ಶಾಬಾದಿ, ಕೃಷಿ ಅಧಿಕಾರಿ ಕೃಷ್ಣಾ ಶಿರೂರ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು. ಕೃಷಿ ಪರಿಕರ ಮಾರಾಟಗಾರರ ಮತ್ತು ಕೃಷಿ ಪತ್ತಿನ ಸಹಕಾರಿ ಸಂಘದ ಕೆ.ಕಿಸಾನ್ ತಂತ್ರಜ್ಞಾನದ ಮೂಲಕ ಯೂರಿಯಾ ಗೊಬ್ಬರ ವಿತರಣೆ ಕುರಿತು ಆನ್‌ಲೈನ್ ಮೂಲಕ ತರಬೇತಿ ನೀಡಲಾಯಿತು.



ಅವಿರೋಧ ಆಯ್ಕೆ

ಲಕ್ಷ್ಮೇಶ್ವರ: ಇತ್ತೀಚೆಗೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕ ಲಕ್ಷ್ಮೇಶ್ವರ ಘಟಕದ ಪದಾಧಿಕಾರಿಗಳ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಚುನಾವಣಾ ಅಧಿಕಾರಿ ಎ.ಎಂ. ಮಠದ ಸಹಾಯಕ ಚುನಾವಣೆ ಅಧಿಕಾರಿ ಎಸ್.ಎ. ಬಣಕಾರ ಅವರು ಪ್ರಮಾಣ ಪತ್ರ ನೀಡಿದರು.




2026 ರಿಂದ 2031 ರ ಅವಧಿಗೆ ಅಧ್ಯಕ್ಷರಾಗಿ ಮಹಾದೇವಪ್ಪ ನಿಂಗನಗೌಡ ಭರಮಗೌಡರ, ಪ್ರಧಾನ ಕಾರ್ಯದರ್ಶಿಗಳಾಗಿ ಶ್ರೀಕಾಂತ ದೇವೇಂದ್ರಪ್ಪ ನಂದೆಣ್ಣವರ ಹಾಗೂ ಕೋಶಾಧ್ಯಕ್ಷರಾಗಿ ಗೀತಾ ನೀಲಪ್ಪ ಹಳ್ಯಾಳ ಅವಿರೋಧ ಆಯ್ಕೆಯಾಗಿದ್ದಾರೆ. ಸದಸ್ಯರಾಗಿ ಹುಸೇನಸಾಬ ಬಾ ಪಟ್ಟಣದ, ಮುತ್ತಣ್ಣ ನಿಂ ಹುಬ್ಬಳ್ಳಿ, ಶರಣಪ್ಪ ವಿ ಸೋಗಿ, ಸುನಂದ ಚ ಹಿರೇಮಠ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ಎ.ಎಂ. ಮಠದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪದಾಧಿಕಾರಿಗಳ ಆಯ್ಕೆ

ಗಜೇಂದ್ರಗಡ: ರಾಜ್ಯ ಪ್ರಾಥಮಿಕ ಶಾಲೆ ಶಿಕ್ಷಕರ ಸಂಘ ಗಜೇಂದ್ರಗಡ ತಾಲೂಕು ಘಟಕ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷ ಬಸಪ್ಪ ಭೀಮಪ್ಪ ಕುರಿ, ಪ್ರಧಾನ ಕಾರ್ಯದರ್ಶಿ ರಜಾಕ್ ಸಾಬ ಕರಿಮಸಾಬ ಹುನಗುಂದ ಇನ್ನಿತರ ಪದಾಧಿಕಾರಿಗಳು ಆಯ್ಕೆಯಾಗಿದ್ದಾರೆ ಎಂದು ಮುಖ್ಯ ಚುನಾವಣಾ ಅಧಿಕಾರಿ ಕೆ.ಬಿ.ಜಗರಿ ತಿಳಿಸಿದರು. ಬಸವರಾಜ ಮುಚಖಂಡಯ್ಯಾ ಹಿರೇಮಠ, ಭಾರತಿ ತಿಪ್ಪಣ್ಣ ಹೊಸಮನಿ ಉಪಾಧ್ಯಕ್ಷ, ಶ್ರೀನಿವಾಸ ರಾಮಕೃಷ್ಣಪ್ಪ ನೀಲೂರ ಖಜಾಂಚಿ, ರಜಿಯಾಬೇಗಂ ನದಾಫ ಸಹ ಕಾರ್ಯದರ್ಶಿ, ಮಹೇಶ ಸುದರ್ಶನ ಕುರಿಯವರ ಜಿಲ್ಲಾ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದರು.




ಕಾರ್ಯದರ್ಶಿಯಾಗಿ ಹಿರೇಮಠ ಆಯ್ಕೆ

ನರಗುಂದ/ಲಕ್ಷ್ಮೇಶ್ವರ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪ್ರಸ್ತುತ ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನಯ್ಯ ಹಿರೇಮಠ ಅವರನ್ನು ರಾಜ್ಯ ಸಂಘಟನಾ ಕಾರ್ಯದರ್ಶಿಯನ್ನಾಗಿ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ ಎಸ್ ಷಡಕ್ಷರಿ ಅವರು ನಾಮ ನಿರ್ದೇಶನ ಮಾಡಿದ್ದಾರೆ.



ಗದಗ ಜಿಲ್ಲೆಯ ಅಧ್ಯಕ್ಷ ಬಸವರಾಜ ಬಳ್ಳಾರಿ ಹಾಗೂ ಜಿಲ್ಲೆಯ ಪದಾಧಿಕಾರಿಗಳು ಮತ್ತು ತಾಲೂಕ ನೌಕರರ ಸಂಘದ ಪದಾಧಿಕಾರಿಗಳು ನೂತನ ಸಂಘಟನಾ ಕಾರ್ಯದರ್ಶಿ ಆಯ್ಕೆಗೆ ಹರ್ಷವ್ಯಕ್ತಪಡಿಸಿದ್ದಾರೆ.

ಗಮಕ ವಾಚನ ವ್ಯಾಖ್ಯಾನ ಇಂದು

ಗದಗ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಗಮಕ ಕಲಾ ಪರಿಷತ್ತು ಬೆಂಗಳೂರು ಜಿಲ್ಲಾ ಘಟಕ, ಕುಮಾರವ್ಯಾಸ ಪ್ರತಿಷ್ಠಾನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮೇ 24 ರಂದು ಸಂಜೆ 6ಕ್ಕೆ ನಗರದ ತೋಂಟದ ಸಿದ್ಧಲಿಂಗ ಶ್ರೀಗಳ ಕನ್ನಡ ಭವನ, ಕಸಾಪ ಕಾರ್ಯಾಲಯದಲ್ಲಿ ಕುಮಾರವ್ಯಾಸ ಭಾರತದ ಗಮಕ ವಾಚನ ಮತ್ತು ವ್ಯಾಖ್ಯಾನ ಕಾರ್ಯಕ್ರಮ ಆಯೋಜಿಸಲಾಗಿದೆ.

ವಾಚನವನ್ನು ಸಂಧ್ಯಾ ರಮೇಶ, ಬೆಂಗಳೂರು ಹಾಗೂ ವ್ಯಾಖ್ಯಾನವನ್ನು ಮೀನಾಕ್ಷಿ ಶ್ರೀಪಾದ ನಡೆಸಿಕೊಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ವಹಿಸುವರು. ಗುರುಮೂರ್ತಿ ದೇಶಪಾಂಡೆ, ಡಾ.ದತ್ತಪ್ರಸನ್ನ ಪಾಟೀಲ ಉಪಸ್ಥಿತರಿರುವರು ಎಂದು ಕಾರ್ಯದರ್ಶಿ ಕಿಶೋರಬಾಬು ನಾಗರಕಟ್ಟಿ, ದತ್ತಪ್ರಸನ್ನ ಪಾಟೀಲ, ಡಿ.ಎಸ್.ಬಾಪುರಿ, ಪ್ರತಿಷ್ಠಾನದ ರವೀಂದ ಜೋಶಿ, ಆರ್.ಎಸ್.ಕುಲಕರ್ಣಿ ತಿಳಿಸಿದ್ದಾರೆ.

ಉಪನ್ಯಾಸ ಇಂದು

ಗದಗ: ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಮೇ 24 ರಂದು ಬೆಳಗ್ಗೆ 10ಕ್ಕೆ ನಡೆಯಲಿರುವ ಬಸವದಳದ 1699 ನೇ ಶರಣ ಸಂಗಮದಲ್ಲಿ ಬಸವಾದಿ ಶರಣರ ವಚನ ಸಾಹಿತ್ಯ ರಕ್ಷಣೆ - ಬಸವ ಭಕ್ತರ ಹೊಣೆ ಕುರಿತು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಧ್ಯಕ್ಷತೆವಿ.ಕೆ.ಕರೇಗೌಡ್ರ ವಹಿಸುವರು. ಬಸವರಾಜ ವೆಂಕಟಾಪೂರ, ಗಿರಿಜಕ್ಕ ಧರ್ಮರಡ್ಡಿ ಉಪನ್ಯಾಸ ನೀಡುವರು ಎಂದು ಪ್ರಕಾಶ ಅಸುಂಡಿ ತಿಳಿಸಿದ್ದಾರೆ.

ಗಾಂಜಾ ಪೆಡ್ಲರ್ ಜೈಲಿಗೆ

ಗದಗ: ಜಿಲ್ಲೆಯಲ್ಲಿ ನಿರಂತರವಾಗಿ ಅಕ್ರಮ ಗಾಂಜಾ ಸಾಗಾಟ ಹಾಗೂ ಮಾರಾಟ ಮಾಡುತ್ತಿದ್ದ ಗಾಂಜಾ ಪೆಡ್ಲರ್ ವಿರುದ್ಧ ಪಿಟ್ ಎನ್‌ಡಿಪಿಎಸ್ ಆಕ್ಟ್ ಅಡಿ ಪ್ರಕರಣ ದಾಖಲಾಗಿದ್ದು, ಜಿಲ್ಲೆಯ ಇತಿಹಾಸದಲ್ಲಿ ಇದೇ ಮೊದಲ ಪ್ರಕರಣವಾಗಿದ್ದು, ಆರೋಪಿಯನ್ನು ಬೆಳಗಾವಿಯ ಹಿಂಡಲಗಾ ಜೈಲಿಗೆ ರವಾನಿಸಲಾಗಿದೆ. ಬೆಟಗೇರಿಯ ಗಣೇಶ ನಗರದ ಮಾರುತಿ(ಮಾರ್ಯಾ) ಶೇಖಪ್ಪ ಕಾಳೆ(ಹರಣಶಿಕಾರಿ) ಆರೋಪಿಯಾಗಿದ್ದು, ಪಿಟ್ ಎನ್‌ಡಿಪಿಎಸ್ ಆಕ್ಟ್(ಪ್ರಿವೆನ್ಷನ್ ಆಫ್ ಇಲ್ಲಿಸಿಟ್ ಟ್ರಾಫಿಕ್ ಇನ್ ನಾರ್ಕೊಟಿಕ್ ಡ್ರಗ್ ಆಂಡ್ ಸೈಕೋಟ್ರಾಫಿಕ್ ಸಬ್‌ಸ್ಟೆನ್ಸಿಸ್ ಆಕ್ಟ್) ಅಡಿ ಪ್ರಕರಣ ದಾಖಲಿಸಿದೆ. ಬೆಟಗೇರಿ ಪೊಲೀಸ್ ಠಾಣೆ ಹಾಗೂ ಗದಗ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಾಂಜಾದಂತಹ ಅಪಾಯಕಾರಿ ಮಾದಕ ವಸ್ತುಗಳನ್ನು ಅಕ್ರಮವಾಗಿ ಮಾರಾಟ ಮಾಡಿದ್ದನು. ಇವನ ಮೇಲೆ ರೌಡಿಶೀಟ್ ಪ್ರಕರಣ ದಾಖಲಾಗಿ, ಗಡಿಪಾರು ಮಾಡಿದರೂ ಅಪರಾಧ ಚಟುವಟಿಕೆಗಳನ್ನು ಮುಂದುವರಿಸಿದ್ದನು. ಹಲವಾರು ಪ್ರಕರಣಗಳು ತನಿಖಾ ಹಂತದಲ್ಲಿದ್ದು, ಸಿಪಿಐ ಧೀರಜ್ ಶಿಂಧೆ, ಪಿಎಸ್ಐ ಲಕ್ಷ್ಮಣ ಆರಿ ಹಾಗೂ ಸಿಬ್ಬಂದಿ ಆರೋಪಿ ವಿರುದ್ಧ ಪಿಟ್ ಎನ್‌ಡಿಪಿಎಸ್ ಆಕ್ಟ್‌ಗೆ ಸಂಬಂಧಿಸಿದಂತೆ ಎಲ್ಲ ದಾಖಲಾತಿಗಳನ್ನು ಸಂಗ್ರಹಿಸಿ, ಸರಕಾರಕ್ಕೆ ಸಮರ್ಪಕವಾಗಿ ಪ್ರಸ್ತಾವಣೆ ಸಲ್ಲಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಆರೋಪಿ ಮಾರುತಿ(ಮಾರ್ಯಾ) ಶೇಖಪ್ಪ ಕಾಳೆ(ಹರಣಶಿಕಾರಿ) ಆರೋಪಿಯಾಗಿದ್ದು, ಪಿಟ್ ಎನ್‌ಡಿಪಿಎಸ್ ಆಕ್ಟ್(ಪ್ರಿವೆನ್ಷನ್ ಆಫ್ ಇಲ್ಲಿಸಿಟ್ ಟ್ರಾಫಿಕ್ ಇನ್ ನಾರ್ಕೊಟಿಕ್ ಡ್ರಗ್ಸ್ ಆ್ಯಂಡ್ ಸೈಕೋಟ್ರಾಫಿಕ್ ಸಬ್‌ಸ್ಟೆನ್ಸಿಸ್ ಆಕ್ಟ್) ಅಡಿ ಪ್ರಕರಣ ದಾಖಲಿಸಿ ಹಿಂಡಲಗಾ ಜೈಲಿಗೆ ರವಾನಿಸಲಾಗಿದೆ.



ಹಬ್ಬದಿಂದ ಸಂತಸ ಮೂಡಲಿ

ನರಗುಂದ: ಮೇ 28 ಬಕ್ರೀದ್ ಹಬ್ಬ ಇದ್ದು, ಸಾಮರಸ್ಯ ಕದಡದ ರೀತಿಯಲ್ಲಿ ಸರ್ವಧರ್ಮದ ಬಾಂಧವರು ಸೇರಿಕೊಂಡು ಶಾಂತಿಯಿಂದ ಹಬ್ಬವನ್ನು ಆಚರಿಸಬೇಕು ಎಂದು ಡಿ.ಎಸ್.ಪಿ ಪ್ರಭುಗೌಡ ಕಿರೇದಳ್ಳಿ ಅವರು ಹೇಳಿದರು.

ನರಗುಂದ ಪೊಲೀಸ್ ಠಾಣೆ ಆವರಣದಲ್ಲಿ ಬಕ್ರೀದ್ ಹಬ್ಬದ ನಿಮಿತ್ತ ಹಮ್ಮಿಕೊಂಡ ಶಾಂತಿ ಸಭೆಯಲ್ಲಿ ಮಾತನಾಡಿದರು. ಹಬ್ಬಗಳೆಂದರೆ ಮನೆಮನೆಗಳಲ್ಲಿ ಮತ್ತು ಸಮಾಜದಲ್ಲಿ ಸಂತಸವನ್ನುಂಟು ಮಾಡುತ್ತಿರಬೇಕು. ಸಂತೋಷದಿಂದ ಆಚರಿಸಬೇಕು. ಹಬ್ಬದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗೆ ಅವಕಾಶವಿಲ್ಲ, ಅಂತವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಿಪಿಐ ಸತ್ಯಪ್ಪ ಮಾಳಗೊಂಡ, ಮಂಜುನಾಥ ಮೆಣಸಗಿ, ಶಿವಾನಂದ ಮುತ್ತವಾಡ, ಕೆ.ಬಿ. ಖಲೀಪ, ಮಹಿಮ್ ಚಂದೂನವರ, ಬಿ.ಎಚ್. ಪಠಾ, ಬಾಬುಸಾಬ ಜಮಾದಾರ, ಅಮ್ಜದ್ ಖಾಜಿ, ಜೆ ಎ ಖಾಜಿ, ಇಮಾಮಸಾಬ ನಧಾಪ, ಕಾಶಿಮಸಾಬ ಜಮಾದಾರ, ಬಸಪ್ಪ ಮಳಗಿ, ಬುಡ್ನೇಸಾಬ ಮಟಗೇರ, ಹಜರೇಸಾಬ ಭಾಂಗಿ, ಬಾಬು ಯಲಿಗಾರ, ನಬಿಸಾಬ ಕಿಲ್ಲೇದಾರ, ಮೊಹಮದ್ ನಾಯ್ಕರ ಅನೇಕರಿದ್ದರು.

ಭವಿಷ್ಯದ ಸಂಘರ್ಷಗಳಿಗೆ ಸಜ್ಜು: ಸಿಡಿಎಸ್

ಯುದ್ಧದ ತಂತ್ರಗಳಲ್ಲಿ ವೇಗದ ಬದಲಾವಣೆ

ತಂತ್ರಜ್ಞಾನವೇ ಭವಿಷ್ಯದ ಯುದ್ಧಗಳ ಗೆಲುವಿನ ಗುಟ್ಟು: ಜ. ಚೌಹಾಣ್

ಶಿರಡಿ: ಭವಿಷ್ಯದ ಯುದ್ಧಗಳು ಭೂಮಿ, ಸಮುದ್ರ, ವಾಯು, ಸೈಬರ್ ಹಾಗೂ ಕಾಗ್ನಿಟಿವ್ ಕ್ಷೇತ್ರಗಳನ್ನು ಒಳಗೊಂಡ ಬಹುಆಯಾಮದ ಸ್ವರೂಪ ಪಡೆದುಕೊಳ್ಳಲಿದ್ದು, ತಂತ್ರಜ್ಞಾನ, ವೇಗ ಮತ್ತು ನವೀನತೆಯೇ ಯಶಸ್ವಿ ಕಾರ್ಯಾಚರಣೆಗಳ ಪ್ರಮುಖ ಅಂಶಗಳಾಗಲಿವೆ ಎಂದು ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ತಿಳಿಸಿದ್ದಾರೆ.



ಮಹಾರಾಷ್ಟ್ರದ ಅಹಿಲ್ಯಾನಗರ ಜಿಲ್ಲೆಯಲ್ಲಿರುವ ರಕ್ಷಣಾ ಉತ್ಪಾದನಾ ಘಟಕದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯುದ್ಧ ಮತ್ತು ಯುದ್ಧ ತಂತ್ರಗಳು ವೇಗವಾಗಿ ಬದಲಾಗುತ್ತಿವೆ ಎಂದು ಹೇಳಿದರು. ಆಧುನಿಕ ಯುದ್ಧಗಳು ಕೇವಲ ಮಾನವಬಲ ಅಥವಾ ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳ ಮೇಲೆ ಅವಲಂಬಿತವಾಗಿರುವುದಿಲ್ಲ. ಕೃತಕ ಬುದ್ಧಿಮತ್ತೆ, ಡ್ರೋನ್‌ಗಳು, ರೋಬೋಟಿಕ್ಸ್, ಸೈಬರ್ ವ್ಯವಸ್ಥೆಗಳು, ಸ್ವಾಯತ್ತ ವೇದಿಕೆಗಳು, ಬಾಹ್ಯಾಕಾಶ ತಂತ್ರಜ್ಞಾನ, ನಿಖರ ದಾಳಿ ಶಸ್ತ್ರಾಸ್ತ್ರಗಳು ಹಾಗೂ ಮಾಹಿತಿ ಪ್ರಾಬಲ್ಯ ಭವಿಷ್ಯದ ಯುದ್ಧಗಳಿಗೆ ನಿರ್ಣಾಯಕ ರೂಪ ನೀಡುತ್ತಿವೆ ಎಂದು ಅವರು ಅಭಿಪ್ರಾಯಪಟ್ಟರು. 'ಮುಂದಿನ ದಿನಗಳಲ್ಲಿ ತಂತ್ರಜ್ಞಾನ, ವೇಗ ಮತ್ತು ನವೀನತೆಯೇ ಯಶಸ್ವಿ ಕಾರ್ಯಾಚರಣೆಗಳ ನಿರ್ಧಾರಕ ಅಂಶಗಳಾಗಲಿವೆ. ಭವಿಷ್ಯದ ಯುದ್ಧಭೂಮಿಗಳು ಕೇವಲ ಭೌಗೋಳಿಕ ಪ್ರದೇಶಗಳಿಗೆ ಸೀಮಿತವಾಗಿರುವುದಿಲ್ಲ, ಮಾಹಿತಿ ಜಾಲಗಳು, ಡಿಜಿಟಲ್ ಪರಿಸರ ಹಾಗೂ ಸೈಬರ್ ಮೂಲಸೌಕರ್ಯಗಳೂ ಯುದ್ಧದ ಭಾಗವಾಗಲಿವೆ' ಎಂದು ಅವರು ಹೇಳಿದರು.

ಯೋಧರ ಧೈರ್ಯ ಮಾತ್ರ ರಾಷ್ಟ್ರದ ಭದ್ರತೆಯನ್ನು ಖಚಿತಪಡಿಸುವುದಿಲ್ಲ, ತಾಂತ್ರಿಕ ಪರಿಸರ, ಕೈಗಾರಿಕಾ ಸಾಮರ್ಥ್ಯ, ಉತ್ಪಾದನಾ ಶಕ್ತಿ ಮತ್ತು ನವೋದ್ಯಮ ಸಾಮರ್ಥ್ಯವೂ ಸಮಾನವಾಗಿ ಅಗತ್ಯವೆಂದು ಅವರು ತಿಳಿಸಿದರು. ವೇಗವಾಗಿ ಉತ್ಪಾದನೆ ಹೆಚ್ಚಿಸುವ ಹಾಗೂ ತ್ವರಿತವಾಗಿ ಬದಲಾವಣೆಗೆ ಹೊಂದಿಕೊಳ್ಳುವ ದೇಶಗಳಿಗೆ ತಂತ್ರಾತ್ಮಕ ಮೇಲುಗೈ ದೊರೆಯಲಿದೆ ಎಂದು ಹೇಳಿದರು.

ರಕ್ಷಣಾ ಕ್ಷೇತ್ರದಲ್ಲಿ ಆತ್ಮನಿರ್ಭರತೆ ಕೇವಲ ಆರ್ಥಿಕ ಗುರಿಯಲ್ಲ, ಅದು ತಂತ್ರಾತ್ಮಕ ಅವಶ್ಯಕತೆಯೂ ಆಗಿದೆ ಎಂದು ಚೌಹಾಣ್ ಹೇಳಿದರು. ದೇಶೀಯ ರಕ್ಷಣಾ ಉತ್ಪಾದನೆ ಸುಮಾರು 1.27 ಲಕ್ಷ ಕೋಟಿ ರೂ.ಗೆ ತಲುಪಿದ್ದು, ರಕ್ಷಣಾ ರಫ್ತು 38 ಸಾವಿರ ಕೋಟಿ ರೂ.ಗಳ ದಾಖಲೆ ಮಟ್ಟ ತಲುಪಿದೆ. 100ಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಸಾಮಗ್ರಿಗಳನ್ನು ರಫ್ತು ಮಾಡಲಾಗುತ್ತಿದೆ ಎಂದರು.

ನೈಬ್ ಸಮೂಹದ ಈ ರಕ್ಷಣಾ ಉತ್ಪಾದನಾ ಘಟಕದಲ್ಲಿ ಆರ್‌ಟಿಲರಿ ಬಾಂಬ್‌ಶೆಲ್‌ಗಳ ತಯಾರಿಕೆ ನಡೆಯಲಿದೆ. 'ಇದುವರೆಗೆ ಶಿರಡಿ ಭಕ್ತಿ ಮತ್ತು ಆಧ್ಯಾತ್ಮಕ್ಕೆ ಪ್ರಸಿದ್ಧವಾಗಿತ್ತು. ಇದೀಗ ರಕ್ಷಣಾ ಉತ್ಪಾದನೆ, ಕೈಗಾರಿಕಾ ಅಭಿವೃದ್ಧಿ, ತಾಂತ್ರಿಕ ನವೀನತೆ ಹಾಗೂ ರಾಷ್ಟ್ರೀಯ ಭದ್ರತೆಯ ಕೇಂದ್ರವಾಗಿಯೂ ಗುರುತಿಸಿಕೊಳ್ಳಲಿದೆ' ಎಂದು ಅವರು ಹೇಳಿದರು.

ರಕ್ಷಣಾ ಕ್ಷೇತ್ರದಲ್ಲಿ ಭಾರತದ ಸಾಧನೆ

- ದೇಶೀಯ ರಕ್ಷಣಾ ಉತ್ಪಾದನೆ 1.27 ಲಕ್ಷ ಕೋಟಿ ರೂ.ಗೆ ಏರಿಕೆ
- ರಕ್ಷಣಾ ರಫ್ತು 38 ಸಾವಿರ ಕೋಟಿ ರೂ. ದಾಖಲೆ ಮಟ್ಟಕ್ಕೆ
- 100ಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಸಾಮಗ್ರಿಗಳ ರಫ್ತು
- ನೂತನ ಘಟಕದಲ್ಲಿ ವರ್ಷಕ್ಕೆ 5 ಲಕ್ಷ 155 ಮಿ.ಮೀ. ಆರ್‌ಟಿಲರಿ ಶೆಲ್‌ಗಳ ಉತ್ಪಾದನೆ
- ಆತ್ಮನಿರ್ಭರ ಭಾರತ ಗುರಿಗೆ ಮತ್ತೊಂದು ಬಲಿಷ್ಠ ಹೆಜ್ಜೆ

ಖಾಲಿ ಮಾಡಲು ಜಿಮ್ಖಾನಾಗೆ ಆದೇಶ

ಹೊಸದಿಲ್ಲಿ: ಕೇಂದ್ರ ಸರ್ಕಾರವು ಲುಟ್ಯೆನ್ಸ್ ದಿಲ್ಲಿಯಲ್ಲಿರುವ ದಿಲ್ಲಿ ಜಿಮ್ಖಾನಾ ಕ್ಲಬ್‌ಗೆ ಜೂ.5ರೊಳಗೆ ತನ್ನ ಆವರಣವನ್ನು ಖಾಲಿ ಮಾಡುವಂತೆ ಸೂಚಿಸಿದೆ. 27.3 ಎಕರೆ ವಿಸ್ತೀರ್ಣದ ಈ ಭೂಮಿಯು ರಕ್ಷಣಾ ಮೂಲಸೌಕರ್ಯಗಳನ್ನು ಬಲಪಡಿಸಲು ಮತ್ತು ಸುರಕ್ಷತೆಗಾಗಿ ಅಗತ್ಯವಿದೆ ಎಂದು ತಿಳಿಸಲಾಗಿದೆ. ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯದ ಭೂಮಿ ಮತ್ತು ಅಭಿವೃದ್ಧಿ ಕಚೇರಿ (ಎಲ್ ಆ್ಯಂಡ್ ಡಿಒ) ಈ ಆದೇಶ ಹೊರಡಿಸಿದ್ದು, ಪ್ರಧಾನ ಮಂತ್ರಿಗಳ ನಿವಾಸದ ಸಮೀಪವಿರುವ ಈ ಪ್ರದೇಶವು ಅತ್ಯಂತ ಸೂಕ್ಷ್ಮ ಹಾಗೂ ಆಯಕಟ್ಟಿನ ವಲಯದಲ್ಲಿದೆ ಎಂದು ಹೇಳಿದೆ. ಸಾರ್ವಜನಿಕ ಭದ್ರತೆ ಮತ್ತು ರಕ್ಷಣಾ ಉದ್ದೇಶಗಳಿಗಾಗಿ ಈ ಜಾಗದ ತುರ್ತು ಅಗತ್ಯವಿದೆ ಎಂದು ಸರ್ಕಾರ ತಿಳಿಸಿದೆ. ಲೀಸ್ ಒಪ್ಪಂದದ ನಿಯಮಗಳ ಪ್ರಕಾರ, ರಾಷ್ಟ್ರಪತಿಯವರ ಪರವಾಗಿ ಎಲ್ ಆ್ಯಂಡ್ ಡಿಒ ಈ ಗುತ್ತಿಗೆಯನ್ನು ರದ್ದುಗೊಳಿಸಿದ್ದು, ಜೂ.5 ರಂದು ಭೂಮಿಯನ್ನು ತನ್ನ ವಶಕ್ಕೆ ಪಡೆಯಲಿದೆ. ನಿಗದಿತ ದಿನಾಂಕದೊಳಗೆ ಶಾಂತಿಯುತವಾಗಿ ಜಾಗವನ್ನು ಹಸ್ತಾಂತರಿಸದಿದ್ದರೆ, ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕ್ಲಬ್‌ಗೆ ಎಚ್ಚರಿಕೆ ನೀಡಲಾಗಿದೆ. ಬ್ರಿಟಿಷರ ಕಾಲದಲ್ಲಿ(1913) ಇಂಪೀರಿಯಲ್ ದಿಲ್ಲಿ ಜಿಮ್ಖಾನಾ ಕ್ಲಬ್ ಆಗಿ ಪ್ರಾರಂಭವಾದ ಇದು, ಸ್ವಾತಂತ್ರ್ಯದ ನಂತರ ದಿಲ್ಲಿ ಜಿಮ್ಖಾನಾ ಕ್ಲಬ್ ಎಂದು ಮರುನಾಮಕರಣಗೊಂಡಿತು.

ಭಾರತದ ಗಡಿಗೆ ಅಭೇದ್ಯ ಕವಚ

ಭಾರತದ ಗಡಿಗಳನ್ನು ಸುರಕ್ಷಿತಗೊಳಿಸಲು ಮತ್ತು ನುಸುಳುವಿಕೆಯನ್ನು ಸಂಪೂರ್ಣವಾಗಿ ತಡೆಯಲು ಕೇಂದ್ರ ಸರ್ಕಾರವು ತಂತ್ರಜ್ಞಾನ ಆಧಾರಿತ ಬೃಹತ್ ಯೋಜನೆಯೊಂದನ್ನು ಸಿದ್ಧಪಡಿಸುತ್ತಿದೆ. ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಗಡಿಗಳಲ್ಲಿ ಆಧುನಿಕ ರಡಾರ್‌ಗಳು, ಡ್ರೋನ್‌ಗಳು ಮತ್ತು ಸ್ಮಾರ್ಟ್ ಕ್ಯಾಮೆರಾಗಳನ್ನು ಒಳಗೊಂಡ ಅಭೇದ್ಯ ಭದ್ರತಾ ವ್ಯವಸ್ಥೆಯನ್ನು ನಿರ್ಮಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಆ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಸ್ಮಾರ್ಟ್ ಬೇಲಿಯ ಅಗತ್ಯವೇಕೆ?

ಭಾರತವು ಪಾಕಿಸ್ತಾನ ಮತ್ತು ಬಾಂಗ್ಲಾದೇಶದೊಂದಿಗೆ ಹಂಚಿಕೊಂಡಿರುವ ಗಡಿ ರೇಖೆಯುದ್ದಕ್ಕೂ ಸಾಂಪ್ರದಾಯಿಕ ಬೇಲಿಗಳನ್ನು ನಿರ್ಮಿಸುವುದು ಅತ್ಯಂತ ಸವಾಲಿನ ಕೆಲಸವಾಗಿದೆ. ನದಿಗಳು, ಜೌಗು ಪ್ರದೇಶಗಳು, ದಟ್ಟವಾದ ಕಾಡುಗಳು ಮತ್ತು ಬದಲಾಗುತ್ತಿರುವ ಭೌಗೋಳಿಕ ಭೂಪ್ರದೇಶಗಳಿಂದಾಗಿ ಗಡಿಯ ಹಲವು ಭಾಗಗಳು ಮುಕ್ತವಾಗಿ ಉಳಿದುಬಿಡುತ್ತವೆ. ಉದಾಹರಣೆಗೆ, ಅಸ್ಸಾಂನ ಧುಬ್ರಿ ವಲಯದಲ್ಲಿ ಬ್ರಹ್ಮಪುತ್ರ ನದಿಯ ಉಪನದಿಗಳು ಮತ್ತು ಚಾರ್ ಭೂಮಿಗಳು ಇರುವುದರಿಂದ ಮಳೆಗಾಲದಲ್ಲಿ ಸಾಮಾನ್ಯ ಬೇಲಿಗಳು ಕೊಚ್ಚಿಹೋಗುತ್ತವೆ ಅಥವಾ ನಿಷ್ಪ್ರಯೋಜಕವಾಗುತ್ತವೆ. ಇಂತಹ ಪ್ರದೇಶಗಳಲ್ಲಿ ತಂತ್ರಜ್ಞಾನ ಆಧಾರಿತ ಸ್ಮಾರ್ಟ್ ಬೇಲಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಈ ಹಿಂದೆ ಧುಬ್ರಿ ವಲಯದಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾದ ಬೋಲ್ಡ್-ಕ್ವಿಟ್ ಯೋಜನೆಯು ನದಿ ತೀರದ ಗಡಿಗಳನ್ನು ತಂತ್ರಜ್ಞಾನದ ಮೂಲಕ ಯಶಸ್ವಿಯಾಗಿ ಕಾವಲು ಕಾಯಲು ಸಹಾಯ ಮಾಡಿದೆ. ಇದೇ ಮಾದರಿಯನ್ನು ಈಗ ಇತರ ಸೂಕ್ಷ್ಮ ಗಡಿ ಭಾಗಗಳಿಗೂ ವಿಸ್ತರಿಸಲಾಗುತ್ತಿದೆ.



ಏನಿದು ಸ್ಮಾರ್ಟ್ ಬಾರ್ಡರ್ ಯೋಜನೆ ?

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಇತ್ತೀಚಿನ ಪ್ರಕಟಣೆಯ ಪ್ರಕಾರ, ಭಾರತ ಸರ್ಕಾರವು ಮುಂದಿನ ವರ್ಷ ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಗಡಿಗಳಲ್ಲಿ ಸ್ಮಾರ್ಟ್ ಬಾರ್ಡರ್ ಯೋಜನೆಯನ್ನು ಪ್ರಾರಂಭಿಸಲಿದೆ. ಈ ಯೋಜನೆಯು ಪ್ರಸ್ತುತ ಇರುವ ಸಮಗ್ರ ಸಂಯೋಜಿತ ಗಡಿ ನಿರ್ವಹಣಾ ವ್ಯವಸ್ಥೆಯನ್ನು (ಸಿಐಬಿಎಂಎಸ್) ಮತ್ತಷ್ಟು ಬಲಪಡಿಸಲಿದೆ. ಇದು ಕೇವಲ ಭೌತಿಕ ಬೇಲಿಗಳಿಗೆ ಸೀಮಿತವಾಗಿರದೆ, ತಂತ್ರಜ್ಞಾನ ಮತ್ತು ಮಾನವ ಸಂಪನ್ಮೂಲವನ್ನು ಸಂಯೋಜಿಸುವ ಒಂದು ಅತ್ಯಾಧುನಿಕ ಗಡಿ ನಿರ್ವಹಣಾ ವ್ಯವಸ್ಥೆಯಾಗಿದೆ. ಈ ಯೋಜನೆಯಲ್ಲಿ ಗಡಿಯಲ್ಲಿ ನಿರಂತರ ನಿಗಾ ವಹಿಸಲು ಥರ್ಮಲ್ ಇಮೇಜರ್‌ಗಳು, ಇನ್‌ಫ್ರಾರೆಡ್ ಮತ್ತು ಲೇಸರ್ ಆಧಾರಿತ ಅಲಾರಮ್‌ಗಳು, ನದಿ ಪ್ರದೇಶಗಳಿಗಾಗಿ ಸೋನಾರ್ ವ್ಯವಸ್ಥೆಗಳು, ಫೈಬರ್-ಆಪ್ಟಿಕ್ ಸೆನ್ಸರ್‌ಗಳು ಮತ್ತು ಹೆಚ್ಚಿನ ರೆಸಲ್ಯೂಶನ್ ಹೊಂದಿರುವ ಕ್ಯಾಮೆರಾಗಳನ್ನು ಬಳಸಲಾಗುತ್ತದೆ. ಇವೆಲ್ಲವೂ ರಿಯಲ್-ಟೈಮ್(ನೈಜ-ಸಮಯದ) ಡೇಟಾವನ್ನು ನಿಯಂತ್ರಣ ಕೊಠಡಿಗಳಿಗೆ ರವಾನಿಸುತ್ತವೆ, ಇದರಿಂದಾಗಿ ಯಾವುದೇ ತುರ್ತು ಸಂದರ್ಭ ಎದುರಾದರೂ ಬಿಎಸ್‌ಎಫ್ ಪಡೆಗಳು ತಕ್ಷಣವೇ ಕಾರ್ಯಪ್ರವೃತ್ತರಾಗಲು ಸಾಧ್ಯವಾಗುತ್ತದೆ.

ಯೋಜನೆಯ ಸಾಧಕ-ಬಾಧಕಗಳು ಮತ್ತು ಸವಾಲುಗಳು

ರಕ್ಷಣಾ ತಜ್ಞರ ಪ್ರಕಾರ, ಈ ಯೋಜನೆಯು ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಒಂದು ದೊಡ್ಡ ಶಕ್ತಿಯಾಗಿ ಮೂಡಿಬರಲಿದೆ. ಹಗಲು-ರಾತ್ರಿ ಎನ್ನದೆ ಕಠಿಣ ಪರಿಸ್ಥಿತಿಗಳಲ್ಲಿ ಕಾವಲು ಕಾಯುವ ಸೈನಿಕರ ಮೇಲಿನ ಒತ್ತಡವನ್ನು ತಂತ್ರಜ್ಞಾನವು ಕಡಿಮೆ ಮಾಡುತ್ತದೆ. ಆದರೆ, ಮನೋಹರ್ ಪರಿಕ್ಕರ್ ರಕ್ಷಣಾ ಅಧ್ಯಯನ ಮತ್ತು ವಿಶ್ಲೇಷಣಾ ಸಂಸ್ಥೆಯಂತಹ(ಎಂಪಿ-ಐಡಿಎಸ್‌ಎ) ಸ್ವಾಯತ್ತ ಸಂಸ್ಥೆಗಳು ಕೆಲವು ಎಚ್ಚರಿಕೆಗಳನ್ನು ನೀಡಿವೆ:

1. **ಹವಾಮಾನದ ಸವಾಲು:** ವಿಪರೀತ ಮಳೆ, ದಟ್ಟವಾದ ಮಂಜು ಮತ್ತು ತೀವ್ರ ಹವಾಮಾನ ವೈಪರೀತ್ಯದ ಸಮಯದಲ್ಲಿ ತಾಂತ್ರಿಕ ಉಪಕರಣಗಳು ಮತ್ತು ಸೆನ್ಸರ್‌ಗಳು ಸರಿಯಾಗಿ ಕೆಲಸ ಮಾಡದಿರುವ ಸಾಧ್ಯತೆ ಇರುತ್ತದೆ.
2. **ಸುಳ್ಳು ಎಚ್ಚರಿಕೆಗಳು:** ಅಮೆರಿಕದಂತಹ ಮುಂದುವರಿದ ದೇಶಗಳು ಇಂತಹ ಯೋಜನೆಗಳನ್ನು ಜಾರಿಗೊಳಿಸಿದಾಗ ಫಾಲ್ಸ್ ಅಲಾರಂ(ಸುಳ್ಳು ಎಚ್ಚರಿಕೆಗಳು) ಸಮಸ್ಯೆಗಳನ್ನು ಎದುರಿಸಿದ್ದವು. ಕಾಡು ಪ್ರಾಣಿಗಳ ಚಲನವಲನದಿಂದಲೂ ಸೆನ್ಸರ್‌ಗಳು ಸದ್ದು ಮಾಡಬಹುದು.
3. **ರಾಜತಾಂತ್ರಿಕ ಸಂಘರ್ಷ:** ಅಂತಾರಾಷ್ಟ್ರೀಯ ಗಡಿಯ 150 ಯಾರ್ಡ್‌ಗಳ ಒಳಗೆ ಯಾವುದೇ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಬಾಂಗ್ಲಾದೇಶವು ಹಲವು ಬಾರಿ ಆಕ್ಷೇಪ ವ್ಯಕ್ತಪಡಿಸಿದೆ. ಭಾರತವು ತಂತಿ ಬೇಲಿಗಳನ್ನು ರಕ್ಷಣಾ ಮೂಲಸೌಕರ್ಯ ಎಂದು ಪರಿಗಣಿಸದಿದ್ದರೂ, ನೆರೆಹೊರೆಯ ದೇಶಗಳ ಭಿನ್ನ ವ್ಯಾಖ್ಯಾನಗಳು ರಾಜತಾಂತ್ರಿಕ ಘರ್ಷಣೆಗೆ ಕಾರಣವಾಗಬಹುದು.

ಯೋಜನೆಯ ಯಶಸ್ಸಿಗೆ ಈ ಅಂಶಗಳೂ ಅಗತ್ಯ

ಭಾರತದ ಸ್ಮಾರ್ಟ್ ಬಾರ್ಡರ್ ಯೋಜನೆಯು ದೇಶದ ಗಡಿ ರಕ್ಷಣೆಯನ್ನು ಅತ್ಯಾಧುನಿಕಗೊಳಿಸುವ ಮಹತ್ವಾಕಾಂಕ್ಷಿ ಹೆಜ್ಜೆಯಾಗಿದೆ. ಆದರೆ, ಗೃಹ ಸಚಿವರು ಹೇಳಿರುವಂತೆ ಗಡಿಯನ್ನು ಸಂಪೂರ್ಣವಾಗಿ ಅಭೇದ್ಯ ಮಾಡುವುದು ಕೇವಲ ತಂತ್ರಜ್ಞಾನದಿಂದ ಮಾತ್ರ ಸಾಧ್ಯವಿಲ್ಲ. ಭೂಪ್ರದೇಶದ ಸವಾಲುಗಳು, ನಿರ್ವಹಣಾ ವೆಚ್ಚ, ವಿವಿಧ ಏಜೆನ್ಸಿಗಳ ನಡುವಿನ ಸಮನ್ವಯ ಮತ್ತು ನೆರೆಹೊರೆಯ ದೇಶಗಳೊಂದಿಗಿನ ರಾಜತಾಂತ್ರಿಕ ಬಾಂಧವ್ಯಗಳನ್ನು ಸಮರ್ಥವಾಗಿ ನಿಭಾಯಿಸುವುದರ ಮೇಲೆ ಈ ಯೋಜನೆಯ ನೈಜ ಯಶಸ್ಸು ನಿರ್ಧಾರವಾಗುತ್ತದೆ.

ಇದು ಹೊಸ ಕಲ್ಪನೆಯೇ?

ಸ್ಮಾರ್ಟ್ ಬಾರ್ಡರ್ ಪರಿಕಲ್ಪನೆಯು ಸಂಪೂರ್ಣವಾಗಿ ಹೊಸದೇನಲ್ಲ. ಕಳೆದ ಹಲವು ವರ್ಷಗಳಿಂದ ಈ ಕುರಿತು ಚರ್ಚೆಗಳು ಮತ್ತು ಸಿದ್ಧತೆಗಳು ನಡೆಯುತ್ತಿವೆ. 2019ರ ಹೊತ್ತಿಗೆ, ಸರ್ಕಾರವು ಸುಮಾರು 71 ಕಿಮೀ ಉದ್ದದ ಎರಡು ಪ್ರಾಯೋಗಿಕ ಸಿಐಬಿಎಂಎಸ್ ಯೋಜನೆಗಳನ್ನು ಪೂರ್ಣಗೊಳಿಸಿತ್ತು. ಇದರಲ್ಲಿ 10 ಕಿಮೀ ಪಾಕಿಸ್ತಾನ ಗಡಿಯಲ್ಲಿ ಮತ್ತು 61 ಕಿಮೀ ಬಾಂಗ್ಲಾದೇಶ ಗಡಿಯಲ್ಲಿ ಅನುಷ್ಠಾನಗೊಳಿಸಲಾಗಿತ್ತು. ಭೌತಿಕ ಬೇಲಿ ನಿರ್ಮಿಸಲು ಸಾಧ್ಯವಿಲ್ಲದ ಸುಮಾರು 1,955 ಕಿಮೀ ಉದ್ದದ ಗಡಿ ಭಾಗವನ್ನು ಈ ಯೋಜನೆಯ ಮುಂದಿನ ಹಂತಗಳಲ್ಲಿ ಸೇರಿಸಿಕೊಳ್ಳಲು ಯೋಜಿಸಲಾಗಿದೆ. ಡಿಸೆಂಬರ್ 2023ರಲ್ಲಿ, ಗೃಹ ಸಚಿವರು ಗಡಿಯ ಕಠಿಣ ಭೂಪ್ರದೇಶಗಳಲ್ಲಿ ಬಾಕಿ ಉಳಿದಿರುವ 60 ಕಿಮೀಗಳಷ್ಟು ಅಂತರವನ್ನು ಭರ್ತಿ ಮಾಡುವ ಕೆಲಸ ನಡೆಯುತ್ತಿದೆ ಎಂದು ತಿಳಿಸಿದ್ದರು. ಆದ್ದರಿಂದ, ಸದ್ಯದ ಪ್ರಕಟಣೆಯು ಕಳೆದ ಒಂದು ದಶಕದಿಂದ ನಡೆಯುತ್ತಿರುವ ಗಡಿ ಆಧುನೀಕರಣ ಪ್ರಕ್ರಿಯೆಯ ಒಂದು ದೊಡ್ಡ ಮುಂದುವರಿದ ಭಾಗವಾಗಿದೆ.



ಕಿರುಸುದ್ದಿ

ತೈಲ ದರ ಹೆಚ್ಚಳ

ಹೊಸದಿಲ್ಲಿ: ಜಾಗತಿಕ ತೈಲ ಬೆಲೆ ಏರಿಕೆಯ ನಡುವೆ ಶನಿವಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಪ್ರತಿ ಲೀಟರ್‌ಗೆ 87ರಿಂದ 91 ಪೈಸೆಗಳಷ್ಟು ಹೆಚ್ಚಾಗಿದ್ದು, ಕಳೆದ 10 ದಿನಗಳಿಗಿಂತಲೂ ಕಡಿಮೆ ಅವಧಿಯಲ್ಲಿ ಒಟ್ಟು ದರ ಏರಿಕೆ ಸುಮಾರು 5 ರೂ.ಗಳಿಗೆ ತಲುಪಿದೆ. ಸಿಎನ್‌ಜಿ ಬೆಲೆಯೂ ಪ್ರತಿ ಕೆಜಿಗೆ 1 ರೂ. ಹೆಚ್ಚಾಗಿದೆ. ಇದರೊಂದಿಗೆ ಒಟ್ಟು ಸಿಎನ್‌ಜಿ ದರ ಏರಿಕೆ 4 ರೂ. ಆಗಿದ್ದು, ದಿಲ್ಲಿಯಲ್ಲಿ ಪ್ರಸ್ತುತ ಸಿಎನ್‌ಜಿ ಬೆಲೆ ಪ್ರತಿ ಕೆಜಿಗೆ 81.09 ರೂ. ಆದಂತಾಗಿದೆ.

ತ.ನಾಡಿನಲ್ಲಿ ಬಾಲಕಿಯ ಮೇಲೆ ದೌರ್ಜನ್ಯ, ಹತ್ಯೆ

ಕೊಯಮತ್ತೂರು: ನಗರದಲ್ಲಿ ಹತ್ತು ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿ ಕೊಲೆ ಮಾಡಲಾಗಿದೆ. ಈ ಸಂಬಂಧ ಸಿಎಂ ವಿಜಯ್, ಕಠಿಣ ಕಾನೂನು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಕೊಲೆ ಮತ್ತು ಲೈಂಗಿಕ ದೌರ್ಜನ್ಯದ ಆರೋಪದ ಮೇಲೆ 33 ವರ್ಷದ ಕೆ.ಕಾರ್ತಿ ಎಂಬುವವನನ್ನು ಪೋಕ್ಸೊ ಕಾಯ್ದೆಯಲ್ಲಿ ಪೊಲೀಸರು ಬಂಧಿಸಿದ್ದಾರೆ. ಅಪರಾಧ ಸಂಚಿಗೆ ಸಹಕರಿಸಿದ ಆರೋಪದ ಮೇಲೆ ಆತನ ಸಹಚರ ಆರ್. ಮೋಹನ್‌ನನ್ನು ಬಂಧಿಸಲಾಗಿದೆ.

ಬಿಸಿಗಾಳಿಗೆ ಆಂಧ್ರದಲ್ಲಿ ಒಂದೇ ದಿನ 21 ಸಾವು

ಅಮರಾವತಿ: ಆಂಧ್ರಪ್ರದೇಶದಲ್ಲಿ ಮುಂದುವರಿದಿರುವ ತೀವ್ರ ಬಿಸಿಗಾಳಿ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ್ದು, ಹೆಚ್ಚಿದ ತಾಪಮಾನಕ್ಕೆ ಒಂದೇ ದಿನದಲ್ಲಿ 21 ಮಂದಿ ಮೃತಪಟ್ಟಿರುವ ಘಟನೆ ಆತಂಕ ಮೂಡಿಸಿದೆ. ಇನ್ನು ಆಂಧ್ರದ ನೆರೆ ರಾಜ್ಯ ತೆಲಂಗಾಣದಲ್ಲಿ ಬಿಸಿಲಿನ ತಾಪಕ್ಕೆ 16 ಜನ ಮೃತಪಟ್ಟಿದ್ದಾರೆ.

ಆಂಧ್ರದ ವಿಜಯವಾಡ ಜಿಲ್ಲೆಯಲ್ಲಿ ಮಾತ್ರವೇ 10 ಮಂದಿ ಬಲಿಯಾಗಿದ್ದು, ಇವರಲ್ಲಿ ಕೆಲವರು ರಸ್ತೆಬದಿಯಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಮೃತಪಟ್ಟಿದ್ದಾರೆ. ಇದಲ್ಲದೆ, ಎಲ್ಲೂರು, ಪಶ್ಚಿಮ ಗೋದಾವರಿ, ಕಾಕಿನಾಡ, ಪಲ್ನಾಡು ಹಾಗೂ ಅನಕಾಪಲ್ಲಿ ಜಿಲ್ಲೆಗಳಲ್ಲೂ ಬಿಸಿಲಿನ ಹೊಡೆತಕ್ಕೆ ಕೆಲವರು ಜೀವ ಕಳೆದುಕೊಂಡಿದ್ದಾರೆ. ಮೃತರಲ್ಲಿ ಕಾರ್ಮಿಕರು, ವೃದ್ಧರು, ಭಿಕ್ಷುಕರು ಹಾಗೂ ಅಪರಿಚಿತರು ಸೇರಿದ್ದಾರೆ. ಕೆಲವು ಪ್ರದೇಶಗಳಲ್ಲಿ ತಾಪಮಾನ 45 ರಿಂದ 46 ಡಿಗ್ರಿ ಸೆಲ್ಸಿಯಸ್ ತಲುಪಿರುವುದರಿಂದ ಜನರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ.

ತೆಲಂಗಾಣದಲ್ಲಿ 16 ಸಾವು:

ತೀವ್ರ ಬಿಸಿಗಾಳಿಯಿಂದ ತೆಲಂಗಾಣದ ಏಳು ಜಿಲ್ಲೆಗಳಲ್ಲಿ 16 ಮಂದಿ ಮೃತಪಟ್ಟಿದ್ದಾರೆ ಎಂದು ಸಚಿವ ಪೊಂಗುಲೇಟಿ ಶ್ರೀನಿವಾಸ ರೆಡ್ಡಿ ಶನಿವಾರ ತಿಳಿಸಿದ್ದಾರೆ. ಮೃತರ ಕುಟುಂಬಸ್ಥರಿಗೆ ತಲಾ 4 ಲಕ್ಷ ರೂ. ಪರಿಹಾರ ಧನ ನೀಡಲಾಗುರುವುದು ಎಂದು ಅವರು ತಿಳಿಸಿದ್ದಾರೆ.

ಅಗತ್ಯವಿಲ್ಲದೆ ಮಧ್ಯಾಹ್ನ ಹೊರಗೆ ಹೋಗಬಾರದು, ಹೆಚ್ಚು ನೀರು ಸೇವಿಸಬೇಕು ಹಾಗೂ ಬಿಸಿಲಿನಿಂದ ಎಚ್ಚರಿಕೆ ವಹಿಸಬೇಕು ಎಂದು ಜನರಿಗೆ ಆರೋಗ್ಯ ಇಲಾಖೆ ಸಲಹೆ ನೀಡಿದೆ.

ಚೀನಾದ ಗಣಿ ಸ್ಫೋಟ, 90 ಕಾರ್ಮಿಕರ ಸಾವು

ಬೀಜಿಂಗ್: ಉತ್ತರ ಚೀನಾದ ಕಲ್ಲಿದ್ದಲು ಗಣಿಯೊಂದರಲ್ಲಿ ಶುಕ್ರವಾರ ಸಂಜೆ ಸಂಭವಿಸಿದ ಅನಿಲ ಸ್ಫೋಟದಲ್ಲಿ 90 ಗಣಿ ಕಾರ್ಮಿಕರು ಮೃತಪಟ್ಟಿದ್ದಾರೆ ಮತ್ತು 201 ಜನರನ್ನು ರಕ್ಷಿಸಲಾಗಿದೆ ಎಂದು ಅಲ್ಲಿನ ಸರ್ಕಾರಿ ಮೂಲಗಳು ವರದಿ ಮಾಡಿವೆ.

ಶಾಂಕ್ಸಿ ಪ್ರಾಂತ್ಯದ ಚಿನ್ಯುವಾನ್ ಕೌಂಟಿಯ ಲಿಯುಶೆನ್ಯು ಕಲ್ಲಿದ್ದಲು ಗಣಿಯಲ್ಲಿ ಈ ಅಪಘಾತ ಸಂಭವಿಸಿದ್ದು, ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ.



ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಸಮಗ್ರ ರಕ್ಷಣಾ ಕಾರ್ಯಾಚರಣೆ, ಗಾಯಾಳುಗಳಿಗೆ ಚಿಕಿತ್ಸೆ ಮತ್ತು ಕಾನೂನುಬದ್ಧ ಹೊಣೆಗಾರಿಕೆಯನ್ನು ಗುರುತಿಸಲು ಘಟನೆಯ ಕುರಿತು ಸಮಗ್ರ ತನಿಖೆಗೆ ಆದೇಶ ಹೊರಡಿಸಿದ್ದಾರೆ. ಉಪ ಪ್ರಧಾನಿ ಜಾಂಗ್ ಗುವೊಚಿಂಗ್, ರಕ್ಷಣಾ ಕಾರ್ಯಗಳ ಮೇಲ್ವಿಚಾರಣೆ ವಹಿಸಿದ್ದು, ಅಪಘಾತದ ಸ್ಥಳಕ್ಕೆ ತಂಡವೊಂದರ ಜತೆ ಧಾವಿಸಿದ್ದಾರೆ.

ಸುರಕ್ಷತಾ ಕ್ರಮಗಳು: ಭವಿಷ್ಯದಲ್ಲಿ ಇಂತಹ ದುರ್ಘಟನೆಗಳನ್ನು ತಡೆಗಟ್ಟಲು ದೇಶಾದ್ಯಂತದ ಅಧಿಕಾರಿಗಳು ಕೆಲಸದ ಸ್ಥಳದ ಸುರಕ್ಷತೆಯ ಬಗ್ಗೆ ಜಾಗರೂಕತೆ ವಹಿಸಬೇಕು ಮತ್ತು ಸಂಭಾವ್ಯ ಅಪಾಯಗಳನ್ನು ನಿವಾರಿಸಬೇಕು ಎಂದು ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಹೇಳಿದ್ದಾರೆ. ಜತೆಗೆ, ಚೀನಾದಲ್ಲಿ ಹಲವೆಡೆ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಹೀಗಾಗಿ ಜೀವ ಮತ್ತು ಆಸ್ತಿಯನ್ನು ರಕ್ಷಿಸಲು ತುರ್ತು ಸಿದ್ಧತೆ ಹಾಗೂ ದೃಢವಾದ ಪ್ರವಾಹ ನಿಯಂತ್ರಣ ಮತ್ತು ವಿಪತ್ತು ಪರಿಹಾರ ಕ್ರಮಗಳಿಗೆ ಅವರು ಕರೆ ನೀಡಿದ್ದಾರೆ

ಕೈ ಮುಖಂಡ ಅಜಯ್ ರೈ ವಿರುದ್ಧ ಬಿಜೆಪಿ ಕಿಡಿ

ಲಖನೌ: ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಜಯ್ ರೈ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅವಹೇಳನಕಾರಿ ಪದಗಳನ್ನು ಬಳಸಿರುವುದಾಗಿ ಹೇಳಲಾದ ವಿಡಿಯೋ ಒಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಇದಕ್ಕೆ ಸಂಬಂಧಿಸಿ ರಾಜ್ಯ ರಾಜಕೀಯದಲ್ಲಿ ತೀವ್ರ ವಾಗ್ವಾದ ಆರಂಭವಾಗಿದೆ.

ಮೋದಿ ವಿರುದ್ಧ ಅವಹೇಳನಕಾರಿ ಹೇಳಿಕೆ ಆರೋಪ

ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, 'ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಮಾಡಿದ ಅಸಭ್ಯ, ಸಂಸತ್ತೀಯ ಮೌಲ್ಯಗಳಿಗೆ ವಿರುದ್ಧವಾದ ಹಾಗೂ ಕ್ಷಮಿಸಲಾಗದ ಹೇಳಿಕೆ ಕಾಂಗ್ರೆಸ್‌ನ ಆಳವಾದ ರಾಜಕೀಯ ಸಂಸ್ಕೃತಿಯನ್ನು ಬಹಿರಂಗಪಡಿಸಿದೆ' ಎಂದು ಟೀಕಿಸಿದ್ದಾರೆ.

ಉತ್ತರ ಪ್ರದೇಶ ಬಿಜೆಪಿ ಅಧ್ಯಕ್ಷ ಹಾಗೂ ಕೇಂದ್ರ ಸಚಿವ ಪಂಕಜ್ ಚೌಧರಿ ಕೂಡ ಅಜಯ್ ರೈ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. 'ಇದು ಕೇವಲ ಪ್ರಧಾನಿಯವರ ವಿರುದ್ಧದ ಅವಮಾನವಲ್ಲ, 140 ಕೋಟಿ ಭಾರತೀಯರ ಭಾವನೆಗಳಿಗೆ ಮಾಡಿದ ಅವಮಾನ' ಎಂದಿದ್ದಾರೆ.

ಆದರೆ, ಈ ಬಗ್ಗೆ ಸ್ಪಷ್ಟನೆ ನೀಡಿರುವ ಅಜಯ್ ರೈ, ಬಿಜೆಪಿಯೇ ಎಐ ಬಳಸಿ ಈ ವಿಡಿಯೋ ಸೃಷ್ಟಿಸಿದೆ ಎಂದಿದ್ದಾರೆ. ಜತೆಗೆ ದೂರು ದಾಖಲಿಸುವುದಾಗಿ ಹೇಳಿದ್ದಾರೆ. ಇದಕ್ಕೂ ಮುನ್ನವೇ ಬಿಜೆಪಿ ಕಾರ್ಯಕರ್ತರೊಬ್ಬರು ಅಜಯ್ ರೈ ವಿರುದ್ಧ ದೂರು ದಾಖಲಿಸಿದ್ದಾರೆ.

ಕೇರಳ ಸಿಎಸ್ ನೇಮಕ; ವಿಪಕ್ಷ ಟೀಕೆಗೆ ಗುರಿ

ತಿರುವನಂತಪುರಂ: ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರ ಕಾರ್ಯದರ್ಶಿಯಾಗಿ ಮುಖ್ಯ ಚುನಾವಣಾಧಿಕಾರಿ ಡಾ.ರತನ್ ಯು. ಕೇಲ್ಕರ್‌ರನ್ನು ನೇಮಕ ಮಾಡಿರುವುದನ್ನು ವಿರೋಧಿಸಿ ಬಿಜೆಪಿ ಮತ್ತು ಸಿಪಿಐ(ಎಂ) ಶನಿವಾರ ಕೇರಳ ಸರ್ಕಾರವನ್ನು ಟೀಕಿಸಿವೆ.

ಇತರ ರಾಜ್ಯಗಳಲ್ಲಿನ ಇಂತಹದೇ ನೇಮಕಾತಿಗಳ ಕುರಿತು ಕಾಂಗ್ರೆಸ್ ಹೊಂದಿರುವ ರಾಷ್ಟ್ರೀಯ ನಿಲುವಿಗೆ ಈ ಕ್ರಮ ವಿರುದ್ಧವಾಗಿದೆ ಎಂದು ವಿಪಕ್ಷಗಳು ಆರೋಪಿಸಿವೆ. 2003ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಕೇಲ್ಕರ್, ಇತ್ತೀಚೆಗೆ ರಾಜ್ಯದ ವಿಧಾನಸಭಾ ಚುನಾವಣಾ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸಿದ್ದರು. ಪಶ್ಚಿಮ ಬಂಗಾಳದಲ್ಲಿ ನಡೆದ ಇಂತಹದ್ದೇ ಬೆಳವಣಿಗೆಯನ್ನು ಕಾಂಗ್ರೆಸ್ ಈ ಹಿಂದೆ ಗಂಭೀರ ವಿಷಯ ಎಂದು ಟೀಕಿಸಿದ್ದನ್ನು ಉಲ್ಲೇಖಿಸಿದ ಬಿಜೆಪಿ ನಾಯಕ ಕೆ. ಸುರೇಂದ್ರನ್, ಕಾಂಗ್ರೆಸ್ ಪಕ್ಷದ ದ್ವಿಮುಖ ನಿಲುವನ್ನು ಖಂಡಿಸಿದರು.

ಯಾವುದೇ ಶಕ್ತಿಗೂ ಈ ಸಾಧನೆಯನ್ನು ತಡೆಯಲಾಗದು: ರಾಜನಾಥ್ ಸಿಂಗ್

ವಿಶ್ವದ ಬೃಹತ್ ಶಸ್ತ್ರಾಸ್ತ್ರ ರಫ್ತುದಾರ ಭಾರತ

ಶಿರಡಿ(ಮಹಾರಾಷ್ಟ್ರ): ಒಂದು ಕಾಲಘಟ್ಟದಲ್ಲಿ ಶಸ್ತ್ರಾಸ್ತ್ರಗಳ ಆಮದುದಾರ ರಾಷ್ಟ್ರವೆಂದು ಪರಿಗಣಿತ ಭಾರತವು, ಮುಂದಿನ 25-30 ವರ್ಷಗಳಲ್ಲಿ ಜಗತ್ತಿನ ಬೃಹತ್ ಶಸ್ತ್ರಾಸ್ತ್ರ ರಫ್ತುದಾರ ರಾಷ್ಟ್ರವಾಗಿ ಕಂಗೊಳಿಸಲಿದೆ ಮತ್ತು ಯಾವುದೇ ಶಕ್ತಿಗೂ ಭಾರತದ ಈ ಸಾಧನೆಯನ್ನು ತಡೆಯಲಾಗದು ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಗುಡುಗಿದ್ದಾರೆ. ತನ್ನ ಶಸ್ತ್ರಾಸ್ತ್ರಗಳನ್ನು ಸ್ವಯಂ ತಯಾರಿಸಬಲ್ಲ ರಾಷ್ಟ್ರವು ತನ್ನ ಭವಿಷ್ಯವನ್ನು ಕೂಡ ಸ್ವಯಂ ಬರೆಯಬಲ್ಲುದು ಎಂದು ಸಚಿವರು ಅರ್ಥಗರ್ಭಿತವಾಗಿ ಹೇಳಿದ್ದಾರೆ.

ರಕ್ಷಣಾ ಉತ್ಪಾದನಾ ರಂಗದಲ್ಲಿ ಖಾಸಗಿ ರಂಗದ ಪಾತ್ರ ಕೇವಲ ನಟ್-ಬೋಲ್ಟ್‌ಗಳ ಪೂರೈಕೆಗೆ ಸೀಮಿತವಲ್ಲ, ಇವು ಕೂಡ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಉತ್ಪಾದನೆಗೆ ಹೆಸರುವಾಸಿಯಾಗಿವೆ. ಕೆಲವು ವರ್ಷ ಹಿಂದೆ ರಕ್ಷಣಾ ಉತ್ಪಾದನಾ ರಂಗದಲ್ಲಿ ಖಾಸಗಿ ರಂಗದ ಪಾತ್ರವನ್ನು ಕಡೆಗಣಿಸಲಾಗಿತ್ತು. ಆದರೆ ಇಂದು ರಕ್ಷಣಾ ಉತ್ಪಾದನೆಯಲ್ಲಿ ಖಾಸಗಿ ಕಂಪೆನಿಗಳ ಪಾಲ್ಗೊಳ್ಳುವಿಕೆ ಶೇ. 25ರಿಂದ 30ರಷ್ಟಿದ್ದು, ಇದನ್ನು ಶೇ.50ಕ್ಕೇರಿಸುವುದು ಸರಕಾರದ ಗುರಿಯಾಗಿದೆ ಎಂದವರು ಶಿರಡಿಯಲ್ಲಿ ಶಸ್ತ್ರಾಸ್ತ್ರ ಉತ್ಪಾದನಾ ಘಟಕ ಉದ್ಘಾಟಿಸಿದ ಬಳಿಕ ನುಡಿದರು.



ಸರ್ಕಾರದ ದೃಷ್ಟಿಕೋನ ಮತ್ತು ಖಾಸಗಿ ರಂಗದ ಆವಿಷ್ಕಾರಗಳು ಸಂಗಮಗೊಂಡಾಗ ರಾಷ್ಟ್ರವು ನವ ಶೃಂಗಗಳಿಗೆ ತಲುಪುವುದು. ಈ ನಿಟ್ಟಿನಲ್ಲಿ ಭಾರತವನ್ನು ಶಸ್ತ್ರಾಸ್ತ್ರ ತಯಾರಿ ಮತ್ತು ಆಟೊಮೇಶನ್ ಕೇಂದ್ರವಾಗಿ ರೂಪಿಸಲು ಎಲ್ಲರೂ ಒಟ್ಟಾಗಿ ಶ್ರಮಿಸಬೇಕೆಂದು ಸಚಿವರು ಕರೆ ನೀಡಿದರು. ರಕ್ಷಣಾ ಉದ್ದಿಮೆಗೆ ಸಂಬಂಧಿಸಿದಂತೆ ಭಾರತದ ಯಾನ ಸುದೀರ್ಘವಾದುದು. ಸ್ವಾತಂತ್ರ್ಯ ಮುನ್ನವೇ ಭಾರತದಲ್ಲಿ ಶಸ್ತ್ರಾಸ್ತ್ರ ಕಾರ್ಖಾನೆಗಳಿದ್ದುವು ಮತ್ತು ರಕ್ಷಣಾ ಕೈಗಾರಿಕೆಗಳು ಕೂಡ ಹಿಂದಿನಿಂದಲೇ ಇದ್ದುವು. ಸ್ವಾತಂತ್ರ್ಯಾನಂತರದಲ್ಲಿ ದೇಶದ ಹಿಂದಿನ ರಕ್ಷಣಾ ಸಾಮರ್ಥ್ಯ ಮತ್ತು ಆಧುನಿಕ ಆವಶ್ಯಕತೆಗಳಿಗೆ ಪರಸ್ಪರ ಹೊಂದಾಣಿಕೆಯಾಗಲಿಲ್ಲ. ಇದಕ್ಕೆ ಮೂಲಕಾರಣ, ರಕ್ಷಣಾ ಉತ್ಪಾದನಾ ರಂಗ ಕೇವಲ ಸಾರ್ವಜನಿಕ ರಂಗದ ಕಂಪೆನಿಗಳು ಮತ್ತು ಶಸ್ತ್ರಾಸ್ತ್ರ ಕಾರ್ಖಾನೆಗಳಿಗೆ ಸೀಮಿತವಾಗಿದ್ದುದು. ರಕ್ಷಣಾ ಉತ್ಪಾದನಾ ರಂಗದಲ್ಲಿ ತೊಡಗಲು ಖಾಸಗಿ ಕಂಪೆನಿಗಳಿಗೆ ಅವಕಾಶ ಇರಲಿಲ್ಲ.

> ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ನೀತಿ ಸಂಬಂಧಿತ ಸುಧಾರಣೆಗಳು ಮತ್ತು ವಿದೇಶಿ ನೇರ ಹೂಡಿಕೆ ನಿಯಮ ಸರಳೀಕರಣಗೊಳಿಸುವ ಮುಖೇನ, ರಕ್ಷಣಾ ರಂಗದಲ್ಲಿ ಖಾಸಗಿ ಪಾಲ್ಗೊಳ್ಳುವಿಕೆ ಹೆಚ್ಚಿಸಲು ತುಂಬು ಉತ್ತೇಜ ನೀಡುತ್ತಿದೆ.
> ■ ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಬಿಸಿಗಾಳಿಯಿಂದ ಮಕ್ಕಳು, ವೃದ್ಧರಿಗೆ ಹೆಚ್ಚು ತೊಂದರೆ: ತಜ್ಞರ ಎಚ್ಚರಿಕೆ

ಮೆದುಳು, ಕಣ್ಣಿನ ಆರೋಗ್ಯಕ್ಕೆ ಅಪಾಯ

ಹೊಸದಿಲ್ಲಿ: ದೇಶದಲ್ಲಿ ಹೆಚ್ಚುತ್ತಿರುವ ಬಿಸಿಗಾಳಿ, ನರಸಂಬಂಧಿ ಮತ್ತು ಕಣ್ಣಿನ ಆರೋಗ್ಯದ ಸಮಸ್ಯೆಗಳನ್ನು ಉಂಟುಮಾಡುತ್ತಿದೆ ಎಂದು ವೈದ್ಯರು ಎಚ್ಚರಿಸಿದ್ದಾರೆ. ವಿಶೇಷವಾಗಿ ಮಕ್ಕಳು, ಹಿರಿಯ ನಾಗರಿಕರು ಮತ್ತು ಈಗಾಗಲೇ ಆರೋಗ್ಯ ಸಮಸ್ಯೆ ಹೊಂದಿರುವವರಲ್ಲಿ ಈ ತೊಂದರೆಗಳು ಕಾಣಿಸಿಕೊಳ್ಳುತ್ತಿವೆ.

ಹೆಚ್ಚಿನ ತಾಪಮಾನ, ನಿರ್ಜಲೀಕರಣ ಮತ್ತು ಸುದೀರ್ಘ ಅವಧಿಗೆ ಬಿಸಿಲಿಗೆ ಒಡ್ಡಿಕೊಳ್ಳುವುದರಿಂದ ಆಯಾಸ, ತಲೆಸುತ್ತು, ತಲೆನೋವು, ಮೈಗ್ರೇನ್ ಹಾಗೂ ಹೀಟ್ ಸ್ಟ್ರೋಕ್‌ನಂತಹ ನರಸಂಬಂಧಿ ತೊಂದರೆಗಳು ಉಂಟಾಗಬಹುದು ಎಂದು ತಜ್ಞರು ತಿಳಿಸಿದ್ದಾರೆ. ದಿಲ್ಲಿ-ಎನ್‌ಸಿಆರ್‌ನ ಆಸ್ಪತ್ರೆಗಳಲ್ಲಿ ಇಂತಹ ಪ್ರಕರಣಗಳು ಹೆಚ್ಚುತ್ತಿವೆ.




ದಿಲ್ಲಿಯ ಇಂದ್ರಪ್ರಸ್ಥ ಅಪೊಲೊ ಆಸ್ಪತ್ರೆಯ ನರವಿಜ್ಞಾನ ವಿಭಾಗದ ಹಿರಿಯ ಸಮಾಲೋಚಕ ಡಾ. ವಿನೀತ್ ಸೂರಿ, ತೀವ್ರ ತಲೆನೋವು, ತಲೆಸುತ್ತು, ಮೂರ್ಛೆ ಮತ್ತು ತೀವ್ರ ಮೈಗ್ರೇನ್‌ನಿಂದ ಬರುವ ಹೊರರೋಗಿಗಳ ಸಂಖ್ಯೆಯಲ್ಲಿ ಸುಮಾರು ಶೇ.20ರಷ್ಟು ಹೆಚ್ಚಳವಾಗಿದೆ ಎಂದಿದ್ದಾರೆ. ಅತಿಯಾದ ಶಾಖ ಮತ್ತು ನಿರ್ಜಲೀಕರಣ ಮೆದುಳಿಗೆ ರಕ್ತದ ಹರಿವನ್ನು ಕಡಿಮೆ ಮಾಡುತ್ತದೆ, ಎಲೆಕ್ಟ್ರೋಲೈಟ್ ಸಮತೋಲನವನ್ನು ಏರುಪೇರು ಮಾಡುತ್ತದೆ ಮತ್ತು ನರಮಂಡಲದ ಮೇಲೆ ಒತ್ತಡ ಉಂಟುಮಾಡುತ್ತದೆ. ನಿರಂತರ ಗೊಂದಲ, ಅಸ್ಪಷ್ಟ ಮಾತು, ಅಸಾಮಾನ್ಯ ಅರೆನಿದ್ರಾವಸ್ಥೆ, ಫಿಟ್ಸ್ ಅಥವಾ ಪ್ರಜ್ಞೆ ತಪ್ಪುವಂತಹ ಲಕ್ಷಣಗಳು ಕಂಡುಬಂದರೆ ತಕ್ಷಣ ವೈದ್ಯಕೀಯ ನೆರವು ಪಡೆಯಲು ಸಲಹೆ ನೀಡಲಾಗಿದೆ.

ಉರಿಬಿಸಿಲು ತಪ್ಪಿಸಲು ವೈದ್ಯರ ಸಲಹೆ

ಮಧ್ಯಾಹ್ನದ ಉರಿಬಿಸಿಲಿನ ಅವಧಿಯಲ್ಲಿ ಹೊರಾಂಗಣ ಚಟುವಟಿಕೆಗಳನ್ನು ತಪ್ಪಿಸಲು ವೈದ್ಯರು ಸಲಹೆ ನೀಡಿದ್ದಾರೆ. ಕನಿಷ್ಠ ಪಕ್ಷ ಹೊರಗೆ ಹೋಗುವಾಗ ಕೊಡೆ, ಯುವಿ ಕಿರಣಗಳಿಂದ ರಕ್ಷಿಸುವ ಸನ್‌ಗ್ಲಾಸ್ ಬಳಕೆ, ಕಣ್ಣಿನ ಡ್ರಾಪ್‌ಗಳ ಬಳಕೆ ಮತ್ತು ಎಲೆಕ್ಟ್ರೋಲೈಟ್ ಯುಕ್ತ ಪಾನೀಯಗಳಾದ ಎಳನೀರು, ಮಜ್ಜಿಗೆ ಮತ್ತು ಹಣ್ಣಿನ ರಸಗಳ ಸೇವನೆ, ಜತೆಗೆ ಅಗತ್ಯವಿರುವಷ್ಟು ನೀರು ಕುಡಿಯುವುದು, ಕಣ್ಣಿನ ಡ್ರಾಪ್‌ಗಳ ಬಳಕೆ ಉತ್ತಮ ಎಂದು ಹೇಳಿದ್ದಾರೆ.

ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಿ

ಸೂರ್ಯನ ಬೆಳಕು, ಬಿಸಿಗಾಳಿ, ಧೂಳು ಮತ್ತು ನಿರ್ಜಲೀಕರಣ, ಕಣ್ಣು ಒಣಗುವುದು, ಕೆಂಪಾಗುವುದು, ಉರಿ, ಕಣ್ಣು ಬೇನೆ ಮತ್ತು ಕಾರ್ನಿಯಾ ಉರಿಗೆ ಕಾರಣವಾಗುತ್ತದೆ. ಹವಾನಿಯಂತ್ರಣ ಬಳಕೆ ಮತ್ತು ಕಂಪ್ಯೂಟರ್/ಮೊಬೈಲ್ ಪರದೆಗಳನ್ನು ಹೆಚ್ಚು ನೋಡುವುದು, ಒಳಾಂಗಣದಲ್ಲೂ ಕಣ್ಣು ಒಣಗುವ(ಡ್ರೈ ಐ) ಪ್ರಕರಣಗಳನ್ನು ಹೆಚ್ಚಿಸುತ್ತದೆ ಎಂದು ದಿಲ್ಲಿಯ ಡಾ. ಆರ್.ಪಿ. ಸೆಂಟರ್ ಫಾರ್ ಆಪ್ತಾಲ್ಮಿಕ್ ಸೈನ್ಸ್‌ನ ಡಾ. ನಮ್ರತಾ ಶರ್ಮಾ ಹೇಳಿದ್ದಾರೆ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	14	9	5	0	18	+0.783
ಗುಜರಾತ್ (Q)	14	9	5	0	18	+0.695
ಹೈದರಾಬಾದ್ (Q)	14	9	5	0	18	+0.524
ರಾಜಸ್ಥಾನ	13	7	6	0	14	+0.083
ಪಂಜಾಬ್	13	6	6	1	13	+0.227
ಕೆಕೆಆರ್	13	6	6	1	13	+0.011
ಚೆನ್ನೈ	14	6	8	0	12	-0.345
ದಿಲ್ಲಿ	13	6	7	0	12	-0.871
ಮುಂಬೈ	13	4	9	0	8	-0.510
ಲಖನೌ	13	4	9	0	8	-0.702

ಕಿರುಸುದ್ದಿ

ಒಂದೇ ಟೆಸ್ಟ್ ಪಂದ್ಯದಲ್ಲಿ ವಿಭಿನ್ನ ಬಣ್ಣದ ಬಾಲ್?

ಮುಂಬೈ: ಒಂದೇ ಟೆಸ್ಟ್ ಪಂದ್ಯದಲ್ಲಿ ಎರಡು ಬಣ್ಣದ ಬಾಲ್‌ಗಳನ್ನು ಬಳಸಲು ಪ್ರಸ್ತಾಪಿಸಲಾಗಿದ್ದು, ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ ಈ ಬಗ್ಗೆ ಶೀಘ್ರವೇ ನಿರ್ಧಾರ ಕೈಗೊಳ್ಳಲಿದೆ. ಟೆಸ್ಟ್ ಪಂದ್ಯಗಳನ್ನು ಕೆಂಪು ಮತ್ತು ಪಿಂಕ್ ಬಾಲ್‌ಗಳಲ್ಲಿ ಆಡಿಸಲಾಗುತ್ತದೆ. ಆದರೆ ಒಂದೇ ಪಂದ್ಯದಲ್ಲಿ ಎರಡು ಬಣ್ಣಗಳ ಬಾಲ್‌ಗಳನ್ನು ಬಳಸಲಾಗಲ್ಲ. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಐಸಿಸಿ ನಿರ್ಧಾರ ಕೈಗೊಳ್ಳಲಿದ್ದು, ಒಂದೇ ಪಂದ್ಯದಲ್ಲಿ ಎರಡು ವಿಭಿನ್ನ ಬಣ್ಣದ ಬಾಲ್‌ಗಳನ್ನು ಬಳಸಲು ಚಿಂತನೆ ನಡೆಸಿದೆ. ಇಷ್ಟೇ ಅಲ್ಲದೆ, ಬಿಳಿ ಬಾಲಿನ ಪಂದ್ಯಗಳಲ್ಲೂ ಇದನ್ನು ಅಳವಡಿಕೆ ಮಾಡಲು ಯೋಚಿಸುತ್ತಿದೆ ಎಂದು ವರದಿಯಾಗಿದೆ. ಅಹಮದಾಬಾದ್‌ನಲ್ಲಿ ನಡೆಯಲಿರುವ ಐಸಿಸಿ ಸಭೆಯಲ್ಲಿ ಈ ಬಗ್ಗೆ ಚರ್ಚೆಗಳು ನಡೆಯಲಿವೆ.ಇನ್ನಷ್ಟು ಬದಲಾವಣೆಗಳಲ್ಲಿ ಮುಖ್ಯ ತರಬೇತುದಾರರಿಗೆ ಬ್ರೇಕ್ ಸಮಯದಲ್ಲಿ ಮೈದಾನ ಪ್ರವೇಶಿಸಲು ಅನುವು ಮಾಡಿಕೊಡಲಾಗುವುದು. ಆದರೆ ಕಡ್ಡಾಯವಾಗಿ ಜೆರ್ಸಿಯೊಂದಿಗೆ ಬರಬೇಕು ಎನ್ನಲಾಗಿದೆ. ಇದಲ್ಲದೆ ಟಿ20 ಕ್ರಿಕೆಟ್‌ನಲ್ಲಿ ಇನ್ನಿಂಗ್ಸ್ ಬ್ರೇಕ್ ಅನ್ನು 15 ನಿಮಿಷಕ್ಕೆ ಇಳಿಸುವ ಬಗ್ಗೆಯೂ ಹೇಳಲಾಗಿದೆ.

ಏಷ್ಯಾ ಜೂ. ಪಿಕಲ್‌ಬಾಲ್ ಓಪನ್‌ನಲ್ಲಿ 8 ಕನ್ನಡಿಗರು

ಬೆಂಗಳೂರು: ಥೈಲ್ಯಾಂಡ್‌ನಲ್ಲಿ ನಡೆಯಲಿರುವ ಏಷ್ಯಾ ಜೂನಿಯರ್ ಪಿಕಲ್‌ಬಾಲ್ ಓಪನ್ ಚಾಂಪಿಯನ್‌ಶಿಪ್‌ಗೆ ಕರ್ನಾಟಕ ರಾಜ್ಯ ಪಿಕಲ್ ಬಾಲ್ ಅಸೋಸಿಯೇಷನ್ ತನ್ನ 8 ಸದಸ್ಯರ ತಂಡ ಪ್ರಕಟಿಸಿದೆ. ಹಿತ್ವಿಕ್, ಶ್ರೇಷ್ಠಾ, ಐದಿನ್ ಫರೀದ್, ಶ್ರೀಹರಿ, ಕರ್ತಿ, ಲಿಖಿತಾ, ಖುಷಿ ಮತ್ತು ಜಶನ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಈ ಆಟಗಾರರ ಹೆಸರುಗಳನ್ನು ಆಲ್ ಇಂಡಿಯಾ ಪಿಕಲ್‌ಬಾಲ್ ಅಸೋಸಿಯೇಷನ್‌ಗೆ ಶಿಫಾರಸು ಮಾಡಲಾಗುತ್ತಿದ್ದು, ಇವರೆಲ್ಲರೂ ಮುಂದಿನ ತಿಂಗಳು ಮುಂಬೈನಲ್ಲಿ ನಡೆಯಲಿರುವ ರಾಷ್ಟ್ರೀಯ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ.

ಇಂದು ಹಾಫ್ ಮ್ಯಾರಥಾನ್

ಬೆಂಗಳೂರು: ಬೆಂಗಳೂರಿನ ಓಟಗಾರರ ಸಮೂಹ ರೋಮಾಂಚಕ ಫಿಟ್ನೆಸ್ ಸಂಭ್ರಮಕ್ಕೆ ಸಜ್ಜಾಗುತ್ತಿದೆ. ಫ್ರೀಡಂ ಬೆಂಗಳೂರು ಹಾಫ್ ಮ್ಯಾರಥಾನ್ ಭಾನುವಾರದಂದು ನಡೆಯಲಿದೆ. ಈಗಾಗಲೇ 6000ಕ್ಕೂ ಹೆಚ್ಚು ಸ್ಪರ್ಧಿಗಳು ನೋಂದಾಯಿಸಿಕೊಂಡಿದ್ದಾರೆ. ಬೆಂಗಳೂರಿನ ಐತಿಹಾಸಿಕ ನೈಸ್ ರಸ್ತೆ ಮಾರ್ಗದಲ್ಲಿ ನಡೆಯಲಿರುವ ಈ ಕ್ರೀಡಾಕೂಟವು ಅಥ್ಲೀಟ್‌ಗಳು, ಫಿಟ್ನೆಸ್ ಪ್ರೇಮಿಗಳು, ಕಾರ್ಪೊರೇಟ್ ತಂಡಗಳು, ರನ್ನಿಂಗ್ ಕ್ಲಬ್‌ಗಳು ಮತ್ತು ಮೊದಲ ಬಾರಿಗೆ ಭಾಗವಹಿಸುತ್ತಿರುವ ಓಟಗಾರರಿಗೆ ವಿಶ್ವದರ್ಜೆಯ ಅನುಭವವನ್ನು ನೀಡಲಿದೆ. ಸ್ಪರ್ಧಿಗಳು ವೃತ್ತಿಪರ ಟೈಮಿಂಗ್ ಹೊಂದಿರುವ 21.1 ಕಿ.ಮೀ ಹಾಫ್ ಮ್ಯಾರಥಾನ್, 10 ಕಿ.ಮೀ ಮತ್ತು 5 ಕಿ.ಮೀ ಓಟದ ವಿಭಾಗಗಳನ್ನು ಆಯ್ದುಕೊಳ್ಳಬಹುದಾಗಿದೆ. ಕಲ್ಕಿ ಸ್ಪೋರ್ಟ್ಸ್ ಇಂಡಿಯಾ ಪ್ರೀಮಿಯಂ ರೇಸ್-ಡೇ ಅನುಭವವನ್ನು ನೀಡುವ ಜೊತೆಗೆ ಫಿಟ್ನೆಸ್, ಸಹಿಷ್ಣುತೆ ಮತ್ತು ಸಮುದಾಯದ ಮನೋಭಾವವನ್ನು ಒಟ್ಟುಗೂಡಿಸುವ ಗುರಿಯನ್ನು ಹೊಂದಿದೆ. ಈ ಈವೆಂಟ್ ಕೇವಲ ಒಂದು ಓಟದ ಸ್ಪರ್ಧೆಯಷ್ಟೇ ಅಲ್ಲದೆ, ಸಂಪೂರ್ಣ ಫಿಟ್ನೆಸ್ ಮತ್ತು ಜೀವನಶೈಲಿಯ ಸಂಭ್ರಮಾಚರಣೆಯಾಗಿ ಮೂಡಿಬರಲಿದೆ.

ಪ್ಲೇಆಫ್‌ಗಿಲ್ಲ ಜೇಕಬ್ ಬೆಥಲ್

ಬೆಂಗಳೂರು: ಇಂಗ್ಲೆಂಡ್ ಬ್ಯಾಟರ್ ಜೇಕಬ್ ಬೆಥಲ್ ಗಾಯಗೊಂಡಿದ್ದು, ಐಪಿಎಲ್ ಪ್ಲೇಆಫ್‌ಗೆ ಲಭ್ಯವಿಲ್ಲ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಿಳಿಸಿದೆ. ಪಂಜಾಬ್ ವಿರುದ್ಧ ನಡೆದ ಪಂದ್ಯದ ವೇಳೆ ಅವರ ಬೆರಳಿಗೆ ಗಂಭೀರ ಗಾಯವಾಗಿದೆ. ಚಿಕಿತ್ಸೆಗಾಗಿ ಇಂಗ್ಲೆಂಡ್‌ಗೆ ಮರಳಿದ್ದು, ಪ್ಲೇಆಫ್‌ನಲ್ಲಿ ಭಾಗವಹಿಸುತ್ತಿಲ್ಲ ಎಂದು ಆರ್‌ಸಿಬಿ ಶನಿವಾರ ತಿಳಿಸಿದೆ. ಈ ಹಿಂದೆ ಸಾಲ್ಟ್ ಅವರೂ ಗಾಯಗೊಂಡು ಹೊರನಡೆದಿದ್ದರು. ಪ್ಲೇಆಫ್‌ನಲ್ಲಿ ಅವರು ಆಡುವ ಬಗ್ಗೆ ಇನ್ನೂ ಖಚಿತತೆ ಇಲ್ಲ. ಈ ನಡುವೆ ವೆಂಕಟೇಶ್ ಅಯ್ಯರ್ ಆರಂಭಿಕರಾಗಿ ಕಣಕ್ಕಿಳಿದಿದ್ದರು. ಮುಂದಿನ ಪಂದ್ಯದಲ್ಲೂ ಅವರೇ ಆರಂಭಿಕರಾಗಿ ಆಡುವ ಸಾಧ್ಯತೆಗಳಿವೆ.

ಇಂದು ಮುಂಬೈ-ರಾಜಸ್ಥಾನ, ದಿಲ್ಲಿ-ಕೆಕೆಆರ್ ಪಂದ್ಯ | ಲೀಗ್ ಹಂತದ ಕೊನೆಯ ದಿನ | ನಾಲ್ಕನೇ ತಂಡದ ಬಗ್ಗೆ ನಿರ್ಧಾರ

ಹೈದರಾಬಾದ್ Vs ?

ಮುಂಬೈ: 19ನೇ ಆವೃತ್ತಿಯ ಐಪಿಎಲ್‌ನ ಲೀಗ್ ಹಂತದ ಕೊನೆಯ ಪಂದ್ಯಗಳಲ್ಲಿ ರಾಜಸ್ಥಾನ-ಮುಂಬೈ, ಕೆಕೆಆರ್-ದಿಲ್ಲಿ ತಂಡಗಳು ಭಾನುವಾರದಂದು ಮುಖಾಮುಖಿಯಾಗಲಿವೆ. ಪ್ಲೇಆಫ್‌ಗೇರುವ ನಾಲ್ಕನೇ ತಂಡದ ಬಗ್ಗೆ ಇನ್ನೂ ಅನಿಶ್ಚಿತತೆ ಇರುವುದು ಭಾರೀ ಕುತೂಹಲ ಮೂಡಿಸಿದೆ. ಭಾನುವಾರದ ಕೊನೆಯ ಪಂದ್ಯದಲ್ಲಿ ನಾಲ್ಕನೇ ಸ್ಥಾನದ ಬಗ್ಗೆ ನಿರ್ಧಾರವಾಗಲಿದೆ. ಮೊದಲನೇ ಸ್ಥಾನದಲ್ಲಿ ಬೆಂಗಳೂರು, ಎರಡನೇ ಸ್ಥಾನದಲ್ಲಿ ಗುಜರಾತ್, ಮೂರನೇ ಸ್ಥಾನದಲ್ಲಿ ಹೈದರಾಬಾದ್ ತಮ್ಮ ಸ್ಥಾನಗಳನ್ನು ಪಡೆದಿವೆ. ನಾಲ್ಕನೇ ಸ್ಥಾನದಲ್ಲಿ ಸದ್ಯ ರಾಜಸ್ಥಾನ ತಂಡವಿದ್ದು, ಪ್ಲೇಆಫ್‌ಗೇರಲು ಎಲ್ಲರಿಗಿಂತಲೂ ಹೆಚ್ಚಿನ ಅವಕಾಶವನ್ನು ಹೊಂದಿದೆ.

ಮಧ್ಯಾಹ್ನದ ಪಂದ್ಯದಲ್ಲಿ ರಾಜಸ್ಥಾನವು ಮುಂಬೈ ತಂಡವನ್ನು ಎದುರಿಸಲಿದೆ. ಈ ಪಂದ್ಯದಲ್ಲಿ ರಾಜಸ್ಥಾನ ಗೆದ್ದುಬಿಟ್ಟರೆ ನಾಲ್ಕನೇ ಸ್ಥಾನಕ್ಕೇರುವುದು ಖಚಿತ. ಹೀಗಾಗಿಬಿಟ್ಟರೆ ರಾತ್ರಿ ನಡೆಯುವ ದಿಲ್ಲಿ-ಕೆಕೆಆರ್ ಪಂದ್ಯ ಔಪಚಾರಿಕವಾಗಲಿದೆ. ರಾಜಸ್ಥಾನಕ್ಕೆ ತಡೆಯೊಡ್ಡುವ ಅವಕಾಶ ಮುಂಬೈಗಿದೆ. ಗೆಲುವಿನ ಅಂತ್ಯಕ್ಕೆ ಅಣಿಯಾಗುತ್ತಿರುವ ಮುಂಬೈ ಪಂದ್ಯಾವಳಿಯಲ್ಲಿ ದೊಡ್ಡ ಬದಲಾವಣೆಯನ್ನೇ ತರಬಹುದು. ಅತ್ತ ರಾಜಸ್ಥಾನ ಪಂದ್ಯವನ್ನು ಗೆದ್ದು ಪ್ಲೇಆಫ್‌ಗೇರಲು ಸಿದ್ಧವಾಗಿದೆ. ಪಂದ್ಯ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿದೆ.

ಎರಡನೇ ಪಂದ್ಯದಲ್ಲಿ ದಿಲ್ಲಿ ಹಾಗೂ ಕೆಕೆಆರ್ ಪಂದ್ಯ ನಡೆಯಲಿದೆ. ದಿಲ್ಲಿ ಅಧಿಕೃತವಾಗಿ ಹೊರಬಿದ್ದಿಲ್ಲ, ಕೆಕೆಆರ್ ವಿರುದ್ಧ ರನ್‌ರೇಟ್‌ನೊಂದಿಗೆ ಗೆದ್ದರೆ ಅವಕಾಶ ಪಡೆಯಬಹುದು. ಇತ್ತ ಕೆಕೆಆರ್ ಗೆಲುವು ಸಾಧಿಸಿದರೆ, 15 ಅಂಕಗಳೊಂದಿಗೆ ನಾಲ್ಕನೇ ಸ್ಥಾನಕ್ಕೇರುವ ಅವಕಾಶವನ್ನು ಹೊಂದಲಿದೆ. ಎರಡನೇ ಪಂದ್ಯವು ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ನಡೆಯಲಿದೆ.

ಫೈನಲ್ ಮಾರ್ಗ

- ಆರ್‌ಸಿಬಿ / ಗುಜರಾತ್ — ಕ್ವಾಲಿಫೈಯರ್ 1 → ಸೋತವರು (q1) / ವಿಜೇತರು (q1)
- ಹೈದರಾಬಾದ್ / ನಾಲ್ಕನೇ ಸ್ಥಾನ — ಎಲಿಮಿನೇಟರ್ → ವಿಜೇತರು (e)
- ಸೋತವರು (q1) / ವಿಜೇತರು (e) — ಕ್ವಾಲಿಫೈಯರ್ 2 → ವಿಜೇತರು (q2)
- ವಿಜೇತರು (q1) / ವಿಜೇತರು (q2) — ಫೈನಲ್

ಲೆಕ್ಕಾಚಾರವೇನು?

ರಾಜಸ್ಥಾನ ಗೆದ್ದರೆ: ನಾಲ್ಕನೇ ಸ್ಥಾನದಲ್ಲಿರುವ ರಾಜಸ್ಥಾನ 14 ಅಂಕಗಳನ್ನು ಹೊಂದಿದೆ. ಹೀಗಾಗಿ ಒಂದು ವೇಳೆ ರಾಜಸ್ಥಾನ ಗೆದ್ದರೆ ಇನ್ನುಳಿದ ಮೂರೂ ತಂಡಗಳಿಗಿಂತ ಹೆಚ್ಚಿನ ಅವಕಾಶ ಪಡೆಯಲಿದೆ. ಗೆದ್ದರೆ ರಾಜಸ್ಥಾನ 16 ಅಂಕಗಳೊಂದಿಗೆ ನೇರವಾಗಿ ಪ್ಲೇಆಫ್‌ಗೇರುತ್ತದೆ.

ರಾಜಸ್ಥಾನ ಸೋತರೆ: ಒಂದು ವೇಳೆ ರಾಜಸ್ಥಾನ ಪಂದ್ಯವನ್ನು ಸೋತರೆ ದಿಲ್ಲಿ, ಕೆಕೆಆರ್ ಪಂದ್ಯವೂ ನಿರ್ಣಾಯಕ ಪಾತ್ರ ವಹಿಸುತ್ತದೆ. ರಾಜಸ್ಥಾನ 14 ಅಂಕಗಳೊಂದಿಗೆ ಅಭಿಯಾನ ಮುಗಿಸುತ್ತದೆ. ಒಂದು ವೇಳೆ ಲಖನೌ ವಿರುದ್ಧ ಪಂಜಾಬ್ ಗೆದ್ದರೆ, ಐದನೇ ಸ್ಥಾನಕ್ಕೆ ಇಳಿಯುವ ರಾಜಸ್ಥಾನ ಹೊರಬೀಳುತ್ತದೆ. ಕೆಕೆಆರ್ ಕೂಡ 15 ಅಂಕಗಳನ್ನು ಗಳಿಸಬಹುದು. ಹಾಗಾಗಿ ಪಂಜಾಬ್ ತಂಡಕ್ಕಿಂತ ಹೆಚ್ಚಿನ ರನ್‌ರೇಟ್ ಹೊಂದುವುದು ಅನಿವಾರ್ಯ.

ರಾಜಸ್ಥಾನ, ಕೆಕೆಆರ್ ಸೋತರೆ?: ಕೆಕೆಆರ್, ಪಂಜಾಬ್ ಹಾಗೂ ರಾಜಸ್ಥಾನ ಸೋತರೆ, ಅಂಕಪಟ್ಟಿಯಲ್ಲಿ 14 ಅಂಕ ಗಳಿಸುವವರೆ ನಾಲ್ಕನೇ ಸ್ಥಾನಕ್ಕೇರುತ್ತಾರೆ. ಹಾಗಾದಲ್ಲಿ ದಿಲ್ಲಿಗೊಂದು ಅವಕಾಶ ಹುಟ್ಟುತ್ತದೆ. ಒಂದು ವೇಳೆ ಸದ್ಯ ರಾಜಸ್ಥಾನ ದಿಲ್ಲಿಗಿಂತಲೂ ಹೆಚ್ಚಿನ ರನ್‌ರೇಟ್ ಹೊಂದಿದ್ದು ದಿಲ್ಲಿ ಹೆಚ್ಚಿನ ರನ್‌ರೇಟ್‌ನಿಂದ ಗೆದ್ದರೆ ಅವಕಾಶ ಪಡೆಯಬಹುದು.

ಹೈದರಾಬಾದ್‌ನೊಂದಿಗೆ ಯಾರು? : ಮೂರನೇ ಸ್ಥಾನದಲ್ಲಿರುವ ಹೈದರಾಬಾದ್ ನಾಲ್ಕನೇ ಸ್ಥಾನ ಪಡೆಯುವ ತಂಡವನ್ನು ಎಲಿಮಿನೇಟರ್ ಪಂದ್ಯದಲ್ಲಿ ಎದುರಿಸಲಿದೆ. ಸದ್ಯ ನಾಲ್ಕನೇ ಸ್ಥಾನಕ್ಕೇರುವ ಅವಕಾಶವನ್ನು ರಾಜಸ್ಥಾನ, ಪಂಜಾಬ್, ಕೆಕೆಆರ್ ಮತ್ತು ದಿಲ್ಲಿ ತಂಡಗಳು ಹೊಂದಿವೆ. ಐಪಿಎಲ್ ನಿಯಮದ ಪ್ರಕಾರ ಎಲಿಮಿನೇಟರ್ ಪಂದ್ಯದಲ್ಲಿ ಮೂರು ಮತ್ತು ನಾಲ್ಕನೇ ಸ್ಥಾನದ ತಂಡಗಳು ಮುಖಾಮುಖಿಯಾಗುತ್ತವೆ.

ಲಖನೌ 196/6

ಲಖನೌ: ಜೋಶ್ ಇಂಗ್ಲಿಸ್(72), ಆಯುಷ್ ಬದೋನಿ(43) ಕಟ್ಟಿದ ಇನ್ನಿಂಗ್ಸ್‌ಗೆ ಅಬ್ದುಲ್ ಸಮದ್(37★) ಫಿನಿಶಿಂಗ್ ಟಚ್ ಕೊಟ್ಟ ನಂತರ ಲಖನೌ ಸೂಪರ್ ಜೇಂಟ್ಸ್ ಪಂಜಾಬ್‌ಗೆ ಕಠಿಣ ಗುರಿ ನೀಡಿದೆ.

ಪಂದ್ಯಾವಳಿಯಲ್ಲಿ ಅಳಿವು ಉಳಿವಿನ ಸವಾಲು ಎದುರಿಸಿರುವ ಪಂಜಾಬ್ ಕಿಂಗ್ಸ್ ಕೊನೆಯ ಲೀಗ್ ಪಂದ್ಯದಲ್ಲಿ 197 ರನ್ ಬಾರಿಸಬೇಕಿದೆ. ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ಲಖನೌ ಆರಂಭದಲ್ಲಿ ರನ್ ಮಾಡಿದ್ದರೂ, ವಿಕೆಟ್‌ಗಳನ್ನು ಕಳೆದುಕೊಂಡಿತು. ಆರಂಭಿಕ ಇಂಗ್ಲಿಸ್, ಬದೋನಿ ಮಿಂಚಿದರು. ಕೊನೆಯಲ್ಲಿ ಅಬ್ದುಲ್ ಸ್ಕೋರ್ ಹಿಗ್ಗಿಸಿದರು. ಪರಿಣಾಮ ಲಖನೌ 20 ಓವರ್‌ಗಳಲ್ಲಿ 196 ರನ್ ಗಳಿಸಿದೆ. ಪಂಜಾಬ್ 6 ವಿಕೆಟ್ ಕಿತ್ತಿದೆ.

ಬದೋನಿ-ಇಂಗ್ಲಿಸ್ ಮಿಂಚಿನಾಟ: ಟಾಸ್ ಗೆದ್ದ ಲಖನೌ ಸೂಪರ್ ಜೇಂಟ್ಸ್ ಬ್ಯಾಟಿಂಗ್‌ಗಿಳಿಯಿತು. ಮೊದಲನೇ ಓವರ್‌ನಿಂದಲೇ ಜೋಶ್ ಇಂಗ್ಲಿಸ್ ಸ್ಫೋಟಕ ಬ್ಯಾಟಿಂಗ್ ಮಾಡಲಾರಂಭಿಸಿದರು. ಆದರೆ ಎರಡನೇ ಓವರ್‌ನಲ್ಲಿ ಅರ್ಶಿನ್ ಕುಲಕರ್ಣಿ ಮೊದಲ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಪೂರನ್ ಹೆಚ್ಚಿನ ಕೊಡುಗೆ ನೀಡಲಿಲ್ಲ. 2 ರನ್ ಗಳಿಸಿ ಅವರೂ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಆಯುಷ್ ಬದೋನಿ ಮೊದಲಿನ ಬಾಲ್‌ಗಳಲ್ಲಿ ನಿಂತು ಆಡಿ ನಂತರ ದಂಡಿಸುವ ಆಟಕ್ಕಿಳಿದರು. ಸ್ಫೋಟಕ ಬೌಂಡರಿ, ಬಾನೆತ್ತರದ ಸಿಕ್ಸರ್‌ಗಳ ಮೂಲಕ ಅವರು 43 ರನ್ ಗಳಿಸಿದರು. ಪವರ್‌ಪ್ಲೇ ಅಂತ್ಯಕ್ಕೆ ಲಖನೌ 66 ರನ್‌ಗೆ 2 ವಿಕೆಟ್ ಕಳೆದುಕೊಂಡಿತ್ತು.

ಮಧ್ಯಮ ಓವರ್: 7ನೇ ಓವರ್‌ನಲ್ಲೇ ಬದೋನಿ ವಿಕೆಟ್ ಒಪ್ಪಿಸಿದರು. 18 ಬಾಲ್ ಮಾತ್ರದಲ್ಲಿ ಅವರು 3 ಸಿಕ್ಸ್, 5 ಬೌಂಡರಿಗಳೊಂದಿಗೆ 43 ರನ್ ಚಚ್ಚಿದರು. ಬಳಿಕ ಬಂದ ಪಂತ್ ಇಂಗ್ಲಿಸ್‌ಗೆ ಸ್ಟ್ರೈಕ್ ಕೊಡುತ್ತಾ ಬಂದರು. 28 ಬಾಲ್‌ಗಳಲ್ಲಿ 50 ರನ್ ಗಳಿಸಿದರು. ದಂಡಿಸುವ ಆಟ ಮುಂದುವರಿಸಿದರು. ಪಂತ್ ಒಂದೆರಡು ಬೌಂಡರಿ ಬಾರಿಸಿದರೂ 26 ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಓವರ್‌ಗಳಲ್ಲಿ ಲಖನೌ 91 ರನ್ ಗಳಿಸಿತು. ಇಂಗ್ಲಿಸ್ 72 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 9 ಬೌಂಡರಿ 2 ಸಿಕ್ಸರ್ ಸೇರಿವೆ. ಡೆತ್‌ನಲ್ಲಿ ಅಬ್ದುಲ್ ಸಮದ್ ಮಿಂಚಿದರು. ಮುಖೇಶ್ ಬರುತ್ತಲೇ ಪೆವಿಲಿಯನ್ ಹೊರಟರು. ಕೊನೆಯ ಓವರ್‌ಗಳ 20 ಬಾಲ್ ಎದುರಿಸಿದ ಅಬ್ದುಲ್ 3 ಬೌಂಡರಿ, 3 ಸಿಕ್ಸರ್‌ನೊಂದಿಗೆ 37★ ರನ್ ಗಳಿಸಿದರು. ಇದರೊಂದಿಗೆ ಲಖನೌ 6 ವಿಕೆಟ್ ನಷ್ಟಕ್ಕೆ 196 ರನ್ ಗಳಿಸಿದರು. ಪಂಜಾಬ್ ಪರ ಮಾರ್ಕೊ ಯಾನ್ಸನ್, ಚಹಲ್ ತಲಾ 2 ವಿಕೆಟ್ ಕಿತ್ತರು.



ಸೋತರೂ ಆರ್‌ಸಿಬಿ ನಂಬರ್ 1

ಹೈದರಾಬಾದ್: ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮೊದಲ ಸ್ಥಾನದಲ್ಲೇ ಉಳಿದಿದ್ದು, ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡವನ್ನು ಎದುರಿಸಲಿದೆ. ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಆರ್‌ಸಿಬಿ ತಂಡವನ್ನು 55ರನ್‌ಗಳಿಂದ ಮಣಿಸಿರುವ ಹೈದರಾಬಾದ್ ತಂಡವು, 3ನೇ ಸ್ಥಾನದಲ್ಲೇ ಉಳಿದಿದೆ.

ಶುಕ್ರವಾರ ನಡೆದ ಪಂದ್ಯವು ಅಗ್ರ ಎರಡು ಸ್ಥಾನದ ನಿರ್ಧಾರ ಮಾಡಲಿತ್ತು. ಪಂದ್ಯದಲ್ಲಿ ಟಾಸ್ ಗೆದ್ದ ಹೈದರಾಬಾದ್ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಭುವನೇಶ್ವರ್ ಕುಮಾರ್ ಸೇರಿದಂತೆ ವಿವಿಧ ಬೌಲರ್‌ಗಳನ್ನು ದಂಡಿಸುತ್ತಲೇ ಬಂದ ಸನ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 255 ರನ್ ಗಳಿಸಿತು. ಇಶಾನ್ ಕಿಶನ್(79), ಅಭಿಷೇಕ್(56) ಮತ್ತು ಕ್ಲಾಸೆನ್(51) ಮಿಂಚಿದರು. ಬೆಂಗಳೂರು ಪರ ರಸೀಖ್ 2 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತಿದ ಆರ್‌ಸಿಬಿ 200 ರನ್ ಮಾತ್ರವಷ್ಟೇ ಗಳಿಸಿತು. ವೆಂಕಟೇಶ್(44), ಪಾಟಿದಾರ್ (56), ಕೃಣಾಲ್(41★) ರನ್ ಗಳಿಸಿ ಹೋರಾಡಿದರು. ಹೈದರಾಬಾದ್ ಪರ ಇಶಾನ್ ಮಾಲಿಂಗಾ 2 ವಿಕೆಟ್ ಕಿತ್ತರು.

ಆರ್‌ಸಿಬಿ ಹೋರಾಟಕ್ಕಿಲ್ಲ ಜಯ: ವೆಂಕಟೇಶ್ ಅಯ್ಯರ್ ಸ್ಫೋಟಕ ಆರಂಭ ಕೊಟ್ಟರು. 19 ಬಾಲ್‌ಗಳಲ್ಲಿ 44 ರನ್ ಬಾರಿಸಿದ ಅವರು, ಭದ್ರ ಬುನಾದಿ ಹಾಕಿಕೊಟ್ಟರು. ಆದರೆ ಅವರ ವಿಕೆಟ್ ಬಿದ್ದ ನಂತರ ಕೊಹ್ಲಿ(15), ಪಡಿಕ್ಕಲ್(21) ಹೆಚ್ಚಿನ ಕೊಡುಗೆ ನೀಡಲಿಲ್ಲ. ಮಧ್ಯಮ ಕ್ರಮಾಂಕದಲ್ಲಿ ರಜತ್ ಪಾಟಿದಾರ್ ಗಟ್ಟಿಯಾಗಿ ನಿಂತುಕೊಂಡರು. 39 ಬಾಲ್‌ಗಳನ್ನು ಎದುರಿಸಿದ ಅವರು, 6 ಬೌಂಡರಿ, 1 ಸಿಕ್ಸರ್‌ನೊಂದಿಗೆ 56 ರನ್ ಗಳಿಸಿದರು. ಅಂತಿಮವರೆಗೂ ವಿಕೆಟ್ ಉಳಿಸಿ ಆಡಿದ ಕೃಣಾಲ್ 41 ರನ್ ಗಳಿಸಿದರು. ಆರ್‌ಸಿಬಿ ಹೋರಾಟ ಮುಗಿಯಿತು. ವಿಕೆಟ್ ಕಳೆದುಕೊಂಡ ತಂಡ 200 ರನ್ ಅಷ್ಟೇ ಗಳಿಸಿತು.



ಹೆಡ್ ಜತೆ ಕೈಕುಲುಕದ ಕೊಹ್ಲಿ

ಪಂದ್ಯದ ವೇಳೆ ಆಸ್ಟ್ರೇಲಿಯಾ ಆಟಗಾರ, ಹೈದರಾಬಾದ್ ತಂಡದ ಆರಂಭಿಕ ಟ್ರಾವಿಸ್ ಹೆಡ್ ಹಾಗೂ ಆರ್‌ಸಿಬಿ ತಂಡದ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ನಡುವೆ ವಾಗ್ವಾದಗಳು ನಡೆದವು. ಕೊಹ್ಲಿ ಬ್ಯಾಟಿಂಗ್ ಮಾಡುವಾಗ ಹೆಡ್ ಜತೆ ಸಂಭಾಷಣೆ ಮಾಡುತ್ತಾ ಇದ್ದರು. ಪಂದ್ಯ ಮುಗಿದ ನಂತರ ವಾಡಿಕೆ ಪ್ರಕಾರ ಎಲ್ಲಾ ಆಟಗಾರರನ್ನು ಕೈಕುಲುಕಿದ ಕೊಹ್ಲಿ ಟ್ರಾವಿಸ್ ಹೆಡ್ ಜತೆ ಕೈಕುಲುಕಲೇ ಇಲ್ಲ. ಮುಂದೆ ಬಂದು ಕೈ ಮುಂದೆ ಮಾಡಿದರೂ, ಹಾಗೇ ಹೊರಟ ಕೊಹ್ಲಿ ವಿವಾದ ಹುಟ್ಟುಹಾಕಿದ್ದಾರೆ.

ಸಂಕ್ಷಿಪ್ತ ಸ್ಕೋರ್

ಹೈದರಾಬಾದ್ 20 ಓವರ್‌ಗಳಲ್ಲಿ 255/4: ಕಿಶನ್ 79, ಅಭಿಷೇಕ್ 56, ಕ್ಲಾಸೆನ್ 51; ರಸೀಖ್ 51/2

ಆರ್‌ಸಿಬಿ 20 ಓವರ್‌ಗಳಲ್ಲಿ 200/4: ಪಾಟಿದಾರ್ 56, ವೆಂಕಟೇಶ್ 44, ಕೃಣಾಲ್ 41★; ಇಶಾನ್ 33/2

ಟೆನಿಸ್: ಭಾರತ ಜೋಡಿಗೆ ಕಿರೀಟ

ಬೆಂಗಳೂರು: ಎಸ್.ಎಂ. ಕೃಷ್ಣ ಮೆಮೋರಿಯಲ್ ಓಪನ್ ಟೆನಿಸ್ ಟೂರ್ನಿಯಲ್ಲಿ ನಾಲ್ಕನೇ ಶ್ರೇಯಾಂಕಿತ ಪೆಟರ್ ಬಾರ್ ಬಿರಿಯುಕೊವ್ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದರೆ, ಭಾರತದ ಆದಿಲ್ ಕಲ್ಯಾಣಪುರ ಮತ್ತು ಮುಕುಂದ್ ಶಶಿಕುಮಾರ್ ಜೋಡಿ ಡಬಲ್ಸ್ ಚಾಂಪಿಯನ್ ಆಗಿ ಮಿಂಚಿತು.

ಶನಿವಾರ ನಡೆದ ಸಿಂಗಲ್ಸ್ ಫೈನಲ್‌ನಲ್ಲಿ ಬಿರಿಯುಕೊವ್, ಮಾಜಿ ವಿಶ್ವ ನಂ. 40 ಆಟಗಾರ ಇಲ್ಯಾ ಇವಾಶ್ಕಾ ವಿರುದ್ಧ 7-6 (0), 4-6, 6-4 ಅಂತರದಲ್ಲಿ ಗೆದ್ದು ಚಾಂಪಿಯನ್ ಪಟ್ಟ ಅಲಂಕರಿಸಿದರು. ಈ ಗೆಲುವಿನೊಂದಿಗೆ ಬಿರಿಯುಕೊವ್ ತಮ್ಮ ವೃತ್ತಿಜೀವನದ ಮೊದಲ ಎಟಿಪಿ ಚಾಲೆಂಜರ್ ಪ್ರಶಸ್ತಿ ಗೆದ್ದರು. ಅವರಿಗೆ 9,500 ಅಮೆರಿಕನ್ ಡಾಲರ್ ಬಹುಮಾನ ಹಾಗೂ 50 ಎಟಿಪಿ ಅಂಕಗಳು ಲಭಿಸಿದವು.

ಡಬಲ್ಸ್‌ನಲ್ಲಿ ಭಾರತ ಕಿಂಗ್: ನಂತರ ನಡೆದ ಡಬಲ್ಸ್ ಫೈನಲ್‌ನಲ್ಲಿ ಆದಿಲ್ ಕಲ್ಯಾಣಪುರ ಮತ್ತು ಮುಕುಂದ್ ಶಶಿಕುಮಾರ್ ಜೋಡಿ, ಬಿರಿಯುಕೊವ್ ಹಾಗೂ ಕಝಾಕಿಸ್ತಾನದ ಗ್ರಿಗೊರಿಯ್ ಲೊಮಾಕಿನ್ ವಿರುದ್ಧ 6-7 (3), 6-4, 10-3 ಅಂತರದಲ್ಲಿ ಭರ್ಜರಿ ಗೆಲುವು ದಾಖಲಿಸಿತು. ಇದು ಆದಿಲ್ ಮತ್ತು ಮುಕುಂದ್ ಅವರ ಮೊದಲ ಎಟಿಪಿ ಚಾಲೆಂಜರ್ ಡಬಲ್ಸ್ ಪ್ರಶಸ್ತಿಯಾಗಿದೆ.



ಮೊದಲ ದಿನವೇ ನೋವಾಕ್ ಜೋಕೊವಿಚ್ ಕಣಕ್ಕೆ

ಇಂದಿನಿಂದ ಫ್ರೆಂಚ್ ಓಪನ್



ಪ್ಯಾರಿಸ್: ಟೆನಿಸ್ ಲೋಕದ ಪ್ರಮುಖ ಪಂದ್ಯಾವಳಿಗಳಲ್ಲಿ ಒಂದಾದ, ಗ್ರ್ಯಾಂಡ್ ಸ್ಲಾಮ್ ಫ್ರೆಂಚ್ ಓಪನ್ ಅಲಿಯಾಸ್ ರೋಲ್ಯಾಂಡ್ ಗ್ಯಾರೋಸ್ ಭಾನುವಾರದಿಂದ ಶುರುವಾಗಲಿದೆ. ತೀವ್ರ ಪೈಪೋಟಿಯಿಂದ ಕೂಡಿರುವ ಪಂದ್ಯಾವಳಿಯ ಮೊದಲ ದಿನವೇ ಪ್ರಮುಖ ಟೆನಿಸ್ ಪಟುಗಳು ಕಣಕ್ಕಿಳಿಯಲಿದ್ದಾರೆ. ಭಾನುವಾರದಂದು ಮುಖ್ಯ ಡ್ರಾ ಮೊದಲ ಪಂದ್ಯ ನಡೆಯಲಿದೆ. ಜೂನ್ 7ರಂದು ನಡೆಯಲಿರುವ ಪುರುಷರ ಸಿಂಗಲ್ಸ್ ಫೈನಲ್‌ನೊಂದಿಗೆ ಪಂದ್ಯಾವಳಿಗೆ ತೆರೆ ಬೀಳಲಿದೆ.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ನಡೆಯುವ ಈ ಕೂಟವು ಐದು ವಿಭಾಗಗಳಲ್ಲಿ ನಡೆಯುತ್ತದೆ. ಪಂದ್ಯಾವಳಿಯ ವಿಜೇತರಿಗೆ ವಿಶೇಷ ಬಹುಮಾನದ ಜತೆಗೆ 200 ಎಟಿಪಿ ಅಂಕಗಳು ಸಿಗಲಿವೆ. ಅರ್ಹತಾ ಸುತ್ತಿನ ಪಂದ್ಯಗಳು ಶನಿವಾರದಂದು ಪೂರ್ಣಗೊಂಡಿದ್ದು, ಮುಖ್ಯ ಡ್ರಾನ ಮೊದಲ ಪಂದ್ಯದಲ್ಲಿ ಅಲೆಜಾಂಡ್ರೊ ಡೇವಿಡೋವಿಚ್ ಹಾಗೂ ದಾಮಿರ್ ವಿರುದ್ಧ ನಡೆಯಲಿದೆ. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಲೂಸಿಯಾ ಬ್ರೊಂಜೆಟ್ಟಿ, ಮಾರೀ ಬೌಜ್ಕೋವಾ ವಿರುದ್ಧ ನಡೆಯಲಿದೆ.

ದಿನದ ಪ್ರಮುಖ ಪಂದ್ಯಗಳು:

ಬೊಂಜಿ-ಜ್ವೆರೆವ್: ವಿಶ್ವದ ಅಗ್ರ ಶ್ರೇಯಾಂಕಿತ ಆಟಗಾರರಲ್ಲಿ ಒಬ್ಬರಾದ ಬೆಂಜಾಮಿನ್ ಬೊಂಜಿ ಮತ್ತು ಅಲೆಕ್ಸಾಂಡರ್ ಜ್ವೆರೆವ್ ಭಾನುವಾರದ ಪಂದ್ಯದಲ್ಲಿ ಮುಖಾಮುಖಿಯಾಗಲಿದ್ದಾರೆ. ಸಂಜೆ 4:40ಕ್ಕೆ ಈ ಪಂದ್ಯ ನಡೆಯಲಿದೆ. ಹಿಂದಿನ ಕೂಟಗಳಲ್ಲಿ ಉತ್ತಮ ಪ್ರದರ್ಶನ ನೀಡಿರುವ ಜ್ವೆರೆವ್ ಗೆಲುವಿನ ಆರಂಭದ ವಿಶ್ವಾಸದಲ್ಲಿದ್ದಾರೆ.

ಟೇಲರ್ ಫ್ರಿಟ್ಜ್-ನಿಶೇಶ್ ಬಸವರೆಡ್ಡಿ: ಅಮೆರಿಕದ ಟೇಲರ್ ಫ್ರಿಟ್ಜ್ ಸ್ವದೇಶದ ಬಸವರೆಡ್ಡಿ ಅವರನ್ನು ಎದುರಿಸಲಿದ್ದಾರೆ. ವಿಶ್ವ ಶ್ರೇಯಾಂಕದಲ್ಲಿ ಉತ್ತಮ ಪ್ರದರ್ಶನ ನೀಡಿರುವ ಫ್ರಿಟ್ಜ್ ನಿರೀಕ್ಷೆಗಳೊಂದಿಗೆ ಪಂದ್ಯಾವಳಿಗೆ ಬಂದಿದ್ದು, ತಮ್ಮ ಮೊದಲನೇ ಕಿರೀಟಕ್ಕಾಗಿ ಫೈಟ್ ನಡೆಸುತ್ತಿದ್ದಾರೆ. ಅತ್ತ ಅಮೆರಿಕ ಪ್ರತಿನಿಧಿಸಿರುತ್ತಿರುವ ನಿಶೇಶ್ ಕೂಡ ಗೆಲುವಿಗಾಗಿ ಪೈಪೋಟಿ ನಡೆಸಲಿದ್ದಾರೆ.

ಪಂದ್ಯಾವಳಿಯ ವೇಳಾಪಟ್ಟಿ

- ಮೇ 24-ಮೇ 26: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ಮೊದಲ ಸುತ್ತು
- ಮೇ 27-ಮೇ 28: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ಎರಡನೇ ಸುತ್ತು
- ಮೇ 29-ಮೇ 30: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ಮೂರನೇ ಸುತ್ತು
- ಮೇ 31-ಜೂನ್ 1: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ನಾಲ್ಕನೇ ಸುತ್ತು
- ಜೂನ್ 2-ಜೂನ್ 3: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ಕ್ವಾರ್ಟರ್-ಫೈನಲ್ಸ್
- ಜೂನ್ 4: ಮಹಿಳಾ ಸಿಂಗಲ್ಸ್ - ಸೆಮಿಫೈನಲ್ಸ್
- ಜೂನ್ 5: ಪುರುಷರ ಸಿಂಗಲ್ಸ್ - ಸೆಮಿಫೈನಲ್ಸ್
- ಜೂನ್ 6: ಮಹಿಳಾ ಸಿಂಗಲ್ಸ್ - ಫೈನಲ್
- ಜೂನ್ 7: ಪುರುಷರ ಸಿಂಗಲ್ಸ್ - ಫೈನಲ್

ಈ ಪಂದ್ಯ ಸಂಜೆ 5:20ಕ್ಕೆ ನಡೆಯಲಿದೆ.

ಜಿಯೋವಾನಿ ಪೆರಿಕಾರ್ಡ್-ನೋವಾಕ್ ಜೋಕೊವಿಚ್: ಸರ್ಬಿಯಾದ ಟೆನಿಸ್ ದಿಗ್ಗಜ ನೋವಾಕ್ ಜೋಕೊವಿಚ್ ಪಂದ್ಯಾವಳಿಯ ಮೊದಲ ದಿನವೇ ಮೈದಾನಕ್ಕಿಳಿಯಲಿದ್ದಾರೆ. ವಿಶ್ವ ಶ್ರೇಯಾಂಕದಲ್ಲಿ ಅತ್ಯುನ್ನತ ದಾಖಲೆಗಳನ್ನು ಹೊಂದಿರುವ ಜೋಕೊವಿಚ್ ಪಂದ್ಯಾವಳಿಯ ಗೆಲುವಿನ ಫೇವರಿಟ್ ಆಗಿದ್ದಾರೆ. ಮೊದಲ ಪಂದ್ಯದಲ್ಲಿ ಜಿಯೋವಾನಿ ಅವರನ್ನು ಎದುರಿಸಲಿದ್ದು, ಪಂದ್ಯ ತಡರಾತ್ರಿ 11:45ಕ್ಕೆ ನಡೆಯಲಿದೆ.

ಮಹಿಳೆಯರ ವಿಭಾಗದಲ್ಲೂ ಸ್ಟಾರ್ ಆಟಗಾರರಿದ್ದು, ಆದರೆ ಅಗ್ರ ಶ್ರೇಯಾಂಕಿತ ಆಟಗಾರರು ಎರಡನೇ ದಿನ ಮುಖಾಮುಖಿಯಾಗಲಿದ್ದಾರೆ. ಮೊದಲ ದಿನದ ಗಮನಿಸಬೇಕಾದ ಪಂದ್ಯದಲ್ಲಿ ಚೀನಾದ ವಾಂಗ್ ಹಾಗೂ ಟಾಗರ್ ಪಂದ್ಯವಾಡಲಿದ್ದಾರೆ.

ಗೌತಮ್ ನಾಯರ್ ಮುಡಿಗೇರಿದ ಪ್ರಶಸ್ತಿ

ವಿಜಯಪುರ: 15 ವರ್ಷದ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರಿನ ಗೌತಮ್ ಎಸ್ ನಾಯರ್ ಬೆಂಗಳೂರು ಗ್ರಾಮಾಂತರದ ಯಶವರ್ಧನ್ ಎಸ್. ಆರ್. ವಿರುದ್ಧ 21-12, 21-19 ಅಂತರದಿಂದ ಜಯಗಳಿಸಿ ಪಂದ್ಯಾವಳಿ ಮುಡಿಗೇರಿಸಿಕೊಂಡರು.

15 ವರ್ಷದ ಬಾಲಕಿಯರ ಸಿಂಗಲ್ಸ್ ಬೆಂಗಳೂರಿನ ಮಹಿತಾ ನಾಯ್ಡು, ಸ್ಮೃತಿ ಎಸ್. ವಿರುದ್ಧ 21-10, 21-7ರಿಂದ ಗೆದ್ದರು.ಇಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಯೋನೆಕ್ಸ್ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಬ್ಯಾಡ್ಮಿಂಟನ್ ಪಂದಾವಳಿಗೆ ಶನಿವಾರ ತೆರೆ ಬಿದ್ದಿತು.

ಜೋಡಿ ವಿಭಾಗದಲ್ಲಿ: 15 ವರ್ಷದ ಬಾಲಕರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಚೇತಸ್ ಮುಂಡರಗಿ, ವಿಶಾಲ್ ಡಿ. ಆನಂದ್ ಕೊಡಗಿನ ಗೌತಮ್ ಎಸ್. ನಾಯರ್, ಬೆಂಗಳೂರಿನ ಸಿದ್ಧಾರ್ಥ್ ಎಸ್. ನಾಯರ್ ವಿರುದ್ಧ 14-21, 21-14, 21-16 ಜಯಗಳಿಸಿದರು.15 ವರ್ಷದ ಬಾಲಕಿಯರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಹಂಸಾ ಮುರಳಿಧರ, ಮಹಿತಾ ನಾಯ್ಡು ಬೆಂಗಳೂರಿನ ಜೀವಿಕಾಹ್ ಸಾಯಿ ರಾಜೇಶ್ ಕುಮಾರ್, ಮನಿಕಾ ನವೀನ್ ವಿರುದ್ಧ 21-18, 21-15ಗೆದ್ದರು.




ಯಶವರ್ಧನ್-ಆದಿತಿ ಚಾಂಪಿಯನ್: 15 ವರ್ಷದ ಮಿಶ್ರ ಡಬಲ್ಸ್ ವಿಭಾಗದಲ್ಲಿ ಯಶವರ್ಧನ್ ಎಸ್.ಆರ್., ಆದಿತಿ ಸುಶಾಂತ್, ಬಿ.ಬಿ. ವಿಶಾಲ್ ಉತ್ತಪ್ಪ ಹಾಗೂ ಹನ್ಸಿಕಾ ರಾಕೇಶ್ ವಿರುದ್ಧ ಗೆದ್ದರು. 17 ವರ್ಷದ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರಿನ ಪೀಯೂಷ್ ತ್ರಿಪಾಠಿ, ಡಿಲನ್ ಪಿ. ತೋಕ್ಚೊಂ ವಿರುದ್ಧ 21-19, 10-21, 21-17 ಅಂತರದಿಂದ ಗೆದ್ದರು. 17 ವರ್ಷದ ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಆದಿತಿ ಸುಶಾಂತ್ ಕೀರ್ತಿ ಬಾಲಾಜಿ ವಿರುದ್ಧ 21-18, 21-16 ಗೆದ್ದರು.

17 ವರ್ಷದ ಬಾಲಕರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಮೆಹುಲ್ ಮನವ್ ಅರುಳ್ಮುರುಗನ್, ಸಾತ್ವಿಕ್ ಎಸ್ ಪ್ರಭು, ಚಿರಾಗ್ ಪ್ರಕಾಶ್, ಬೆಂಗಳೂರಿನ ನಿಕೇತನ ಹರಿ ಎನ್.ಡಿ. ವಿರುದ್ಧ 15-21, 21-19, 21-18 ಗೆದ್ದರೆ, ಬಾಲಕಿಯರಲ್ಲಿ ದಿಶಾ ರವಿ ಭಟ್, ತನ್ವಿ ಮುನೋತ್ ಅವರು ರಕ್ಷಾ ಎನ್., ಶ್ರಿಯಾ ಜೋಶಿ ವಿರುದ್ಧ 21-11, 21-13 ಗೆದ್ದರು. 17 ವರ್ಷದ ಮಿಶ್ರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಈಶ್ವರ್ ಸಾಯಿ ಕಟಂ, ಡೆಬೋರಾ ಜಾನ್ ಅವರು ಚಿರಾಗ್ ಪ್ರಕಾಶ್, ಬೆಂಗಳೂರಿನ ತನ್ವಿ ಮುನೋತ್ ವಿರುದ್ಧ 21-17, 21-16 ಅಂತರದಿಂದ ಜಯಗಳಿಸಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5993

ಎಡದಿಂದ ಬಲಕ್ಕೆ
2.ಸಂಸ್ಕೃತದಿಂದ ಹುಟ್ಟಿದ ಶಬ್ದ (3)
5.ಸ್ವೇಚ್ಛೆಯಾಗಿ ಅಡ್ಡಾಡುವ ಜಾನುವಾರು (4)
6.ಜೊತೆಯಲ್ಲಿರುವವನು-ಒಡನಾಡಿ (4)
7.ಚಾಣಾಕ್ಷತನಕ್ಕೆ ಹೆಸರಾದ ಪ್ರಾಣಿ (2)
9.ದೇವರಿಂದ ಸಿಕ್ಕ ವಿಶೇಷ ಅನುಗ್ರಹ (2)
10.ಭೌತಶಾಸ್ತ್ರದಲ್ಲಿ ಕಂಪನಗಳ ಚಲನೆ (3)
12.ತನ್ನ ದೇಹದಿಂದ ಜನಿಸಿದವನು-ಮಗ (3)
14.ಮಳೆ ಬರುವ ಸಮಯ-ವರ್ಷಕಾಲ (5)
15.ಹತ್ತು ಕುತ್ತಿಗೆಗಳನ್ನು ಹೊಂದಿದವನು-ರಾವಣ (4)
16.ಬಯಲುಸೀಮೆಯಲ್ಲಿ ಕಂಡುಬರುವ ಮುಳ್ಳಿನಮರ (4)

ಮೇಲಿನಿಂದ ಕೆಳಕ್ಕೆ
1.ಮಂತ್ರಪೂರ್ವಕವಾಗಿ ಅಂಗೈಯ ನೀರನ್ನು ಹೀರುವ ಕ್ರಿಯೆ(4)
2.'ಅಂತ್ಯದವರೆಗೆ' ತಲೆಕೆಳಗಾಗಿದೆ (5)
3.ಚೈತ್ರ-ವೈಶಾಖ ಮಾಸಗಳ ಕಾಲ (5)
4.ಹಾವುಗಳನ್ನು ಆಕರ್ಷಿಸುತ್ತದೆ ಎನ್ನುವ ವಾದ್ಯ (4)
8.ಬಣ್ಣದ ಕೆಲಸ ಮಾಡುವವ ತಲೆಕೆಳಗಾಗಿದ್ದಾನೆ (3)
9.ವಸ್ತುವಿನ ಭಾರ ಸೂಚಿಸುವ ಪದ (3)
10.ತಾತ್ವಿಕ ವಿಚಾರಗಳುಳ್ಳ ಹಾಡು (4)
11.ಅಗ್ರಜ ಏರಿ ಕುಳಿತದ್ದು ಈ ಆನೆಯ ಮೇಲೆ (2)
12.ಬೆಳಕಿನ ಅಭಾವ-ಸಾಹಿತ್ಯದಲ್ಲಿ ಅಜ್ಞಾನ (2)
13.ಹೋರಾಟದಲ್ಲಿ ಗೆಲುವು ಸಾಧಿಸಿದವನು (4)

5992 ಉತ್ತರ

ಎಡದಿಂದ ಬಲಕ್ಕೆ:
2.ತರಂಗ 5.ಜ್ಞಾನಿ
6.ರೋಷ 7.ಲಜ್ಜೆಗೇಡಿ
9.ಕ್ಷಮಾಗುಣ
11.ಬೆಣ್ಣೆಕಾಸು
13.ಹಸಿಮಾಂಸ 15.ಲೆಕ್ಕಣಿ
16.ಜಹಾಂಗೀರ್
17.ಜಮಾವಣೆ

ಮೇಲಿನಿಂದ ಕೆಳಕ್ಕೆ :
1.ಪುಣ್ಯಕಾಲ 2.ತನಿಗಿಡಿ
3.ಕ್ಷಯರೋಗ
4.ಆಮಂತ್ರಣ
8.ಗೇರೆಣ್ಣೆ 10.ಮಾನಸಿ
11.ಸುರರಾಜ 12.ಬೆಲೆ
13.ಹಣಿ 14.ಸಮರ್ಪಣೆ

ಕಿರುಸುದ್ದಿ

ಕಲಬುರಗಿಯಲ್ಲಿ ವಿದ್ಯಾರ್ಥಿನಿ ಆತ್ಮಹತ್ಯೆ



ಕಲಬುರಗಿ: ನೀಟ್ ಪರೀಕ್ಷೆ ಬರೆದಿದ್ದ 18 ವರ್ಷದ ವಿದ್ಯಾರ್ಥಿನಿ ಭಾಗ್ಯಶ್ರೀ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕಲಬುರಗಿಯ ಕೋರ್ಟ್ ವೃತ್ತದ ಬಳಿಯ ಅಪಾರ್ಟ್‌ಮೆಂಟ್‌ನಲ್ಲಿ ಶನಿವಾರ ನಡೆದಿದೆ. ಮೇ 2ರಂದು ನೀಟ್ ಪರೀಕ್ಷೆ ಬರೆದಿದ್ದ ಭಾಗ್ಯಶ್ರೀಗೆ ಪರೀಕ್ಷೆಯ ಬಗ್ಗೆ ಉತ್ತಮ ನಿರೀಕ್ಷೆ ಇದ್ದು, ಕೆಲವೊಂದು ಆತಂಕವೂ ಇದ್ದಿರಬಹುದು ಎಂದು ಪ್ರಾಥಮಿಕವಾಗಿ ತಿಳಿದುಬಂದಿದೆ. ಆದರೆ, ಆತ್ಮಹತ್ಯೆಗೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಕುಟುಂಬಸ್ಥರ ಹೇಳಿಕೆಯಂತೆ ಭಾಗ್ಯಶ್ರೀ ಸದಾ ಸಾಮಾನ್ಯವಾಗಿ ಇದ್ದು, ಮನೆಯಲ್ಲಿ ಯಾವುದೇ ಗಂಭೀರ ಸಮಸ್ಯೆಗಳಿಲ್ಲದೆ ಇದ್ದಳು. ಪಿಯುಸಿಯಲ್ಲಿ ಆಕೆ 92% ಅಂಕಗಳನ್ನು ಪಡೆದಿದ್ದಳು ಎಂಬುದು ಕುಟುಂಬದ ಮೂಲಗಳಿಂದ ತಿಳಿದುಬಂದಿದೆ. ಘಟನೆಯ ಬಳಿಕ ಮೃತಳ ತಂದೆ ರಾಜಶೇಖರ್ ಮಾಧ್ಯಮಗಳ ಮುಂದೆ ಮಾತನಾಡಿ, ಕಣ್ಣೀರು ಹಾಕಿದ್ದು, ಅವಳು ಯಾವುದೇ ಕಾರಣ ಹೇಳಿಲ್ಲ. ನಾವು ಯಾರ ಮೇಲೂ ದೂರು ನೀಡುವುದಿಲ್ಲ ಎಂದು ತಿಳಿಸಿದ್ದಾರೆ. ಈ ಘಟನೆ ಕಲಬುರಗಿಯ ಸ್ಟೇಷನ್ ಬಜಾರ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಅಪಘಾತ: ಸವಾರ ಸಾವು

ಹಾವೇರಿ: ಮುಂದೆ ಹೋಗುತ್ತಿದ್ದ ಬೈಕ್‌ಗೆ ಹಿಂದಿನಿಂದ ಬಂದ ಮತ್ತೊಂದು ಬೈಕ್ ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ಸವಾರ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ನಡೆದಿದೆ. ದಾವಣಗೆರೆ ಜಿಲ್ಲೆ ಹರಿಹರ ತಾಲೂಕು ಯಲವಟ್ಟಿ ಗ್ರಾಮದ ದೇವರಾಜ ಡಿ.ತಂದೆ ಬಸಪ್ಪ (45) ಮೃತಪಟ್ಟ ಬೈಕ್ ಸವಾರ. ಶಿವಮೊಗ್ಗ ಮೂಲದ ಕರಣ್ ಧೂಮ್ಮಿ ಎಂಬಾತನ ವಿರುದ್ಧ ದೂರು ದಾಖಲಾಗಿದೆ. ಅಪಘಾತದಲ್ಲಿ ತಲೆಗೆ ಹಾಗೂ ದೇಹದ ಇತರ ಭಾಗಗಳಿಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಹಳ್ಳೂರ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆಂದು ದಾಖಲಿಸಿದ್ದಾಗ ಉಪಚಾರ ಫಲಿಸದೆ ಮೃತಪಟ್ಟಿದ್ದಾರೆ ಎಂದು ಮೃತರ ಸಂಬಂಧಿ ರಾಜಪ್ಪ ಕೊಟ್ರಪ್ಪ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೃದ್ಧ ಆತ್ಮಹತ್ಯೆ

ಬನವಾಸಿ: ವಿಷ ಸೇವಿಸಿ ವ್ಯಕ್ತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡ ಘಟನೆ ಶನಿವಾರ ಬನವಾಸಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜರುಗಿದೆ. ಸಮೀಪದ ವಡ್ಡಿನಕೊಪ್ಪ ಗ್ರಾಮದ ಗುಡ್ಡಪ್ಪ ಸಿದ್ದಪ್ಪ ಕಬ್ಬೇರ(85) ಮೃತ ದುರ್ದೈವಿ. ಮೃತ ವ್ಯಕ್ತಿಯು ಕಳೆದ 10 ವರ್ಷಗಳಿಂದ ಪಾರ್ಶ್ವವಾಯು ಕಾಯಿಲೆಯಿಂದ ಬಳಲುತ್ತಿದ್ದು, ಇದರಿಂದ ಮನನೊಂದು ಮೇ 20ರಂದು ವಿಷ ಸೇವಿಸಿದ್ದ ಇವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಶನಿವಾರದಂದು ಮೃತಪಟ್ಟಿದ್ದಾರೆ. ಬನವಾಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿಕೆ

ರೋಜಗಾರ್ ಮೇಳ ಯುವ ಪೀಳಿಗೆಗೆ ವರದಾನ



- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರೋಜಗಾರ್ ಮೇಳವನ್ನು ಉದ್ಘಾಟಿಸಿ, ಕಾರ್ಯಕ್ರಮವನ್ನು ಉದ್ದೇಶಿಸಿ ಮಾಡಿದ ಭಾಷಣವನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ವೀಕ್ಷಿಸಲಾಯಿತು.
- ಮೇಳದಲ್ಲಿ ಹೊಸದಾಗಿ ನೇಮಕಾತಿಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಣೆ ಮಾಡಲಾಯಿತು.

ಹುಬ್ಬಳ್ಳಿ: ಯುವ ಪೀಳಿಗೆಗೆ ರೋಜಗಾರ್ ಮೇಳ ವರದಾನವಾಗಿದೆ. ಮೇಳವು ಸುಸ್ಥಿರ ಹಾಗೂ ಸದೃಢ ಭವಿಷ್ಯವನ್ನು ರೂಪಿಸುತ್ತಿದೆ. ದೇಶದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಮಹತ್ವದ್ದಾಗಿದ್ದು, 2047ರ ವೇಳೆಗೆ ವಿಕಸಿತ ಭಾರತವನ್ನಾಗಿ ರೂಪಿಸಲು ಯುವಪೀಳಿಗೆಯ ಕೊಡುಗೆ ಅತಿ ಮುಖ್ಯವಾಗಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ರೈಲ್ವೆ ಆಫೀಸರ್ಸ್ ಕ್ಲಬ್‌ನಲ್ಲಿ ರೈಲ್ವೆ ಇಲಾಖೆಯಿಂದ ಆಯೋಜಿಸಿದ್ದ ರೋಜಗಾರ್ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರೋಜಗಾರ ಮೇಳದಡಿ ಸರ್ಕಾರಿ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಯನ್ನು ವೇಗಗೊಳಿಸಲು ಇಂದು ದೇಶದಾದ್ಯಂತ 47ಕ್ಕೂ ಹೆಚ್ಚಿನ ಸ್ಥಳಗಳಲ್ಲಿ 51,000ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ಸರ್ಕಾರಿ ಉದ್ಯೋಗಗಳ ನೇಮಕಾತಿ ಪತ್ರ ವಿತರಿಸಲಾಗುತ್ತಿದೆ ಎಂದರು.

ಈ ಭಾಗದ ಸುಮಾರು ಒಟ್ಟು 150 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರವನ್ನು ವಿತರಣೆ ಮಾಡಲಾಗುತ್ತದೆ. ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಯುವಕರು ಕೊಡುಗೆ ನೀಡಬೇಕು ಎಂದು ಕೇಂದ್ರ ಸಚಿವರು ತಿಳಿಸಿದರು.

ಕಾರ್ಯಕ್ರಮದಲ್ಲಿ ರೈಲ್ವೆ ಜನರಲ್ ಮ್ಯಾನೇಜರ ಪಿ. ಅನಂತ, ಡಿವಿಜನಲ ರೈಲ್ವೆ ಮ್ಯಾನೇಜರ ಬೇಲಾ ಮೀನಾ, ರೈಲ್ವೆ ಇಲಾಖೆಯ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಿತ್ತನೆ ಬೀಜಕ್ಕಾಗಿ ಕೃಷಿ ಕೇಂದ್ರದ ಎದುರು ಅನ್ನದಾತನ ಜಾಗರಣೆ



ಹಾವೇರಿ: ಜಿಲ್ಲೆಯ ಸವಣೂರು ತಾಲೂಕು ತೆವರಮೆಳ್ಳಿಹಳ್ಳಿ ಕೃಷಿ ಕೇಂದ್ರದಲ್ಲಿ ಶುಕ್ರವಾರ ತಡರಾತ್ರಿ ನೂರಾರು ರೈತರು ರಾತ್ರಿ ಇಡೀ ಕ್ಯೂನಲ್ಲಿ ನಿಂತು, ನಂತರ ಅಲ್ಲಿಯೇ ಮಲಗಿ ಬೀಜಕ್ಕಾಗಿ ಕಾಯುತ್ತಾ ಜಾಗರಣೆ ನಡೆಸಿದ ಪ್ರಸಂಗ ಕಂಡು ಬಂದಿದೆ. ಬಿತ್ತನೆ ಕಾಲ ಸಮೀಪಿಸುತ್ತಿದ್ದು, ಬಿತ್ತನೆಗೆ ಯಾವುದೇ ರೀತಿ ವಿಳಂಬವಾಗಬಾರದು ಎಂಬ ಕಾರಣಕ್ಕೆ ಕೆಲ ರೈತರು ಕುಟುಂಬ ಸಮೇತ ಬಂದು ಕೃಷಿ ಕೇಂದ್ರದದಲ್ಲಿ ಸರದಿಯಲ್ಲಿ ನಿಲ್ಲುವ ಬದಲು ಮಲಗಿಕೊಂಡೇ ಸರದಿಯನ್ನು ನಿರ್ವಹಿಸಿದ ವಿಚಿತ್ರ ಘಟನೆ ನಡೆದಿದೆ. ಸಾಕಷ್ಟು ಜನರು ಅಲ್ಲಿ ಸೇರಿದ್ದರಿಂದ ಬಹುತೇಕರು ಪರಸ್ಪರ ಮಾತನಾಡುತ್ತಾ, ಕೆಲವರು ಮೊಬೈಲ್ ನಲ್ಲಿ ಸಮಯ ಕಳೆದು ಬೆಳಕು ಹರಿಸಿದರು. ಬೆಳಗ್ಗೆ ಎದ್ದು, ಸರದಿ ಸಾಲಿನಲ್ಲಿ ನಿಂತು ಬೀಜ ಖರೀದಿಸಿದರು.

ರೈತರ ಆಕ್ರೋಶ
ಜಿಲ್ಲೆಯ ವಿವಿಧ ಭಾಗಗಳ ಕೃಷಿ ಕೇಂದ್ರಗಳಲ್ಲೂ ಬಿತ್ತನೆ ಬೀಜಕ್ಕಾಗಿ ಹಗಲು-ರಾತ್ರಿ ನೂಕುನುಗ್ಗಲು ಉಂಟಾಗುತ್ತಿದೆ. ಬೇಡಿಕೆಗೆ ತಕ್ಕಂತೆ ಬೀಜ ಪೂರೈಕೆ ಆಗದ ಹಿನ್ನೆಲೆಯಲ್ಲಿ ರೈತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತಕ್ಷಣವೇ ಅಗತ್ಯ ಪ್ರಮಾಣದ ಬೀಜ ಪೂರೈಕೆ ಮಾಡಿ, ಸಮರ್ಪಕವಾಗಿ ವಿತರಣೆಗೆ ಕ್ರಮ ಕೈಗೊಳ್ಳಬೇಕು ಎಂದು ರೈತರು ಕೃಷಿ ಇಲಾಖೆ ಅಧಿಕಾರಿಗಳಿಗೆ ಆಗ್ರಹಿಸಿದ್ದಾರೆ.

ಬಾಂಗ್ಲಾ ನುಸುಳುಕೋರರು ಬಂದಿರುವ ಶಂಕೆ

ಹೊಸ ಬಸ್ ನಿಲ್ದಾಣದಲ್ಲಿ ಪರಿಶೀಲನೆ



ಹುಬ್ಬಳ್ಳಿ: ಪಶ್ಚಿಮ ಬಂಗಾಳದಿಂದ ರೈಲು ಮುಖಾಂತರ ಬಾಂಗ್ಲಾ ನುಸುಳುಕೋರರು ನಗರಕ್ಕೆ ಆಗಮಿಸಿದ್ದಾರೆ ಎಂದು ಶಂಕಿಸಿ ನಗರದ ಹೊಸ ಬಸ್ ನಿಲ್ದಾಣದಲ್ಲಿ ಅನುಮಾನಸ್ಪದ 230 ಕ್ಕೂ ಹೆಚ್ಚು ಜನರನ್ನು ಶನಿವಾರ ಪೊಲೀಸರು ಪರಿಶೀಲಿಸಿದರು.

ಪಶ್ಚಿಮ ಬಂಗಾಳದಿಂದ ರೈಲು ಮೂಲಕ ಹುಬ್ಬಳ್ಳಿಗೆ ಆಗಮಿಸಿದ್ದರು. ಇಲ್ಲಿಂದ ಗೋವಾಕ್ಕೆ ಬಸ್ ನಲ್ಲಿ ತೆರಳುತ್ತಿದ್ದರು. ಆದರೆ, ಹಿಂದೂ ಪರ ಸಂಘಟನೆಗಳಿಗೆ ಬಾಂಗ್ಲಾ ದೇಶದ ವಲಸಿಗರು ಹೌರಾ ಅಮರಾವತಿ ಎಕ್ಸ್‌ಪ್ರೆಸ್ ರೈಲು ಮೂಲಕ ಭಾರತಕ್ಕೆ ನುಸುಳಿದ್ದಾರೆಂಬ ಮಾಹಿತಿ ಮೇರೆಗೆ ಪೊಲೀಸರು ಅವರನ್ನು ತಡೆದು ದಾಖಲಾತಿಗಳನ್ನು ಪರಿಶೀಲಿಸಿದರು.

ಈ ವೇಳೆ ಬಾಂಗ್ಲಾದಿಂದ ಯಾವುದೇ ನುಸುಳುಕೋರರು ಬಂದಿರುವ ಬಗ್ಗೆ ಯಾವುದೇ ಪುರಾವೆಗಳು ದೊರೆಯಲಿಲ್ಲ. ಇವರೆಲ್ಲ ಪಶ್ಚಿಮ ಬಂಗಾಳ, ಬಿಹಾರ, ಓರಿಸಾದಿಂದ ಆಗಮಿಸಿದ್ದ 230ಕ್ಕೂ ಹೆಚ್ಚು ಕಾರ್ಮಿಕರಾಗಿದ್ದು, ಚುನಾವಣೆಯಲ್ಲಿ ಮತದಾನ ಮಾಡಲೆಂದು ತೆರಳಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕ್ಯಾಸಲರಾಕ್ ಬಳಿ ರೈಲ್ವೆ ಟ್ರ್ಯಾಕ್ ದುರಸ್ತಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಉತ್ತರ ಭಾರತದಿಂದ ಹುಬ್ಬಳ್ಳಿ ಮಾರ್ಗವಾಗಿ ಗೋವಾಕ್ಕೆ ನೇರ ರೈಲು ಸಂಪರ್ಕ ಕಡಿತವಾಗಿದೆ. ಇದರಿಂದಾಗಿ ಹುಬ್ಬಳ್ಳಿಯಲ್ಲಿ ರೈಲುಗಳು ನಿಲುಗಡೆ ಆಗುತ್ತಿವೆ. ಹೀಗಾಗಿ ಕಳೆದ ಕೆಲ ತಿಂಗಳಿನಿಂದ ಗೋವಾಕ್ಕೆ ತೆರಳುವ ಪ್ರಯಾಣಿಕರು ಹುಬ್ಬಳ್ಳಿಯಲ್ಲಿ ಇಳಿದು, ಇಲ್ಲಿಂದ ಬಸ್ ಮೂಲಕ ಗೋವಾಕ್ಕೆ ತೆರಳುತ್ತಿದ್ದಾರೆ ಎಂದು ತಿಳಿದುಬಂದಿದೆ.

ರೈಲು ಮೂಲಕ ಬಾಂಗ್ಲಾ ನುಸುಳುಕೋರರು ಆಗಮಿಸಿದ್ದಾರೆಂಬ ಮಾಹಿತಿ ತಿಳಿದು ಶಾಸಕ ಮಹೇಶ ಟೆಂಗಿನಕಾಯಿ ಹೊಸ ಬಸ್ ನಿಲ್ದಾಣಕ್ಕೆ ಭೇಟಿ ಕೊಟ್ಟು ಪರಿಶೀಲಿಸಿದರು. ಪೊಲೀಸರಿಂದ ಈ ಬಗ್ಗೆ ಮಾಹಿತಿ ಪಡೆದುಕೊಂಡರು.

> ವಿವಿಧ ರಾಜ್ಯದಿಂದ ದುಡಿಯಲು 230 ಜನರು ಆಗಮಿಸಿದ್ದು, ಅವರನ್ನು ಪೊಲೀಸರು ಪರಿಶೀಲಿಸಿದ್ದು ಯಾವುದೇ ಅನುಮಾನವಿಲ್ಲ. ಇಲ್ಲಿಂದ ರಾಜ್ಯದ ಬೇರೆ ಬೇರೆ ಜಿಲ್ಲೆಗೆ ತೆರಳಿದರು. ಆದರಲ್ಲಿ ಬಹುತೇಕರು ಹಿಂದುಗಳಿದ್ದಾರೆ.
> ■ ಶ್ರುತಿ ಎನ್. ಡಿಸಿಪಿ ಕಾನೂನು ಹಾಗೂ ಸುವ್ಯವಸ್ಥೆ

20ಕ್ಕೂ ಹೆಚ್ಚು ಕಾರ್ಮಿಕರ ತಪಾಸಣೆ

ಬೆಳಗಾವಿ: ನಗರದಲ್ಲಿ ಅಕ್ರಮ ಬಾಂಗ್ಲಾದೇಶಿ ವಲಸಿಗರು ಪ್ರವೇಶಿಸಿದ್ದಾರೆಂಬ ಶಂಕೆಯ ಹಿನ್ನೆಲೆಯಲ್ಲಿ ಬೆಳಗಾವಿ ಪೊಲೀಸರು 20ಕ್ಕೂ ಹೆಚ್ಚು ಕಾರ್ಮಿಕರ ತಪಾಸಣೆ ನಡೆಸಿದರು.

ಕೇಂದ್ರ ಬಸ್ ನಿಲ್ದಾಣದಿಂದ 20ಕ್ಕೂ ಹೆಚ್ಚು ಜನರನ್ನು ವಶಕ್ಕೆ ಪಡೆದು, ಮಾಳಮಾರುತಿ ಪೊಲೀಸ್ ಠಾಣೆಯಲ್ಲಿ ತೀವ್ರ ವಿಚಾರಣೆಗೆ ಒಳಪಡಿಸಿದರು.

ಹುಬ್ಬಳ್ಳಿಯಲ್ಲಿ ಕೆಲವರ ತಪಾಸಣೆಯಾಗಿದ್ದು, ಮೂರು ಬಸ್‌ಗಳಲ್ಲಿ ಅಕ್ರಮ ಬಾಂಗ್ಲಾ ವಲಸಿಗರು ಬೆಳಗಾವಿ ನಗರಕ್ಕೆ ಬಂದಿದ್ದಾರೆ ಎಂದು ಶ್ರೀರಾಮಸೇನೆ ಜಿಲ್ಲಾಧ್ಯಕ್ಷ ರವಿ ಕೋಕಿತ್ಕರ್ ನೇತೃತ್ವದ ತಂಡವು ಅನುಮಾನ ವ್ಯಕ್ತಪಡಿಸಿತ್ತು. ಈ ಹಿನ್ನೆಲೆಯಲ್ಲಿ ಡಿಸಿಪಿ ನಾರಾಯಣ ಭರಮನಿ ನೇತೃತ್ವದ ಪೊಲೀಸ್ ತಂಡವು ತಕ್ಷಣವೇ ಎಲ್ಲರನ್ನೂ ಠಾಣೆಗೆ ಕರೆತಂದು ತನಿಖೆ ಆರಂಭಿಸಿತು.

ಕಾರ್ಮಿಕರ ಸ್ಪಷ್ಟನೆ: ವಿಚಾರಣೆ ವೇಳೆ ವಶಕ್ಕೆ ಒಳಗಾದವರು, ನಾವು ಬಾಂಗ್ಲಾದೇಶದವರಲ್ಲ, ಪಶ್ಚಿಮ ಬಂಗಾಳ ಮೂಲದವರು. ಶಹಾಪುರದಲ್ಲಿ ಅಕ್ಕಸಾಲಿಗರಾಗಿ ಕೆಲಸ ಮಾಡುತ್ತಿದ್ದೇವೆ. ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಮತದಾನ ಇದ್ದಿದ್ದರಿಂದ ಊರಿಗೆ ಹೋಗಿದ್ದೆವು, ಈಗ ವಾಪಸ್ ಕೆಲಸಕ್ಕೆ ಬಂದಿದ್ದೇವೆಎಂದು ಪೊಲೀಸರಿಗೆ ಮಾಹಿತಿ ನೀಡಿದ್ದರು.

ದಾಖಲೆಗಳ ಪರಿಶೀಲನೆ: ಡಿಸಿಪಿ ನಾರಾಯಣ ಭರಮನಿ ಅವರ ನೇತೃತ್ವದಲ್ಲಿ ಅಧಿಕಾರಿಗಳು ಕಾರ್ಮಿಕರ ಮೊಬೈಲ್ ಸಂಖ್ಯೆಗಳು, ಆಧಾರ್ ಕಾರ್ಡ್‌ಗಳು ಮತ್ತು ವೋಟರ್ ಐಡಿಗಳನ್ನು ಕೂಲಂಕಷವಾಗಿ ತಪಾಸಣೆ ನಡೆಸಿದ್ದಾರೆ. ದಾಖಲೆಗಳು ನಕಲಿಯೇ ಎಂಬ ಬಗ್ಗೆ ಆಂತರಿಕ ಪರಿಶೀಲನೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜಕಾರಣ ಬಿಡಿ; ಅನುಮೋದನೆ ನೀಡಿ

ಧಾರವಾಡ: ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ಸ್ವಾಭಿಮಾನಿ ಹೋರಾಟ ಸಮಿತಿ ಕೆಲವು ಸದಸ್ಯರು ಕೈಗೊಂಡ ಉಪವಾಸ ಸತ್ಯಾಗ್ರಹ ಶನಿವಾರ ಎರಡನೇ ದಿನಕ್ಕೆ ಕಾಲಿಟ್ಟಿದೆ ಎಂದು ಹೋರಾಟಗಾರ ಬಿ.ಡಿ.ಹಿರೇಮಠ ಮಾಹಿತಿ ನೀಡಿದರು.

ಹೋರಾಟಗಾರ ಹಿರೇಮಠ ಒತ್ತಾಯ

ಶನಿವಾರ ಸುದ್ದಿಗಾರೊಂದಿಗೆ ಅವರು ಮಾತನಾಡಿ, ಪಾಲಿಕೆ ಕಡತಕ್ಕೆ ಅನುಮೋದನೆ ನೀಡುವಲ್ಲಿ ಸಂಪೂರ್ಣ ರಾಜಕೀಯ ನಡೆದಿದೆ. ಇದೇ ಮೇ 30ರೊಳಗೆ ಅನುಮೋದನೆ ನೀಡದಿದ್ದರೆ, ಧಾರವಾಡ ಬಂದ್ ಶತಸಿದ್ಧ ಎಂದರು. ಅಲ್ಲದೇ, ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ಹೋರಾಟ ಸಮಿತಿ ಸದಸ್ಯರು ಈಗಾಗಲೇ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದು, ಮೇ 31ರಿಂದ ಎಲ್ಲ ಹೋರಾಟ ಗಾರರು ಉಪವಾಸ ಸತ್ಯಾಗ್ರಹ ನಡೆಸಲಿದ್ದಾರೆ ಎಂದು ಮಾಹಿತಿ ನೀಡಿದರು. ರಾಜ್ಯದ 1.75 ಕೋಟಿ ಗುತ್ತಿಗೆ ಕಾರ್ಮಿಕರ ಕನಿಷ್ಠ ವೇತನಕ್ಕೆ ಮನವಿ ಸಲ್ಲಿಸಿದ ಒಂದೇ ರಾತ್ರಿಯಲ್ಲಿ ಅನುಮೋದನೆ ಸಿಕ್ಕಿದೆ. ಆದರೆ, 16 ತಿಂಗಳು ಗತಿಸಿದರೂ, ಪಾಲಿಕೆಗೆ ಅನುಮೋದನೆ ಹಾಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಪ್ರತ್ಯೇಕ ಮಹಾನಗರ ಪಾಲಿಕೆ ವಿಷಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ರಾಜಕೀಯ ಬಿಟ್ಟು ಜನರಿಗೆ ಅನುಕೂಲವಾಗುವಂತೆ ನಡೆದುಕೊಳ್ಳಬೇಕು. ಈ ವಿಷಯದಲ್ಲಿ ಸ್ಥಳೀಯ ಶಾಸಕರು ಬೆಂಬಲಿಸಲಿ ಎಂದು ಆಗ್ರಹಿಸಿದರು.

ದಕ್ಷಿಣ ಭಾರತ ಕುಸ್ತಿ ಚಾಂಪಿಯನ್‌ಶಿಪ್: ಚಿನ್ನದ ಪದಕ



ಹುಬ್ಬಳ್ಳಿ: ಇಲ್ಲಿನ ಉಣಕಲ್ಲ ಗ್ರಾಮದ ಕುಸ್ತಿಪಟು 15 ವರ್ಷ ಬಾಲಕ ಮಡಿವಾಳೇಶ ಅಶೋಕ ಚಿಲ್ಲಣ್ಣವರ ಪುದುಚೇರಿಯಲ್ಲಿ ನಡೆದ ದಕ್ಷಿಣ ಭಾರತ ಕುಸ್ತಿ ಚಾಂಪಿಯನ್‌ಶಿಪ್‌ನ 48 ಕೆ.ಜಿ. ಫ್ರೀಸ್ಟೈಲ್ ವಿಭಾಗದಲ್ಲಿ ಚಿನ್ನದ ಪದಕ ಪಡೆದು ಸಾಧನೆ ಮಾಡಿದ್ದಾನೆ ಎಂದು ವಾಯುಪುತ್ರ ಸ್ಪೋರ್ಟ್ಸ್ ಫೌಂಡೇಶನ್ ಅಶೋಕ ಚಿಲ್ಲಣ್ಣವರ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸತತ ಕುಸ್ತಿ ತರಬೇತಿಯಲ್ಲಿ ತೊಡಗಿರುವ ಮಡಿವಾಳೇಶ ಚಿಲ್ಲಣ್ಣವರ, ಈಗಾಗಲೇ ಅನೇಕ ಕುಸ್ತಿ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಜಯಗಳಿಸಿದ್ದಾನೆ. ಆರಂಭದಲ್ಲಿ ಉಣಕಲ್ಲಿನ ಪುರಾತನ ಕಲ್ಮೇಶ್ವರ ಗರಡಿ ಮನೆಯಲ್ಲಿ ಕುಸ್ತಿ ಪಟು ತರಬೇತಿ ಆರಂಭಿಸಿದ ಈತ, ನಂತರ ನಗರದ ಪ್ರತಿಷ್ಠಿತ ವಾಯುಪುತ್ರ ಸ್ಪೋರ್ಟ್ಸ್ ಫೌಂಡೇಶನ್ ಅಡಿಯಲ್ಲಿ ಪ್ರಾಥಮಿಕ ಕುಸ್ತಿ ತರಬೇತಿ ಪಡೆದುಕೊಂಡಿದ್ದನು ಎಂದರು.

ದೆಹಲಿ ಕ್ರೀಡಾ ವಿಶ್ವವಿದ್ಯಾಲಯದಲ್ಲಿ ತರಬೇತಿ ಪಡೆಯುತ್ತಿರುವ ಬಾಲಕನ ಪ್ರತಿಭೆಯನ್ನು ಗುರುತಿಸಿ 5ನೇ ತರಗತಿಯಲ್ಲಿದ್ದಾಗ ಧಾರವಾಡದ ಡಿ.ವೈ.ಇ.ಎಸ್ ಕ್ರೀಡಾ ಶಾಲೆಗೆ ದಾಖಲಿಸಲಾಗಿತ್ತು. ತದನಂತರ 7ನೇ ತರಗತಿಯಲ್ಲಿ ದೇಶದ ಪ್ರತಿಷ್ಠಿತ ದೆಹಲಿ ಸ್ಪೋರ್ಟ್ಸ್ ಯುನಿವರ್ಸಿಟಿಗೆ ಆಯ್ಕೆಯಾಗಿದ್ದ ಮಡಿವಾಳೇಶ, ಪ್ರಸ್ತುತ ಅಲ್ಲಿಯೇ ಹತ್ತನೇ ತರಗತಿ ವ್ಯಾಸಂಗದ ಜೊತೆಗೆ ಸುಧಾರಿತ ಕುಸ್ತಿ ತರಬೇತಿ ಪಡೆಯುತ್ತಿದ್ದಾನೆ. ಈತನಿಗೆ ಏಷ್ಯನ್ ಗೇಮ್ಸ್ ಪದಕ ವಿಜೇತ ರಣವೀರಸಿಂಗ್ ಅವರು ದೆಹಲಿಯಲ್ಲಿ ಮುಖ್ಯ ತರಬೇತುದಾರರಾಗಿ ಮಾರ್ಗದರ್ಶನ ನೀಡುತ್ತಿದ್ದಾರೆ ಎಂದರು.

ರಾಜ್ಯ ಹಾಗೂ ಜಿಲ್ಲೆಯಲ್ಲಿರುವ ಕುಸ್ತಿ ಪಟುಗಳಿಗೆ ಹಾಗೂ ರಾಜ್ಯ ಮತ್ತು ಜಿಲ್ಲೆಯಲ್ಲಿರುವ ಗರಡಿ ಮನೆಗಳ ಪುನರುಜ್ಜೀವನಕ್ಕೆ ಸರಕಾರ ಮೊದಲ ಆದ್ಯತೆ ಮೇರೆಗೆ ಅಭಿವೃದ್ಧಿಗೆ ಮುಂದಾಗಬೇಕೆಂದು ಕುಸ್ತಿಪಟು ಅಶೋಕ ಚಿಲ್ಲಣ್ಣವರ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸುರೇಶ ಬಾಗಣ್ಣವರ, ಮಂಜುನಾಥ ಚಿಲ್ಲಣ್ಣವರ, ಸಂಜೀವ ದಮ್ಮಕ್ಕನಾಳ ಸೇರಿದಂತೆ ಇನ್ನಿತರರಿದ್ದರು.

ಪುಷ್ಪಾ ಸಿನಿಮಾ ಮಾದರಿಯಲ್ಲಿ ಸ್ಪಿರಿಟ್ ಸಾಗಾಟಕ್ಕೆ ಯತ್ನ!

ಬೆಳಗಾವಿ: ಪುಷ್ಪಾ ಸಿನಿಮಾ ಮಾದರಿಯಲ್ಲೇ ಆಯಿಲ್ ಟ್ಯಾಂಕರ್ ನಲ್ಲಿ ಅಕ್ರಮವಾಗಿ ಸ್ಪಿರಿಟ್ ಸಾಗಿಸುತ್ತಿದ್ದ ಬೃಹತ್ ಜಾಲವನ್ನು ಬೆಳಗಾವಿ ಜಿಲ್ಲೆಯ ಅಬಕಾರಿ ಅಧಿಕಾರಿಗಳು ಭೇದಿಸಿದ್ದಾರೆ.

35 ಲಕ್ಷ ರೂಪಾಯಿ ಮೌಲ್ಯದ 14 ಸಾವಿರ ಲೀಟರ್ ಸ್ಪಿರಿಟ್ ವಶ



ಖಾನಾಪುರ ತಾಲೂಕಿನ ಜಾಂಬೋಟಿ ಗ್ರಾಮದ ಬಳಿ ಅಬಕಾರಿ ಅಧಿಕಾರಿಗಳು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಬರೋಬ್ಬರಿ 35 ಲಕ್ಷ ರೂಪಾಯಿ ಮೌಲ್ಯದ 14 ಸಾವಿರ ಲೀಟರ್ ಸ್ಪಿರಿಟ್ ಅನ್ನು ವಶಪಡಿಸಿಕೊಂಡಿದ್ದಾರೆ. ಇನ್ನು ಈ ಅಕ್ರಮ ದಂಧೆಗೆ ಸಂಬಂಧಿಸಿದಂತೆ ಓರ್ವ ಆರೋಪಿಯನ್ನು ಬಂಧಿಸಿ, ಟ್ಯಾಂಕರ್ ಅನ್ನು ಜಪ್ತಿ ಮಾಡಲಾಗಿದೆ.

ಬಂಧಿತ ಗ್ಯಾಂಗ್ ಅಧಿಕಾರಿಗಳನ್ನು ಡೈವರ್ಟ್ ಮಾಡಲು ಅತ್ಯಂತ ಚಾಣಾಕ್ಷ ತಂತ್ರ ರೂಪಿಸಿತ್ತು. ಟ್ಯಾಂಕರ್‌ನ ಮೂರು ಭಾಗಗಳಲ್ಲಿ ಸಣ್ಣ ಸಣ್ಣ ಪೈಪ್‌ಗಳನ್ನು ಅಳವಡಿಸಿ, ಅದರಲ್ಲಿ ಮಾತ್ರ ಆಯಿಲ್ (ತೈಲ) ತುಂಬಿಸಲಾಗಿತ್ತು. ಅಧಿಕಾರಿಗಳು ತಪಾಸಣೆ ನಡೆಸುವಾಗ ಕೇವಲ ಆ ಪೈಪ್ ಳಲ್ಲಿದ್ದ ಆಯಿಲ್ ತೋರಿಸಿ ಇದು ಆಯಿಲ್ ಟ್ಯಾಂಕರ್ ಎಂದು ನಂಬಿಸಿ ನುಣುಚಿಕೊಳ್ಳುತ್ತಿದ್ದರು. ಆದರೆ, ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ವೇಳೆ ಪ್ರಕರಣ ಪತ್ತೆಯಾಗಿದೆ.

ಸೂರತ್ ನೀರು ಘಟಕಕ್ಕೆ ನಿಯೋಗ ಭೇಟಿ



ಧಾರವಾಡ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನಿಯೋಗ ಸೂರತ್‌ನ ಎನ್ವಿರೋ ಕಂಟ್ರೋಲ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ಸ್ಥಾಪಿಸಿದ ಭಾರತದ 140 ಎಂಎಲ್‌ಡಿ ಸಾಮರ್ಥ್ಯದ ತೃತೀಯ ಹಂತದ ಒಳಚರಂಡಿ, ತೆರೆದ ಚರಂಡಿ ನೀರು ಶುದ್ಧೀಕರಣ ಘಟಕಕ್ಕೆ ಭೇಟಿ ನೀಡಿ ಸಮಗ್ರ ಪರಿಶೀಲನೆ ನಡೆಸಿತು.

ನಿಯೋಗದಲ್ಲಿ ಮೇಯರ್ ಜ್ಯೋತಿ ಪಾಟೀಲ, ಉಪಮೇಯರ್ ಸಂತೋಷ ಚವ್ಹಾಣ, ಸಭಾನಾಯಕ ಈರೇಶ ಅಂಚಟಗೇರಿ ವಿಪಕ್ಷದ ನಾಯಕ ಇಮ್ರಾನ್ ಎಲಿಗಾರ್ ಹಾಗೂ ಪಾಲಿಕೆ ಅಭಿವೃದ್ಧಿ ಆಯುಕ್ತ ವಿಜಯಕುಮಾರ ಅವರು ಸಹ ಇದ್ದರು.

ರೈತರಿಗೆ ಅನ್ಯಾಯವಾದರೆ ಸಹಿಸಲ್ಲ: ಛಬ್ಬಿ



ಕಲಘಟಗಿ: ಬೆಳೆವಿಮೆ ಹಣ ಜಮೆ ಮಾಡುವಲ್ಲಿ ತಾಲೂಕಿನ ರೈತರಿಗೆ ಆದ ಅನ್ಯಾಯವನ್ನು ನಾವು ಸಹಿಸಲ್ಲ. ಕೃಷಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ಮಾಡದೆ ಇದರಲ್ಲಿ ಭಾಗಿಯಾದವರ ಬಗ್ಗೆ ಸಂಪೂರ್ಣ ತನಿಖೆ ನಡೆಸಿ ಕಾನೂನು ಕ್ರಮ ಜರುಗಿಸಬೇಕು ಎಂದು ಬಿಜೆಪಿ ಮುಖಂಡ ನಾಗರಾಜ ಛಬ್ಬಿ ಒತ್ತಾಯಿಸಿದರು.

ಅವರು ಪಟ್ಟಣದ ತಹಶೀಲ್ದಾರ್ ಕಚೇರಿ ಮುಂದೆ ರೈತರು ನಡೆಸುತ್ತಿರುವ ಹೋರಾಟ ಸ್ಥಳಕ್ಕೆ ಭೇಟಿ ನೀಡಿ ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿ, ವಿಮಾ ಕಂಪನಿಗೆ ವಿಮೆ ಹಣ ತುಂಬಿದ ಪ್ರತಿಯೊಬ್ಬ ರೈತರಿಗೆ ಬೆಳೆ ವಿಮೆ ಹಣ ಜಮೆ ಮಾಡಿ ರೈತರ ನೆರವಿಗೆ ಧಾವಿಸಬೇಕು ಎಂದು ಆಗ್ರಹಿಸಿದರು.

2025-26 ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ವಿಮೆ ಹಣ ಬಿಡುಗಡೆಯಲ್ಲಿ ರೈತರಿಗೆ ಆದ ಅನ್ಯಾಯ ಖಂಡಿಸಿ ಭಾರತೀಯ ಕಿಸಾನ್ ಸಂಘ ಹಾಗೂ ವಿವಿಧ ಸಂಘಟನೆ ಬೆಂಬಲದಿಂದ ಪಟ್ಟಣದ ತಹಶೀಲ್ದಾರ್ ಕಚೇರಿ ಮುಂದೆ ನಡೆಸುತ್ತಿರುವ ಅಹೋರಾತ್ರಿ ಹೋರಾಟ ಮುಂದುವರಿದಿದೆ.

ನಂತರ ಸ್ಥಳಕ್ಕೆ ಜಿಲ್ಲಾ ಕೃಷಿ ಉಪ ನಿರ್ದೇಶಕ ನಟರಾಜ, ತಾಲೂಕು ತಹಶೀಲ್ದಾರ್ ಬಸವರಾಜ ಹೊಂಕಣ್ಣದವರ, ಸಹಾಯಕ ಕೃಷಿ ನಿರ್ದೇಶಕ ಅಮರ ನಾಯ್ಕರ ಹಾಗೂ ಸಿಪಿಐ ಶ್ರೀಶೈಲ್ ಕೌಜಲಗಿ ಭೇಟಿ ನೀಡಿ 20 ದಿನಗಳ ಒಳಗಾಗಿ ಬೆಳೆ ವಿಮೆಯಲ್ಲಿ ರೈತರಿಗೆ ಆದ ಲೋಪ ದೋಷಗಳ ತನಿಖೆ ನಡೆಸಿ ಇದರಲ್ಲಿ ಭಾಗಿಯಾದವರ ಬಗ್ಗೆ ವರದಿ ತಯಾರಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿ ಹೋರಾಟ ಹಿಂಪಡೆಯಲು ತಿಳಿಸಿದರು. ರೈತರ ಮನವೊಲಿಸಲು ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ.

ಮುಖಂಡರಾದ ಐ.ಸಿ.ಗೋಕುಲ, ಶಶಿಧರ ಹುಲಿಕಟ್ಟಿ, ಶಂಕರಗೌಡ ಪಾಟೀಲ, ಈಶ್ವರ ಜಾಯನಗೌಡ್ರ, ಬಸವರಾಜ ತಿಪ್ಪಣ್ಣವರ, ಫಕೀರೇಶ ನೇಸ್ರೆಕರ, ಚಂದ್ರಗೌಡ ಪಾಟೀಲ, ಮಂಜುನಾಥ ಮಾಳಗಿ, ಪರಶುರಾಮ ಹುಲಿಹೊಂಡ, ಕಲ್ಲಪ್ಪ ಪುಟ್ಟಪ್ಪನವರ, ನಾಗಪ್ಪ ಕನಕಪ್ಪನವರ, ಕಿರಣ ಪಾಟೀಲಕುಲಕರ್ಣಿ, ಆನಂದ ಕಡ್ಲಾಸ್ಕರ ಹಾಗೂ ರೈತರು ಇದ್ದರು.

> ಈಗಾಗಲೇ 15 ದಿನಗಳು ಗಡುವು ನೀಡಲಾಗಿತ್ತು. ಆದರೂ ಕ್ರಮ ಜರುಗಿಸಿಲ್ಲ. ನಿಮ್ಮ ನಿರ್ಲಕ್ಷ್ಯದಿಂದ ನಾವು ಹೋರಾಟ ಮಾಡಲಾಗುತ್ತಿದೆ. ನಮಗೆ ನ್ಯಾಯ ಸಿಗುವವರೆಗೆ ಹೋರಾಟ ಸ್ಥಳದಿಂದ ಕದಲುವುದಿಲ್ಲ.
> ■ ಗುರುನಾಥಗೌಡ್ರ ಬಸನಗೌಡ್ರ, ಭಾರತೀಯ ಕಿಸಾನ್ ಸಂಘದ ಜಿಲ್ಲಾಧ್ಯಕ್ಷ

ಟಿಬಿ ಡ್ಯಾಂ ಕ್ರಸ್ಟ್ ಗೇಟ್ ಚೈನ್ ಅಳವಡಿಕೆ ಶುರು



ವಿಜಯನಗರ: ಕಲ್ಯಾಣ ಕರ್ನಾಟಕದ ರೈತರ ಜೀವನಾಡಿ ತುಂಗಭದ್ರಾ ಜಲಾಶಯದ ಕಾಯಕಲ್ಪ ಕಾರ್ಯ ಕೊನೆಯ ಹಂತಕ್ಕೆ ತಲುಪಿದೆ. ಅಣೆಕಟ್ಟಿನ ಕ್ರಸ್ಟ್ ಗೇಟ್‌ಗಳಿಗೆ ಹೊಸ ಚೈನ್‌ಗಳನ್ನು ಅಳವಡಿಸುವ ಮಹತ್ತರ ಕಾರ್ಯ ಶುರುವಾಗಿದೆ.

2024ರ ಆಗಸ್ಟ್ 10ರಂದು ಜಲಾಶಯದ 19ನೇ ಕ್ರಸ್ಟ್ ಗೇಟ್ ಕೊಚ್ಚಿಹೋಗಿ ಆತಂಕ ಸೃಷ್ಟಿಸಿದ್ದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಜಲಾಶಯದ ಒಟ್ಟು 33 ಹಳೇ ಕ್ರಸ್ಟ್ ಗೇಟ್‌ಗಳನ್ನು ಈಗಾಗಲೇ ಸಂಪೂರ್ಣವಾಗಿ ತೆರವುಗೊಳಿಸಿ ಹೊಸ ಗೇಟ್‌ಗಳನ್ನು ಅಳವಡಿಸಲಾಗಿತ್ತು. ಇದರ ಬೆನ್ನಲ್ಲೇ, ಇದೀಗ ಗೇಟ್‌ಗಳನ್ನು ಸುಲಭವಾಗಿ ನಿರ್ವಹಿಸಲು ಅತ್ಯಂತ ಪ್ರಮುಖವಾಗಿರುವ ಹೊಸ ಚೈನ್‌ಗಳ ಅಳವಡಿಕೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಸುಮಾರು 52 ಕೋಟಿ ರೂಪಾಯಿ ವೆಚ್ಚದಲ್ಲಿ ಬೃಹತ್ ಯೋಜನೆಯಡಿ, ಶುಕ್ರವಾರ ಜಲಾಶಯದ 33ನೇ ನಂಬರಿನ ಗೇಟ್‌ಗೆ ಹೊಸ ಚೈನ್ ಲಿಂಕ್ ಅನ್ನು ಯಶಸ್ವಿಯಾಗಿ ಅಳವಡಿಸುವ ಮೂಲಕ ಮಂಡಳಿ ಅಧಿಕಾರಿಗಳು ಹಾಗೂ ತಾಂತ್ರಿಕ ಸಿಬ್ಬಂದಿ ಮೊದಲ ಯಶಸ್ಸು ಕಂಡಿದ್ದಾರೆ. ಸದ್ಯ ತಾಂತ್ರಿಕವಾಗಿ ಅತ್ಯಂತ ಸೂಕ್ಷ್ಮ ಹಾಗೂ ಪ್ರಮುಖ ಗೇಟ್‌ಗಳಾದ 18, 19 ಮತ್ತು 20ನೇ ಗೇಟ್‌ಗಳ ಚೈನ್ ಅಳವಡಿಕೆ ಕಾರ್ಯವು ಯುದ್ಧೋಪಾದಿಯಲ್ಲಿ ಪ್ರಗತಿಯಲ್ಲಿದೆ ಎಂದು ಮಂಡಳಿಯ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಅತ್ಯಾಧುನಿಕ ಚೈನ್‌ಗಳು: ಗೇಟ್‌ಗಳ ಎತ್ತುವಿಕೆ ಮತ್ತು ಇಳಿಸುವಿಕೆಗಾಗಿ ಚೆನ್ನೈನಲ್ಲಿ ವಿಶೇಷವಾಗಿ ತಯಾರಿಸಲಾದ ಒಟ್ಟು 66 ಅತ್ಯಾಧುನಿಕ ಚೈನ್‌ಗಳನ್ನು ಜಲಾಶಯಕ್ಕೆ ತರಲಾಗಿದೆ. ಪ್ರತಿ ಗೇಟ್‌ಗೆ ತಲಾ ಎರಡು ಚೈನ್‌ಗಳನ್ನು ಅಳವಡಿಸಲಾಗುತ್ತಿದ್ದು, ಅತ್ಯಂತ ಗರಿಷ್ಠ ಗುಣಮಟ್ಟದ ಸ್ಟೀಲ್‌ನಿಂದ ರೂಪಿಸಲಾದ ಪ್ರತಿಯೊಂದು ಚೈನ್ ಸರಿಸುಮಾರು 1.9 ಟನ್ ತೂಕ ಹೊಂದಿದೆ.

ಮೇ ಅಂತ್ಯದೊಳಗೆ ಪೂರ್ಣ: ಮುಂಗಾರು ಮಳೆ ಆರಂಭವಾಗಿ ಜಲಾಶಯಕ್ಕೆ ನೀರು ಹರಿದು ಬರುವ ಮುನ್ನವೇ (ಮೇ ಅಂತ್ಯದೊಳಗೆ) ಎಲ್ಲಾ 33 ಗೇಟ್‌ಗಳ ಚೈನ್ ಅಳವಡಿಕೆ ಹಾಗೂ ಪ್ರಾಯೋಗಿಕ ಚಾಲನೆಯನ್ನು ಮುಗಿಸಲು ತುಂಗಭದ್ರಾ ಮಂಡಳಿ ಅಧಿಕಾರಿಗಳು ನಿರ್ಧರಿಸಿದ್ದಾರೆ.

ಜಲಾಶಯದ ಕಾಯಕಲ್ಪದಿಂದಾಗಿ ಗರಿಷ್ಠ 100 ಟಿಎಂಸಿ ನೀರನ್ನು ಅತ್ಯಂತ ಸುರಕ್ಷಿತವಾಗಿ ಸಂಗ್ರಹಿಸಬಹುದಾಗಿದ್ದು, ವಿಜಯನಗರ, ಬಳ್ಳಾರಿ, ಕೊಪ್ಪಳ, ರಾಯಚೂರು ಸೇರಿದಂತೆ ಕಲ್ಯಾಣ ಕರ್ನಾಟಕದ ಲಕ್ಷಾಂತರ ರೈತರಲ್ಲಿ ನಿರಾಳತೆ ಮೂಡಿಸಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಬಾಚಣಕಿ ಕ್ರಾಸ್ ಬಳಿ ಚೆಕ್ ಪೋಸ್ಟ್ ನಿರ್ಮಾಣ

ಮುಂಡಗೋಡ: ಮುಂಬರುವ ಬಕ್ರೀದ್ ಹಬ್ಬದ ಕಾರಣ ಅಕ್ರಮ ಜಾನುವಾರುಗಳ ಸಾಗಣೆ ತಪಾಸಣೆ ನಡೆಸಲು ಪಟ್ಟಣದ ಹುಬ್ಬಳ್ಳಿ ರಸ್ತೆಯಲ್ಲಿರುವ ಬಾಚಣಕಿ ಗ್ರಾಮದ ಕ್ರಾಸ್ ಬಳಿ ಪೊಲೀಸ್ ಚೆಕ್ ಪೋಸ್ಟ್ ತೆರೆಯಲಾಗಿದೆ.ಹುಬ್ಬಳ್ಳಿ ಕಡೆ ಹೋಗುತ್ತಿರುವ ಮತ್ತು ಹುಬ್ಬಳ್ಳಿ ಕಡೆಯಿಂದ ಬರುತ್ತಿರುವ ಖಾಸಗಿ ವಾಹನಗಳನ್ನು ತಡೆದು ಪೊಲೀಸರು ತಪಾಸಣೆ ನಡೆಸುತ್ತಿದ್ದಾರೆ. ಕಳೆದ ವರ್ಷ ಬಕ್ರೀದ್ ಹಬ್ಬದ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜಾನುವಾರುಗಳ ಸಾಗಣೆ ನಡೆದಿದ್ದರಿಂದ ಜಿಲ್ಲೆಯಾದ್ಯಂತ ಜಾನುವಾರುಗಳ ಸಾಗಾಟ ಮಾಡದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಎಸ್.ಪಿ. ದೀಪನ್ ಎಂ. ಆದೇಶದ ಮೇರೆಗೆ ಇಲ್ಲಿನ ನೂತನ ಸಿಪಿಐ ರಮೇಶ ಹಾನಪುರ ಬಾಚಣಕಿ ಬಳಿ ಚೆಕ್ ಪೋಸ್ಟ್ ತೆರೆದು ಪೊಲೀಸರನ್ನು ತಪಾಸಣೆಗಾಗಿ ನೇಮಿಸಿದ್ದಾರೆ.ಬಕ್ರೀದ್ ಹಬ್ಬದ ಸಮಯದಲ್ಲಿ ಅಕ್ರಮ ಜಾನುವಾರುಗಳ ಸಾಗಾಟ ಹೆಚ್ಚು ನಡೆಯುತ್ತಿತ್ತು. ಜಾನುವಾರುಗಳ ಸಾಗಾಟವನ್ನು ಹತೋಟಿಗೆ ತರಲು ಎಸ್.ಪಿ.ಯವರ ಮೊದಲೇ ಆದೇಶವಿತ್ತು. ಹಾಗಾಗಿ ಮುಖ್ಯ ರಾಜ್ಯ ಹೆದ್ದಾರಿಯಲ್ಲಿ ಬಾಚಣಕಿ ಬಳಿ ಚೆಕ್ ಪೋಸ್ಟ್ ತೆರೆದು ನಮ್ಮ ಸಿಬ್ಬಂದಿ ನೇಮಕ ಮಾಡಿ ಖಾಸಗಿ ವಾಹನಗಳ ತಪಾಸಣೆ ಕಟ್ಟುನಿಟ್ಟಾಗಿ ನಡೆದಿದೆ ಎಂದು ಸಿಪಿಐ ರಮೇಶ ಹಾನಪುರ ಹೇಳಿದರು.

ಪದಾಧಿಕಾರಿಗಳ ಆಯ್ಕೆ

ಸಿದ್ದಾಪುರ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ರಿ. ಬೆಂಗಳೂರು ಇದರ ಸಿದ್ದಾಪುರ ತಾಲೂಕಾ ಶಾಖೆಗೆ 2026 ರಿಂದ 2031 ರ ವರೆಗಿನ ನೂತನ ಪದಾಧಿಕಾರಿಗಳ ಆಯ್ಕೆ ನಡೆದಿದ್ದು ಅಧ್ಯಕ್ಷರಾಗಿ ಎಂ.ಕೆ.ನಾಯ್ಕ, ಉಪಾಧ್ಯಕ್ಷರಾಗಿ ದಿವ್ಯಾ ನಾಯ್ಕ, ಕಾರ್ಯದರ್ಶಿಯಾಗಿ ಜಿ.ಜಿ.ಹೆಗಡೆ, ಜಿಲ್ಲಾ ಖಜಾಂಚಿಯಾಗಿ ಮಂಜುನಾಥ ನಾಯ್ಕ, ತಾಲೂಕಾ ಖಜಾಂಚಿಯಾಗಿ ಸುಧಾ ರಾಯ್ಕರ ನಿಯುಕ್ತಿಗೊಂಡಿದ್ದಾಗಿ ತಿಳಿಸಲಾಗಿದೆ.

ಎಂ. ಜಿ. ನಾಯ್ಕ ಅವಿರೋಧ ಆಯ್ಕೆ

ಹೊನ್ನಾವರ: ಉತ್ತರ ಕನ್ನಡ ಶೈಕ್ಷಣಿಕ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾಗಿ ಹೊನ್ನಾವರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರ ಎಂ. ಜಿ. ನಾಯ್ಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಈ ಹಿಂದೆ ಹೊನ್ನಾವರ ತಾಲೂಕಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕರಾಗಿ ಪ್ರಧಾನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ತಮ್ಮ ಅತ್ಯುತ್ತಮ ಕಾರ್ಯನಿರ್ವಹಣೆಯಿಂದ ತಾಲೂಕಿನ, ಜಿಲ್ಲೆಯ ಶಿಕ್ಷಕರ ಪ್ರಶಂಸೆಗೆ ಪಾತ್ರರಾಗಿದ್ದವರು. ಅಷ್ಟೇ ಅಲ್ಲದೇ ಹೊನ್ನಾವರ ತಾಲೂಕಾ ಸರಕಾರಿ ನೌಕರ ಸಂಘದ 2 ಬಾರಿ ಉಪಾಧ್ಯಕ್ಷರಾಗಿ, ರಾಜ್ಯ ಪರಿಷತ್ ಸದಸ್ಯರಾಗಿ, ಪ್ರಸ್ತುತ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಇವರ ಪ್ರಾಮಾಣಿಕ ಸೇವೆ ಶಿಕ್ಷಕರ ಸಮಸ್ಯೆಗಳಿಗೆ ಸದಾ ಧ್ವನಿಯಾಗಿ ಮಂಚೂಣಿಯಲ್ಲಿ ನಿಂತು ಕೆಲಸ ಮಾಡಿದ್ದು, ಜೊತೆಗೆ ಒಬ್ಬ ಅದ್ಭುತ ಸಂಘಟಕನಾಗಿ ಶಿಕ್ಷಣ ಇಲಾಖೆಯಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ ಒಬ್ಬ ಅಪರೂಪದ, ಪ್ರಾಮಾಣಿಕ ಶಿಕ್ಷಕರಾಗಿ ತಾಲೂಕು ಜಿಲ್ಲೆಯಾದ್ಯಂತ ಗುರುತಿಸಿಕೊಂಡಿದ್ದರು.ಇವರ ಆಯ್ಕೆಗೆ ತಾಲೂಕಿನ ಶಿಕ್ಷಕ ವೃಂದ ಹರ್ಷ ವ್ಯಕ್ತಪಡಿಸಿದ್ದು, ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಶಿಕ್ಷಣ ಸಂಯೋಜಕರು, ದೈಹಿಕ ಶಿಕ್ಷಣ ಪರಿವೀಕ್ಷಕರು, ಸಿಬ್ಬಂದಿಗಳು, ಸಿ.ಆರ್.ಪಿ.ಗಳು, ಬಿ.ಆರ್.ಪಿ.ಗಳು, ಬಿ.ಆಯ್.ಆರ್.ಪಿ.ಗಳು ಅಭಿನಂದಿಸಿದ್ದಾರೆ.

ಕ್ಷುಲ್ಲಕ ಕಾರಣಕ್ಕೆ ಹಲ್ಲೆ: ಪ್ರಕರಣ ದಾಖಲು

ಶಿರಸಿ: ಬೈಕ್ ತಗುಲಿದ ಕ್ಷುಲ್ಲಕ ಕಾರಣಕ್ಕೆ ನಗರದ ಸಿಂಪಿಗಲ್ಲಿಯಲ್ಲಿ ಪರಸ್ಪರ ಹಲ್ಲೆ ನಡೆಸಿದ್ದ ಎರಡು ಗುಂಪುಗಳ ವಿರುದ್ಧ ಶಿರಸಿ ಪೊಲೀಸರು ಕೊನೆಗೂ ಸುಮೋಟೋ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೇ 21ರಂದು ನಡೆದ ಈ ಘರ್ಷಣೆಯ ವಿಡಿಯೋ ವೈರಲ್ ಆಗಿ, ಸಾರ್ವಜನಿಕರು ಪೊಲೀಸರ ನಡೆಯನ್ನು ಟೀಕಿಸಿದ ಬಳಿಕ ಈ ಕ್ರಮ ಕೈಗೊಳ್ಳಲಾಗಿದೆ.

ನೆಹರುನಗರದ ಆಯಾನ್ ಅಬ್ದುಲ್ ಅಲಿಂ ಟಿನಮೇಕರ್, ಸರ್ಫರಾಜ ಅಸ್ಲಂ ಟಿನಮೇಕರ್, ಆದೀಲ್ ದಾದಾಸಾಬ್ ಹಾಗೂ ಪ್ರತಿಗುಂಪಿನ ಅಭಯ್ ಪ್ರಕಾಶ ಹುದಾರ್, ಸರ್ವೇಶ ಹಿರೇಮಠ ಮತ್ತು ಆಕಾಶ ಕುಂದನಗಾರ ವಿರುದ್ಧ ದೂರು ದಾಖಲಾಗಿದೆ. ಘಟನೆಯಲ್ಲಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಸಾರ್ವಜನಿಕ ಶಾಂತಿಗೆ ಭಂಗ ತಂದ ಹಿನ್ನೆಲೆಯಲ್ಲಿ ಹೆಡ್ ಕಾನ್‌ಸ್ಟೇಬಲ್ ಹನುಮಂತಪ್ಪ ಕಬಾಡಿ ನೀಡಿದ ದೂರಿನನ್ವಯ ನಗರ ಠಾಣೆಯಲ್ಲಿ ತನಿಖೆ ಮುಂದುವರಿದಿದೆ.



ಮುಂಡಗೋಡ: ಮುಂಬರುವ ಬಕ್ರೀದ್ ಹಬ್ಬದ ಕಾರಣ ಅಕ್ರಮ ಜಾನುವಾರುಗಳ ಸಾಗಣೆ ತಪಾಸಣೆ ನಡೆಸಲು ಪಟ್ಟಣದ ಹುಬ್ಬಳ್ಳಿ ರಸ್ತೆಯಲ್ಲಿರುವ ಬಾಚಣಕಿ ಗ್ರಾಮದ ಕ್ರಾಸ್ ಬಳಿ ಪೊಲೀಸ್ ಚೆಕ್ ಪೋಸ್ಟ್ ತೆರೆಯಲಾಗಿದೆ.

ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಿ

ಯಲ್ಲಾಪುರ: ತಾಲೂಕಿನ ಮದನೂರು ಪಂಚಾಯತ್ ವ್ಯಾಪ್ತಿಯ ಕರಡೊಳ್ಳಿ ಗ್ರಾಮದಲ್ಲಿ ದಿನದಿಂದ ದಿನಕ್ಕೆ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಳ್ಳುತ್ತಿದ್ದು, ಗ್ರಾಮಸ್ಥರು ನೀರಿಗಾಗಿ ಪರದಾಡುವಂತಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವಂತೆ ಒತ್ತಾಯಿಸಿ ಶಾಸಕ ಶಿವರಾಮ್ ಹೆಬ್ಬಾರ್ ಕಚೇರಿಯಲ್ಲಿ ಶ್ರೀ ಗಜಾನನ ಯುವ ಒಕ್ಕೂಟದಿಂದ ಮನವಿ ಸಲ್ಲಿಸಿದರು.

ಮನವಿಯಲ್ಲಿ ಪ್ರಸ್ತುತ ಗ್ರಾಮದಲ್ಲಿರುವ ಏಕೈಕ ಕೊಳವೆ ಬಾವಿಯಿಂದ ಸರಿಯಾಗಿ ನೀರು ಪೂರೈಕೆಯಾಗುತ್ತಿಲ್ಲ. ಇದರಿಂದಾಗಿ ಸಾರ್ವಜನಿಕರು ನಿತ್ಯದ ಬಳಕೆಗೆ ಹಾಗೂ ಜಾನುವಾರುಗಳಿಗೆ ನೀರನ್ನು ಒದಗಿಸಲು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಆದಷ್ಟು ಬೇಗ ಹೊಸದೊಂದು ಕೊಳವೆ ಬಾವಿಯನ್ನು (ಬೋರ್‌ವೆಲ್) ಮಂಜೂರು ಮಾಡಿ, ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಡಬೇಕಾಗಿ ವಿನಂತಿಸಲಾಗಿದೆ. ಶಾಸಕ ಶಿವರಾಮ ಹೆಬ್ಬಾರ ಅನುಪಸ್ಥಿತಿಯಲ್ಲಿ ಯುವ ಮುಖಂಡ ವಿವೇಕ್ ಹೆಬ್ಬಾರ್, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ವಿಜಯ ಮಿರಾಶಿ ಮನವಿ ಸ್ವೀಕರಿಸಿದರು.

ಈ ವೇಳೆ ರಾಜ್ಯ ಧನಗರ ಗೌಳಿ ಯುವ ಸೇನೆಯ ರಾಜ್ಯ ಖಜಾಂಚಿ ಹಾಗೂ ಶ್ರೀ ಗಜಾನನ ಯುವ ಒಕ್ಕೂಟದ ಲಕ್ಷ್ಮಣ ಕೋಕರೆ, ವಿನಾಯಕ್ ತಿನೇಕರ್, ದೊಂಡು ಸಿಂಧೆ, ಪಾಂಡು ಸಿಂಧೆ, ಶ್ಯಾಮ್ ಸಿಂಧೆ, ವಿಷ್ಣು ಕೋಕರೆ, ದೊಂಡು ಕೋಕರೆ, ವಿಶ್ವನಾಥ್ ಪಟಾಕಾರೆ ಸೇರಿದಂತೆ ಮತ್ತಿತರರು ಇದ್ದರು.



ಯಲ್ಲಾಪುರ: ತಾಲೂಕಿನ ಮದನೂರು ಪಂಚಾಯತ್ ವ್ಯಾಪ್ತಿಯ ಕರಡೊಳ್ಳಿ ಗ್ರಾಮದಲ್ಲಿ ದಿನದಿಂದ ದಿನಕ್ಕೆ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಳ್ಳುತ್ತಿದ್ದು, ಗ್ರಾಮಸ್ಥರು ನೀರಿಗಾಗಿ ಪರದಾಡುವಂತಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವಂತೆ ಒತ್ತಾಯಿಸಿ ಶಾಸಕ ಶಿವರಾಮ್ ಹೆಬ್ಬಾರ್ ಕಚೇರಿಯಲ್ಲಿ ಶ್ರೀ ಗಜಾನನ ಯುವ ಒಕ್ಕೂಟದಿಂದ ಮನವಿ ಸಲ್ಲಿಸಿದರು.

ಮುಂಗಾರು ಪೂರ್ವಸಿದ್ಧತೆ, ಹೆಸ್ಕಾಂ ಗ್ರಾಹಕರ ಕುಂದು ಕೊರತೆ ಸಭೆ

ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಳ್ಳಿ

ಅಂಕೋಲಾ: ಮಳೆಗಾಲದಲ್ಲಿ ಯಾವುದೇ ರೀತಿಯ ಅನಾಹುತಗಳು ಸಂಭವಿಸದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮುಂಗಾರು ಆರಂಭವಾಗುವ ಪೂರ್ವದಲ್ಲೇ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಈ ವಿಷಯದಲ್ಲಿ ನಿರ್ಲಕ್ಷ್ಯ ಸಲ್ಲ ಎಂದು ಕಾರವಾರ ಅಂಕೋಲಾ ಶಾಸಕ ಸತೀಶ ಸೈಲ್ ಹೇಳಿದರು.

ತಾಲೂಕು ಪಂಚಾಯತ್ ಸಭಾಭವನದಲ್ಲಿ ಮುಂಗಾರು ಪೂರ್ವಸಿದ್ಧತೆ ಮತ್ತು ಹೆಸ್ಕಾಂ ಗ್ರಾಹಕರ ಕುಂದು ಕೊರತೆ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮಳೆಗಾಲದಲ್ಲಿ ತಲೆದೋರಬಹುದಾದ ಸಮಸ್ಯೆಗಳನ್ನು ನಿವಾರಿಸುವ ದಿಶೆಯಲ್ಲಿ ಇಲಾಖೆಗಳು ಪರಸ್ಪರ ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದು ಸೂಚಿಸಿದರು.

ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ತಾಂತ್ರಿಕ ಕಾರಣಗಳಿಂದ ಪದೇ ಪದೇ ವಿದ್ಯುತ್ ಕಡಿತಗೊಳ್ಳುವ ಕುರಿತಂತೆ ಸಾಕಷ್ಟು ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಜೊತೆ ಚರ್ಚೆ ನಡೆಸಿದ ಶಾಸಕ ಸತೀಶ ಸೈಲ್ ಸಮಸ್ಯೆಗೆ ಪರಿಹಾರ ದೊರಕಿಸಿಕೊಡುವ ದಿಶೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು ಹೆಚ್ಚುವರಿ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸುವ ಅಗತ್ಯತೆ ಕಂಡು ಬಂದಲ್ಲಿ ಆ ದಿಶೆಯಲ್ಲಿ ಕೆಲಸ ಮಾಡಬೇಕು. ತಾಲೂಕಿನಲ್ಲಿ ಕೇವಲ ಒಂದು 247 ತುರ್ತು ವಾಹನವಿದ್ದು ಮಳೆಗಾಲದಲ್ಲಿ ಸೇವೆ ನೀಡುವುದು. ಕಷ್ಟಕರ ಆದ್ದರಿಂದ ಮಳೆಗಾಲ ಮುಗಿಯುವವರೆಗಾದರೂ ಇನ್ನೊಂದು ಹೆಚ್ಚುವರಿ ವಾಹನ ಸೇವೆ ಒದಗಿಸಲು ಇಲಾಖೆಗೆ ಕೂಡಲೇ ಬೇಡಿಕೆ ಸಲ್ಲಿಸಬೇಕು,ವಿದ್ಯುತ್ ಪೂರೈಕೆಯ ಸಂಬಂಧಿಸಿದ ದೂರುಗಳಿಗೆ ಯಾವ ಗ್ರಾಮ ಪಂಚಾಯತ್ ವ್ಯಾಪ್ತಿಯ ಜನರು ಯಾವ ಸಂಖ್ಯೆಗೆ ಕರೆ ಮಾಡಿ ದೂರು ನೀಡಬೇಕು ಎನ್ನುವುದನ್ನು ತಾಲೂಕಿನ ಪ್ರತಿಯೊಂದು ಗ್ರಾಮ ಪಂಚಾಯತಿಗಳಿಗೆ ಮಾಹಿತಿ ನೀಡಬೇಕು ಎಂದು ಸೂಚಿಸಿದರು.



ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ: ಶಾಸಕ

ಸಿಬ್ಬಂದಿಗಳ ಪಿಂಚಣಿ, ಪಿ.ಎಫ್ ಮತ್ತು ಗ್ರಾಜ್ಯುಟಿ ಸೌಲಭ್ಯಗಳ ಹೊರೆಯನ್ನು ವಿದ್ಯುತ್ ಬಿಲ್ಲಿನಲ್ಲಿ ಗ್ರಾಹಕರ ಮೇಲೆ ಹಾಕುತ್ತಿರುವುದು ಅನ್ಯಾಯ ಎಂದು ಮಾಹಿತಿ ಹಕ್ಕು ಕಾರ್ಯಕರ್ತ ಚೇತನ್ ನಾಯಕ ಸಭೆಯಲ್ಲಿ ತಿಳಿಸಿದರು, ಮೊಬೈಲ್ ಟವರ್‌ಗಳ ಲಕ್ಷಾಂತರ ರೂಪಾಯಿ ವಿದ್ಯುತ್ ಬಿಲ್ ಬಾಕಿಯಿದೆ ಆದರೆ ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳದ ಇಲಾಖೆಯವರು ಬಡವರ ಸ್ವಲ್ಪ ಹಣ ಬಾಕಿಯಿದ್ದರೂ ಸಂಪರ್ಕ ಕಡಿತಗೊಳಿಸುತ್ತಿದ್ದಾರೆ ಎಂದು ಚೇತನ ನಾಯಕ ಆರೋಪಿಸಿದರು.ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಸುತ್ತೋಲೆಯಂತೆ ರಾಜ್ಯ ಎಲ್ಲೆಡೆ ವಿದ್ಯುತ್ ಬಿಲ್ಲಿನಲ್ಲಿ ಪಿ.ಎಫ್ ಮತ್ತು ಗ್ರಾಜ್ಯುಟಿ ಶುಲ್ಕ ಹಾಕಲಾಗುತ್ತಿದೆ ಎಂದು ಅಧಿಕಾರಿಗಳಿಂದ ಮಾಹಿತಿ ಪಡೆದ ಶಾಸಕ ಸತೀಶ್ ಸೈಲ್ ಮುಖ್ಯಮಂತ್ರಿಗಳ ಜೊತೆಗೆ ಚರ್ಚಿಸುವುದಾಗಿ ತಿಳಿಸಿದರು. ತಾಲೂಕಿನ ತೆಂಕಣಕೇರಿಯಲ್ಲಿ ವೋಲ್ಟೇಜ್ ಸಮಸ್ಯೆಯಿಂದ ವಿದ್ಯುತ್ ಉಪಕರಣಗಳು ಕಾರ್ಯನಿರ್ವಹಿಸದಂತಾಗಿದೆ ಎಂದು ರಾಜೇಶ ಮಿತ್ರಾ ನಾಯ್ಕ ಸಭೆಯಲ್ಲಿ ತಿಳಿಸಿದರು, ಶೇಡಿಕುಳಿಯಲ್ಲಿ ಸ್ಮಶಾನ ಭೂಮಿಗೆ ವಿದ್ಯುತ್ ದೀಪದ ವ್ಯವಸ್ಥೆ ಕಲ್ಪಿಸುವಂತೆ ತಾ.ಪಂ ಮಾಜಿ ಸದಸ್ಯ ಮಂಜುನಾಥ ನಾಯ್ಕ ಆಗ್ರಹಿಸಿದರು.

ಮಳೆಗಾಲದ ಸಂದರ್ಭದಲ್ಲಿ ಅಪಾಯಕಾರಿ ಆಗಬಲ್ಲ 78 ಮರಗಳನ್ನು ಗುರುತು ಮಾಡಲಾಗಿದ್ದು ಅವುಗಳನ್ನು ತೆರುವುಗೊಳಿಸಲು ಅರಣ್ಯ ಇಲಾಖೆ, ಹೆಸ್ಕಾಂ, ಪುರಸಭೆ, ತಾಲೂಕು ಪಂಚಾಯತ್ ಜಂಟಿಯಾಗಿ ಕೆಲಸ ಮಾಡಬೇಕು ಪೊಲೀಸ್ ಇಲಾಖೆ ಈ ಕಾರ್ಯಕ್ಕೆ ಸಹಕಾರ ನೀಡಬೇಕು ಎಂದು ಶಾಸಕ ಸತೀಶ ಸೈಲ್ ಸೂಚಿಸಿದರು.

ಕೆಲವರು ಬಹಳ ಕಷ್ಟಪಟ್ಟು ತಮ್ಮ ಜಮೀನುಗಳಲ್ಲಿ ಮನೆ ಕಟ್ಟುತ್ತಾರೆ ಆದರೆ ತಾಂತ್ರಿಕ ಕಾರಣಗಳಿಂದ ಮನೆಗೆ ವಿದ್ಯುತ್ ಸಂಪರ್ಕ ನೀಡಲಾಗುತ್ತಿಲ್ಲ, ವಿದ್ಯುತ್ ಸಂಪರ್ಕ ನೀಡದೇ ಜನರನ್ನು ಕತ್ತಲಲ್ಲಿ ಇಡುವುದು ಸರಿಯಲ್ಲ ವಿದ್ಯುತ್ ಸಂಪರ್ಕ ಒದಗಿಸಲು ಇರುವ ತೊಡಕುಗಳೇನು ಎನ್ನುವುದರ ಕುರಿತು ಸರಿಯಾಗಿ ತಿಳಿದುಕೊಳ್ಳಿ ಎಂದು ಇಲಾಖೆಯು ಅಧಿಕಾರಿಗಳಿಗೆ ಸೂಚಿಸಿದ ಶಾಸಕ ಸತೀಶ ಸೈಲ್ ಈ ಕುರಿತಂತೆ ಸರ್ಕಾರದ ಮಟ್ಟದಲ್ಲಿ ಚರ್ಚಿಸುವುದಾಗಿ ತಿಳಿಸಿದರು.

ತಹಸೀಲ್ದಾರ್ ಗಿರೀಶ ಜಾಂಬಾವಳಿಕರ್, ತಾಲೂಕು ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಮು ಗುನಗಿ, ಹೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ರೋಶನಿ ಪೆಡ್ನೇಕರ್, ಅಂಕೋಲಾ ತಾಲೂಕು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರವೀಣ ನಾಯ್ಕ, ಗ್ಯಾರಂಟಿ ಯೋಜನೆ ಪ್ರಾಧಿಕಾರದ ತಾಲೂಕು ಅಧ್ಯಕ್ಷ ಪಾಂಡುರಂಗ ಗೌಡ,ಜಿಲ್ಲಾ ಉಪಾಧ್ಯಕ್ಷ ಪುರುಷೋತ್ತಮ ನಾಯ್ಕ, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಪಂಚ ಗ್ಯಾರಂಟಿ ಯೋಜನಾ ಪ್ರಾಧಿಕಾರದ ತಾಲೂಕು ಸಮಿತಿಯ ವಿಶೇಷ ಸಭೆ

ದಾಂಡೇಲಿ: ತಾಲೂಕು ಆಡಳಿತ ಸೌಧದ ಸಭಾಭವನದಲ್ಲಿ ಪಂಚ ಗ್ಯಾರಂಟಿ ಯೋಜನಾ ಪ್ರಾಧಿಕಾರದ ತಾಲೂಕು ಸಮಿತಿಯ ವಿಶೇಷ ಸಭೆಯು ಗುರುವಾರ ನಡೆಯಿತು.

ಪಂಚ ಗ್ಯಾರಂಟಿ ಯೋಜನಾ ಪ್ರಾಧಿಕಾರದ ತಾಲೂಕು ಸಮಿತಿಯ ಅಧ್ಯಕ್ಷ ರಿಯಾಜ್ ಬಾಬು ಸೈಯದ್ ಅವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ಸಮಿತಿಗೆ ಬಂದಿದ್ದ ವಿವಿಧ ಸಮಸ್ಯೆಗಳ ಕುರಿತಂತೆ ದೂರು ಅರ್ಜಿಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಸಭೆಯಲ್ಲಿ ತಾ.ಪಂ ಕಾರ್ಯನಿರ್ವಹಣಾಧಿಕಾರಿ ಟಿ.ಸಿ.ಹಾದಿಮನಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಪಂಚ ಗ್ಯಾರಂಟಿ ಯೋಜನಾ ಪ್ರಾಧಿಕಾರದ ತಾಲೂಕು ಸಮಿತಿಯ ಸದಸ್ಯರು ಮತ್ತು ತಹಶೀಲ್ದಾರ್ ಕಾರ್ಯಾಲಯ ಹಾಗೂ ತಾಪಂ ಕಾರ್ಯಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.



ಅರಿವು ಕೇಂದ್ರದಲ್ಲಿ ಬೇಸಿಗೆ ಶಿಬಿರ ಯಶಸ್ವಿ

ಸಿದ್ದಾಪುರ; ತಾಲೂಕಿನಹಸರಗೋಡ ಗ್ರಾಮ ಪಂಚಾಯತದ ಅರಿವು ಕೇಂದ್ರದಲ್ಲಿ ಇಲಾಖೆಯ ಆದೇಶದಂತೆ ಶುಕ್ರವಾರ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಉದ್ಘಾಟನಾ ಕಾರ್ಯಕ್ರಮದಲ್ಲಿ ತಾಪಂ ಮಾಜಿ ಸದಸ್ಯ ರಘುಪತಿ ಹೆಗಡೆ, ಹಿರಿಯರಾದ ಜಿ.ಎನ್.ಭಟ್ಟ ಕಿಬ್ಬೀಕೇರಿ, ಎಸ್‌ಡಿಎಂಸಿ ಅಧ್ಯಕ್ಷ ಸೀತಾರಾಮ ಹೆಗಡೆ ಇತರರು ಪಾಲ್ಗೊಂಡಿದ್ದರು.

ಮಕ್ಕಳಿಗೆ ವಿವಿಧ ಆಟೋಟ, ಕರಕುಶಲ ಚಟುವಟಿಕೆಗಳನ್ನು ನಡೆಸಲಾಯಿತು. ಗ್ರಂಥಾಲಯ ಮಹತ್ವ ಕುರಿತು ಜಿ.ಎನ್.ಭಟ್ಟ ಕಿಬ್ಬೀಕೇರಿ ಮಾತನಾಡಿದರು. ಅಂಗನವಾಡಿ ಕಾರ್ಯಕರ್ತರು, ಗ್ರಾಮಸ್ಥರು, ಪಂಚಾಯತ ವ್ಯಾಪ್ತಿಯ ಶಾಲಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಗ್ರಾಮಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಕಾರ್ಯಕ್ರಮ ಆಯೋಜನೆ ಮಾಡುವಲ್ಲಿ ಸಹಕರಿಸಿದರು. ಅರಿವು ಕೇಂದ್ರದ ಮೇಲ್ವಿಚಾರಕ ವಿನಾಯಕ ಮುಕ್ರಿ ಸ್ವಾಗತಿಸಿ, ವಂದಿಸಿದರು.

ಕುಮಟಾ ರೋಟರಿ 49ನೇ ಸಂಸ್ಥಾಪನಾ ಸಂಭ್ರಮ

ಕುಮಟಾ: ಇಲ್ಲಿನ ರೋಟರಿ ಕ್ಲಬ್‌ನ 49ನೇ ಸಂಸ್ಥಾಪನಾ ದಿನಾಚರಣೆಯು ಇತ್ತೀಚೆಗೆ ಉತ್ತರ ಕನ್ನಡ ಬ್ಲಡ್ ಬ್ಯಾಂಕ್ ಸಭಾಭವನದಲ್ಲಿ ಸಂಭ್ರಮದಿಂದ ನೆರವೇರಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ರೋಟರಿ ಜಿಲ್ಲಾ ಪ್ರಾಂತಪಾಲರ ಪ್ರತಿನಿಧಿಯಾಗಿ ಆಗಮಿಸಿದ್ದ ಜಿಲ್ಲಾ ಆರ್‌ಐಡಿ ಕಾರ್ಯದರ್ಶಿ ಡಾ. ಸಂಜು ನಾಯಕ ಮಾತನಾಡಿ, ಕುಮಟಾ ರೋಟರಿಗೆ ಜಿಲ್ಲಾ ಮಟ್ಟದಲ್ಲಿ ಹೆಚ್ಚಿನ ಪ್ರತಿನಿಧ್ಯ ದೊರೆಯುವ ಅವಕಾಶಗಳಿದ್ದು, ಭವಿಷ್ಯದಲ್ಲಿ ರೋಟರಿ ಜಿಲ್ಲಾ ಪ್ರಾಂತಪಾಲರ ಸ್ಥಾನಕ್ಕೆ ಅರ್ಹ ನಾಯಕತ್ವ ಹೊರಹೊಮ್ಮಲು ಸದಸ್ಯರು ದೃಢ ಸಂಕಲ್ಪ ಮತ್ತು ಪ್ರಬಲ ಆಕಾಂಕ್ಷೆ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಗೌರವ ಅತಿಥಿಯಾಗಿ ಉಪಸ್ಥಿತರಿದ್ದ ಉಪಪ್ರಾಂತಪಾಲ ಮಹೇಶ ಕಲ್ಯಾಣಪುರ ಮಾತನಾಡಿ, ಕುಮಟಾ ರೋಟರಿ ಅನುಸರಿಸುತ್ತಿರುವ ಹಲವಾರು ಕಾರ್ಯಪದ್ಧತಿಗಳು ಇತರರಿಗೆ ಮಾದರಿಯಾಗಿವೆ. ಅಪಾರ ಅನುಭವ ಮತ್ತು ಹಿರಿಯ ಸದಸ್ಯರ ಬಳಗವನ್ನು ಹೊಂದಿರುವ ಈ ಕ್ಲಬ್ ಮುಂದಿನ ವರ್ಷ ಸುವರ್ಣ ಮಹೋತ್ಸವದ ಸಿದ್ಧತೆಯಲ್ಲಿ ತೊಡಗಿರುವುದು ಸಂತಸ ತಂದಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಆರಂಭದಲ್ಲಿಡಾ.ಶ್ರೀದೇವಿ ಭಟ್ ಪ್ರಾರ್ಥನೆ ನೆರವೇರಿಸಿದರು. ರೋಟರಿ ಅಧ್ಯಕ್ಷರಿಗೆ ರೊ. ಗಣೇಶ ನಾಯ್ಕ ಮಿರ್ಜಾನ ಕಂಠಪಟ್ಟಿ ಧಾರಣೆಗೈದರು. ರೋಟರಿ ಅಧ್ಯಕ್ಷ ಕಿರಣ ನಾಯಕ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಸಂಸ್ಥೆಯ ಕಾರ್ಯಚಟುವಟಿಕೆಗಳ ಕುರಿತು ಮಾತನಾಡಿದರು. ಸಿಎ ವಿನಾಯಕ ಹೆಗಡೆ ಕುಮಟಾ ರೋಟರಿಯ ಬೆಳವಣಿಗೆಯ ಪಯಣವನ್ನು ವಿವರಿಸಿದರು. ರೋಟರಿ ಸರ್ವೀಸ್ ಸೊಸೈಟಿಯ ಅಧ್ಯಕ್ಷ ವಸಂತ ರಾವ್ ನಾದಶ್ರೀ ಕಲಾಕೇಂದ್ರದ ಪ್ರಗತಿ ಹಾಗೂ ಪ್ರಸ್ತುತ ಬೆಳವಣಿಗೆಗಳನ್ನು ಪ್ರಸ್ತಾಪಿಸಿದರು.

ಈ ಸಂದರ್ಭದಲ್ಲಿ ಮಾಜಿ ರೋಟರಿ ಅಧ್ಯಕ್ಷರನ್ನು ಸನ್ಮಾನಿಸಿ ಗೌರವಿಸಲಾಯಿತು. ಕೋಶಾಧ್ಯಕ್ಷ ಗುರುಪ್ರಸಾದ ಕಾಮತ ಅತಿಥಿಗಳ ಪರಿಚಯ ಮಾಡಿಕೊಟ್ಟರು.

ಕಾರ್ಯದರ್ಶಿ ನಿಖಿಲ್ ಕ್ಷೇತ್ರಪಾಲ ವಂದಿಸಿದರು. ಜಯವಿಠ್ಠಲ ಕುಬಾಲ ಹಾಗೂ ಡಾ. ಶ್ರೀದೇವಿ ಭಟ್ ಕಾರ್ಯಕ್ರಮ ನಿರೂಪಿಸಿದರು.



ಪುಟಾಣಿ ಮಕ್ಕಳಿಂದ ಶಾಸಕರಿಗೆ ಮನವಿ

ಕಾರವಾರ: ಮದುವೆ ಆರಕ್ಷತೆಯ ಸಮಾರಂಭದಲ್ಲಿ ಭಾಗವಹಿಸಿದ ಈ ಕ್ಷೇತ್ರದ ಶಾಸಕರನ್ನು ಕಂಡು ಕಡವಾಡದ ಪುಟಾಣಿ ಮಕ್ಕಳು ಮೌಖಿಕ ಮನವಿ ನೀಡಿದ ಘಟನೆ ನಡೆಯಿತು.

ಘಟನೆಯ ವಿವರ: ಕಳೆದ ಶುಕ್ರವಾರ ರಾತ್ರಿ ಪಾರ್ವತಿ ಶಂಕರ ಮದುವೆ ಹಾಲಿನಲ್ಲಿ ಮದುವೆಯ ಆರಕ್ಷತೆ ಕಾರ್ಯಕ್ರಮಕ್ಕೆ ಶಾಸಕ ಸತೀಶ ಸೈಲ್ ರವರು ಭಾಗವಹಿಸಿದ ಸಂದರ್ಭದಲ್ಲಿ ಕಾರವಾರ ತಾಲೂಕಿನ ಕಡವಾಡದ ಪುಟಾಣಿ ಮಕ್ಕಳು ಊಟಕ್ಕೆ ಕುಳಿತ ಶಾಸಕ ಸತೀಶ್ ಸೈಲ್ ಹತ್ತಿರ ಬಂದು ತಾವು ಕಡವಾಡದ ಬೋವಿವಾಡದ ಮಕ್ಕಳು ನಮಗೆ ಆಟ ಆಡಲು ಸ್ಥಳಾವಕಾಶವಿದೆ. ಆದರೆ, ಆಟದ ಸಾಮುಗ್ರಿಗಳು ಇಲ್ಲ ಆದ್ದರಿಂದ ತಾವು ದಯಮಾಡಿ ಆಟದ ಸಾಮುಗ್ರಿಗಳಾದ ಚೋಕಾಲಿ, ಜಾರುಗುಂಡಿ, ಇತ್ಯಾದಿಗಳನ್ನು ಅಳವಡಿಸಿ ಕೊಟ್ಟರೆ ನಮಗೆ ರಜಾ ದಿನಗಳಲ್ಲಿ ಆಟ ಆಡಲು ಅನುಕೂಲವಾಗುತ್ತದೆ ಎಂದು ಮೌಖಿಕವಾಗಿ ಮನವಿ ಮಾಡಿದರು. ಮಕ್ಕಳ ಹೃದಯಾಳದ ಮನವಿಗೆ ಶಾಸಕ ಸತೀಶ ಸೈಲ್ ರವರು ಮಕ್ಕಳ ಬೇಡಿಕೆಗಳನ್ನು ಮಾಡಿಕೊಡುವುದಾಗಿ ಭರವಸೆ ನೀಡಿದರು.



ಈ ಸಂದರ್ಭದಲ್ಲಿ ಅಲ್ಲಿ ಉಪಸ್ಥಿತರಿದ್ದ ಜನಶಕ್ತಿ ವೇದಿಕೆ ಅಧ್ಯಕ್ಷರು ಹಾಗೂ ಸಮಾಜಸೇವಕರಾದ ಮಾಧವ ನಾಯಕ ರವರು ಮಕ್ಕಳು ಮಾತಿಗೆ ಮನಸೋತು ತಾವು ಕೂಡಾ ಸಹಾಯ ಮಾಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪುಟಾಣಿಗಳಾದ ಸಾನ್ವಿ ಉಮಾಕಾಂತ್ ಭೋವಿ, ಆರುಷ್ ರಾಹುಲ್ ಅಜರೇಕರ್. ಸಾತ್ವಿಕ್ ಉಮಾಕಾಂತ್ ಭೋವಿ, ತ್ರಿಷಾ ಅಂಬರೀಶ್ ಅಂಕೋಲೇಕರ, ಶ್ರೀಧತ್ತ ದೀಪಕ್ ಕೇಣಿಕರ್ ಉಪಸ್ಥಿತರಿದ್ದರು.

ಪ್ರಾಕ್ಸಿನ್ ಟೆಕ್ನಾಲಜಿ ಸಂಸ್ಥೆಗೆ ವಿಡಿಐಟಿ ವಿದ್ಯಾರ್ಥಿಗಳ ಭೇಟಿ

ಹಳಿಯಾಳ: ಕೆಎಲ್‌ಎಸ್ ವಿಡಿಐಟಿ ಹಳಿಯಾಳದ ದ್ವಿತೀಯ ವರ್ಷದ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿಗಳು ಹಳಿಯಾಳದ ಪ್ರಾಕ್ಸಿನ್ ಟೆಕ್ನಾಲಜಿ ಕಂಪನಿಗೆ ಶನಿವಾರ ಭೇಟಿ ನೀಡಿದ್ದರು.

ಕಂಪನಿಯ ಮಾಲೀಕರಾದ ಸ್ಥಳೀಯ ಉದ್ಯಮಿ ನಾರಾಯಣ ಟೋಸೂರ್ ಅವರು, ನೂತನ ತಂತ್ರಜ್ಞಾನವಾದ ಕೃತಕ ಬುದ್ಧಿಮತ್ತೆ ಹಾಗೂ ಯಂತ್ರ ಕಲಿಕೆಯನ್ನು ತಮ್ಮ ಒಡೆತನದ ಕಂಪನಿಯಲ್ಲಿ ಹೇಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಎಲೆಕ್ಟ್ರಿಕ್ ವಾಹನದಲ್ಲಿ ಬಳಕೆ ಮಾಡಲಾಗುತ್ತಿರುವ ತಂತ್ರಜ್ಞಾನದ ಕುರಿತಾಗಿ ಬೆಳಕು ಚೆಲ್ಲಿದರು. ಕೈಗಾರಿಕಾ ಕ್ಷೇತ್ರವು ಬಯಸುವ ಕೌಶಲ್ಯವನ್ನು ವಿದ್ಯಾರ್ಥಿಗಳು ಹೊಂದಬೇಕೆಂದು ನುಡಿಯುತ್ತ, ತಮ್ಮ ಸಂಸ್ಥೆಯು ಉತ್ಪಾದಿಸುತ್ತಿರುವ ಉತ್ಪನ್ನಗಳ ಕುರಿತಾಗಿ ವಿವರಣೆ ನೀಡಿದರು.

ಗ್ರಾಮೀಣ ಭಾಗದ ಹಲವಾರು ವಿದ್ಯಾರ್ಥಿಗಳಿಗೆ ಪ್ರಾಕ್ಸಿನ್ ಸಂಸ್ಥೆಯ ಮೂಲಕ ನಾರಾಯಣ ಟೋಸೂರ್ ಅವರು ಉದ್ಯೋಗ ನೀಡಿದ್ದಾರೆ. ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್ ಕಾರ್ಯಕ್ರಮ ಆಯೋಜಿಸಿದ್ದರು.



ಪ್ರೊ. ರಜತ್ ಆಚಾರ್ಯ, ಪ್ರೊ. ಸಂತೋಷ್ ಸವಣೂರು, ಪ್ರೊ. ಶ್ರೀಗೌರಿ, ಪ್ರೊ. ನಿರ್ಮಲ ಗಾಣಿಗೇರ್ ಸಂಯೋಜಿಸಿದ್ದರು. 120ಕ್ಕೂ ಅಧಿಕ ವಿದ್ಯಾರ್ಥಿಗಳು ಪ್ರಾಕ್ಸಿನ್ ಟೆಕ್ನಾಲಜಿ ಗೆ ಭೇಟಿ ನೀಡಿದ್ದು, ವಿದ್ಯಾರ್ಥಿಗಳ ಪ್ರಾಯೋಗಿಕ ಜ್ಞಾನದ ಉನ್ನತೀಕರಣಕ್ಕೆ ಸಹಕಾರಿಯಾಗಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾಮೀಣ ಜನರೊಂದಿಗೆ ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸಿ

ಹಳಿಯಾಳ: ಕೆನರಾ ಬ್ಯಾಂಕ್ ದೇಶಪಾಂಡೆ ಗ್ರಾಮೀಣ ಸ್ವಯಂ ಉದ್ಯೋಗತರಬೇತಿ ಸಂಸ್ಥೆ, ಹಳಿಯಾಳ ಹಾಗೂ ಕೆನರಾ ಬ್ಯಾಂಕ್ ವೃತ್ತ ಕಚೇರಿ, ಹುಬ್ಬಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ ನೂತನವಾಗಿ ನೇಮಕಗೊಂಡ ಪ್ರೊಬೇಷನರಿ ಕೃಷಿ ವಿಸ್ತರಣಾ ಅಧಿಕಾರಿಗಳಿಗೆ ಪಾದಾರ್ಪಣ್ 5 ದಿನಗಳ ಗ್ರಾಮೀಣ ಅವಗಾಹನಾ ತರಬೇತಿ ಕಾರ್ಯಕ್ರಮವನ್ನು ಮೇ 18 ರಿಂದ ಮೇ 22 ರವರೆಗೆ ಯಶಸ್ವಿಯಾಗಿ ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಕೆನರಾ ಬ್ಯಾಂಕಿನ ಲೀಡ್ ಡಿಸ್ಟ್ರಿಕ್ಟ್ ಮ್ಯಾನೇಜರ್ ರಾಜಪ್ಪ ಗೌಳಿ ಉದ್ಘಾಟಿಸಿ ಅವರು, ಗ್ರಾಮೀಣ ಹಣಕಾಸಿನ ಅವಲೋಕನ, ಪ್ರಾಥಮಿಕ ವಲಯ ಸಾಲ, ಪ್ರಧಾನಮಂತ್ರಿ ಜನಧನ್ ಯೋಜನೆ ಹಾಗೂ ಹಣಕಾಸು ಒಳಗೊಳ್ಳುವಿಕೆಯ ಗುರಿಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ಗ್ರಾಮೀಣ ಪ್ರದೇಶಗಳ ಆರ್ಥಿಕ ಅಭಿವೃದ್ಧಿಯಲ್ಲಿ ಬ್ಯಾಂಕುಗಳ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು,



ನೂತನ ಅಧಿಕಾರಿಗಳು ಗ್ರಾಮೀಣ ಜನರೊಂದಿಗೆ ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.

ಐದು ದಿನಗಳ ಈ ವಿಶೇಷ ಕಾರ್ಯಕ್ರಮದಲ್ಲಿ ತರಬೇತಿಗಾರರಿಗೆ ಗ್ರಾಮೀಣ ಜೀವನ, ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಗಳ ಕುರಿತು ಪ್ರಾಯೋಗಿಕ ಅರಿವು ಮೂಡಿಸುವ ಉದ್ದೇಶದಿಂದ ವಿವಿಧ ವಿಷಯಗಳ ಕುರಿತು ಉಪನ್ಯಾಸಗಳು ಹಾಗೂ ಕ್ಷೇತ್ರ ಭೇಟಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಹಣಕಾಸು ಒಳಗೊಳ್ಳುವಿಕೆ, ಡಿಜಿಟಲ್ ಸಾಕ್ಷರತೆ, ಬಿಸಿ/ಮೈಕ್ರೋ ಎಟಿಎಂ ಕಾರ್ಯವೈಖರಿ, ಸರ್ಕಾರದ ವಿವಿಧ ಯೋಜನೆಗಳು, ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಇಲಾಖೆಗಳ ಕಾರ್ಯಪದ್ಧತಿ, ರೈತ ಉತ್ಪಾದಕರ ಸಂಘಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು , ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಅಂಚೆ ಕಚೇರಿಗಳು, ಪಿಎಸಿಎಸ್ ಹಾಗೂ ಗ್ರಾಮ ಪಂಚಾಯಿತಿಗಳ ಪಾತ್ರದ ಕುರಿತು ತಜ್ಞರಿಂದ ಮಾಹಿತಿ ನೀಡಲಾಯಿತು.

ಈ ಮೂಲಕ ಗ್ರಾಮೀಣ ಜನಜೀವನ, ಬ್ಯಾಂಕಿಂಗ್ ಅಗತ್ಯಗಳು ಹಾಗೂ ಸರ್ಕಾರದ ಯೋಜನೆಗಳ ಅನುಷ್ಠಾನ ಕುರಿತು ಸಮಗ್ರ ತಿಳುವಳಿಕೆ ಪಡೆದರು. ಕಾರ್ಯಕ್ರಮದ ವೇಳೆ ನಾಬಾರ್ಡ್, ಕಾರವಾರದ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕ ಸುಶೀಲಕುಮಾರ ನಾಯ್ಕ ಅವರು ತರಬೇತಿಗಾರರೊಂದಿಗೆ ಸಂವಾದ ನಡೆಸಿ, ನಾಬಾರ್ಡ್ನ ಗ್ರಾಮೀಣಾಭಿವೃದ್ಧಿ ಚಟುವಟಿಕೆಗಳು, ಸ್ವಸಹಾಯ ಸಂಘಗಳ ಬಲವರ್ಧನೆ, ಕೃಷಿ ಹಾಗೂ ಗ್ರಾಮೀಣ ಉದ್ಯಮಗಳ ಅಭಿವೃದ್ಧಿಗೆ ನಾಬಾರ್ಡ್ ನೀಡುತ್ತಿರುವ ಪ್ರೋತ್ಸಾಹ ಕುರಿತು ವಿವರಿಸಿದರು.

ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಎಲ್ಲಾ ತರಬೇತಿ ಗಾರರಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಕೆನರಾ ಬ್ಯಾಂಕ್ ವೃತ್ತ ಕಚೇರಿ, ಹುಬ್ಬಳ್ಳಿಯ ಹಿರಿಯ ವ್ಯವಸ್ಥಾಪಕರಾದ ಯಮನಪ್ಪ ಹಾಲವರ, CB-DRSETI ಹಳಿಯಾಳದ ನಿರ್ದೇಶಕ ಕಿರಣಕುಮಾರ ಬಾಗಡೆ ಹಾಗೂ ಯೋಜನಾ ಸಂಯೋಜಕರಾದ ವಿನಾಯಕ ಎ. ಚವ್ಹಾಣ ಉಪಸ್ಥಿತರಿದ್ದರು. ಭಾರತದ ವಿವಿಧ ಭಾಗಗಳಿಂದ ಆಗಮಿಸಿ ಕರ್ನಾಟಕದಲ್ಲಿ ಸೇವೆ ಸಲ್ಲಿಸುತ್ತಿರುವ ಒಟ್ಟು 49 ಬ್ಯಾಂಕ್ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮುಂದಿನ ಪೀಳಿಗೆ ನಮ್ಮ ಸಂಸ್ಕೃತಿ ಉಳಿಸಿಕೊಂಡು ಹೋಗುವಂತಾಗಲಿ

ಯಲ್ಲಾಪುರ: ಹವ್ಯಕರ ಸಂಸ್ಕೃತಿಯನ್ನು ಬಿಂಬಿಸುವ ಇಂತಹ ಕಾರ್ಯಕ್ರಮ ಮುಂದಿನ ತಲೆಮಾರುಗಳಿಗೆ ಮಾರ್ಗದರ್ಶನವಾಗಲಿದೆ ಎಂದು ಉಮ್ಮಚಗಿ ಶ್ರೀ ಮಾತಾ ಸಹಕಾರಿ ಸಂಘದ ಅಧ್ಯಕ್ಷ ಜಿ.ಎನ್. ಹೆಗಡೆ ಹಿರೇಸರ ಹೇಳಿದರು.

ಅವರು ಶನಿವಾರ ಪಟ್ಟಣದ ಕಾರ್ಮಿಕ ಭವನದಲ್ಲಿ ಅಖಿಲ ಹವ್ಯಕ ಮಹಾಸಭಾ ಸಂಯೋಜನೆಯಲ್ಲಿ ಪ್ರತಿಬಿಂಬ (ಹವ್ಯಕರಿಂದ, ಹವ್ಯಕರಿಗಾಗಿ, ಹವ್ಯಕರಿಗೋಸ್ಕರ) ಕಾರ್ಯಕ್ರಮದಡಿ ಸಮಾಜದ ಪ್ರಾಂತ್ಯದ ಹವ್ಯಕ ಪ್ರತಿಭೆಗಳಿಗಾಗಿ ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಮಾಜದ ಉನ್ನತಿಗಾಗಿ ನಮ್ಮವರ ಜನಸಂಖ್ಯೆ ಹೆಚ್ಚಾಗಬೇಕು. ನಮ್ಮ ಮುಂದಿನ ಪೀಳಿಗೆ ನಮ್ಮ ಸಂಸ್ಕೃತಿ ಉಳಿಸಿಕೊಂಡು ಹೋಗುವಂತಾಗಬೇಕು ಎಂದರು.

ತಾಲೂಕು ಹವ್ಯಕ ಸಂಘದ ಅಧ್ಯಕ್ಷ ಡಿ ಶಂಕರಭಟ್ ಮಾತನಾಡಿ, ಹವ್ಯಕರಲ್ಲಿ ಎಲ್ಲರಲ್ಲೂ ಪ್ರತಿಭೆ ಇರುತ್ತದೆ.ಆದರ ಅನಾವರಣಕ್ಕೆ ಇದು ವೇದಿಕೆಯಾಗಿದೆಯಲ್ಲದೇಮನುಷ್ಯನಿಗೆ ಸಹಜವಾಗಿ ಕಷ್ಟ ಬಂದರೂ ಸಮಷ್ಟಿಯ ವೇದಿಕೆ ಅವಶ್ಯಕತೆಯಿತ್ತು. ಅದಕ್ಕೆ ಪೂರಕವಾಗಿ ಈ ಪ್ರತಿಬಿಂಬ ಕಾರ್ಯಕ್ರಮವಾಗಿದೆ ಎಂದರು.



ಅಂಕೋಲಾ ಹವ್ಯಕ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಎಂ.ಪಿ. ಭಟ್ ಮಾತನಾಡಿ, ಪ್ರತಿಬಿಂಬ ಎಂದರೆ ನೈಜತೆಯಾಗಿದ್ದು ಪ್ರತಿಭೆಯನ್ನು ಒರಗೆ ಹಚ್ಚುವ ಕಾರ್ಯಕ್ರಮವಾಗಿದ್ದು ಪ್ರತಿಯೊಬ್ಬರೂ ಶಿಕ್ಷಣ, ವಿವೇಕ, ಬುದ್ದಿವಂತಿಕೆ, ಮಾನವೀಯತೆ ತುಂಬಿದ ಹವ್ಯಕ ಬೀಜಗಳಾಗಿ ಎಂದರು. ಮಾತೃ ಮಂಡಳಿಯ ಅಧ್ಯಕ್ಷೆ ಆಶಾ ಬಗನಗದ್ದೆ ಮಾತನಾಡಿ, ವಿಶಿಷ್ಟ ಆಹಾರ ಪದ್ಧತಿ, ಸಂಪ್ರದಾಯವನ್ನೊಳಗೊಂಡಿರುವ ಹವ್ಯಕರನ್ನು ಒಂದೆಡೆ ಸೇರಿಸಿ ಮಾನಸಿಕವಾಗಿ ಒಗ್ಗೂಡಿಸುವ ಕಾರ್ಯ ಮಹಾಸಭಾ ಮಾಡುತ್ತಿದೆ ಎಂದರು. ಅಧ್ಯಕ್ಷತೆವಹಿಸಿ ಹವ್ಯಕ ಮಹಾಸಭಾ ರಾಜ್ಯ ಉಪಾಧ್ಯಕ್ಷ ಶ್ರೀಧರ ಭಟ್ ಕೆಕ್ಕಾರು ಮಾತನಾಡಿ 83 ವಸಂತ ಕಂಡಿರುವ ಹವ್ಯಕ ಮಹಾಸಭಾದಿಂದ ಸಹಸ್ರ ಚಂದ್ರದರ್ಶನ ಕಾರ್ಯಕ್ರಮ ಮಾಡಲಾಗಿದ್ದು ಎಲ್ಲ ಹವ್ಯಕರನ್ನು ಒಂದುಗೂಡಿಸುವ ಕಾರ್ಯ ಮಾಡುತ್ತಿದೆ. ಮೊದಲು ಬೆಂಗಳೂರಿಗೆ ಮಾತ್ರ ಸೀಮಿತವಾಗಿದ್ದ ಕಾರ್ಯಕ್ರಮ ಇತ್ತೀಚಿನ ವರ್ಷಗಳಲ್ಲಿ ಬೇರೆ ಬೇರೆ ಜಿಲ್ಲೆ ತಾಲೂಕು ಗಳಲ್ಲಿಯೂ ಉತ್ತಮವಾಗಿ ಸಂಘಟಿಸುತ್ತಿರುವದು ಸಂತಸದ ವಿಷಯ ಎಂದರು.

ಹವ್ಯಕ ಮಹಾಸಭಾ ರಾಜ್ಯ ಉಪಾಧ್ಯಕ್ಷ ಆರ್ ಎಂ ಹೆಗಡೆ ಬಾಳೇ ಸರ್ ಮಾತನಾಡಿ, ಬ್ರಾಹ್ಮಣ ಸಮುದಾಯದಲ್ಲಿಯೇ ವಿಶಿಷ್ಟ ಪರಂಪರೆಯ ಹವ್ಯಕರು ಎಲ್ಲ ಸಮುದಾಯದವರೊಂದಿಗೆ ಹೊಂದಿಕೊಳ್ಳುವ ಗುಣದವರಾಗಿದ್ದಾರೆ. ಆದರೆ ವೈವಾಹಿಕ ಸಮಸ್ಯೆ, ಪ್ರತಿಭಾ ಪಲಾಯನ,ವಂಶವಾಹಿನಿಕಲಬೆರಕೆ, ಹಳ್ಳಿಗಳು ವೃದ್ಧಾಶ್ರಮಗಳಾ ಗುತ್ತಿವದು, ವೃದ್ಧಶ್ರಮಹೆಚ್ಚುತ್ತಿರುವದುಕಳವಳಕಾರಿ ಸಂಗತಿಗಳಾಗಿದ್ದು ಇದರ ಬಗ್ಗೆ ಗಂಭೀರ ಚಿಂತನೆ ಅಗತ್ಯವಾಗಿದೆ ಎಂದರು. ಸ್ವರ್ಣ ವಲ್ಲಿ ಮಠ ಸೀಮಾಧ್ಯಕ್ಷ ಡಿ ಟಿ ಹೆಗಡೆ ಉಪಸ್ಥಿತರಿದ್ದರು.

ನಂದಿತಾ ಭಾಗ್ವತ ನಿರ್ವಹಿಸಿದರು. ಸಂಚಾಲಕ ಅನಂತ ಗಾವಂಕರ ಸ್ವಾಗತಿಸಿದರು. ಸಂಚಾಲಕ ಶಶಾಂಕ ಹೆಗಡೆ ಹಳವಳ್ಳಿ ವಂದಿಸಿದರು. ನಂತರ ಮಹಿಳೆಯರಿಗೆ ರಂಗೋಲಿ,ಆರತಿ ತಾಟು, ಹವಿ ರುಚಿ, ಕರಕುಶಲ,ಭಗವದ್ಗೀತೆ, ಹಳ್ಳಿ ಹಾಡು, ಮಕ್ಕಳಿಗೆ ಏಕಪಾತ್ರಭಿನಯ,ಛದ್ಮವೇಷ ಸ್ಪರ್ಧೆ ನಡೆಯಿತು.

ಕಿರುಸುದ್ದಿ

ಮೇ 26ಕ್ಕೆ ಕೌನ್ಸೆಲಿಂಗ್

ಹಾವೇರಿ: ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ/ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಕಾಲೇಜು/ ಶಾಲೆಗಳ ಹಾಗೂ ಮೌಲಾನಾ ಆಜಾದ್ ಪದವಿ ಪೂರ್ವ ಕಾಲೇಜುಗಳಲ್ಲಿನ 2026-27ನೇ ಸಾಲಿಗೆ ಪ್ರಥಮ ಪಿ.ಯು.ಸಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಿದ ಅರ್ಹ ವಿದ್ಯಾರ್ಥಿಗಳಿಗೆ ಕೌನ್ಸೆಲಿಂಗ್ ಮೇ 26ರಂದು ಕರ್ಜಗಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಪ್ರಥಮ ಪಿ.ಯು.ಸಿ ವಿಜ್ಞಾನ ಮತ್ತು ವಾಣಿಜ್ಯ ತರಗತಿಗೆ ಪ್ರವೇಶಾತಿಗಾಗಿ ಕೌನ್ಸೆಲಿಂಗ್ ಗೆ ಹಾಜರಾಗಬೇಕು ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಾಹಿತಿ ಕೇಂದ್ರ, ದೂ.08375-234505 ಇಲ್ಲಿ ಸಂಪರ್ಕಿಸಬಹುದು.

ಮಟ್ಕಾ: ಇಬ್ಬರ ವಿರುದ್ಧ ದೂರು ದಾಖಲು

ಹಾವೇರಿ: ಸಾರ್ವಜನಿಕ ರಸ್ತೆಯಲ್ಲಿ ನಿಂತು ಮಟ್ಕಾ ಜೂಜಾಟದಲ್ಲಿ ತೊಡಗಿಕೊಂಡಿದ್ದ ಇಬ್ಬರು ಆರೋಪಿಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿದೆ.ರಟ್ಟೀಹಳ್ಳಿ ತಾಲೂಕು ಹುಲ್ಲತ್ತಿ ಗ್ರಾಮದ ಕಿರಣ ನಾಗಪ್ಪ ಕನ್ನೇರ ಹಾಗೂ ನಾಗಪ್ಪ ಬಸಪ್ಪ ಕನ್ನೇರ ಎಂಬುವವರ ವಿರುದ್ಧ ದೂರು ದಾಖಲಿಸಲಾಗಿದೆ. ಆರೋಪಿತರು ಹುಲ್ಲತ್ತಿ ಬಸ್ ನಿಲ್ದಾಣ ಬಳಿಯ ಸಾರ್ವಜನಿಕ ರಸ್ತೆಯಲ್ಲಿ ನಿಂತುಕೊಂಡು ತಮ್ಮ ಲಾಭಕ್ಕೋಸ್ಕರ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರನ್ನು ಕರೆದು ಒಂದು ರೂ.ಗೆ 80 ರೂ.ಕೊಡುವುದಾಗಿ ಹೇಳುತ್ತಾ ಮಟ್ಕಾ ಜೂಜಾಟ ತೊಡಗಿಕೊಂಡಿರುವ ಬಗ್ಗೆ ಖಚಿತ ಮಾಹಿತಿ ಆಧರಿಸಿ ಪೊಲೀಸರು ದಾಳಿ ನಡೆಸಿದ್ದಾರೆ. ದಾಳಿ ಕಾಲಕ್ಕೆ ಆರೋಪಿತರು ಸಿಕ್ಕಿ ಬಿದ್ದಿದ್ದಾರೆ ಎಂದು ಪೊಲೀಸರು ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ರಟ್ಟೀಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡ್ರ್ಯಾಪ್ ನೆಪದಲ್ಲಿ ಚಿನ್ನದ ಚೈನ್ ಎಗರಿಸಿದ ಕಳ್ಳ

ಹಾವೇರಿ: ಬೈಕ್ ಸವಾರರೊಬ್ಬರ ಗಮನ ಬೇರೆಡೆಗೆ ಸೆಳೆದ ಅಪರಿಚಿತ ವ್ಯಕ್ತಿಯೊಬ್ಬ ಸುಮಾರು 1.50 ಲಕ್ಷ ರೂ. ಮೌಲ್ಯದ ಬಂಗಾರದ ಚೈನ್ ಸರವನ್ನು ಕತ್ತರಿಸಿಕೊಂಡು ಹೋಗಿರುವ ಘಟನೆ ನಡೆದಿದೆ.ಮೈಲಾರದ ಸಕ್ಕರೆ ಕಾರ್ಖಾನೆಯಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿರುವ ಗಿರೀಶ ಗುಂಡಪ್ಪ ಉಪ್ಪಾರಗೆ ಸೇರಿದ ಬಂಗಾರದ ಚೈನ್ ಸರ ಇದಾಗಿದೆ. ಬೈಕ್ ಸವಾರ ಮೋಟೆಬೆನ್ನೂರು-ಅರಬಗೊಂಡ ಮಾರ್ಗವಾಗಿ ಹೊಗುತ್ತಿರುವಾಗ ಮೋಟೆಬೆನ್ನೂರ ಬಳಿ ಬೈಕ್‌ನ್ನು ಹತ್ತಿದ ಅಪರಿಚಿತ ವ್ಯಕ್ತಿ, ಮೋಟೆಬೆನ್ನೂರಿನಿಂದ 1 ಕಿಮೀ ದೂರ ಬಂದು ಬೈಕ್‌ನ್ನು ನಿಲ್ಲಿಸುವಂತೆ ತಿಳಿಸಿದ್ದಾರೆ. ಗಿರೀಶ ಉಪ್ಪಾರ ಬೈಕ್ ನಿಲ್ಲಿಸಿದ್ದಾಗ ಅಪರಿಚಿತ ವ್ಯಕ್ತಿ ಕೆಂಪು ಬಣ್ಣದ ಔಷಯನ್ನು ಗಿರೀಶನ ಅಂಗಿ ಮೇಲೆ ಹಾಕಿ ಗಮನವನ್ನು ಬೇರೆಡೆ ಸೆಳೆದಿದ್ದಾರೆ. ಆಗ ಬೈಕ್ ಸವಾರನ ಕೊರಳಲ್ಲಿದ್ದ 15 ಗ್ರಾಂ ತೂಕದ ಚೈನ್ ಸರವನ್ನು ಗೊತ್ತಾಗದಂತೆ ಕಟ್ ಮಾಡಿಕೊಂಡು ಪರಾರಿಯಾಗಿದ್ದಾನೆ ಎಂದು ದೂರುದಾರ ಗಿರೀಶ ಉಪ್ಪಾರ ಪೊಲೀಸರ ದೂರಿನಲ್ಲಿ ತಿಳಿಸಿದ್ದಾರೆ. ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ರಮ ಮರಳು ಸಾಗಾಟ: ದೂರು ದಾಖಲು

ಹಾವೇರಿ: ಯಾವುದೇ ಪರವಾನಗಿ ಪಡೆದುಕೊಳ್ಳದೆ ತುಂಗಭದ್ರಾ ನದಿ ಪಾತ್ರದಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಮರಳನ್ನು ಲಾರಿಯಲ್ಲಿ ತುಂಬಿಕೊಂಡು ಸಾಗಾಟ ಮಾಡುತ್ತಿದ್ದ ಆರೋಪದಡಿ ಲಾರಿ ಚಾಲಕ, ಮಾಲಕರ ವಿರುದ್ಧ ದೂರು ದಾಖಲಿಸಲಾಗಿದೆ.

ಗುತ್ತಲ ಪಟ್ಟಣದ ವಿರೇಶ ವಡ್ಡರ ಎಂಬ ಚಾಲಕ ಹಾಗೂ ವಾಸೀಂ ಖಾನ್ ಎಂಬ ಮಾಲೀಕರ ವಿರುದ್ಧ ದೂರು ದಾಖಲಾಗಿದೆ. ಆರೋಪಿತರು ಲೈಸೆನ್ಸ್ ಪಡೆದುಕೊಳ್ಳದೇ ಅಕ್ರಮವಾಗಿ ಮರಳನ್ನು ಸಂಗ್ರಹಿಸಿಕೊಂಡು ಸಾಗಾಟ ನಡೆಸುತ್ತಿದ್ದಾಗ ಜಂಗಮನಕೊಪ್ಪ ಕ್ರಾಸ್ ಬಳಿ ಸಿಕ್ಕಿಬಿದ್ದಿದ್ದಾರೆ ಎಂದು ದೂರಿನಲ್ಲಿ ತಿಳಿಸಿದೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಸುಗಳನ್ನು ಕದ್ದೊಯ್ದು ಕಳ್ಳರು

ಹಾವೇರಿ: ದನದ ಕೊಟ್ಟಿಗೆಯಲ್ಲಿ ಕಟ್ಟಲಾಗಿದ್ದ ಎರಡು ಬೆಲೆ ಬಾಳುವ ಹಸುಗಳನ್ನು ಕಳ್ಳರು ಕಳ್ಳತನ ಮಾಡಿಕೊಂಡು ಪರಾರಿಯಾಗಿರುವ ಘಟನೆ ಶಿಗ್ಗಾವಿ ತಾಲೂಕು ಅತ್ತಿಗೇರಿ ಗ್ರಾಮದಲ್ಲಿ ನಡೆದಿದೆ.

ಅತ್ತಿಗೇರಿಯ ಶಂಕ್ರಪ್ಪ ಭರಮಪ್ಪ ಮಡಿವಾಳರ ಎಂಬುವವರಿಗೆ ಸೇರಿದ ಜಾನುವಾರುಗಳು ಕಳುವಾಗಿವೆ. ದನದ ಕೊಟ್ಟಿಗೆಯಲ್ಲಿ ಕಟ್ಟಿದ್ದ 90 ಸಾವಿರ ರೂ.ಬೆಲೆಬಾಳುವ ಎರಡು ಆಕಳುಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ ಎಂದು ದೂರಿನಲ್ಲಿ ತಿಳಿಸಿದೆ. ಹುಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾವೇರಿ: ಜಿಲ್ಲೆಯ ವಿವಿಧ ಪೆಟ್ರೋಲ್ ಬಂಕ್‌ಗಳ ಎದುರು ಜನರು ಕ್ಯಾನ್ ಹಿಡಿದು ಸರದಿ ಸಾಲಿನಲ್ಲಿ ನಿಂತ ದೃಶ್ಯಗಳು, ವಾಹನಗಳ ಉದ್ದನೆಯ ಸಾಲುಗಳು ಕಂಡುಬಂದವು.

ಸಾಹಿತ್ಯ ಸಮ್ಮೇಳನಕ್ಕೆ ಸ್ಪಂದಿಸೋಣ: ಆಲದಕಟ್ಟಿ

ಹಾವೇರಿ: ನಗರದ ಅಂಬೇಡ್ಕರ್ ಭವನದಲ್ಲಿ ಮೇ 25ರಂದು ಕರುನಾಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯ ವತಿಯಿಂದ ಕವಿ ಜಿ.ಎಂ. ಓಂಕಾರಣ್ಣನವರ ಸರ್ವಾಧ್ಯಕ್ಷತೆಯಲ್ಲಿ 2ನೇ ರಾಜ್ಯಮಟ್ಟದ ಸಾಹಿತ್ಯ ಸಮ್ಮೇಳನ ನಡೆಯುತ್ತಿದ್ದು, ಇದನ್ನು ಬೆಂಬಲಿಸಿ ಸಾಹಿತಿ ಕಲಾವಿದರ ಬಳಗ ಸರಕಾರಿ ನೌಕರರ ಭವನದಲ್ಲಿ 'ಒಬ್ಬರು ಇಬ್ಬರನ್ನು ಕರೆ ತನ್ನಿ' ಎಂಬ ಘೋಷಣೆಯೊಂದಿಗೆ ಸಭೆ ನಡೆಸಿದರು.

ಸಭೆಯ ಅಧ್ಯಕ್ಷತೆಯನ್ನು ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವೈ.ಬಿ. ಆಲದಕಟ್ಟಿ ವಹಿಸಿ ಮಾತನಾಡಿ, ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ರೀತಿಯಲ್ಲಿ ಈ ಸಾಹಿತ್ಯ ಸಮ್ಮೇಳನಕ್ಕೆ ನಾವೆಲ್ಲ ಸ್ಪಂದಿಸೋಣ ಎಂದು ಹೇಳಿದರು.ಕರುನಾಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷ ಎಸ್.ಡಿ. ಮುಡಣ್ಣವರ ಮಾತನಾಡಿ, ಹಾವೇರಿಯ ಶಿಶುವಿನಾಳದವನಾದ ನನ್ನನ್ನು ಇಲ್ಲಿಯ ಜನ ಸಾಹಿತ್ಯ ಸಮ್ಮೇಳನಕ್ಕೆ ಬೆಂಬಲಿಸುವುದು ಸಂತೋಷ ಕೊಟ್ಟಿದೆ. ಇದು ಕನ್ನಡದ ಕೆಲಸ, ಎಲ್ಲರೂ ಕೈ ಜೋಡಿಸಿ ಎಂದು ಮನವಿ ಮಾಡಿಕೊಂಡರು.ಸಭೆಯಲ್ಲಿ ಜಿಲ್ಲಾ ಘಟಕದ ಅಧ್ಯಕ್ಷೆ ಚಂಪಾ ಹುಣಸಿಕಟ್ಟಿ, ರೇಣುಕಾ ಗುಡಿಮನಿ, ಎಸ್.ಎಲ್. ಕಾಡದೇವರಮಠ, ಮಂಜುಳಾ ಅಕ್ಕಿ, ಶಂಕರ ಸುತಾರ, ಎನ್.ಬಿ. ಕಾಳೆ, ಡಾ.ತಿಪ್ಪೇಸ್ವಾಮಿ, ಸಾಹಿತಿ ಕಲಾವಿದರ ಬಳಗದ ಈರಣ್ಣ ಬೆಳವಡಿ, ಶಶಿಕಲಾ ಅಕ್ಕಿ, ಜುಬೇದಾ ನಾಯಕ್, ಲೀಲಾವತಿ ಪಾಟೀಲ, ಶಂಕರ ಮಡಿವಾಳರ ಮತ್ತಿತರರು ಇದ್ದರು. ಶಿಕ್ಷಕ ನಾಗರಾಜ ಹುಡೇದ ಸ್ವಾಗತಿಸಿದರು. ಕಲಾ ಬಳಗದ ಪೃಥ್ವಿರಾಜ ಬೆಟಗೇರಿ ನಿರ್ವಹಿಸಿದರು. ಶಂಕರ ಮಡಿವಾಳರ ವಂದಿಸಿದರು.



ಹಾವೇರಿ: ನಗರದ ಅಂಬೇಡ್ಕರ್ ಭವನದಲ್ಲಿ ಮೇ 25ರಂದು ಕರುನಾಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯ ವತಿಯಿಂದ ಕವಿ ಜಿ.ಎಂ. ಓಂಕಾರಣ್ಣನವರ ಸರ್ವಾಧ್ಯಕ್ಷತೆಯಲ್ಲಿ 2ನೇ ರಾಜ್ಯಮಟ್ಟದ ಸಾಹಿತ್ಯ ಸಮ್ಮೇಳನ ನಡೆಯುತ್ತಿದ್ದು, ಇದನ್ನು ಬೆಂಬಲಿಸಿ ಸಾಹಿತಿ ಕಲಾವಿದರ ಬಳಗ ಸರಕಾರಿ ನೌಕರರ ಭವನದಲ್ಲಿ 'ಒಬ್ಬರು ಇಬ್ಬರನ್ನು ಕರೆ ತನ್ನಿ' ಎಂಬ ಘೋಷಣೆಯೊಂದಿಗೆ ಸಭೆ ನಡೆಸಿದರು.

ಕೆಲ ಹೊತ್ತು ವಿತರಣೆ ಕಾರ್ಯ ಬಂದ್

ಬಿತ್ತನೆ ಬೀಜಕ್ಕಾಗಿ ರೈತರ ಪರದಾಟ

ಹಾವೇರಿ: ಮುಂಗಾರು ಹಂಗಾಮು ಆರಂಭದ ಹೊತ್ತಿನಲ್ಲಿ ಕಳೆದೊಂದು ವಾರದಿಂದ ಬಿತ್ತನೆ ಸಿದ್ಧತೆಯಲ್ಲಿ ತೊಡಗಿರುವ ರೈತರು ನಾಲ್ಕು ದಿನಗಳಿಂದ ಬೀಜಕ್ಕಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಜಿಲ್ಲಾ ಕೇಂದ್ರ ಹಾವೇರಿ ನಗರದಲ್ಲಿ ಮೂರನೇ ದಿನವಾದ ಶನಿವಾರವೂ ಸೋಯಾಬಿನ್ ಬಿತ್ತನೆ ಬೀಜ ಪಡೆಯಲು ರೈತರು ಪೈಪೋಟಿ ನಡೆಸುತ್ತಿರುವ ಸಂದರ್ಭ ಕಂಡು ಬಂತು.

ಇಲ್ಲಿಯ ರೈತ ಸಂಪರ್ಕ ಕೇಂದ್ರಕ್ಕೆ ಹೊಂದಿಕೊಂಡಿರುವ ಗೋದಾಮಿನ ಎದುರು ಶನಿವಾರ ಬೆಳಗ್ಗೆಯಿಂದಲೇ ರೈತರ ಕ್ಯೂ ಹೆಚ್ಚಾಗಿತ್ತು. ಬೆಳಗ್ಗೆ 9.30ರ ನಂತರ ಕೃಷಿ ಇಲಾಖೆ ಸಿಬ್ಬಂದಿಗಳು ಬಿತ್ತನೆ ಬೀಜ ಪೂರೈಸಲು ಆರಂಭ ಮಾಡಿದರೂ ಸಹಿತ, ಸರದಿ ಸಾಲಿನಲ್ಲಿ ನಿಂತಿದ್ದ ರೈತರಿಂದ ದಾಂಧಲೆ, ಮಾತಿನ ಚಕಮಕಿ, ತಳ್ಳಾಟ, ನೂಕಾಟ ಹೆಚ್ಚಾಗಿದ್ದು ಕಂಡುಬಂತು. ಪೊಲೀಸರು ರೈತರನ್ನು ನಿಯಂತ್ರಿಸುವಲ್ಲಿ ಹರಸಾಹಸ ಪಡುತ್ತಿದ್ದರು.

ರೈತರ ಗಲಾಟೆ ಹೆಚ್ಚಾಗುತ್ತಿದ್ದರಿಂದ ಸ್ಥಳಕ್ಕೆ ಆಗಮಿಸಿದ ಡಿವೈಎಸ್‌ಪಿ ರೈತರ ಮನವೊಲಿಸಿ ಸರದಿಯಲ್ಲಿ ನಿಂತು ಬೀಜ ಪಡೆಯುವಂತೆ ತಿಳಿ ಹೇಳಿದರೂ ಸಹ ನೂಕಾಟ ತಳ್ಳಾಟ ಮುಂದುವರಿದ ಹಿನ್ನೆಲೆಯಲ್ಲಿ ಮಧ್ಯಾಹ್ನದ ವೇಳೆ ಕೆಲ ಹೊತ್ತು ವಿತರಣೆ ಕಾರ್ಯವನ್ನು ಬಂದ್ ಮಾಡಿಸಿದರು.

ಪರಿಸ್ಥಿತಿ ಅರಿತ ರೈತರು ತಮ್ಮಷ್ಟಕ್ಕೆ ತಾವೇ ಸರದಿಯಲ್ಲಿ ಶಾಂತವಾಗಿ ನಿಂತು ಸ್ಪಂದಿಸಿದರು. ನಂತರ ಗದ್ದಲ ಕೊಂಚ ನಿಯಂತ್ರಣಕ್ಕೆ ಬಂದ ಬಳಿಕ ಬೀಜ ವಿತರಣೆ ಕಾರ್ಯ ಮುಂದುವರೆಯಿತು.

ಆದರೂ ನೂಕುನುಗ್ಗಲು ಕಂಡುಬಂತಾದರೂ, ಅದರಲ್ಲೇ ರೈತರು ಅಗತ್ಯ ದಾಖಲೆಗಳನ್ನು ನೀಡಿ ಸೋಯಾಬಿನ್ ಬಿತ್ತನೆ ಬೀಜಗಳನ್ನು ಪಡೆದುಕೊಳ್ಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.



ರೈತರ ಆಕ್ರೋಶ

ಜಿಲ್ಲೆಯ ವಿವಿಧ ಭಾಗಗಳ ಕೃಷಿ ಕೇಂದ್ರಗಳಲ್ಲೂ ಬಿತ್ತನೆ ಬೀಜಕ್ಕಾಗಿ ಹಗಲು-ರಾತ್ರಿ ನೂಕುನುಗ್ಗಲು ಉಂಟಾಗುತ್ತಿದೆ. ಬೇಡಿಕೆಗೆ ತಕ್ಕಂತೆ ಬೀಜ ಪೂರೈಕೆ ಆಗದ ಹಿನ್ನೆಲೆಯಲ್ಲಿ ರೈತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತಕ್ಷಣವೇ ಅಗತ್ಯ ಪ್ರಮಾಣದ ಬೀಜ ಪೂರೈಕೆ ಮಾಡಿ, ಸಮರ್ಪಕವಾಗಿ ವಿತರಣೆಗೆ ಕ್ರಮ ಕೈಗೊಳ್ಳಬೇಕು ಎಂದು ರೈತರು ಕೃಷಿ ಇಲಾಖೆ ಅಧಿಕಾರಿಗಳಿಗೆ ಆಗ್ರಹಿಸಿದ್ದಾರೆ.

- ರೈತರಿಂದ ದಾಂಧಲೆ, ಮಾತಿನ ಚಕಮಕಿ, ತಳ್ಳಾಟ, ನೂಕಾಟ ಹೆಚ್ಚಾಗಿದ್ದು ಕಂಡುಬಂತು. ಪೊಲೀಸರು ರೈತರನ್ನು ನಿಯಂತ್ರಿಸುವಲ್ಲಿ ಹರಸಾಹಸ
- ಗದ್ದಲ ಕೊಂಚ ನಿಯಂತ್ರಣಕ್ಕೆ ಬಂದ ಬಳಿಕ ಬೀಜ ವಿತರಣೆ ಕಾರ್ಯ ಮುಂದುವರೆಯಿತು.

ಇಂಧನ ಅಭಾವ: ಕೃಷಿ ಚಟುವಟಿಕೆಗೆ ಹಿನ್ನಡೆ

ಹಾವೇರಿ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮಗಳು ಒಂದೊಂದಾಗಿ ಜಿಲ್ಲೆಯಲ್ಲಿ ಕಣ್ಣಿಗೆ ಎದ್ದು ಕಾಣುತ್ತಿದ್ದು, ಇದು ಜಿಲ್ಲೆಯ ಕೃಷಿ ಮೇಲೂ ಪರಿಣಾಮ ಬೀರುವ ಸಾಧ್ಯತೆ ಹೆಚ್ಚಿದೆ. ಕಳೆದೊಂದು ವಾರದಿಂದ ಜಿಲ್ಲೆಯಾದ್ಯಂತ ಮುಂಗಾರು ಪೂರ್ವ ಮಳೆ ಉತ್ತಮವಾಗಿ ಸುರಿದ ಹಿನ್ನೆಲೆ ರೈತರು ಭೂಮಿ ಸಜ್ಜುಗೊಳಿಸುವ ಕಾರ್ಯದಲ್ಲಿ ತೊಡಗಿದ್ದು, ಇದೀಗ ಕೃಷಿ ಕಾರ್ಯಗಳಿಗೆ ಎತ್ತಿನ ಬಳಕೆ ಕಡಿಮೆಯಾದ ಹಿನ್ನೆಲೆಯಲ್ಲಿ ಕೃಷಿ ಯಂತ್ರೋಪಕರಣಗಳ ಬಳಕೆ ಹೆಚ್ಚಿದೆ. ಹೀಗಾಗಿ ಇದೀಗ ಜಿಲ್ಲೆಯಲ್ಲಿ ಕೃಷಿ ಯಂತ್ರೋಪಕರಣಗಳಿಗೆ ಅಗತ್ಯವಾಗಿ ಬಳಸುವ ಡಿಸೇಲ್ ಕೊರತೆ ಎದ್ದು ಕಾಣುತ್ತಿದ್ದು, ರೈತರ ಆತಂಕಕ್ಕೆ ಕಾರಣವಾಗಿದೆ.

ಜಿಲ್ಲೆಯ ವಿವಿಧ ಪೆಟ್ರೋಲ್ ಬಂಕ್‌ಗಳ ಎದುರು ಜನರು ಕ್ಯಾನ್ ಹಿಡಿದು ಸರದಿ ಸಾಲಿನಲ್ಲಿ ನಿಂತ ದೃಶ್ಯಗಳು, ವಾಹನಗಳ ಉದ್ದನೆಯ ಸಾಲುಗಳು ಕಂಡುಬಂದವು ಆದರೆ ಮಧ್ಯಾಹ್ನ ಹೊತ್ತಿಗೆ ಬಹುತೇಕ ಪೆಟ್ರೋಲ್ ಬಂಕ್‌ಗಳಲ್ಲಿ ಡಿಸೇಲ್ ಸ್ಟಾಕ್ ಖಾಲಿಯಾಗಿರುವುದು, ಖಾಲಿ ಆಗುತ್ತಿರುವುದು ಕಂಡು ಬಂತು. ಜಿಲ್ಲಾ ಕೇಂದ್ರ, ಹಾವೇರಿ ಸೇರಿದಂತೆ ಸವಣೂರು, ಹಾನಗಲ್ಲ, ಶಿಗ್ಗಾವಿ, ರಾಣೇಬೆನ್ನೂರು ಸೇರಿದಂತೆ ಹಲವು ಭಾಗಗಳಲ್ಲಿ ಸುಮಾರು ಅರ್ಧದಷ್ಟು ಬಂಕ್‌ಗಳಲ್ಲಿ ಡೀಸೆಲ್ ಸಿಗದೇ ರೈತರು ಪರದಾಡುವಂತಾಯಿತು. ಮಧ್ಯ ಪ್ರಾಚ್ಯದ ಯುದ್ಧದ ಬಿಕ್ಕಟ್ಟಿನಿಂದಾಗಿ ಸಮರ್ಪಕ ಇಂಧನ ಪೂರೈಕೆಯಾಗದ ಕಾರಣ ಕೃಷಿ ಚಟುವಟಿಕೆಗಳಿಗೆ ಹಿನ್ನಡೆ ಯಾಗುತ್ತಿದೆ ಎಂದು ರೈತರು ಬೇಸರ ವ್ಯಕ್ತಪಡಿಸಿದರು.

ಜಿಲ್ಲಾಡಳಿತದಿಂದ ಕ್ರಮಕ್ಕೆ ಆಗ್ರಹ: ಇಂಧನ ಅಭಾವದಿಂದ ಕೃಷಿ ಚಟುವಟಿಕೆ ಗಳಿಗೆ ತೊಂದರೆಯಾಗುತ್ತಿರುವ ಹಿನ್ನೆಲೆ ಯಲ್ಲಿ ಜಿಲ್ಲಾಡಳಿತ ಹಾಗೂ ತೈಲ ಕಂಪನಿಗಳು ತಕ್ಷಣ ಕ್ರಮ ಕೈಗೊಂಡು ಸಮರ್ಪಕವಾಗಿ ಡೀಸೆಲ್ ಹಾಗೂ ಪೆಟ್ರೋಲ್ ಪೂರೈಕೆ ಮಾಡಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

> **ಇತ್ತೀಚೆಗೆ ಉತ್ತಮ ಮಳೆ ಸುರಿದಿದ್ದು, ವಾರದಿಂದ ಬಿತ್ತನೆ ಬೀಜಕ್ಕೆ ಸಾಲಿನಲ್ಲಿ ನಿಲ್ಲುವಂತಾಗಿತ್ತು. ಇಂದು ಬೆಳಗಿನಿಂದ ಡಿಸೇಲ್‌ಗಾಗಿ ಆ ಬಂಕ್, ಈ ಬಂಕ್ ಎಂದು ಓಡಾಡಿ ಈಗ 20ಲೀಟರ್ ಡಿಸೇಲ್ ಸಿಕ್ಕಿದೆ. ಇದು ಕೂಡ ಸಾಕಾಗಲ್ಲ. ಸರ್ಕಾರ ಡಿಸೇಲ್ ವ್ಯವಸ್ಥೆ ಮಾಡಿದರೆ ಮಣ್ಣ ಬರುತ್ತೆ.**
> ■ ಮಂಜಣ್ಣ ವಾಲಿಕಾರ, ಸಿಂಗಾಪುರ ರೈತ



ಸಾಹಿತ್ಯದ ಸಂಭ್ರಮ: ಪುಸ್ತಕಗಳ ಲೋಕಾರ್ಪಣೆ

ಮುಂಡಗೋಡ: ಬೆಂಗಳೂರಿನ ಗಿರಿಜಾ ದೈವಜ್ಞ ಸಭಾಭವನದಲ್ಲಿ ದೈವಜ್ಞ ಬ್ರಾಹ್ಮಣ ಸಮಾಜದ ಸಮುದಾಯದವರಲ್ಲಿ ಸೂಕ್ತವಾಗಿ ಅಡಗಿರುವ ಹಲವಾರು ಕರಕುಶಲ ಕಲೆಗಳು, ಪ್ರತಿಭೆಗಳು, ಕಲಾ ಸಂಸ್ಕೃತಿಗಳು, ಸಂಸ್ಕಾರಗಳ ಅರಿವು ಅಕ್ಷರದ ಯಜ್ಞದ ಕ್ರಾಂತಿ ಕುರಿತ ದೈವಜ್ಞ ಬ್ರಾಹ್ಮಣರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ 'ಸಾಹಿತ್ಯದ ಸಂಭ್ರಮ' ಎಂಬ ವಿನೂತನಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಐದಕ್ಕಿಂತ ಹೆಚ್ಚು ಪುಸ್ತಕಗಳು (ದೈವಜ್ಞ ಕೊಂಕಣಿ ಗೀತೋತ್ಸವ, ಪ್ರಾದೇಶಿಕ ಅರ್ಥ ಕೋಶ, ಹರಿವು, ಮೌನವು ಹಾಡಿದೆ, ಬದುಕು ಬರಿದಾದಾಗ, ಭಾಗವತ ದರ್ಪಣ, ಕವನ ಸಂಕಲನ) ಲೋಕಾರ್ಪಣೆಗೊಂಡವು. ಪುಸ್ತಕ, ಕವನ, ಕಾದಂಬರಿಗಳನ್ನು ಬರೆಯುವಲ್ಲಿ ದೈವಜ್ಞ ಸ್ತ್ರೀಯರು ಸಿಂಹ ಪಾಲಾಗಿರುವುದು ವಿಶೇಷವಾಗಿತ್ತು. ದೈವಜ್ಞ ಪುರುಷರು ಆರ್ಥಿಕತೆಯ ಪರವಾದರೆ, ಸ್ತ್ರೀಯರು ಕಾಲ್ಪನಿಕ ಲೋಕದಲ್ಲಿ ಕಥೆ ಕವನ ಸಂಕಲನ ಸಂಸ್ಕಾರ ಸಂಸ್ಕೃತಿಯ ಮೂಲ ಆಧಾರ ಸ್ತಂಭವಾಗಿ ಮಿಂಚಿದರು.

ಬಾಬಣ್ಣ ಚಲನಚಿತ್ರ ಹಾಗೂ ಜಾನಪದ ಲೋಕದ ಗಾರುಡಿ ಗುರುರಾಜ ಹೊಸಕೋಟೆ, ರಾಜ್ಯದ ಬಿಜೆಪಿ ವಕ್ತಾರರಲ್ಲಿ ಮುಂಚೂಣಿಯಲ್ಲಿರುವ ಎಂ.ಜಿ.ಮಹೇಶ, ಯುವ ಸಮುದಾಯದ ಮುಖಂಡ ಬೇರಂಕಿ ಮಹೇಶ, ಹಿರಿಯ ಸಾಹಿತಿ ಪುಷ್ಪಾ ಮತ್ತು ಚಂದ್ರಮತಿ ವೆರ್ಣೇಕರ ಉಪಸ್ಥಿತರಿದ್ದರು.

ಕವಿಗೋಷ್ಠಿಯಲ್ಲಿ ಶುಭ, ಗಣೇಶ ರಾಯ್ಕರ, ಕಿರಣ, ರೇಖಾ ರೇವಣಕರ, ವಸಂತ ಅಣ್ವೇಕರ, ಪ್ರವೀಣ ರೇವಣಕರ, ಸುಮಾ ಪ್ರಕಾಶ ಕವನ ವಾಚಿಸಿದರು.

ಮುಂಡಗೋಡದ ವಿನಾಯಕ ಶೇಟ್, ಶ್ರೀಧರ ಶಿರಾಲಿ ಹಾಗೂ ಶಿವಮೊಗ್ಗದ ರಾಮ್ ಸುಬ್ರಾಯ ಶೇಟ್ ಇದ್ದರು. ವಿಚಾರಗೋಷ್ಠಿಯಲ್ಲಿ ವಿಜಯ ವೆರ್ಣೇಕರ, ಡಾ. ಉದಯ, ಹುಬ್ಬಳ್ಳಿಯ ಸುಬ್ರಹ್ಮಣ್ಯ ರಾಯ್ಕರ, ಪ್ರೇಮ ರಾಮ್ ಮೂರ್ತಿ, ಮಂಗಳೂರಿನ ಪುಷ್ಪ, ಅರುಣ ಜಿ. ಶೇಟ್, ಪ್ರಶಾಂತ ಶೇಟ್. ಬೆಂಗಳೂರಿನ ಮಧುಸೂಧನ ಶ್ರೀಕಾಂತ ಕೊಡಣಿ, ಶಿರಸಿಯ ವಿನೋದಾ, ರಾಘವೇಂದ್ರ ಡಿ, ಶೃಂಗೇರಿಯ ಜಯಶ್ರೀ ಗಣೇಶ, ವನಿತಾ ರಾಜೇಶ ಮತ್ತು ಶುಭ ಉಪಸ್ಥಿತರಿದ್ದರು. ಧಾರ್ಮಿಕ ಸ್ತೋತ್ರ, ಪಠಣ, ನೃತ್ಯ ಸುಧೆ, ಸಾಧಕರಿಗೆ ಸನ್ಮಾನಗಳು, ನೃತ್ಯ, ಭರತನಾಟ್ಯ, ಸಂಗೀತ, ಕುಸುಮಾಂಜಲಿಗಳು ಪ್ರದರ್ಶನಗೊಂಡವು. ರಕ್ಷಿತಾ ಹಾಗೂ ವೇದಾ ಪ್ರಾರ್ಥಿಸಿದರು. ವೀಣಾ ರಾವ್ ನಿರೂಪಿಸಿದರು.



ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ

ಹಾನಗಲ್ಲ: ತಾಲೂಕಿನ ಅಕ್ಕಿವಳ್ಳಿ ಗ್ರಾಮದಲ್ಲಿ 2025-26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಒಟ್ಟು 20 ಲಕ್ಷ ರೂ. ವೆಚ್ಚದಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.



ಗ್ರಾಮೀಣ ಪ್ರದೇಶಗಳು ಸಹ ಮೂಲಭೂತ ಸೌಲಭ್ಯಗಳನ್ನು ಹೊಂದುವ ಮೂಲಕ ಸಮಗ್ರ ಅಭಿವೃದ್ಧಿ ಕಾಣಬೇಕಿದೆ. ಅಭಿವೃದ್ಧಿ ಕಾಮಗಾರಿಗಳನ್ನು ಪ್ರತಿಯೊಂದು ಗ್ರಾಮಗಳಲ್ಲಿಯೂ ಸಹ ಅನುಷ್ಠಾನಗೊಳಿಸುವ ಉದ್ದೇಶದಿಂದ ಆದ್ಯತೆ ಮೇಲೆ ಸಾಕಷ್ಟು ಅನುದಾನ ದೊರಕಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಜನತೆಯ ಸಹಕಾರ ಮತ್ತು ವಿಶ್ವಾಸ ಅಭಿವೃದ್ಧಿ ಕಾರ್ಯಗಳಿಗೆ ಶಕ್ತಿ ತುಂಬಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ, ಚರಂಡಿ, ಸಿಡಿ ನಿರ್ಮಾಣದಂಥ ಆದ್ಯತೆಯ ಕಾಮಗಾರಿಗಳಿಗೆ ಗಮನ ನೀಡಲಾಗಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ಮೂಲಸೌಕರ್ಯ ವ್ಯವಸ್ಥೆ ಇನ್ನಷ್ಟು ಬಲಿಷ್ಠವಾಗಲಿದೆ ಎಂದು ಈ ಸಂದರ್ಭದಲ್ಲಿ ಶಾಸಕ ಮಾನೆ ಹೇಳಿದರು.

ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಹನುಮಂತ ಅಂಬಿಗೇರ, ರಾಮಣ್ಣ ಕುರಿಯವರ, ಪ್ರಕಾಶ ಯಳ್ಳೂರ, ಪುಟ್ಟಪ್ಪ ಕುರಿಯವರ, ಶಿವಾನಂದ ಕನ್ನಕ್ಕನವರ ಸೇರಿದಂತೆ ಇನ್ನೂ ಹಲವರು ಇದ್ದರು.

ಸಮಾಜದ ಏಳಿಗೆಗಾಗಿ ಪ್ರತಿಯೊಬ್ಬರ ಸಲಹೆ, ಸಹಕಾರ ಮುಖ್ಯ

ಬ್ಯಾಡಗಿ: ಮಹರ್ಷಿ ವಾಲ್ಮೀಕಿ ನಾಯಕದ ಸಮಾಜದ ಶಹರ ಘಟಕದ ಅಧ್ಯಕ್ಷರಾಗಿ ಕುಮಾರ್ ಮ್ಯಾಗೇರಿ ಹಾಗೂ ಉಪಾಧ್ಯಕ್ಷರಾಗಿ ರಾಜು ಹುಲ್ಲತ್ತಿ ಇವರನ್ನು ಆಯ್ಕೆ ಮಾಡಲಾಗಿದೆ ಎಂದು ಸಮಾಜದ ಹಿರಿಯ ಮುಖಂಡ ಶಿವಾನಂದ್ ಯಮನಕ್ಕನವರ್ ಹೇಳಿದರು.

ಪಟ್ಟಣದ ವಾಲ್ಮೀಕಿ ಭವನದಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆಯಲ್ಲಿ ಮತ್ತು ಪದಾಧಿಕಾರಿಗಳ ಆಯ್ಕೆಯಲ್ಲಿ ಪಾಲ್ಗೊಂಡು ಮಾತನಾಡಿದವರು ನಾಯಕ ಸಮಾಜದ ಏಳಿಗೆಗಾಗಿ ಪ್ರತಿಯೊಬ್ಬರ ಸಹಕಾರ ಸಲಹೆ ಬಹಳ ಮುಖ್ಯ. ಅಂದಾಗ ಮಾತ್ರ ಸಮಾಜದ ಸೇವೆ ಮಾಡಲು ಸಾಧ್ಯ. ಗ್ರಾಮೀಣ ಪ್ರದೇಶದಲ್ಲಿ ವಾಲ್ಮೀಕಿ ನಾಯಕ ಸಮಾಜದ ಸದೃಢವಾಗಿ ಬೆಳೆಯಲು ಪದಾಧಿಕಾರಿಗಳ ಪಾತ್ರ ಬಹಳ ಮುಖ್ಯವಿದೆ. ಇಂದು ಸಮಾಜದ ಶಹರ ಘಟಕದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಮತ್ತು 20 ಪದಾಧಿಕಾರಿಗಳ ಆಯ್ಕೆಮಾಡಿ ಅವರಿಗೆ ಜವಾಬ್ದಾರಿ ನೀಡಿದ್ದೇವೆ. ಆ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ಮಾಡಬೇಕು ಎಂದು ಕಿವಿಮಾತು ಹೇಳಿದರು. ಈ ಸಂದರ್ಭದಲ್ಲಿ ಸಮಾಜದ ಹಿರಿಯರಾದ ರಾಮಣ್ಣ ಕೋಡಿಹಳ್ಳಿ, ಹೊನ್ನೂರಪ್ಪ ಕಾಡುಸಾಲಿ. ಬಸವರಾಜ ಭೀಮ ನಾಯಕರ. ಹನುಮಂತಪ್ಪ ಕೋಡಿಹಳ್ಳಿ, ಹುಲಿಗಪ್ಪ ಭೀಮನಾಯಕರ. ಮಂಜುನಾಥ ಕಿತ್ತೂರ. ರಾಮಪ್ಪ ಕೋಟಿಯವರ. ಪ್ರಕಾಶ ಬಣಕಾರ ಸೇರಿದಂತೆ ಸಮಾಜದ ಹಿರಿಯರು ಮತ್ತು ಸಮಾಜದ ಯುವಕರು .ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮುತ್ತಿನಕಂತಿಮಠ ಅಭಿವೃದ್ಧಿಗೆ ಕೈಜೋಡಿಸಿ: ಶ್ರೀಗಳು

ಹಾನಗಲ್ಲ: ತಾಲೂಕಿನ ಅಕ್ಕಿಆಲೂರ ಮುತ್ತಿನಕಂತಿಮಠದ ಆವರಣದಲ್ಲಿ ನಿರ್ಮಾಣ ಹಂತದಲ್ಲಿರುವ ಭ್ರಮರಾಂಭ ಮತ್ತು ಮಲ್ಲಿಕಾರ್ಜುನ ದೇವಸ್ಥಾನ, ಪಂಡಿತಾರಾಧ್ಯ ಮಂಗಲ ಭವನದ ಉದ್ಘಾಟನೆಯ ಕುರಿತು ಭಕ್ತರ ಪೂರ್ವಭಾವಿ ಸಭೆ ಶನಿವಾರ ಶ್ರೀಮಠದಲ್ಲಿ ನಡೆಯಿತು. ವಿವಿಧ ಮಠಾಧೀಶರು ಸಭೆಯಲ್ಲಿ ಭಾಗವಹಿಸಿದ್ದರು.

ಮುತ್ತಿನಕಂತಿಮಠದ ಪೀಠಾಧಿಪತಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮಠಗಳ ಮಹತ್ವ ಅರಿಯಬೇಕು. ಸಮಾಜ ಮಠಗಳ ಪ್ರಯೋಜನ ಪಡೆಯಬೇಕು. ಪರೋಪಕಾರದ ಜೀವನ ಸಾರ್ಥಕತೆ ಯನ್ನು ಮೂಡಿಸುತ್ತದೆ ಎಂದರು.

ಸುಮಾರು 18 ಕೋಟಿ ರೂ ವೆಚ್ಚದಲ್ಲಿ ದೇವಸ್ಥಾನ ಮತ್ತು ಮಂಗಲ ಭವನ ನಿರ್ಮಾಣವಾಗುತ್ತಿದೆ. ಕಾಮಗಾರಿ ಪೂರ್ಣಗೊಳ್ಳಲು ಇನ್ನೂ 2 ಕೋಟಿ ರೂ ಅಗತ್ಯವಾಗಿದೆ ಎಂದರು.



2027 ರ ಫೆಬ್ರವರಿ ತಿಂಗಳಲ್ಲಿ ದೇವಸ್ಥಾನ ಮತ್ತು ಮಂಗಲ ಭವನ ಉದ್ಘಾಟನೆಯ ಸಮಯ ನಿಗಧಿ ಮಾಡುವ ಉದ್ದೇಶವಿದ್ದು, ಮಠದ ಅಭಿವೃದ್ಧಿಗೆ ಭಕ್ತರು ಕೈಜೋಡಿಸಬೇಕು ಎಂದರು.

ಮಣಕವಾಡದ ಅಭಿನವ ಮೃತ್ಯುಂಜಯ ಸ್ವಾಮೀಜಿ ಮಾತನಾಡಿ, ನಶಿಸುವ ಹಂತದಲ್ಲಿದ್ದ ಈ ಮಠವನ್ನು ಶ್ರೇಯೋಭಿವೃದ್ಧಿಯ ಉತ್ತುಂಗಕ್ಕೆ ತಂದವರು ಚಂದ್ರಶೇಖರ ಶಿವಾಚಾರ್ಯರು. ಮಠಗಳಿಗೆ ಸರಕಾರದ ಅನುದಾನ ಸಿಗಬಹುದು, ಆದರೆ ಭಕ್ತರ ನಂಬಿಕೆ, ಗೌರವಗಳು ಮಠವನ್ನು ಸರ್ವಾಂಗೀಣವಾಗಿ ಶ್ರೀಮಂತಗೊಳಿಸುತ್ತವೆ. ಮಠಗಳು ಸಂಕಷ್ಟದಲ್ಲಿದ್ದಾಗ ಭಕ್ತರೇ ಮಠದ ಉದ್ಧಾರಕ್ಕೆ ನಿಂತ ಸಾಕಷ್ಟು ಉದಾಹರಣೆ ಗಳು ಈ ನಾಡಿನಲ್ಲಿ ಇದೆ ಎಂದರು.

ಮಠದ ಭಕ್ತರಾದ ರಾಜಣ್ಣ ಗೌಳಿ, ಸಂಜೀವಕುಮಾರ ನೀರಲಗಿ, ಪ್ರಕಾಶಗೌಡ ಪಾಟೀಲ, ರಾಜಶೇಖರ ಕಟ್ಟೆಗೌಡ್ರ, ಸಿದ್ಧಲಿಂಗಪ್ಪ ಕಮಡೊಳ್ಳಿ, ಸಂದೀಪ ಪಾಟೀಲ ಮತ್ತಿತರರು ಮಾತನಾಡಿ ಮಠದ ಅಭಿವೃದ್ಧಿ ಕೆಲಸಗಳಿಗೆ ಎಲ್ಲ ರೀತಿಯ ಸಹಾಯ ಮಾಡುವುದಾಗಿ ಹೇಳಿದರು.

ಹಾವೇರಿ ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ, ಅಕ್ಕಿಆಲೂರ ವಿರಕ್ತಮಠದ ಶಿವಬಸವ ಸ್ವಾಮೀಜಿ, ಕೂಡಲ ಗುರುಮಹೇಶ್ವರ ಸ್ವಾಮೀಜಿ, ಬಿಜಾಪುರದ ಅಭಿನವ ಸಿದ್ಧಾರೂಢ ಸ್ವಾಮೀಜಿ, ತುಪ್ಪದ ಕುರಹಟ್ಟಿಯ ವಾಗೀಶ ಪಂಡಿತಾರಾಧ್ಯ ಸ್ವಾಮೀಜಿ, ಹೇರೂರ ನಂಜುಂಡ ಪಂಡಿತಾರಾಧ್ಯ ಸ್ವಾಮೀಜಿ, ಶಿರಶ್ಯಾಡ ಅಭಿನವ ಮುರುಘೇಂದ್ರ ಸ್ವಾಮೀಜಿ, ನರಗುಂದ ಪಂಚಗೃಹ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯ, ಶನಿವಾರಸಂತೆಯ ಅಭಿನವ ಸಿದ್ಧಲಿಂಗ ಸ್ವಾಮೀಜಿ, ಧಾರವಾಡ ಹಿರೇಮಠದ ಶಶಾಂಕ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ಪ್ರಮುಖರಾದ ಸಿದ್ದಲಿಂಗಪ್ಪ ಶಂಕ್ರಿಕೊಪ್ಪ, ಷಣ್ಮುಖಪ್ಪ ಮುಚ್ಚಂಡಿ, ಎಸ್.ಅಮರೇಂದ್ರ, ರಾಮನಗೌಡ ಪಾಟೀಲ, ಕೃಷ್ಣಾ ಈಳಿಗೇರ, ಅಶೋಕ ಗದ್ದಿಗೌಡ್ರ, ಉದಯ ವಿರುಪಣ್ಣನವರ, ಶೇಖಪ್ಪ ಗೌಳಿ, ಕಲ್ಯಾಣಕುಮಾರ ಶೆಟ್ಟರ, ವಿ.ವಿ.ಹಿರೇಮಠ, ಮಹೇಶ ಹಾವೇರಿ, ಎಂ.ಎಂ.ಹಿರೇಮಠ, ಶಿವಯೋಗಿ ಹಿರೇಮಠ, ಎಸ್.ಎಸ್ .ಹಿರೇಮಠ ಇದ್ದರು.

ಕನ್ನಡ ವಿಷಯದಲ್ಲಿ 100 ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನ

ಬ್ಯಾಡಗಿ: ಸರ್ಕಾರ, ಶಿಕ್ಷಣ ಇಲಾಖೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಮತ್ತು ಇತರ ಕನ್ನಡ ಪರ ಸಂಘಟನೆಗಳು ಕನ್ನಡ ಭಾಷೆಯ ಅಭಿವೃದ್ಧಿ ಹಾಗೂ ಅದನ್ನು ಉಳಿಸಲು ಶ್ರಮ ಮಾಡುತ್ತಿದ್ದಾರೆ. ಆದರೆ ಇತ್ತೀಚಿಗೆ ನಡೆದ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ತಾಲೂಕಿನ 40 ವಿದ್ಯಾರ್ಥಿಗಳು ಮಾತೃ ಭಾಷೆಯಾದ ಕನ್ನಡ ಭಾಷೆಯ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವುದು ಎಲ್ಲರಿಗೂ ಬೇಸರ ತಂದಿದೆ ಎಂದು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಸ್.ಜಿ. ಕೋಟಿ ಹೇಳಿದರು.

ಪಟ್ಟಣದ ಕನ್ನಡದ ಭವನದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಏರ್ಪಡಿಸಿದ್ದ 2025-26ನೇಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ 100 ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದರು.



ಗಣಿತ ವಿಜ್ಞಾನ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಇಷ್ಟು ಅನುತ್ತೀರ್ಣ ಆದ ವಿದ್ಯಾರ್ಥಿಗಳು ಇಲ್ಲ. ಆದರೆ ಮಾತೃ ಮನೆಯ ಭಾಷೆ ಕನ್ನಡದಲ್ಲಿಯೇ ಹೆಚ್ಚು ಅನುತ್ತೀರ್ಣ ಆಗಿರುವುದು ನಮಗೆಲ್ಲ ಬೇಸರ ತಂದಿದೆ. ಮಕ್ಕಳಲ್ಲಿ ಓದುವ, ಬರೆಯುವ ಆಸಕ್ತಿ ಕಡಿಮೆ ಆಗುತ್ತಿರುವುದು ಕಾರಣ ಇರಬಹುದು. ಆದರೆ, ಇದೂ ಕನ್ನಡ ಭಾಷೆಗೆ ಅಪಾಯಕಾರಿ ಹಾಗೂ ಕೆಟ್ಟ ಸಂಗತಿಯಾಗಿದೆ. ಸರಕಾರ ಈ ಬಗ್ಗೆ ರಾಜ್ಯದಲ್ಲಿ ಕನ್ನಡ ಭಾಷೆ ಅನುತ್ತೀರ್ಣಆದ ಬಗ್ಗೆ ಸಮಿತಿ ಮಾಡಿದೆ

ಜಿಲ್ಲೆಯಲ್ಲಿ ಬ್ಯಾಡಗಿ ತಾಲೂಕು ಸಾಹಿತ್ಯ ಪರಿಷತ್ ಕನ್ನಡ ಭಾಷೆ ಉಳಿಯಲುಹಾಗೂ ಬೆಳೆಯಲು ಬಹಳ ಪ್ರಯತ್ನ ಮಾಡುತ್ತಿದೆ. ಜಿಲ್ಲೆಯಲ್ಲಿ ಕನ್ನಡ ಭಾಷೆಯಲ್ಲಿ ನೂರಕ್ಕೆ ನೂರು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡುತ್ತಿರುವದು ಇವರೇ ಆಗಿದ್ದು ಜಿಲ್ಲೆಯಲ್ಲಿ ಎಲ್ಲಿಯೂ ನಡೆದಿಲ್ಲ ಎಂದು ಶ್ಲಾಘನೆ ಮಾಡಿದರು.

ತಾಲೂಕಿನ 40 ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಸನ್ಮಾನ ಮಾಡಲಾಯಿತು.

ಕಸಾಪ ತಾಲೂಕ ಅಧ್ಯಕ್ಷ ಬಿ.ಎಂ. ಜಗಾಪುರ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದರು.ಸಾಹಿತಿಗಳಾದ ಜೀವರಾಜ ಛತ್ರದ ಹಾಗೂ ಮಾಲತೇಶ ಚಳಗೇರಿ ಮಾತನಾಡಿದರು. ರೋಟರಿ ಕ್ಲಬ್ ಅಧ್ಯಕ್ಷ ಅನಿಲಕುಮಾರ ಬೊಡ್ಡಪಾಟಿ, ಇನ್ನರ್‌ವೀಲ್ ಅಧ್ಯಕ್ಷೆ ಪ್ರತಿಭಾ ಮೇಲಗಿರಿ, ಕಸಾಪ ಗೌರವ ಕಾರ್ಯದರ್ಶಿ ಎಸ್ ಬಿ. ಇಮ್ಮಡಿ, ನಿಕಟ ಪೂರ್ವ ಅಧ್ಯಕ್ಷ ಮಾಲತೇಶ ಅರಳಿಮಟ್ಟಿ, ಕೋಶಾಧ್ಯಕ್ಷ ವಿರೇಂದ್ರ ಶೆಟ್ಟರ, ನಿವೃತ್ತ ಪ್ರಾಚಾರ್ಯ ಆನಂದ ಮುದುಕಮ್ಮನವರ, ಎಂ.ಎ. ಪಠಾಣ, ರಾಜಶೇಖರ ಹೊಸಳ್ಳಿ, ಪರಶುರಾಮ ಮೇಲಗಿರಿ, ಮಂಜುನಾಥ ಉಪ್ಪಾರ, ಪವಾಡೆಪ್ಪ ಆಚನೂರ, ಜಿತೇಂದ್ರ ಸುಣಗಾರ, ಕವಿತಾ ಬನ್ನಿಹಟ್ಟಿ, ಶ್ವೇತಾ ಲಿಂಬಿಕಾಯಿ, ಲಕ್ಷ್ಮೀ ಉಪ್ಪಾರ ಹಾಗೂ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಆನಂದ ಮುದುಕಮ್ಮನವರ ಸ್ವಾಗತಿಸಿದರು. ಎಸ್. ಬಿ ಇಮ್ಮಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕವಿತಾ ಬನ್ನಿಹಟ್ಟಿ ವಂದಿಸಿದರು.

ಕಿರುಸುದ್ದಿ

ಇಂದು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಅಥಣಿ: ಶಾಸಕ ಲಕ್ಷ್ಮಣ ಸವದಿ ನೇತೃತ್ವದಲ್ಲಿ ತಾಲೂಕಾ ಮಟ್ಟದ ಎಸ್ಸೆಸ್ಸೆಲ್ಸಿ, ಪಿಯುಸಿ ಸಾಧಕ ವಿದ್ಯಾರ್ಥಿಗಳಿಗೆ ಮೇ 24ರಂದು ತಾಲೂಕಿನ ಕೃಷ್ಣಾ ರೈತ ಭವನದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಜರುಗಲಿದೆ. ಸಾಧನೆಗೈದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಅಥಣಿ ತಾಲೂಕಿನ 94 ಪ್ರೌಢ ಶಾಲೆ, 32 ಪದವಿ ಪೂರ್ವ ಮಹಾವಿದ್ಯಾಲಯಗಳ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ಒಟ್ಟು 2200ಕ್ಕೂ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು. ಸಾಧಕ ವಿದ್ಯಾರ್ಥಿಗಳು, ಪಾಲಕರು ಮತ್ತು ಶಿಕ್ಷಕರು ಸೇರಿದಂತೆ ಒಟ್ಟು 5000ಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆ ಇದೆ. ಈ ಕಾರ್ಯಕ್ರಮ ಯಶಸ್ವಿಯಾಗುವ ನಿಟ್ಟಿನಲ್ಲಿ ಎಲ್ಲ ಕಾರ್ಯಕರ್ತರು ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದರು.

110 ಪ್ರಯಾಣಿಕರಿಗೆ ದಂಡ

ಬೆಳಗಾವಿ : ವಾಕರಸಾ ಸಂಸ್ಥೆಯ ವಾಹನಗಳಲ್ಲಿ ತನಿಖಾ ಸಂಧರ್ಬದಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸುವ ಪ್ರಯಾಣಿಕರನ್ನು ಪತ್ತೆ ಹಚ್ಚಿ ಫೆಬ್ರುವರಿ ಮಾಹೆಯಲ್ಲಿ ಅಧಿಕೃತ ಟಿಕೇಟ್ ಪಡೆಯದೆ ಪ್ರಯಾಣಿಸಿದ 93 ಜನ ಪ್ರಯಾಣಿಕರಿಂದ 20805 ದಂಡದ ಮೊತ್ತ ಹಾಗೂ ಮಾರ್ಚ್ ಮಾಹೆಯಲ್ಲಿ 110 ಜನ ರೂ.27860 ದಂಡದ ಮೊತ್ತ ವಸೂಲಿ ಮಾಡಲಾಗಿದೆ. ಸಾರ್ವಜನಿಕ ಪ್ರಯಾಣಿಕರು ಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸುವಾಗ ಕಡ್ಡಾಯವಾಗಿ ಅಧೀಕೃತ ಟಿಕೇಟ್ ಪಡೆದು ಪ್ರಯಾಣಿಸುವಂತೆ ವಾಕರಸಾ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಸ್ಮಶಾನ ಭೂಮಿಗಾಗಿ ಪರದಾಟ



ಆಗುತ್ತಿದ್ದು, ಈ ವಿಚಾರವಾಗಿ ಕೆಲವು ದಿನಗಳ ಹಿಂದೆ ಗ್ರಾಮದ ಜನ ಈ ಸಮಸ್ಯೆ ಒಳಗೊಂಡು ಕರ್ನಾಟಕ ಪರಿಶಿಷ್ಟ ಪಂಗಡ ವಾಲ್ಮೀಕಿ ರಾಜ್ಯ ಯುವ ಘಟಕ ರಾಜ್ಯಾಧ್ಯಕ್ಷ ಮಹೇಶ.ಎಸ್.ಶೀಗಿಹಳ್ಳಿ ಜೊತೆ ಚರ್ಚೆ ಮಾಡಿದ್ದರು. ಕೆಲವು ದಿನಗಳ ನಂತರ ಬೆಳಗಾವಿಗೆ ಎಸ್ ಎಸ್‌ಟಿ ಬುಡಕಟ್ಟು ಸಮುದಾಯಗಳ ಆಯೋಗದ ಅಧ್ಯಕ್ಷರು ಡಾ.ಎಲ್.ಮೂರ್ತಿ ಬೆಳಗಾವಿಗೆ ಬಂದು ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ಸಮಸ್ಯೆ ಕುರಿತು ಸಭೆಯಲ್ಲಿ ಸಾಮಾಜಿಕ ಹೋರಾಟಗಾರರು ಮಹೇಶ ಶೀಗಿಹಳ್ಳಿ ಸಮಸ್ಯೆಗಳ ಕುರಿತು ಮಾತನಾಡಿ ಸಭೆಯಲ್ಲಿ ಚರ್ಚಿಸಿದ್ದರು. ಜಿಲ್ಲೆಯಲ್ಲಿ ಶೇ.70% ಸಮಸ್ಯೆ ಇದ್ದಾವೆ ಎಂದು ವಿವರಿಸಲಾಗಿತ್ತು. ಅನ್ಯಾಯಕ್ಕೆ ಒಳಗಾದ ಸೌಲಭ್ಯ ವಂಚಿತ ಇಂತಹ ಗ್ರಾಮಗಳಿಗೆ ಸ್ಮಶಾನ ಭೂಮಿ ಮಂಜೂರು ಮಾಡಿಸುವಂತೆ ಸಭೆಯಲ್ಲಿ ಮನವಿ ಮಾಡಿಕೊಳ್ಳಲಾಗಿತ್ತು. ಸಭೆ ನಡೆದ ಕೆಲವು ದಿನಗಳ ಅಷ್ಟರಲ್ಲಿ ಕಾಳೆನಟ್ಟಿ ಗ್ರಾಮದಲ್ಲಿ ಒಬ್ಬ ಯುವಕ ಸಾವನ್ನಪಿದ್ದು ಅಂತ್ಯಕ್ರಿಯೆ ಮಾಡಲು ಸ್ಥಳವಿಲ್ಲದೆ ಗ್ರಾಮದ ಜನ ಸಮಸ್ಯೆಗೆ ಒಳಗಾಗಿದ್ದರು. ಗ್ರಾಮದ ಜನರ ಕರೆಗೆ ಒಗ್ಗಟ್ಟು ಸ್ಥಳಕ್ಕೆ ಬೇಟಿ ಮಾಡಿ ಗ್ರಾಮದ ಒಂದರ ಜಮೀನಿನ ಮಾಲೀಕರಾದ ಹಿರಿಯರಿಗೆ ಭೇಟಿ ಮಾಡಿ ಮಾತನಾಡಿ ತಿಳಿಹೇಳಿ ದಯವಿಟ್ಟು ಸ್ಮಶಾನ ಭೂಮಿಗಾಗಿ ಸ್ಥಳಾವಕಾಶ ಮಾಡಿಕೊಡಿ ಮತ್ತು ಸರ್ಕಾರದಿಂದ ನಿಮ್ಮ ಜಮೀನಿಗೆ ಒಂದು ಬೆಲೆ ನಿಗದಿ ಮಾಡಿ ಜಮೀನು ಪಡೆದು ಸ್ಮಶಾನ ಭೂಮಿ ಮಾಡಿಕೊಳುತ್ತೇವೆ. ಸಂಬಂಧ ಪಟ್ಟ ಅಧಿಕಾರಿಗಳಿಗೆ ಮಾತನಾಡಿ ಸ್ಮಶಾನ ಭೂಮಿ ಮಂಜೂರು ಮಾಡಲು ತಾವುಗಳು ಕ್ರಮ ಜರುಗಿಸಬೇಕು. ಸ್ಥಳಕ್ಕೆ ಭೇಟಿ ಮಾಡಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ. ಈ ವೇಳೆ ಪಪಂ, ಪರಿಶಿಷ್ಟದ ಮುಖಂಡರು, ಕಾರ್ಯಕರ್ತರು ಗ್ರಾಮಸ್ಥರು ಸೇರಿದಂತೆ ಇತರರು ಪಲ್ಗೊಂಡಿದ್ದರು.

ಎಲ್ಲವ್ವ ಮೇಲಿನಮನಿ ನಿಧನ



ಹಿರೇಬಾಗೇವಾಡಿ: ಇಲ್ಲಿನ ಅಂಬೇಡ್ಕರ್ ಗಲ್ಲಿ ನಿವಾಸಿ ಎಲ್ಲವ್ವ ಅಡವೆಪ್ಪ ಮೇಲಿನಮನಿ (62) ನಿಧನರಾದರು. ಮೃತರಿಗೆ ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಇದ್ದರು.



ಯಮಕನಮರಡಿ: ಸ್ಥಳೀಯ ಸಿಇಎಸ್ ಪ್ರೌಢಶಾಲೆ 1982-83ನೇ ಸಾಲಿನ 10ನೇ ತರಗತಿ ವಿದ್ಯಾರ್ಥಿಗಳಿಂದ ಶನಿವಾರ ಸ್ಥಳೀಯ ಗುರುಸಿದ್ಧ ಶ್ರೀಗಳ ಕಲ್ಯಾಣ ಮಂಟಪದಲ್ಲಿ ಗುರುವಂದನಾ ಮತ್ತು ಸನ್ಮಾನ ಕಾರ್ಯಕ್ರಮ ಜರುಗಿತು.

ಶಬರಿ ದೇವಸ್ಥಾನದ ಬಳಿ ಅಗ್ನಿ ಅವಘಡ

ಸುರೇಬಾನ: ರಾಮದುರ್ಗ ತಾಲೂಕಿನ ಮನಿಹಾಳ-ಸುರೇಬಾನ ಗ್ರಾಮದ ಮಧ್ಯದಲ್ಲಿರುವ ಬೆಟ್ಟ ಪ್ರದೇಶದಲ್ಲಿ ಶುಕ್ರವಾರ ರಾತ್ರಿ ಭೀಕರ ಅಗ್ನಿ ಅವಘಡ ಸಂಭವಿಸಿ, ಸುತ್ತಮುತ್ತಲಿನ ಪ್ರದೇಶದಲ್ಲಿ ಆತಂಕದ ವಾತಾವರಣ ನಿರ್ಮಾಣವಾಯಿತು. ಆಧ್ಯಾತ್ಮವಾದಿ ಸದ್ಗುರು ಶಿವಾನಂದ ಸ್ವಾಮಿಜಿ ತಪಸ್ಸು ಮಾಡಿದ ಸ್ಥಳದ ಸಮೀಪದಿಂದಲೇ ಬೆಂಕಿ ಕಾಣಿಸಿಕೊಂಡಿದ್ದು, ಐತಿಹಾಸಿಕ ಪ್ರಸಿದ್ಧ ಶಬರಿ ದೇವಸ್ಥಾನ ಮೇಲ್ಭಾಗದ ಸುಮಾರು ಒಂದು ಕಿಮೀ ವ್ಯಾಪ್ತಿಯವರೆಗೆ ಬೆಂಕಿ ಆವರಿಸಿಕೊಂಡಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳಿಂದ ತಿಳಿದುಬಂದಿದೆ. ಒಣಗಿದ ಹುಲ್ಲು ಹಾಗೂ ಗಿಡಗಂಟಿಗಳಿಗೆ ಬೆಂಕಿ ವೇಗವಾಗಿ ವ್ಯಾಪಿಸಿಕೊಂಡ ಪರಿಣಾಮ ಬೆಟ್ಟ ಪ್ರದೇಶದಲ್ಲಿ ಹೊಗೆ ಆವರಿಸಿಕೊಂಡು ದೂರದಿಂದಲೇ ಕಾಣಿಸುತ್ತಿತ್ತು. ಕೆಲ ಹಾದಿಹೋಕರು ಅಥವಾ ಅಜಾಗರೂಕತೆಯಿಂದ ಯಾರಾದರೂ ಬೆಂಕಿ ಹಚ್ಚಿರಬಹುದೆಂದು ಗ್ರಾಮಸ್ಥರು ಶಂಕೆ ವ್ಯಕ್ತಪಡಿಸಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆ ಅಧಿಕಾರಿಗಳಾದ ಡಿಆರ್‌ಎಫ್‌ಟಿಒ ಎಂ.ಎಂ.ಮಿರ್ಜಿ, ಬೀಟ್ ಫಾರೆಷ್ಟರ ಮಲ್ಲಿಕಾರ್ಜುನ ಬಂಡೂರ್ಡ, ದುರಗಪ್ಪ ಅರಟಗಲ್ಲ, ಅರಣ್ಯ ವೀಕ್ಷಕ ಪುಂಡಲೀಕ ಮಾಳಿ, ಸಿಬ್ಬಂದಿಗಳಾದ ಮಹೇಶ ಮಡ್ಡಿ, ಸಂಜು ಮಾಳಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಲು ಹರಸಾಹಸ ಪಟ್ಟರು. ಗಾಳಿ ಹೆಚ್ಚಿದ್ದರಿಂದ ಬೆಂಕಿ ನಿಯಂತ್ರಣಕ್ಕೆ ತರುವುದು ಅಧಿಕಾರಿಗಳಿಗೆ ಸವಾಲಾಗಿತ್ತು. ಹಲವು ಗಂಟೆಗಳ ಕಾರ್ಯಾಚರಣೆ ಬಳಿಕ ಬೆಂಕಿ ನಿಯಂತ್ರಣಕ್ಕೆ ತರಲು ಪ್ರಯತ್ನ ಮುಂದುವರಿದಿದೆ. ಈ ಘಟನೆ ಹಿನ್ನೆಲೆಯಲ್ಲಿ ಅರಣ್ಯ ಸಂಪತ್ತು ಹಾಗೂ ಧಾರ್ಮಿಕ ಸ್ಥಳಗಳ ರಕ್ಷಣೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



ಯಮಕನಮರಡಿ: ಹಿಂಡಾಲ್ಕೊ ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಮಹಿಳಾ ಕಲ್ಯಾಣ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಕೆಎಲ್‌ಇ ಸಂಸ್ಥೆ ಡಾ.ಸಂಪತಕುಮಾರ ಎಸ್.ಶಿವಣಗಿ ಕ್ಯಾನ್ಸರ್ ಆಸ್ಪತ್ರೆ ಸಹಯೊಗದಲ್ಲಿ ಎಕಸ್ ಕಂಪನಿಯಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ 200ಕ್ಕೂ ಜನರಿಗೆ ತಪಾಸಣೆ ನಡೆಯಿತು.

ಸಾರಿಗೆ ಇಲಾಖೆ ವಿರುದ್ಧ ಆಕ್ರೋಶ | ವಿದ್ಯಾರ್ಥಿಗಳಿಗೆ ನಿತ್ಯ ತೊಂದರೆ

ಬಸ್ ಇಲ್ಲದೆ ಜನತೆ ಪರದಾಟ

ಬಾಳಗೌಡ ಪಾಟೀಲ

ದಿಗಂತ ವಿಶೇಷ

ಬೆಳಗಾವಿ: ರಾಜ್ಯದ ಅತೀ ದೊಡ್ಡ ಜಿಲ್ಲೆ ರಾಜ್ಯಕ್ಕೆ 2ನೇ ರಾಜ್ಯಧಾನಿ, ಜೊತೆಗೆ ಸ್ಮಾರ್ಟ್ ಸಿಟಿ ಯೋಜನೆಯಡಿ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಬೆಳಗಾವಿ ನಗರದ ಹಲವು ಭಾಗದ ಜನರಿಗೆ ದಶಕಗಳಿಂದ 'ಸಿಟಿ ಬಸ್' ಮರೀಚಿಕೆಯಾಗಿಯೇ ಉಳಿದಿದೆ.

ನಗರದ ಹೃದಯ ಭಾಗದಲ್ಲಿ ಕೇಂದ್ರ ಬಸ್ ನಿಲ್ದಾಣ ಇದ್ದರೂ ಯಾವುದೇ ಪ್ರಯೋಜನೆ ಇಲ್ಲ ಎಂದು ಶಹಾಪುರ, ಶಾಸ್ತ್ರಿನಗರ ಹಾಗೂ ಕಪಿಲೇಶ್ವರ, ದೇವಸ್ಥಾನದ ಸುತ್ತಮುತ್ತಲಿನ ನಿವಾಸಿಗಳು ಪ್ರತಿನಿತ್ಯವೂ ಬಸ್‌ಗಳು ಇಲ್ಲದೆ ಪರದಾಡುವ ಪರಿಸ್ಥಿತಿ ಎದುರಾಗಿದೆ ಎಂದು ಸಾರಿಗೆ ಇಲಾಖೆ ವಿರುದ್ಧ ಸಾರ್ವಜನಿಕರು ಆಕ್ರೋಶ ಹೋರ ಹಾಕುತ್ತಿದ್ದಾರೆ.

ಬೆಳಗಾವಿ ಪ್ರಮುಖ ಭಾಗಗಳಾದ ಕಪಿಲೇಶ್ವರ ದೇವಸ್ಥಾನದ ಎದುರು ಮತ್ತು ಮಾಣಿಕಬಾಗ್ ಬಳಿ ಮೇಲ್ಸೇತುವೆ ನಿರ್ಮಾಣವಾಗುವ ಮೊದಲು, ಮಹಾದ್ವಾರ ರಸ್ತೆ ಹಾಗೂ ಶನಿಮಂದಿರ ಮಾರ್ಗವಾಗಿ ಶಿವಾಜಿ ಉದ್ಯಾನದ ಮೂಲಕ ಶಹಾಪುರ ಮತ್ತು ವಡಗಾವಿಗೆ ನಿಯಮಿತವಾಗಿ ಬಸ್ ಸಂಚರಿಸುತ್ತಿದ್ದವು. ಆದರೆ, ಮೇಲ್ಸೇತುವೆ ನಿರ್ಮಾಣದ ನಂತರ ಹಳೆ ಮಾರ್ಗಗಳು ಬಂದ್ ಯಾಗಿದ್ದು, ಬಸ್ ಸಂಚಾರವು ಸಂಪೂರ್ಣ ಬಂದ್ ಮಾಡಲಾಗಿದೆ ಎಂದು ಇಲ್ಲಿನ ಜನತೆಯ ಅಲಳು.

ಪರ್ಯಾಯ ಮಾರ್ಗಗಳಿದ್ದರೂ ಬಸ್ ಓಡಿಸುವ ಚಿಂತನೆ ಈವರೆಗೂ ನಡೆದಿಲ್ಲ. ಹಳೆ ಪಿಬಿ ರಸ್ತೆಯಿಂದ ಕುಲಕರ್ಣಿ ಗಲ್ಲಿ, ಬ್ಯಾಂಕ್ ಆಫ್ ಇಂಡಿಯಾ ವೃತ್ತದ ಮೂಲಕ ಮಹಾತ್ಮ ಫುಲೆ ಮಾರ್ಗದಿಂದ ಬಸವೇಶ್ವರ ವೃತ್ತ ಸೇರುವ ದ್ವಿಪಥ ರಸ್ತೆ ನಿರ್ಮಾಣವಾದಾಗ, ಶಿವಾಜಿ ಉದ್ಯಾನದ ಮೂಲಕ ವಡಗಾವಿ ಬಸ್ ಸಂಚಾರ ಆರಂಭವಾಗಿ ಜನರಿಗೆ ಅನುಕೂಲವಾಗಿತ್ತು. ಆದರೆ, ಕೋರ್ಟ್ ವ್ಯಾಜ್ಯ ಕಾರಣಕ್ಕೆ ಹಳೆ ಪಿಬಿ ರಸ್ತೆ ಬಳಿ ರಸ್ತೆ ಬಂದ್ ಆಗಿದ್ದರಿಂದ ಪುನಃ ಬಸ್ ಸಂಚಾರ ಸ್ಥಗಿತಗೊಂಡಿದೆ.

ನಗರದ ಪ್ರಮುಖ ಭಾಗಗಳಲ್ಲಿ ಬಸ್ ಸಂಚಾರ ಇಲ್ಲದೆ ಇರುವುದರಿಂದ ಇಲ್ಲಿರುವ ಜನತೆಗೆ ಹಾಗೂ ಶಾಲಾ ಕಾಲೇಜು ಮಕ್ಕಳಿಗೆ ಸಾಕಷ್ಟು ತೊಂದರೆ ಯಾಗುತ್ತಿದ್ದು ಕೂಡಲೇ ಮೊದಲಿನಂತೆ ಮತ್ತೆ ಬಸ್ ಸಂಚಾರ ಪ್ರಾರಂಭಿಸಿಬೇಕೆಂದು ಸ್ಥಳೀಯರ ಒತ್ತಾಯ.



ಜನತೆಯ ಬಹುದಿನದ ಬೇಡಿಕೆ ಗಮನದಲ್ಲಿದೆ. ಈ ಮಾರ್ಗವಾಗಿ ಸಿಟಿ ಬಸ್ ಸಂಚಾರ ಪ್ರಾಯೋಗಿಕವಾಗಿ ಕಷ್ಟವಾಗಿದೆ. ಟ್ರಾಫಿಕ್ ಮತ್ತು ಇಕ್ಕಟ್ಟಾದ ರಸ್ತೆಗಳಿಂದ ದೊಡ್ಡ ಬಸ್‌ಗಳ ಸಂಚಾರ ಸಾಧ್ಯವಾಗಿಲ್ಲ. ನಗರ ಪೊಲೀಸರೊಂದಿಗೆ ಚರ್ಚಿಸಿ ಸಾಧ್ಯತೆ ಬಗ್ಗೆ ಅಗತ್ಯ ಕ್ರಮ ವಹಿಸಲಾಗುವುದು.
■ ಕೆ.ಎಲ್.ಗುಡನ್ನವರ, ಬೆಳಗಾವಿ ವಿಭಾಗೀಯ ನಿಯಂತ್ರಣಾಧಿಕಾರಿ

ಬೆಳಗಾವಿಯಲ್ಲಿ ಪ್ರತಿ ನಿಮಿಷಕ್ಕೊಂದು ಬಸ್ ಇದ್ದರೂ ಆ ಬಸ್ ನಮ್ಮ ಏರಿಯಾಗಳಿಗೆ ಬರುವುದಿಲ್ಲ, ನಾವುಗಳ ಕೇಂದ್ರ ಬಸ್ ನಿಲ್ದಾಣಕ್ಕೆ ಹೊಗಬೇಕಾದರೆ, ಆಟೋದಲ್ಲಿಯೇ ಹೋಗಬೇಕು. ಶಾಲಾ ಕಾಲೇಜ್ ಮಕ್ಕಳಿಗೂ ಬಸ್‌ಗಳು ಇಲ್ಲದೆ ಸಾಕಷ್ಟು ತೊಂದರೆಯಾಗುತ್ತಿದೆ. ಸಾರಿಗೆ ಇಲಾಖೆಯವರನ್ನು ಕೇಳಿದರೆ ಆ ಏರಿಯಾಗಳಿಗೆ ಬಸ್‌ಗಳು ಬರುವುದಿಲ್ಲ ಅಂತ ಹೇಳುತ್ತಾರೆ. ಏರಿಯಾಗಳಲ್ಲಿ ಸಣ್ಣ ಪುಟ್ಟ ರಸ್ತೆಯಾಗಿದರು ಹೆಚ್ಚಾಗಿ ಟ್ರಾಫಿಕ್ ಇರುವುದುರಿಂದ ದೊಡ್ಡ ಬಸ್‌ಗಳು ಬರುವುದಲ್ಲ.
■ ವಿಜಯಲಕ್ಷ್ಮೀ ಹೊಸಮನಿ, ನಿವಾಸಿ

ಹೆಸ್ಕಾಂ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಅಥಣಿ: ಪಟ್ಟಣಕ್ಕೆ ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಪೂರೈಕೆ ಉದ್ದೇಶದಿಂದ ಹೆಸ್ಕಾಂ ಇಲಾಖೆಯಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ಪಟ್ಟಣದ ಜನದಟ್ಟಣೆ ಸಂಚಾರ ಪ್ರದೇಶಗಳು,ಮುಖ್ಯ ರಸ್ತೆಗಳಲ್ಲಿ ಕವರ್ಡ ಕೇಬಲ್ ಕಂಡಕ್ಟರ್ ಹಾಗೂ ಸ್ಟೇನ್ ಪೋಲ್ ಡಿಟಿಸಿ ಅಳವಡಿಸುವ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ಪಟ್ಟಣದ ವಿವಿಧ ಭಾಗಗಳಲ್ಲಿ ಸುಮಾರು 200 ಕಿಮೀ ವ್ಯಾಪ್ತಿಯಲ್ಲಿ ಕವರ್ಡ ಕೇಬಲ್ ಕಂಡಕ್ಟರ್ ಅಳವಡಿಸುವ ಮಹತ್ವಾಕಾಂಕ್ಷಿ ಯೋಜನೆ ಕೈಗೊಳ್ಳಲಾಗಿದ್ದು, ಪ್ರತಿ ಕಿಮೀಗೆ ಸುಮಾರು 1.50 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿ ನಡೆಯಲಿದೆ. ಮಾರ್ಕೆಟ್ ಪ್ರದೇಶದಲ್ಲಿ ಸುಮಾರು 49 ಲಕ್ಷ ರೂ. ವೆಚ್ಚದಲ್ಲಿ ಎಬಿ ಕೇಬಲ್ ಅಳವಡಿಕೆ, ಸರ್ಕಾರಿ ಆಸ್ಪತ್ರೆಗೆ 50 ಲಕ್ಷ ರೂ.ವೆಚ್ಚದಲ್ಲಿ ಎಬಿ ಕೇಬಲ್ ಅಳವಡಿಸಿ ವಿದ್ಯುತ್ ವ್ಯವಸ್ಥೆ ಬಲಪಡಿಸಲಾಗುತ್ತಿದೆ ಎಂದರು.

ಪಟ್ಟಣದಲ್ಲಿ ಮೊದಲ ಹಂತದಲ್ಲಿ 70 ಟ್ರಾನ್ಸ ಫಾರ್ಮರ್ ಮೇಲೆ ಇರುವ ಹಳೆ 220/440 ವೋಲ್ಟೇಜ್ ತಂತಿ ಬದಲಾಯಿಸುವ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಸುಮಾರು 6 ಕೋಟಿ ರೂ. ವೆಚ್ಚದಲ್ಲಿ 11 ಮೀಟರ್ ಸ್ಟೇನ್ ಪೋಲ್ ಅಳವಡಿಸಿ ಕವರ್ಡ ಕೇಬಲ್ ವ್ಯವಸ್ಥೆ ನಿರ್ಮಿಸಲಾಗುತ್ತಿದೆ. 5 ಮೆ. ವ್ಯಾಟ್ ಸಾಮರ್ಥ್ಯದ ಹೆಚ್ಚುವರಿ ಪವರ್ ಟ್ರಾನ್ಸ ಫಾರ್ಮರ್ ಅಳವಡಿಸಲು 2 ಕೋಟಿ ರೂ. ವೆಚ್ಚದಲ್ಲಿ ಟೆಂಡರ್ ಪ್ರಕ್ರಿಯೆ ಆರಂಭವಾಗಿದೆ ಎಂದರು.

ಈ ವೇಳೆ ಪುರಸಭೆ ಅಧ್ಯಕ್ಷೆ ಶಿವಲೀಲಾ ಬುಟಾಳಿ, ಉಪಾಧ್ಯಕ್ಷ ಭುವನೇಶ್ವರಿ ಯಕ್ಕಂಚಿ, ಎಇ ಗುರುರಾಜ ಸಂಪನ್ನವರ, ಎಇಇ ಶಬ್ಬಿರ ಪಾರ್ಥನಳ್ಳಿ, ಎಸ್‌ಒ ಮಾಂತೇಶ ಅಂಬುಳಿ, ಪುರಸಭೆ ಮುಖ್ಯಾಧಿಕಾರಿ ಅಶೋಕ ಗುಡಿಮನಿ, ಗುತ್ತಿಗೆದಾರರು ಅಮೀರ್ ಖತೀಬ, ಸಂಗಮೇಶ ನಾರಗೊಂಡ, ರಾಜು ಗಡೋಡಗಿ, ರಾಜು ಅಲಬಾಳ, ಪ್ರಮೋದ ಬಿಳ್ಳೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಮುಂಗಾರು ಹಂಗಾಮಿನ ಬೀಜಗಳ ವಿತರಣೆ

ರಾಮದುರ್ಗ: ಜಿಲ್ಲೆಯಲ್ಲಿನ ರೈತರಿಗೆ ಹೆಚ್ಚಿನ ಇಳುವರಿ ಪಡೆದುಕೊಳ್ಳಲು ಗುಣಮಟ್ಟದ ಕೃಷಿ ಪರಿಕರಗಳಾದ, ಬೀಜ, ಗೊಬ್ಬರ ಸರಿಯಾದ ಸಮಯದಲ್ಲಿ ವಿತರಣೆ ಮಾಡುವುದು ಇಲಾಖೆ ಜವಾಬ್ದಾರಿಯಾಗಿದೆ ಎಂದು ಕೃಷಿ ಜಂಟಿ ನಿರ್ದೇಶಕ ಎಚ್.ಡಿ. ಕೋಳೆಕರ ಹೇಳಿದರು.

ರಾಮದುರ್ಗದಲ್ಲಿ ರಿಯಾಯಿತಿ ದರದಲ್ಲಿ ಮುಂಗಾರು ಹಂಗಾಮಿನ ಬೀಜಗಳ ವಿತರಣಾ ಸಮಾರಂಭ ಮಾತನಾಡಿದ ಅವರು, ಜಿಲ್ಲೆಯಲ್ಲಿ ಒಟ್ಟು 40 ಸಾವಿರ ಕ್ವಿಂಟಾಲ್ ವಿವಿಧ ಬೀಜಗಳ ಬೇಡಿಕೆ ಇದೆ. ಈಗಾಗಲೇ ಕೃಷಿ ಇಲಾಖೆಯು ಪ್ರತಿಶತ 25ರಷ್ಟು ಬೀಜ ಸಂಗ್ರಹಣೆ ಮಾಡಿಕೊಂಡಿದೆ. ಈ ಸಾರಿ ರೈತರಿಗೆ ಯಾವುದೇ ಬೀಜಗಳ ಕೊರತೆ ಎದುರಾಗುವುದಿಲ್ಲ ಎಂದರು.

ರೈತರಿಗೆ ರಿಯಾಯಿತಿ ದರದಲ್ಲಿ ಬೀಜಗಳನ್ನು ವಿತರಣೆ ಮಾಡಿದ ವಿಧಾನ ಸಭೆಯ ಮುಖ್ಯ ಸಚೇತಕ ಅಶೋಕ ಪಟ್ಟಣ ಮಾತನಾಡಿ, ಸರ್ಕಾರದ ಯೋಜನೆಗಳನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಮುಂದೆ ಬರಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕೃಷಿಕ ಸಮಾಜದ ತಾಲ್ಲೂಕು ಅಧ್ಯಕ್ಷ ವೈ.ಎಚ್ ಪಾಟೀಲ ಮಾತನಾಡಿ, ಸರ್ಕಾರ ರೈತರಿಗೆ ವಿತರಣೆ ಮಾಡುವ ಬೀಜಗಳು ಕಳಪೆ ಮಟ್ಟದ್ದಾಗಿರಬಾರದು. ಕಷ್ಟದಲ್ಲಿರುವ ರೈತರಿಗೆ ಕಳಪೆ ಬೀಜ ವಿತರಣೆ ಮಾಡಿದರೆ ಬದುಕುವುದು ಕಷ್ಟವಾಗುತ್ತದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಈ ಸಾರಿ ಮುಂಗಾರಿ ಹಂಗಾಮಿನಲ್ಲಿ ಮಳೆ ಪ್ರಮಾಣ ಕಡಿಮೆಯಾಗಲಿದೆ. ರೈತರು ಹೆಚ್ಚಾಗಿ ಜಮೀನುಗಳಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿಕೊಂಡು ಭೂಮಿಯ ತೇವಾಂಶವನ್ನು ಕಾಪಾಡಿಕೊಳ್ಳಬೇಕು ಎಂದು ಕೃಷಿ ಸಹಾಯಕ ನಿರ್ದೇಶಕ ಶ್ರೀಕಾಂತ ಚಿಮ್ಮಲಗಿ ತಿಳಿಸಿದರು.

ರಾಮಣ್ಣ ಬೀಡಕಿ, ಬಸವರಾಜ ಪ್ಯಾಟಿಗೌಡರ, ಸಿದ್ಲಿಂಗಪ್ಪ ಸಿಂಗಾರಗೊಪ್ಪ, ಶಂಕರಗೌಡ ಪಾಟೀಲ ಸೇರಿದಂತೆ ಅನೇಕರು ಇದ್ದರು. ಕೃಷಿ ಅಧಿಕಾರಿ ಗೋವಿಂದರಡ್ಡಿ ಜಾಯಿ ನಿರೂಪಿಸಿ ಸ್ವಾಗತಿಸಿದರು.



ಕಠಿಣ ಪರಿಶ್ರಮದಿಂದ ಯಶಸ್ಸು ಸಾಧ್ಯ: ಜಮಾದಾರ



ತೆಲಸಂಗ: ನಿರಂತರ ಅಧ್ಯಯನ ಮತ್ತು ಕಠಿಣ ಪರಿಶ್ರಮವಿದ್ದರೆ ಯಾವುದೇ ಗುರಿ ತಲುಪಬಹುದು ಎಂದು ಅರಭಾಜ ಜಮಾದಾರ ಹೇಳಿದರು.

ಗ್ರಾಮದ ಆದಿದೇವರಾದ ಪೀರ ಹಾಜಿಮಸ್ತಾನ ಸೇವಾ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಎಸ್ಸೆಸ್ಸೆಲ್ಸಿ ಸಾಧಕ ವಿದ್ಯಾರ್ಥಿಗಳ ಸತ್ಕಾರ ಸಮಾರಂಭದಲ್ಲಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಇಂದು ಹತ್ತಾರು ಸವಲತ್ತುಗಳ ಕೊರತೆಯಿದ್ದರೂ, ಇಲ್ಲಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡುವ ಮೂಲಕ ಪಟ್ಟಣ ಪ್ರದೇಶದ ಮಕ್ಕಳಿಗೆ ಸೆಡ್ಡು ಹೊಡೆದು ಫಲಿತಾಂಶ ನೀಡುತ್ತಿರುವುದು ಶ್ಲಾಘನೀಯ. ಇಂತಹ ಗ್ರಾಮೀಣ ವಿದ್ಯಾರ್ಥಿಗಳ ಸಾಧನೆ ಉಳಿದವರಿಗೂ ಮಾದರಿಯಾಗಿದೆ ಎಂದರು.

ಸಾಧಕ ವಿದ್ಯಾರ್ಥಿಗಳಾದ ಸಾಕ್ಷಿ ಅಶೋಕ ಮೋರೆ, ಭಾಗ್ಯಶ್ರೀ ಅರುಣ ಮೋರೆ, ರಾಜೇಶ್ರೀ ಆನಂದ ಕುಂಬಾರ, ಬಸೀರಾ ಅತ್ತಾರ, ಸೋಹೇಲ ಮದಾರಸಾಬ ಅರಟಾಳ, ನಿಧಾ ರಂಮಜಾನ ಮೀರಾಗೋಳ, ಸಿಮರನ ನಜೀರ ಮುಜಾವರ ಹಾಗೂ ಫೈಕ್ಯಿಮ ಯೂಸೂಫ್ ನಧಾಫ್

ನಿವೃತ್ತ ಶಿಕ್ಷಕರಾದ ನಬೀಸಾಬ ಮುಜಾವರ, ಅನ್ಸರ ಮುಜಾವರ, ಗಫೂರ ಮುಲ್ಲಾ, ಅಶೋಕ ಮೋರೆ, ಆನಂದ ಕುಂಬಾರ, ಅರುಣ ಮೋರೆ, ಅಪ್ಪು ಜಮಾದಾರ, ಹಾಜಿ ಲಾಲ ಮುಜಾವರ, ಇಲಾಯಿ ಮುಜಾ ವರ, ಅಕ್ಬರಸಾಬ ಮುಜಾ ವರ, ಮಕ್ಬುದ ಯೂಸೂಫ್ ನಧಾಫ್, ರಂಮಜಾನ ಮೀರಾ ಗೋಳ, ಹಾಸಿಂಪೀರ ಮುಜಾವರ, ಮದಾರ ಅರಟಾಳ, ಬುರಾನ ಅರಟಾಳ, ಮೈಹಿಬೂಬ ನಧಾಫ, ಇಸ್ತಿಪಾಕ್ ಮುಜಾವರ, ಯೂಸೂಫ್ ಮುಜಾವರ ಸೇರಿ ದಂತೆ ಪ್ರಮುಖರು ಉಪಸ್ಥಿತರಿದ್ದರು.

ಆರೋಗ್ಯ ತಪಾಸಣಾ ಶಿಬಿರ

ಯಮಕನಮರಡಿ: ಕ್ಯಾನ್ಸರ್ ಎನ್ನುವುದು ದೇಹದ ಜೀವಕೋಶಗಳ ಅನಿಯಂತ್ರಿತ ಬೆಳವಣಿಗೆಯಿಂದ ಉಂಟಾಗುವ ಸಂಕೀರ್ಣ ಕಾಯಿಲೆ. ಇದನ್ನು ಆರಂಭಿಕ ಹಂತದಲ್ಲೆ ಪತ್ತೆ ಹಚ್ಚಿದರೆ ಆಧುನಿಕ ವೈದ್ಯಕೀಯ ಚಿಕಿತ್ಸೆಗಳ ಮೂಲಕ ಸಂಪೂರ್ಣವಾಗಿ ಗುಣ ಪಡಿಸಲು ಸಾಧ್ಯವಿದೆ ಎಂದು ಕೆಎಲ್‌ಇ ಸಂಸ್ಥೆ ಡಾ.ಸಂಪತಕುಮಾರ ಎಸ್.ಶಿವಣಗಿ ಕ್ಯಾನ್ಸರ್ ಆಸ್ಪತ್ರೆ ತಜ್ಞ ಡಾ.ರಶ್ಮೀ ಪಾಟೀಲ ಅಭಿಪ್ರಾಯಪಟ್ಟರು. ಹಿಂಡಾಲ್ಕೊ ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಮಹಿಳಾ ಕಲ್ಯಾಣ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಕೆಎಲ್‌ಇ ಸಂಸ್ಥೆ ಡಾ.ಸಂಪತಕುಮಾರ ಎಸ್.ಶಿವಣಗಿ ಕ್ಯಾನ್ಸರ್ ಆಸ್ಪತ್ರೆ ಸಹಯೊಗದಲ್ಲಿ ಎಕಸ್ ಕಂಪನಿಯಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದರು. ಇಂಡಿಯನ್ ಕ್ಯಾನ್ಸರ್ ಸೊಸೈಟಿ ಪ್ರಾಂತೀಯ ವ್ಯವಸ್ಥಾಪಕ ಸಂತಾನಿ ದಂಡಿನ ಮಾತನಾಡಿದರು.

ಶಿಬಿರದಲ್ಲಿ ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯಶಿಗಳಾದ ವೈಜಯಂತಿ.ಎಂ. ಚೌಗಲಾ, ಶಾಹಿನ ಹೋಂಬಳ ಉಪಸ್ಥಿತರಿದ್ದರು. ಎಕಸ್ ಕಂಪನಿ ಬಿ.ಯು.ಹೆಡ್ಸ ಬ್ಯುಜಿನೆಸ್ ಹೆಡ್ ತಂಡ, ಓಎಚ್‌ಸಿ ತಂಡ, ಐಆರ್ ಎಚ್. ಆರ್ ತಂಡ, ಕಂಪ್ಲೆನ್ಸ ತಂಡ ಹಾಗೂ ಪ್ರಮುಖರು ಭಾಗವಹಿಸಿದ್ದರು. ಶಿಬಿರದಲ್ಲಿ 200ಕ್ಕೂ ಹೆಚ್ಚಿನ ಮಹಿಳಾ ಮತ್ತು ಪುರುಷರು ಬಾಯಿ, ಸ್ತನ ಕ್ಯಾನ್ಸರ್ ತಪಾಸಣೆ ಮಾಡಿಸಿಕೊಂಡರು.

ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ



ಚನ್ನಮ್ಮನ ಕಿತ್ತೂರ: ಬಸವತತ್ವ ಮಂದಿರ ಟ್ರಷ್ಟ್(ರಿ) ಆಶ್ರಯದಲ್ಲಿ ಬೈಲೂರು ನಿಷ್ಕಲ ಮಂಟಪದಲ್ಲಿ ಇತ್ತೀಚೆಗೆ ಅರಿವೇ ಗುರು ಬಸವಜಯಂತಿ ಕಾರ್ಯಕ್ರಮ ನಡೆಯಿತು. ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳನ್ನು ಸತ್ಕರಿಸಲಾಯಿತು. ನಿಷ್ಕಲ ಮಂಟಪದ ನಿಜಗುಣಾನಂದ ಶ್ರೀಗಳು, ಜನವಾಡದ ಅಲ್ಲಮಪ್ರಭು ಆಶ್ರಮದ ಮಲ್ಲಿಕಾರ್ಜುನ ಶ್ರೀಗಳು, ಮಹಾಂತ ಶ್ರೀಗಳು, ಆತ್ಮಾರಾಮ ಶ್ರೀಗಳು, ಸಚಿವ ಸತೀಶ ಜಾರಕಿಹೊಳಿ, ಶಾಸಕ ಬಾಬಾ ಸಾಹೇಬ ಪಾಟೀಲ, ಸದಸ್ಯ ಚನ್ನರಾಜ ಹಟ್ಟಿಹೊಳಿ, ಗದಗದ ಹಿಂದೂಸ್ತಾನಿ ಗಾಯಕ ಪದ್ಮಶ್ರೀ ಡಾ.ಎಂ.ವೆಂಕಟೇಶಕುಮಾರ, ಅಡವೇಶ ಇಟಗಿ, ವಿನಯ ನಾವಲಗಟ್ಟಿ, ಕ್ಷೇತ್ರ ಶಿಕ್ಷಣಾಧಿಕಾರಿ ಚನಬಸಪ್ಪ ತುಬಾಕಿ, ಇತರರಿದ್ದರು.

ಕ್ರಿಕೆಟ್ ತರಬೇತಿ ಶಿಬಿರಕ್ಕೆ ಜಿಪಂ ಸಿಇಒ ಭೇಟಿ



ಬೆಳಗಾವಿ: ಜಿಲ್ಲಾ ಬಾಲಭವನದ ಒಳಾಂಗಣ ಬಾಕ್ಸ ಕ್ರಿಕೆಟ್ ಮೈದಾನದಲ್ಲಿ ತರಬೇತಿ ನೀಡಲು ಆಯ್ಕೆ ಮಾಡಲಾಗಿರುವ ಮಕ್ಕಳ ಕ್ರಿಕೆಟ್ ತರಬೇತಿ ಶಿಬಿರಕ್ಕೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಶಿಂಧೆ ಭೇಟಿ ನೀಡಿದರು.

ತರಬೇತಿ ಅಂಗವಾಗಿ ಮಕ್ಕಳು ಭೂತರಾಮನಹಟ್ಟಿಯ ಭಗವಾನ ಮಹಾವೀರ ಮೈದಾನದಲ್ಲಿ ತರಬೇತಿಯಲ್ಲಿ ಭಾಗವಹಿಸಿದ್ದರು. ರಾಹುಲ್ ಶಿಂಧೆ ತರಬೇತಿ ವೀಕ್ಷಿಸಿ, ಮಕ್ಕಳೊಂದಿಗೆ ಚರ್ಚಿಸಿದರು.

ವಿವಿಧ ಇಲಾಖೆಗಳ ಸಹಯೋಗದಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಕ್ರಿಕೆಟ್ ಆಯ್ಕೆ ಪ್ರಕ್ರಿಯೆ ಕೈಗೊಂಡು ನಂತರ ಜಿಲ್ಲಾಮಟ್ಟದಲ್ಲಿ ಅಂತಿಮ ಆಯ್ಕೆ ಪ್ರಕ್ರಿಯೆ ನಡೆಸಿ, ಅಂತಿಮವಾಗಿ 25 ಬಾಲಕರು ಹಾಗೂ 10 ಬಾಲಕಿಯರನ್ನು ಆಯ್ಕೆ ಮಾಡಲಾಗಿದೆ. ಹೀಗಾಗಿ, ಶಿಬಿರದಲ್ಲಿ ಅವಕಾಶ ಪಡೆದಿರುವ ಎಲ್ಲ ಮಕ್ಕಳು ಈ ಅವಕಾಶ ಸದುಪಯೋಗ ಪಡಿಸಿಕೊಳ್ಳಬೇಕು. ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರಮಟ್ಟದಲ್ಲಿ ತಾವು ಸಾಧನೆ ಮಾಡುವಂತಾಗಬೇಕು ಎಂದರು.

ಜಿಲ್ಲಾ ದೈಹಿಕ ಶಿಕ್ಷಣ ಶಿಕ್ಷಣಾಧಿಕಾರಿ ಜುನೇದ ಪಟೇಲ, ತಾಲೂಕಾ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಎಸ್.ಎಂ.ಬದ್ರಿ, ದೈಹಿಕ ಶಿಕ್ಷಣ ಶಿಕ್ಷಕ ಎ.ಎಂ. ಮುಲ್ಲಾ, ಆನಂದ ಅಕಾಡೆಮಿ ಕೇಂದ್ರದ ತರಬೇತುದಾರ ಆನಂದ ಕರಡಿಕರ ಸೇರಿದಂತೆ ಇತರರಿದ್ದರು.

ಶಿಸ್ತು, ಸಮಯ ಪಾಲನೆ ಅತೀ ಮುಖ್ಯ

ಹುಕ್ಕೇರಿ: ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಮತ್ತು ಸಮಯ ಪಾಲನೆ ಅತೀ ಮುಖ್ಯ. ಮೊಬೈಲ್, ಸೋಶಿಯಲ್ ಮೀಡಿಯಾಕ್ಕೆ ದಾಸರಾಗದೆ ಪುಸ್ತಕಕ್ಕೆ ಹತ್ತಿರವಾದರೆ ಮಾತ್ರ ಯಶಸ್ಸು ಸಿಗುತ್ತದೆ. ನಿಮ್ಮ ಕನಸು ದೊಡ್ಡದಿರಲಿ, ಆದರೆ ಅದಕ್ಕೆ ಬೇಕಾದ ಪರಿಶ್ರಮವೂ ದೊಡ್ಡದಿರಲಿ ಎಂದು ಶಿಕ್ಷಕ ಶ್ರೀಶೈಲ ಮಣಗುತ್ತಿ ಹೇಳಿದರು.

ಅವರು ತಾಲೂಕಿನ ಸಂಕೇಶ್ವರದ ಕೆಎಲ್‌ಇ ಬಿಸಿಎ ಕಾಲೇಜಿನಲ್ಲಿ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಸಚಿನ ಸುತಾರ ಮಾತನಾಡಿ, ಕೇವಲ ಡಿಗ್ರಿ ಅಲ್ಲ, ಇದು ಭವಿಷ್ಯದ ಬಾಗಿಲು. ತಂತ್ರಜ್ಞಾನ ಪ್ರತಿದಿನ ಬದಲಾಗುತ್ತಿದೆ. ಹಾಗಾಗಿ ವಿದ್ಯಾರ್ಥಿಗಳು ಕಾಲೇಜು ಪಾಠದ ಜೊತೆಗೆ ಹೊಸ ಸ್ಕಿಲ್ ಕಲಿಯಬೇಕು. ನಮ್ಮ ಕಾಲೇಜು ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಬದ್ಧವಾಗಿದೆ ಎಂದು ಹೇಳಿ ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ ಸೂಚಿಸಿದರು.

ಈ ವೇಳೆ ಕ್ಷಣಿಕ ಹಾಗೂ ಪಠ್ಯೇತರ ಚಟುವಟಿಕೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಾಧ್ಯಾಪಕರಾದ ಪಲ್ಲವಿ ಗಡಕರಿ, ಅನುಶಾ ಯಮಕನಮರಡಿ, ಅಶ್ವಿನಿ ಬಡಿಗೇರ ಬಹುಮಾನ ವಿತರಿಸಿದರು. ಕಾಲೇಜಿನ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸೀಮಾ ನಾಯಕ ವಾರ್ಷಿಕ ವರದಿ ಮಂಡಿಸಿದರು. ಅದಿಬಾ ಮುಲ್ಲಾ, ಸೌಮ್ಯದೊಡಭಂಗಿ ನಿರೂಪಿಸಿದರು. ಸ್ನೇಹಾ ಸಣಸುದ್ದಿ ವಂದಿಸಿದರು.



ಜಾಗ್ರತೆಯಿಂದ ಚುನಾವಣಾ ಕರ್ತವ್ಯ ಮಾಡಿ



ರಾಯಬಾಗ: ಭಾರತ ಚುನಾವಣಾ ಆಯೋಗದ ಮಾರ್ಗಸೂಚಿ ಅನ್ವಯ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ದೋಷ ರಹಿತವಾಗಿ ನಡೆಸಬೇಕು. ಎಲ್ಲ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಸಾಕಷ್ಟು ಬಾರಿ ಚುನಾವಣಾ ನಿಯಮ ಉಲ್ಲಂಘಿಸಿದ ಅಧಿಕಾರಿಗಳನ್ನು ಅಮಾನತ್ತುಗೊಳಿಸಿರುವ ಉದಾಹರಣೆಗಳಿವೆ. ಆದ್ದರಿಂದ ಪ್ರತಿಯೊಬ್ಬರೂ ಜಾಗೃತೆಯಿಂದ ಚುನಾವಣಾ ಕರ್ತವ್ಯ ನಿರ್ವಹಿಸಬೇಕೆಂದು ರಾಯಬಾಗ ವಿಧಾನ ಸಭಾ ಮತಕ್ಷೇತ್ರದ ನೋಡೆಲ್ ಅಧಿಕಾರಿ ಸಂತೋಷ ಕಾಮಗೌಡ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾ ಭವನದಲ್ಲಿ ಜರುಗಿದ ಮತದಾರರ ಪಟ್ಟಿ ಪರಿಷ್ಕರಣೆ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದೋಷ ರಹಿತ ಮತದಾರರ ಪಟ್ಟಿ ತಯಾರಿಸಲು ರಾಜಕೀಯ ಪಕ್ಷಗಳ ಸಹಕಾರದೊಂದಿಗೆ ಮಾಡಲು ಹೇಳಿದರು. ಸಭೆಯಲ್ಲಿ ತಹಶೀಲ್ದಾರ್ ಮಹಾದೇವ ಸನಮುರಿ, ಮತದಾರರ ಸಹಾಯಕ ಮತದಾರರ ನೋದಣಾಧಿಕಾರಿಗಳು, ಬಿಜೆಪಿ ರಾಯಬಾಗ ಮಂಡಲ ಅಧ್ಯಕ್ಷ ಪೃಥ್ವಿರಾಜ ಜಾಧವ, ವಿಷಯ ನಿರ್ವಾಹಕ ಹಣಮಂತ ದಶವಂತ, ಶಿರಸ್ತೆದಾರ ಮೊಹಮ್ಮದ ರಫೀಕ್, ದಿಲೀಪ ಜಮಾದಾರ, ಅರ್ಜುನ ನಾಯಿಕವಾಡಿ, ವಿ.ಎಸ್.ಪಾಟೀಲ. ಮಹಾವೀರ ಸಾನೆ, ನಾಮದೇವ ಕಾಂಬಳೆ, ಗಂಗಾಧರ ದಿಗ್ಗೇವಾಡಿ, ದಿಲೀಪ ಪಾಯನ್ನವರ, ಚುನಾವಣಾ ಶಾಖೆ ಸಿಬ್ಬಂದಿಗಳು ಹಾಗೂ ರಾಯಬಾಗ ಮತಕ್ಷೇತ್ರದ ವಿವಿಧ ರಾಜಕೀಯ ಪಕ್ಷಗಳ ಮುಖಂಡರುಗಳು ಉಪಸ್ಥಿತರಿದ್ದರು.

ಗುರುವಂದನಾ ಕಾರ್ಯಕ್ರಮ

ಯಮಕನಮರಡಿ: ಸ್ಥಳೀಯ ಸಿಇಎಸ್ ಪ್ರೌಢಶಾಲೆ 1982-83ನೇ ಸಾಲಿನ 10ನೇ ತರಗತಿ ವಿದ್ಯಾರ್ಥಿಗಳಿಂದ ಶನಿವಾರ ಸ್ಥಳೀಯ ಗುರುಸಿದ್ಧ ಶ್ರೀಗಳ ಕಲ್ಯಾಣ ಮಂಟಪದಲ್ಲಿ ಗುರುವಂದನ ಮತ್ತು ಸನ್ಮಾನ ಕಾರ್ಯಕ್ರಮ ಜಗುರಿತು.

ನಿವೃತ್ತ ಶಿಕ್ಷಕ ಎಸ್.ಜಿ.ಕುಂಬಾರ, ಎಸ್. ಎನ್.ಮುಮದಾಪುರ, ಆರ್.ಸಿ.ಪಾಟೀಲ, ಎಸ್. ಕೆ.ಗೋಡೆವಾಲಿ, ಎಸ್.ಜಿ.ಕಲಶೆಟ್ಟಿ, ಸಿಬ್ಬಂದಿಗಳಾದ ಎಸ್ .ಜಿ.ವಾ.ಘ.ಇಂಗಳೇ ಮುಂತಾದವರು ಉಪಸ್ಥಿತರಿದ್ದರು.

ನಿವೃತ್ತ ಶಿಕ್ಷಕ ಎಸ್.ಜಿ.ಕುಂಬಾರ ಮಾತನಾಡಿ, ಮಹಾಭಾರತ ಪುರಾಣಗಳಲ್ಲಿ ಗುರುವಿಗೆ ಹೆಚ್ಚಿನ ಸ್ಥಾನ ನೀಡಲಾಗಿದ್ದು, ಅದರಂತೆ ನಮ್ಮ ವಿದ್ಯಾರ್ಥಿಗಳಾದ ಎಲ್ಲ ಬಳಗದವರು ಶ್ರೇಷ್ಠವಾದ ಗುರುವಿನ ಮಾರ್ಗದರ್ಶನದಲ್ಲಿ ಉತ್ತಮ ವಿದ್ಯಾರ್ಥಿಗಳಾಗಿ ಹೊರಹೊಮ್ಮಿ ಸರ್ಕಾರದ ಸೇವೆಯಲ್ಲಿ ಖಾಸಗಿ ಸೇವೆಯಲ್ಲಿ ಸೇವೆ ಸಲ್ಲಿಸುತ್ತಿರುವ ವಿದ್ಯಾರ್ಥಿಗಳ ಒಕ್ಕೂಟ ಆಯೋಜಿಸಲಾದ ಗುರುವಂದನ ಕಾರ್ಯಕ್ರಮವು ನಿಜಕ್ಕೂ ಹೆಮ್ಮೆ ಪಡುವಂತಾಗಿದೆ ಎಂದರು.

ನಿವೃತ್ತ ಶಿಕ್ಷಕ ಎಸ್.ಕೆ.ಗೋಡೆವಾಲೆ ಸೇರಿದಂತೆ ನಿವೃತ್ತ ಶಿಕ್ಷಕರು ಮಾತನಾಡಿದರು.

ಪತ್ರಕರ್ತಎಂ.ಬಿ.ಶಿವಪೂಜಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಲೋಕೇಶ ಅಲೋಡಿ ಹಾಗೂ ಅನೇಕ ವಿದ್ಯಾರ್ಥಿಗಳು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಯಮನಪ್ಪ ಜೀವಣ್ಣವರ ವಂದಿಸಿದರು.

ಕಿರುಸುದ್ದಿ

ಅರ್ಜಿ ಆಹ್ವಾನ

ಬೆಳಗಾವಿ: 2026-2027 ನೇ ಸಾಲಿಗೆ ಬೈಲಹೊಂಗಲ ಹಾಗೂ ಕಿತ್ತೂರ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಒಟ್ಟು 10 ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ,2ಬಿ,3ಎ,3ಬಿ, ಪ.ಜಾ-ಪ.ಪಂ ಮತ್ತು ಇತರೆ ಜನಾಂಗಗಳಿಗೆ ಸೇರಿದ 5 ರಿಂದ 10 ನೇ ತರಗತಿಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೂನ್ 8 ರೊಳಗಾಗಿ ವೆಬ್‌ಸೈಟ್ https://shp.karnataka.gov.in/bcwd ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ, ತಾಲೂಕು ಅಧಿಕಾರಿಗಳನ್ನು ಸಂಪರ್ಕಿಸುವುದು ಎಂದು ಬೈಲಹೊಂಗಲ ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರಿಕೆಟ್ ಬೆಟ್ಟಿಂಗ್: ಆರು ಆರೋಪಿಗಳ ಬಂಧನ

ಬೆಳಗಾವಿ: ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳ ವಿರುದ್ಧ ಪೊಲೀಸರು ನಡೆಸಿದ ಭರ್ಜರಿ ಕಾರ್ಯಾಚರಣೆಯಲ್ಲಿ ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್, ಮಟಕಾ ದಂಧೆ ಹಾಗೂ ಗಾಂಜಾ ಸೇವನೆ ಮಾಡುತ್ತಿದ್ದ ಆರು ಜನ ಆರೋಪಿಯನ್ನು ಬಂಧಿಸಲಾಗಿದೆ.ತಿಲಕವಾಡಿ ಪೊಲೀಸ್‌ರು ಐಪಿಎಲ್ ಬೆಟ್ಟಿಂಗ್ ಆಡಿಸುತ್ತಿದ್ದ ಉದ್ಯಮಬಾಗದ ಯಾದವ ಕಾಲೊನಿ ವಿಶಾಲ ನಾಗೋಜಿ ಪಾಟೀಲ(28), 20,000ರೂ. ಮೌಲ್ಯದ ಆ್ಯಪಲ್ ಫೋನ್, 5,000 ರೂ. ನಗದು ವಶಪಡಿಸಿಕೊಂಡರು. ರೋಹನ ಎಂಬ ಮತ್ತೊಬ್ಬ ಆರೋಪಿ ಭಾಗಿಯಾಗಿರುವುದು ಬೆಳಕಿಗೆ ಬಂದಿದೆ.

ಮಜಗಾಂವನ ಮಾರುತಿ ಗಲ್ಲಿ ಸಹದೇವ ಅಣ್ಣಪ್ಪ ಶೇಲ್ಯಾಗೋಳ(56), ಶ್ರೀಸಾಯಿ ಕಾಲೋಣಿ ಶ್ರೀಧರ ರಘುರಾಮ ಶೆಟ್ಟ (57) ಮತ್ತು ಶಹಾಪೂರ ತಾಂಬಿಟಕರ್ ಗಲ್ಲಿ ನಾಸಿರಅಹ್ಮದ ನೌಶಾದ ಬೋಜಗಾರ(36) ಎಂಬುವವರನ್ನು ಪೊಲೀಸರು ಬಂಧೀಸಿದ್ದಾರೆ. ತಿಲಕವಾಡಿ ಪೊಲೀಸ್ ಠಾಣೆ ಪಿಐ ಪರುಶರಾಮ ಪೂಜೇರಿ, ಪಿಎಸ್‌ಐ ವಿಶ್ವನಾಥ ಗಂಟಾಮಠ, ಉದ್ಯಮಬಾಗ ಪಿಎಸ್‌ಐ ಪಿ.ಐ.ಗಂಡವಗೋಳ, ಮಾರ್ಕೆಟ್ ಪಿಎಸ್‌ಐ ಶಶಿಕುಮಾರ ಕುರಳೆ, ಮಾರಿಹಾಳ ಪಿಎಸ್‌ಐ ಮಂಜುನಾಥ ಹುಲಕುಂದ, ಸಿಬ್ಬಂದಿ ವರ್ಗದವರು ದಾಳಿಯಲ್ಲಿ ಭಾಗಿಯಾದರು. ಈ ಕಾರ್ಯವನ್ನು ನಗರ ಪೊಲೀಸ್ ಆಯುಕ್ತರು ಹಾಗೂ ಡಿಸಿಪಿ ಶ್ಲಾಘಿಸಿದ್ದಾರೆ.

ಕುರಿ ಮರಿಗಳ ಮೇಲೆ ಬೀದಿ ನಾಯಿಗಳ ದಾಳಿ: 6 ಸಾವು



ಹುಕ್ಕೇರಿ: ಹೊರವಲಯದಲ್ಲಿ ಕುರಿ ಮರಿಗಳ ಮೇಲೆ ಬೀದಿ ನಾಯಿಗಳ ಹಿಂಡು ದಾಳಿ ನಡೆಸಿದ್ದು, 6 ಮರಿಗಳು ಸ್ಥಳದಲ್ಲೇ ಸಾವನ್ನಪ್ಪಿವೆ. 8 ಮರಿಗಳಿಗೆ ತೀವ್ರ ಗಾಯಗಳಾಗಿದ್ದು, 5 ಮರಿಗಳು ನಾಪತ್ತೆಯಾಗಿವೆ ಎಂದು ಕುರಿಗಾಯಿ ಅಜಿತ್ ಲಗಮಣ್ಣ ಪೂಜೇರಿ ತಿಳಿಸಿದ್ದಾರೆ. ಸಂಜೆ ಮೇಯಿಸಲು ಬಿಟ್ಟಿದ್ದ ಕುರಿ ಮಂದೆಯ ಮೇಲೆ ಏಕಾಏಕಿ ಬೀದಿ ನಾಯಿಗಳು ದಾಳಿ ಮಾಡಿವೆ ಕಣ್ಣೆದುರೇ ಮರಿಗಳನ್ನು ಕಚ್ಚಿ ಕೊಂದಿವೆ. ಲಕ್ಷಾಂತರರೂ.ನಷ್ಟವಾಗಿದೆ ಎಂದು ಅಜಿತ್ ಕಣ್ಣೀರಿಟ್ಟರು. ಈ ಬಗ್ಗೆ ಪ್ರತಿಕ್ರಿಯಿಸಿದ ಶ್ರೀರಾಮ ಸೇನೆ ಉತ್ತರ ಪ್ರಾಂತ ಕಾರ್ಯದರ್ಶಿ ಶಿವರಾಜ ಅಂಬಾರಿ, ಕೂಡಲೇ ಕುರಿಗಾಹಿಗೆ ಸೂಕ್ತ ಪರಿಹಾರ ನೀಡಬೇಕು. ಇಲ್ಲದಿದ್ದರೆ ನಾಳೆ ಸತ್ತ ಮರಿಗಳೊಂದಿಗೆ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಬೀದಿ ನಾಯಿಗಳ ಹಾವಳಿ ತಡೆದು, ಕುರಿಗಾಹಿಗಳಿಗೆ ರಕ್ಷಣೆ ನೀಡುವಂತೆ ಹಾಗೂ ಮೃತಕುರಿ ಮರಿಗಳಿಗೆ ಪರಿಹಾರ ನೀಡುವಂತೆಗ್ರಾಮಸ್ಥರು ಪುರಸಭೆ ಮತ್ತು ಪಶುಸಂಗೋಪನಾ ಇಲಾಖೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಮೇ 30ರಂದು ಜಿಲ್ಲಾ ಯೋಜನಾ ಸಮಿತಿ ಸಭೆ

ಬೆಳಗಾವಿ : ಲೋಕೋಪೂಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರ ಅಧ್ಯಕ್ಷತೆಯಲ್ಲಿ ಮೇ 30 ರಂದು ಬೆಳಿಗ್ಗೆ 10.30 ಗಂಟೆಗೆ ಬೆಳಗಾವಿ ಸುವರ್ಣ ವಿಧಾನಸೌಧದ ಸೆಂಟ್ರಲ್ ಹಾಲ್‌ನಲ್ಲಿ ಜಿಲ್ಲಾ ಯೋಜನಾ ಸಮಿತಿ ಸಭೆಯನ್ನು ನಿಗದಿಪಡಿಸಲಾಗಿದೆ ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ತೆಲಸಂಗ: ಗ್ರಾಮದ ಕ್ರಾಸ್‌ನಲ್ಲಿ ವಿದ್ಯುತ್ ತಂತಿ ತಗುಲಿ ಮಂಗ ಅಕಾಲಿಕ ಮರಣ ಹೊಂದಿದ್ದು, ಗ್ರಾಮದ ಸಂತ ಮಂಡಳಿ ಹಾಗೂ ಗೆಳೆಯರ ಬಳಗದ ಸದಸ್ಯರು ಸೇರಿ ಮೃತ ಮಂಗನಿಗೆ ಧೂಪ-ದೀಪ ಹಚ್ಚಿ, ಹೂವಿನ ಹಾರ ಹಾಕಿ ವಿಶೇಷ ಪೂಜೆ ಸಲ್ಲಿಸಿ ಗೌರವ ಸಮರ್ಪಿಸಿದರು. ಬಳಿಕ ಮಂಗನ ಪಾರ್ಥಿವ ಶರೀರವನ್ನು ಗ್ರಾಮದ ದಡ್ಡಿಯ ಸಕಲ ಹಿರಿಯರ, ಗ್ರಾಮಸ್ಥರ ಸಮ್ಮುಖದಲ್ಲಿ ಸನಾತನ ಸಂಪ್ರದಾಯದಂತೆ ಭಕ್ತಿಪೂರ್ವಕವಾಗಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಅನ್ನಪೂರ್ಣೇಶ್ವರಿ ದೇವಿ ವಾರ್ಷಿಕ ಮಹೋತ್ಸವ

ಬೆಳಗಾವಿ: ಗಡಿ ಜಿಲ್ಲೆ ಬೆಳಗಾವಿ ವಡಗಾವ ಯಳ್ಳೂರು ರಸ್ತೆಯಲ್ಲಿ ನೆಲೆಸಿರುವ ಅನ್ನಪೂರ್ಣೇಶ್ವರಿ ದೇವಿಯ ವಾರ್ಷಿಕ ಮಹೋತ್ಸವವು ಅತ್ಯಂತ ಸಡಗರ-ಸಂಭ್ರಮದಿಂದ ಮನೆ ಮಾಡಿ ಆರಂಭಗೊಂಡಿದ್ದು, ಧಾರ್ಮಿಕ ಉತ್ಸವದಲ್ಲಿ ಸಾರ್ವಜನಿಕರು ಹಾಗೂ ಭಕ್ತಾದಿಗಳು ದೊಡ್ಡ ಮಟ್ಟದಲ್ಲಿ ಭಾಗಿಯಾಗಿದ್ದರು. ಇಲ್ಲಿನ ವಡಗಾವ ಯಳ್ಳೂರು ರಸ್ತೆಯ ಅನ್ನಪೂರ್ಣೇಶ್ವರಿ ದೇವಾಲಯದಲ್ಲಿ ವಾರ್ಷಿಕ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ವಿಧಿ-ವಿಧಾನಗಳು ಜರುಗಿದವು. ಉಡುಪಿ ಉಚ್ಚಿಲದ ವಿಶ್ವನಾಥ ಜೋಯಿಸರ ನೇತೃತ್ವದಲ್ಲಿ ದೇವಸ್ಥಾನದ ಆವರಣದಲ್ಲಿ ಪ್ರಾರ್ಥನೆ, ವಾಸ್ತು ಶುದ್ಧಿ, ವಾಸ್ತು ಹೋಮ, ರಾಕ್ಷೋಘ್ನ ಹೋಮ, ವಾಸ್ತು ಬಲಿ ಹಾಗೂ ಸುದರ್ಶನ ಹೋಮಗಳನ್ನು ಭಕ್ತಿ ಬಾವದಿಂದ ಪೂಜೆ ಸಲ್ಲಿಸಿವುದರ ಮೂಲಕ ನೇರವೇರಿಸಿದರು. ಮಹೋತ್ಸವದ 2ನೇ ದಿನ ಶನಿವಾರ ದೇವಿಗೆ ವಿಶೇಷ ಪೂಜಾಕಾರ್ಯ ಜರುಗಿದವು. ಅನ್ನಪೂರ್ಣೇಶ್ವರಿ ಯಾಗ, ಮಹಾಪೂಜೆ ಹಾಗೂ ಪ್ರಸನ್ನ ಪೂಜೆ ನೆರವೇರಿದ್ದು, ಸಂಜೆ ದೇವಿಯ ಭವ್ಯ ಪಲ್ಲಕ್ಕಿ ಮೆರವಣಿಗೆ, ರಂಗ ಪೂಜೆ ಹಾಗೂ ದೀಪೋತ್ಸವ ಕಾರ್ಯಕ್ರಮಗಳು ಜರುಗಿದವು. ಮೇ 24ರಂದು ಬೆಳಗ್ಗೆ ಸಂಪ್ರೋಕ್ಷಣೆ, ಸುಬ್ರಮಣ್ಯ ದೇವರಿಗೆ ಅಶ್ಲೇಷಾ ಬಲಿ ಪೂಜೆ, ಮಹಾಚಂಡಿಕಾ ಹೋಮ ಹಾಗೂ ಮಧ್ಯಾಹ್ನ ಮಹಾಪ್ರಸಾದ ವಿತರಣೆ ಮಾಡಲಾಗಿತ್ತು. ಅನ್ನಪೂರ್ಣೇಶ್ವರಿ ದೇವಿಯ ವಾರ್ಷಿಕ ಮಹೋತ್ಸವ ಕಾರ್ಯಕ್ರಮವನ್ನು ಬೆಳಗಾವಿಗರು ಅತ್ಯಂತ ಭಕ್ತಿಯಿಂದ ಆಚರಿಸಿದರು. ಈ ವೇಳೆ ಬೆಳಗಾವಿ ನಗರದ ಸುತ್ತಮುತ್ತಲಿನ ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಭಕ್ತಾಧಿಗಳು ಪಾಲ್ಗೊಂಡಿದ್ದರು.



ಬೆಳಗಾವಿ: ಗಡಿ ಜಿಲ್ಲೆ ಬೆಳಗಾವಿ ವಡಗಾವ ಯಳ್ಳೂರು ರಸ್ತೆಯಲ್ಲಿ ನೆಲೆಸಿರುವ ಅನ್ನಪೂರ್ಣೇಶ್ವರಿ ದೇವಿಯ ವಾರ್ಷಿಕ ಮಹೋತ್ಸವವು ಅತ್ಯಂತ ಸಡಗರ-ಸಂಭ್ರಮದಿಂದ ಮನೆ ಮಾಡಿ ಆರಂಭಗೊಂಡಿದ್ದು, ಧಾರ್ಮಿಕ ಉತ್ಸವದಲ್ಲಿ ಸಾರ್ವಜನಿಕರು ಹಾಗೂ ಭಕ್ತಾದಿಗಳು ದೊಡ್ಡ ಮಟ್ಟದಲ್ಲಿ ಭಾಗಿಯಾಗಿದ್ದರು. ಅನ್ನಪೂರ್ಣೇಶ್ವರಿ ದೇವಾಲಯದಲ್ಲಿ ವಾರ್ಷಿಕ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ವಿಧಿ-ವಿಧಾನಗಳು ಜರುಗಿದವು.

ಆಡಳಿತ ಮಂಡಳಿ ಸಭೆ | ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿಕೆ

ಒಕ್ಕೂಟಕ್ಕೆ 12.59 ಕೋಟಿ ರೂ.ಲಾಭ

ಬೆಳಗಾವಿ: ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಕ್ಕೆ ಹಾಲು ಪೂರೈಕೆ ಮಾಡುತ್ತಿರುವ ಕ್ರಿಯಾಶೀಲ ಸದಸ್ಯರು ಮರಣ ಹೊಂದಿದ್ದಲ್ಲಿ, ಅಂತಹ ಕುಟುಂಬಗಳಿಗೆ 60 ಸಾವಿರ ರೂ. ಮತ್ತು ಹಾಲು ಪೂರೈಕೆ ಮಾಡದ ರೈತ ಸದಸ್ಯರು ಮರಣ ಹೊಂದಿದ್ದಲ್ಲಿ 25 ಸಾವಿರ ರೂ.ಗಳನ್ನು ನೀಡಲು ಒಕ್ಕೂಟವು ನಿರ್ಧರಿಸಿದೆ.

ಅರಭಾವಿ ವಿಧಾನ ಸಭಾ ಕ್ಷೇತ್ರದ ಶಾಸಕ ಹಾಗೂ ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅಧ್ಯಕ್ಷತೆಯಲ್ಲಿ ನಡೆದ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಧಾರವನು ತೆಗೆದುಕೊಳ್ಳಲಾಯಿತು. ಮರಣ ಹೊಂದಿದ ರೈತ ಸದಸ್ಯರಿಗೆ 1 ಲಕ್ಷ ರೂ. ವರೆಗೆ ವಿಮಾ ಸೌಲಭ್ಯ ಕಲ್ಪಿಸಿಕೊಡುವ ಟೆಂಡರ್ ಪ್ರಕ್ರಿಯೆ ಕರೆಯುವ ಇರಾದೆ ಹೊಂದಿತ್ತರಾದರೂ ಕಡೆ ಗಳಿಗೆಯಲ್ಲಿ ವಯೋಮಾನದ ಹಿನ್ನೆಲೆಯಲ್ಲಿ ಇದನ್ನು ರದ್ದುಪಡಿಸಿ ರೈತರ ಹಿತದೃಷ್ಟಿಯಿಂದ 70 ವರ್ಷ ಮೇಲ್ಪಟ್ಟ ರೈತರು ಈ ಯೋಜನೆಗೆ ಒಳಪಡಲಿದ್ದಾರೆ.

ಕಂತು ವಿಮೆ ಜಾರಿಗೆ ಮಾಡಿದ್ದರೆ 18 ರಿಂದ 70 ವರ್ಷ ಒಳಗಿನ ರೈತರು ಮಾತ್ರ ಈ ಯೋಜನೆಗೆ ಒಳಪಡುತ್ತಿದ್ದರು. ಇದರಿಂದ ಸುಮಾರು 5 ಸಾವಿರ ರೈತರು ಈ ವಿಮಾ ಯೋಜನೆಯಿಂದ ಹೊರಗುಳಿಯಬೇಕಾಯಿತು. ಇದನ್ನು ಮನಗಂಡು ಎಲ್ಲ ವಯೋಮಾನದವರಿಗೂ ನೀಡುವ



ಉದ್ದೇಶದಿಂದ ಕಂತು ವಿಮೆ ಸೌಲಭ್ಯವನ್ನು ರದ್ದು ಮಾಡಿ ಒಕ್ಕೂಟದಿಂದಲೇ ರೈತ ಕಲ್ಯಾಣ ಸಂಘಕ್ಕೆ ನೇರವಾಗಿ ಪಾವತಿಸಲು ಕ್ರಮ ಕೈಗೊಂಡಿರುವುದಾಗಿ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಜಿಲ್ಲೆಯಲ್ಲಿ ಸುಮಾರು 33 ಸಾವಿರ ರೈತರು ನಮ್ಮ ಒಕ್ಕೂಟದ ಸದಸ್ಯರಿದ್ದು, ಇದರಲ್ಲಿ 12 ರಿಂದ 15 ಸಾವಿರ ರೈತರು ಹಾಲು ಪೂರೈಕೆ ಮಾಡುತ್ತಿದ್ದು, ಉಳಿದ 18 ವಿರ ಸದಸ್ಯರು ಹಾಲು ಹಾಕದೇ ಒಕ್ಕೂಟದ ಸದಸ್ಯತ್ವವನ್ನು ಪಡೆದಿದ್ದಾರೆ ಎಂದರು.

ಈ ವೇಳೆ ಸಭೆಯಲ್ಲಿ ಆಡಳಿತ ಮಂಡಳಿಯ ಸದಸ್ಯ ಬಾಬು ಕಟ್ಟಿ, ಮಲ್ಲಪ್ಪ ಪಾಟೀಲ, ಕಲ್ಲಪ್ಪ ಗಿರೆಣ್ಣವರ, ಡಾ. ಬಸವರಾಜ ಪರನ್ನವರ, ಬಾಬುರಾವ ವಾಘ್ಮೊಡೆ, ವಿರುಪಾಕ್ಷ ಈಟಿ, ರಾಯಪ್ಪ ಡೂಗ, ಪ್ರಕಾಶ ಅಂಬೋಜಿ, ಮಹಾದೇವ ಬಿಳಿಕುರಿ, ಸಂಜಯ ಶಿಂತ್ರಿ, ರಮೇಶ ಅಣ್ಣಿಗೇರಿ, ಸದೆಪ್ಪ ವಾರಿ, ಶಂಕರ ಇಟ್ನಾಳ, ಸವಿತಾ ಖಾನಪ್ಪಗೋಳ, ವಸಂತ ಕರಿಗಾರ, ಅಜೀತ ದೇಸಾಯಿ, ಬಸವರಾಜ ಮಾಳೆದವರ, ವ್ಯವಸ್ಥಾಪಕ ನಿರ್ದೇಶಕ ಡಾ. ಶ್ರೀಕಾಂತ ಸೇರಿದಂತೆ ಇತರರಿದ್ದರು.

ಕೃಷಿ ಉಪಕರಣಗಳ ಖರೀದಿಗೆ ಒತ್ತು

ಸನ್ 2025-26 ನೇ ಸಾಲಿನಲ್ಲಿ ಬೆಳಗಾವಿ ಹಾಲು ಒಕ್ಕೂಟಕ್ಕೆ ಸುಮಾರು 12.59 ಕೋಟಿ ರೂ. ಲಾಭಾಂಶ ಬಂದಿದೆ. ಇದರಲ್ಲಿ ಬಂದ ಲಾಭಾಂಶದಲ್ಲಿ ಶೇ.60ರ ರಿಯಾಯತಿ ದರದಲ್ಲಿ ರೈತರಿಗೆ ವಿವಿಧ ಉಪಕರಣಗಳ ಖರೀದಿಗೆ ಒತ್ತು ನೀಡಲಾಗಿದೆ. ಅಂದಾಜು 2.50 ಕೋಟಿ ರೂ. ವೆಚ್ಚದಲ್ಲಿ 10 ಸಾವಿರ ರಬ್ಬರ್ ಮ್ಯಾಟ್‌ಗಳು, ಸುಮಾರು 1.68 ಕೋಟಿ ರೂ. ವೆಚ್ಚದಲ್ಲಿ 400 ಚಾಪ್ ಕಟರ್, ಅಂದಾಜು 35 ಲಕ್ಷ ರೂ. ವೆಚ್ಚದಲ್ಲಿ 100 ಹಾಲು ಕರೆಯುವ ಯಂತ್ರ ವಿತರಿಸಲಾಗುತ್ತದೆ. 40 ಸಂಘಗಳ ಕಟ್ಟಡಗಳಿಗೆ ತಲಾ 5 ಲಕ್ಷ ರೂ.ಗಳಂತೆ ಪ್ರತಿ ಸಂಘಗಳಿಗೆ ನೀಡಲಾಗುತ್ತಿದ್ದು, ಇದಕ್ಕಾಗಿ 2 ಕೋಟಿ ರೂ. ವೆಚ್ಚ ವ್ಯಯ ಮಾಡಲಾಗುತ್ತಿದೆ. ಒಕ್ಕೂಟಕ್ಕೆ ಬಂದ ಲಾಭಾಂಶದಲ್ಲಿ ಅಂದಾಜು 6.53 ಕೋಟಿ ರೂ. ವೆಚ್ಚ ರೈತರಿಗೆ ಖರ್ಚು ಮಾಡುತ್ತಿರುವುದಾಗಿ ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಅರ್ಜಿ ಆಹ್ವಾನ

ಬೆಳಗಾವಿ: ಬೈಲಹೊಂಗಲ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿಯಿರುವ ಬೈಹೊಂಗಲ, ಚ.ಕಿತ್ತೂರ ತಾಲೂಕು ಅಂಗನವಾಡಿ ಕೇಂದ್ರಗಳಿಗೆ 9 ಕಾರ್ಯಕರ್ತೆ, 9 ಸಹಾಯಕಿ ಹುದ್ದೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಜೂನ್ 8 ರೊಳಗಾಗಿ ಮುಚ್ಚಿದ ಲಕೋಟೆಯಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಬೈಲಹೊಂಗಲ ತಾಲೂಕು, ಈ ಕಚೇರಿಗೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆ ಮೂಲಕ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಕಛೇರಿಗೆ ತಲುಪುವಂತೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಪರ್ಕಿಸಬಹುದು ಎಂದು ತಾಲೂಕು ಶಿಶು ಅಭಿವೃದ್ಧಿಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೋಮಾತೆ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ: ಶ್ರೀ




ಯರಗಟ್ಟಿ: ಗೋಮಾತೆಗೆ ನಿತ್ಯ ಪೂಜೆ ಸಲ್ಲಿಸಿದರೆ ಮುಕ್ಕೋಟಿ ದೇವರ ಸ್ಮರಣೆ ಮಾಡಿದಂತೆ. ನಾವುಗಳು ಗೋಮಾತೆ ರಕ್ಷಣೆಯಲ್ಲಿ ತೊಡಗಬೇಕು ಎಂದು ನೇಸರಗಿ ಮಲ್ಲಾಪೂರ ಗಾಳೇಶ್ವರಮಠದ ಚಿದಾನಂದ ಸ್ವಾಮೀಜಿ ಹೇಳಿದರು.

ಸಮೀಪದ ಜಾಲಿಕಟ್ಟಿ ಗ್ರಾಮದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಗೋಪೂಜೆ ಹಾಗೂ ಧರ್ಮಸಭೆಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಗೋಮಾತೆ ಸೇವೆಯಿಂದ ಆರೋಗ್ಯವೂ ಉತ್ತಮವಾಗಿರುತ್ತದೆ. ಗೋವುಗಳನ್ನು ಕುಟುಂಬದ ಸದಸ್ಯರಂತೆ ಕಾಣಬೇಕು ಎಂದರು.

ಸೊಗಲ ಸುಣಧೋಳಿ ಚಿದಾನಂದ ಅವಧೂತ ಅಜ್ಜ ಮಾತನಾಡಿ, ಗೋವುಗಳ ರಕ್ಷಣೆ ಪ್ರತಿಯೊಬ್ಬರ ಆದ್ಯ ಕರ್ತವ್ಯ ಹಾಗೂ ಜವಾಬ್ದಾರಿಯಾಗಿದೆ ಎಂದರು.

ಬಸಯ್ಯಸ್ವಾಮಿ ಹಿರೇಮಠ ಸಾನಿಧ್ಯ ವಹಿಸಿದ್ದರು, ಗ್ರಾಪಂ ಮಾಜಿ ಅಧ್ಯಕ್ಷ ಬಸವರಾಜ ಕಡಬಿ, ಚನ್ನಯ್ಯಸ್ವಾಮಿ ಪೂಜೇರ, ಗೌಡಪ್ಪ ನಾಯ್ಕರ, ಭರಮಪ್ಪ ಜಗಮಯ್ಯನವರ, ವಿರೂಪಾಕ್ಷಯ್ಯ ಪೂಜೇರ, ಈರಯ್ಯ ಗೌಡರ, ಪ್ರಕಾಶ ನಾಯ್ಕರ, ವೈ.ಎಫ್.ನಾಯ್ಕರ, ವೆಂಕಣ್ಣ ಕಮಕೇರಿ, ಮಲ್ಲನಾಯ್ಕ ನಾಯ್ಕರ, ಕುಮಾರ ಹಿರೇಮಠ, ಜಗದೀಶ ಹೊಸಮಠ, ಈರಯ್ಯ ಹಿರೇಮಠ, ಅಡವಯ್ಯ ಅಟಿಗಲ್ಲಮಠ, ಮಂಜು ನಾಯ್ಕರ ಮತ್ತಿತರಿದ್ದರು.



24 ಮೊಬೈಲ್ ಫೋನ್ ಪತ್ತೆ

ಬೆಳಗಾವಿ: ಜಿಲ್ಲೆಯ ಅಥಣಿ ತಾಲೂಕಿನಾದ್ಯಂತ ಸುಮಾರು 24 ಕ್ಕೂ ಹೆಚ್ಚು ಮೊಬೈಲ್ ಫೋನ್ ಸಿಇಐಆರ್ ಪೋರ್ಟಲ್ ಮೂಲಕ ಎಸ್ಪಿ ಕೆ.ರಾಮರಾಜನ, ಪ್ರಶಾಂತ ಜಿ. ಮುನ್ನೋಳಿ ಡಿಎಸ್ಪಿ ಅಥಣಿ ಮಾರ್ಗದರ್ಶನದಡಿಯಲ್ಲಿ, ಸಿಪಿಐ ಸಂತೋಷ ಹಳ್ಳೂರು, ಪಿಎಸ್‌ಐ ಜಿ.ಎಸ್.ಉಪ್ಪಾರ, ಮಲ್ಲಿಕಾರ್ಜುನ ತಳವಾರ ನೇತೃತ್ವದಲ್ಲಿ ತಂಡ ರಚಿಸಿ ಕಳೆದ ಮೊಬೈಲ್‌ಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಕಳೆದುಕೊಂಡ ಫೋನ್ ಮಾಲಿಕರಿಗೆ ಹಿಂದಿರುಗಿಸಿದರು. ಈ ಕಾರ್ಯಕ್ಕೆ ಜನತೆ, ಫೋನ್ ಮಾಲಿಕರುಗಳಿಂದ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಸಂಶೋಧನೆಗೆ ನೈತಿಕತೆ, ಮೌಲ್ಯ ಅಗತ್ಯ: ತಡಸದ

ಬೆಳಗಾವಿ: ನಾವು ಯಾವುದೇ ಕೆಲಸದಲ್ಲಿ ತೊಡಗಿಕೊಂಡಾಗ ನೈತಿಕತೆ ಮತ್ತು ಮೌಲ್ಯಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಸಂಶೋಧನೆಯು ವೈಜ್ಞಾನಿಕ ಪ್ರಕ್ರಿಯೆ ಆಗಿರುವುದರಿಂದ ನಾವು ಸಂಶೋಧನೆ ಚೌಕಟ್ಟಿನೊಳಗೆ ಅಗತ್ಯವಾದ ಮಾರ್ಗಸೂಚಿಗಳು ಮತ್ತು ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ವಿಜಯಪು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ಪಿ.ಜಿ.ತಡಸದ ತಿಳಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುವೆಂಪು ಸಭಾಂಗಣದಲ್ಲಿ ಆಂತರಿಕ ಗುಣಮಟ್ಟ ಆಂತರಿಕ ಗುಣಮಟ್ಟದ ಭರವಸೆ ಕೋಶ ಮತ್ತು ಗ್ರಂಥಾಲಯ ವಿಜ್ಞಾನ ವಿಭಾಗ ಸಂಶೋಧನೆ ಮತ್ತು ಪ್ರಕಟಣೆಯು ನೀತಿಶಾಸ್ತ್ರ ಎಂಬ ವಿಷಯದಡಿ ಆಯೋಜಿಸಿದ್ದ ಎರಡು ದಿನದ ಕಾರ್ಯಾಗಾರದಲ್ಲಿ ಮಾತನಾಡಿ, ಸಂಶೋಧನೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಪ್ರಾಮಾಣಿಕತೆ ಇಲ್ಲದಿದ್ದರೆ, ಆ ಅಧ್ಯಯನದ ಫಲಿತಾಂಶಗಳು ಸಮಾಜಕ್ಕೆ ದಾರಿತಪ್ಪಿಸುವಂತಾಗಬಹುದು. ಹೀಗಾಗಿ ಸಂಶೋಧನಾ ವಿದ್ಯಾರ್ಥಿಗಳು, ಕೇವಲ ತಮ್ಮ ಸಂಶೋಧನೆ ಪೂರ್ಣಗೊಳಿಸುವುದಕ್ಕಿಂತ, ಅದು ಎಷ್ಟು ನೈತಿಕ ರೀತಿಯಲ್ಲಿ ಪೂರ್ಣಗೊಂಡಿದೆ ಎಂಬುದುರ ಬಗ್ಗೆ ಗಮನಹರಿಸಬೇಕು ಎಂದರು.

ಸಮಾಜ ವಿಜ್ಞಾನ ನಿಖಾಯದ ಡೀನ್ ಪ್ರೊ.ವಿಶ್ವನಾಥ ಅವಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಶೋಧನೆಯಲ್ಲಿ ಕೇವಲ ಫಲಿತಾಂಶಕ್ಕಿಂತ ಬೌದ್ಧಿಕ ಪ್ರಾಮಾಣಿಕತೆ ಅತ್ಯಂತ ಮುಖ್ಯವಾದ್ದು. ನಿಮ್ಮ ಸಂಶೋಧನಾ ವಿಧಾನವು ಕೇವಲ ತಾಂತ್ರಿಕವಾಗಿರದೆ, ಅದು ಜಾಗತಿಕ ನೈತಿಕ ಮಾನದಂಡಗಳಿಗೆ ಸಂಪೂರ್ಣವಾಗಿ ಹೊಂದಿಕೆಯಾಗಬೇಕು. ಈ ನಿಟ್ಟಿನಲ್ಲಿ, ಪ್ರಸ್ತುತ ಕಾರ್ಯಾಗಾರವು ನಿಮ್ಮ ಶೈಕ್ಷಣಿಕ ಮತ್ತು ಸಂಶೋಧನಾ ಹಾದಿಗೆ ಅತ್ಯಗತ್ಯವಾದ ಬೌದ್ಧಿಕ ಅಡಿಪಾಯ ಹಾಕಿಕೊಡಲಿದೆ ಎಂದರು.

ಈ ವೇಳೆ ಬೆಂಗಳೂರಿನ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ ರಾಷ್ಟ್ರೀಯ ಏರೋಸ್ಪೇಸ್ ಪ್ರಯೋಗಾಲಯದ ಅಂತರಿಕ್ಷಾ ವಿಜ್ಞಾನ ಮತ್ತು ತಂತ್ರಜ್ಞಾನ ಮಾಹಿತಿ ಕೇಂದ್ರದ ಮುಖ್ಯಸ್ಥ ಡಾ.ಬಿ.ಎಸ್.ಶಿವರಾಮ, ಗ್ರಂಥಾಲಯ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಕಿರಣ ಸವಣೂರ, ಡಾ.ರಮೇಶ ಕುರಿ ಸೇರಿದಂತೆ ವಿವಿಧ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಸೇರಿದಂತೆ ಇತರರು ಇದ್ದರು.



ಸರ್ಕಾರಿ ನಿವೃತ್ತ ನೌಕರರ ಸಂಘದ ಸಭೆ

ಖಾನಾಪುರ: ಪಟ್ಟಣದ ಜ್ಞಾನೇಶ್ವರ ದೇವಾಲಯದಲ್ಲಿ ಶನಿವಾರ ಕರ್ನಾಟಕ ರಾಜ್ಯ ಸರ್ಕಾರ ನಿವೃತ್ತ ನೌಕರರ ಸಂಘ, ಖಾನಾಪುರ ತಾಲೂಕು ಘಟಕದ ಸಭೆ ಜರುಗಿತು. ಸಭೆ ಅಧ್ಯಕ್ಷತೆ ವಹಿಸಿದ್ದ ಸಂಘದ ಜಿಲ್ಲಾಧ್ಯಕ್ಷ ಎಸ್.ಜಿ ಸಿದ್ನಾಳ ಮಾತನಾಡಿ, ವೇತನ ಆಯೋಗದ ಶಿಫಾರಸ್ಸಿನಂತೆ ನಿವೃತ್ತ ನೌಕರರಿಗೆ ತುಟ್ಟಿಭತ್ಯೆ ಮತ್ತು ಆರ್ಥಿಕ ಲಾಭ ನೀಡುವುದಿಲ್ಲ ಎಂದು ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ಲೋಕಸಭೆಯಲ್ಲಿ ಮಂಡಿಸಿದ್ದಾರೆ. ಇದನ್ನು ಖಂಡಿಸಿ ಅಖಿಲ ಭಾರತ ಸರ್ಕಾರ ನಿವೃತ್ತ ನೌಕರರ ಒಕ್ಕೂಟದ ವತಿಯಿಂದ ಪ್ರಧಾನಿ ನರೇಂದ್ರ ಮೋದಿಗೆ ಮನವಿ ಸಲ್ಲಿಸಲಾಗಿದೆ ಎಂದರು.

ತುಟ್ಟಿಭತ್ಯೆ ಮತ್ತು ಆರ್ಥಿಕ ಲಾಭ ಪಡೆಯುವುದು ನಿವೃತ್ತ ನೌಕರರ ಹಕ್ಕು. ಇದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಎಲ್ಲ ನಿವೃತ್ತ ನೌಕರರಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ 70 75 ವರ್ಷದ ನಿವೃತ್ತ ನೌಕರರಿಗೆ ಶೇ.10 ರಿಂದ ಶೇ.15 ಹೆಚ್ಚಿನ ಪಿಂಚಣಿ ನೀಡುವಂತೆ ಸರ್ಕಾರದ ಗಮನ ಸೆಳೆಯಲಾಗಿದೆ. 70 ಹಾಗೂ 75 ವರ್ಷ ಮೀರಿದ ನಿವೃತ್ತ ನೌಕರರಿಗೆ ಆಯುಷ್ಮಾನ್ ವಂದನಾ



ಯೋಜನೆಯಡಿ ಸೌಲಭ್ಯ ಒದಗುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ನಮ್ಮ ಸೌಲಭ್ಯ ಪಡೆಯಲು ನಾವೆಲ್ಲರೂ ಒಗ್ಗಟ್ಟಾಗಿ ಹೋರಾಡಬೇಕು ಎಂದರು.

ಸಭೆಯಲ್ಲಿ ಸಂಘದ ತಾಲ್ಲೂಕಾಧ್ಯಕ್ಷ ಶಿವಾನಂದ ಕುಂದರಗಿ, ಸಂಜೀವ ಬಡಿಗೇರ, ಎಸ್.ಎಸ್. ಜಿಗಜಿನ್ನಿ, ಸಿ.ಎಸ್.ಪವಾರ, ಉಮಾಕಾಂತ ವಾಘಧರೆ, ಎಲ್.ಡಿ.ಪಾಟೀಲ, ಟಿ.ಎಂ.ದೇವಾಡಿಗ ಸೇರಿದಂತೆ ಸಂಘದ ಪದಾಧಿಕಾರಿಗಳು ಇದ್ದರು.

ವೀರಭದ್ರೇಶ್ವರ ಏತ ನೀರಾವರಿ ಕಾಮಗಾರಿ ಪೂರ್ಣಗೊಳಿಸಲು ಆಗ್ರಹ

ರಾಮದುರ್ಗ: ಕೃಷಿ ಮತ್ತು ರೈತರ ಬಗ್ಗೆ ಅತೀ ಹೆಚ್ಚು ಕಾಳಜಿ ಹೊಂದಿರುವ ಶಾಸಕ ಅಶೋಕ ಪಟ್ಟಣ ಅವರು ಈಗೀಗ ನಿರುತ್ಸಾಹ ತೋರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮೇ 25ರಂದು ಸಾಲಹಳ್ಳಿಯಲ್ಲಿ ಗುರ್ಲಾಪೂರ ಮಾದರಿಯಲ್ಲಿ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ರೈತ ಸಂಘದ ತಾಲೂಕಾಧ್ಯಕ್ಷ ಜಗದೀಶ ದೇವರಡ್ಡಿ ಹೇಳಿದರು.

ಶನಿವಾರ ಪ್ರೆಸ್‌ಕ್ಲಬ್‌ದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಶಾಸಕರು ಹಲವಾರು ವರ್ಷಗಳಿಂದ ನೆನಗುದಿಗೆ ಬಿದ್ದಿದ್ದ ವೀರಭದ್ರೇಶ್ವರ ಏತ ನೀರಾವರಿ ಆಸಕ್ತಿ ವಹಿಸಿ ಮಂಜೂರು ಮಾಡಿಸಿದ್ದಲ್ಲದೆ, ಹೊಸದಾಗಿ ಸಾಲಾಪೂರ ಏತ ನೀರಾವರಿಗೆ ಕೂಡಾ ಅನುದಾನ ಬಿಡುಗಡೆ ಮಾಡಿಸಿ ಮುಖ್ಯಮಂತ್ರಿಗಳು, ಮಂತ್ರಿಗಳನ್ನು ಕರೆತಂದು ಕಾಮಗಾರಿಗೆ ಚಾಲನೆ ನೀಡಿದ್ದಾರೆ. ಆದರೆ ಕಾಮಗಾರಿ ಗುತ್ತಿಗೆ ಪಡೆದ ಏಜೆನ್ಸಿಗಳು ಯಾವ ರೀತಿ ಕೆಲಸ ನಡೆಸಿವೆ ಎಂಬುದನ್ನು ಮರೆತಿರುವ ಶಾಸಕರನ್ನು ಎಚ್ಚಿಸಲು ಈ ಹೋರಾಟ ಅನಿವಾರ್ಯವಾಗಿದೆ ಎಂದರು.

ತಾಲೂಕಿನ ರೈತರ 50 ವರ್ಷದ ಬಹುದಿನ ಬೇಡಿಕೆ ಹಾಗೂ ನನ್ನ ಕನಸಿನ ಯೋಜನೆಗಳಾದ ವೀರಭದ್ರೇಶ್ವರ ಮತ್ತು ಬಸವೇಶ್ವರ ಏತ ನೀರಾವರಿ ಯೋಜನೆಗಳು ಪೂರ್ಣಗೊಳಿಸಲು ನಮ್ಮ ಸರ್ಕಾರ ಹಾಗೂ ನಾನು ಬದ್ಧವಾಗಿದ್ದೇನೆ ಎಂದು ವಿಧಾನ ಸಭೆಯ ಮುಖ್ಯ ಸಚೇತಕ ಅಶೋಕ ಪಟ್ಟಣ



ಪತ್ರಿಕಾ ಪ್ರಕಟಣೆ ಮೂಲಕ ಸ್ಪಷ್ಟಪಡಿಸಿದ್ದಾರೆ.

ಕೆಲವು ತಾಂತ್ರಿಕ ತೊಂದರೆಗಳಿಂದಾಗಿ ಯೋಜನೆಗಳು ನಿಂತು ಹೋಗಿವೆ. ವೀರಭದ್ರೇಶ್ವರ ಏತ ನೀರಾವರಿ ಯೋಜನೆಯ ಗುತ್ತಿಗೆದಾರರನ್ನು ಬದಲಾವಣೆ ಮಾಡಿ ಹೊಸದಾಗಿ ಟೆಂಡರ್ ಕರೆದು 2027ರ ಡಿಸೆಂಬರ್ ವೇಳೆಗೆ ನೀರು ಹರಿಸಲಾಗುವುದು. ಪ್ರತಿಶತ 80ರಷ್ಟು ಪೂರ್ಣಗೊಂಡ ಬಸವೇಶ್ವರ ಏತ ನೀರಾವರಿ ಯೋಜನೆಯನ್ನು 2027ರ ಮಾರ್ಚ್ ವೇಳೆಗೆ ಪೂರ್ಣಗೊಳಿಸುವುದಾಗಿ ತಿಳಿಸಿದ್ದಾರೆ.

ಸುರೇಶ ಪಾಟೀಲ, ವಿ.ಎಸ್.ಪಾಟೀಲ, ಈರನಗೌಡ ಪಾಟೀಲ, ಮಾರುತಿ ಕುಂಬಾರ, ಶಂಕರಗೌಡ ಪಾಟೀಲ ಸೇರಿದಂತೆ ಅನೇಕ ರೈತ ಮುಖಂಡರು ಪಾಲ್ಗೊಂಡಿದ್ದರು.

ಸ್ವಚ್ಛತೆ ಮರೀಚಿಕೆ; ಗ್ರಾಮಸ್ಥರಲ್ಲಿ ರೋಗಗಳು ಹರಡುವ ಭೀತಿ

ಹಲ್ಯಾಳ: ಗ್ರಾಮದ ಪ್ರತಿ ಓಣಿಯ ಚರಂಡಿಯಲ್ಲಿ ಕಸ ತುಂಬಿ ನೀರು ನಿಂತು ದುರ್ವಾಸನೆ ಬರುತ್ತಿದೆ. ಚರಂಡಿ ಸ್ವಚ್ಛಗೊಳದ್ದ ಕಾರಣ ಸೊಳ್ಳೆ ಉತ್ಪತ್ತಿಯಾಗಿದ್ದು, ಸೊಳ್ಳೆಗಳ ಕಾಟ ಜೊತೆಗೆ ರೋಗಳ ಬೀತಿ ಹೆಚ್ಚಾಗಿದೆ. ಇದ್ದರಿಂದ ಡೆಂಘೀ, ಮಲೇರಿಯಾ ಹೀಗೆ ಹತ್ತಾರು ಕಾಯಿಲೆ ಬಂದು ಜನರ ಸ್ಥಿತಿ ಚಿಂತಾಜನಕವಾಗಿದೆ. ಈ ಬಗ್ಗೆ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದ್ರೂ ಯಾವದೇ ಪ್ರಯೋಜನ ಇಲ್ಲ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಚರಂಡಿ ಸ್ವಚ್ಛತೆ ಹಾಗೂ ಸೊಳ್ಳೆ ನಿಯಂತ್ರಣಕ್ಕಾಗಿ ಗ್ರಾಪಂಗೆ ಮನವಿ ಮಾಡಿದ್ರೂ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದರು. 2 ವರ್ಷದ ಹಿಂದೆ ಒಮ್ಮೆ ಮಾತ್ರ ಸೊಳ್ಳೆ ನಿವಾರಕ ಔಷಧಿ ಸಿಂಪಡಿಸಿದ್ದಾರೆ. ಈ ಬಿರು ಬಿಸಲಿನ ತಾಪಕ್ಕೆ ಮನೆಯಲ್ಲಿ ಕುಳಿತುಕೊಳ್ಳಲು ಆಗುತ್ತಿಲ್ಲ ಹೊರಗಡೆ ಬಂದರೆ ಸೊಳ್ಳೆಗಳ ಕಾಟ ನೆಮ್ಮದಿ ಇಲ್ಲದಂತಾಗಿದೆ ಎಂದು ಸಾರ್ವಜನಿಕರು ಅಧಿಕಾರಿಗಳ ವಿರುದ್ಧ ಆರೋಪಿಸಿದರು.

ಗ್ರಾಮದಲ್ಲಿ ಸಾಕಷ್ಟು ಸಣ್ಣ ಪ್ರಮಾಣದ ಜಲ ಕುಂಭಗಳಿವೆ ಅವುಗಳನ್ನು ಒಮ್ಮೆಯೂ ಸ್ವಚ್ಛ ಗೊಳಿಸಿಲ್ಲ ಅದರಲ್ಲಿ ಕಪ್ಪೆಮಾಸ್‌ಗಟ್ಟಿ ಅನೇಕ ಕೀಟಗಳಿಂದ ತುಂಬಿದೆ. ಇದು ವೀರಕ್ತ ಮಠದ ಮುಂಬಾಗದಲ್ಲಿರೋ ಜಲಕುಂಭದ ಒಂದು ಉದಾಹರಣೆ ಮಾತ್ರ. ಜಲ ಕುಂಭವನ್ನು ಸ್ವಚ್ಛ ಗೊಳಿಸಿ ಎಂದು ಹಲವು ಬಾರಿ ಗ್ರಾಪಂ ಅಧಿಕಾರಿಗಳಿಗೆ ಮತ್ತು ಸದಸ್ಯರುಗಳಿಗೆ ಮನವಿ ಮಾಡಿದರು ಪ್ರಯೋಜನವಾಗದೆ ಬೇಸತ್ತ ನಿತಿನ್ ಮಠಪತಿ ಮತ್ತು ಗುಂಡು ಅಂಬಿ ಸ್ವತಃ ನಾವೇ ಜಲಕುಂಭ ಸ್ವಚ್ಛ ಗೊಳಿಸಿದ್ದೇವೆ ಗ್ರಾಮದಲ್ಲಿ ಈ ರೀತಿ ಹತ್ತಾರು ಜಲ ಕುಂಭಗಳಿವೆ ಎಂದರು.



ಎರಡು ಮೂರು ತಿಂಗಳಿಗೊಮ್ಮೆ ಸೊಳ್ಳೆ ಔಷದಿ ಸಿಂಪಡಿಸಬೇಕು. ಮತ್ತು ಜಲಕುಂಭಗಳನ್ನು ಸ್ವಚ್ಛಗೊಳಿಸಬೇಕು. ಒಂದು ವರ್ಷದಿಂದ ಯಾವುದೇ ಅನುದಾನ ಇಲ್ಲ ತೆರಿಗೆ ಹಣದಲ್ಲಿ ಇವುಗಳನ್ನು ಮಾಡಿಸಲು ಹೇಳುತ್ತೇನೆ.
■ ಶಿವಾನಂದ ಕಲ್ಲಾಪುರ, ಅಥಣಿ ಕಾರ್ಯ ನಿರ್ವಾಹಕ ಅಧಿಕಾರಿ

ಸಣ್ಣ ಮಕ್ಕಳಿಗೆ ಸಾಂಕ್ರಾಮಿಕ ರೋಗ ಬರುತ್ತಿವೆ. ಸೊಳ್ಳೆ ನಾಶಕ ಔಷದಿ 3ವರ್ಷದ ಹಿಂದೆ ಒಮ್ಮೆ ಮಾತ್ರ ಸಿಂಪಡನೆ ಮಾಡಿದ್ದಾರೆ. ಮಕ್ಕಳು ಅಭ್ಯಾಸ ಮಾಡಲು ಆಗುತ್ತಿಲ್ಲ ಕೂಡಲೇ ಸೊಳ್ಳೆ ನಾಶಕ ಔಷಧಿ ಸಿಂಪಡಿಸಿ.
■ ಶ್ರೀಶೈಲ ಹಿರೇಕುರಬರ, ಗ್ರಾಮಸ್ಥ

ಗ್ರಾಮದಲ್ಲಿ ಸ್ವಚ್ಛತೆ ಬಗ್ಗೆ ಗಮನ ಹರಿಸಲು ಹಲವು ಬಾರಿ ಗ್ರಾಪಂ ಅಧಿಕಾರಿಗಳಿಗೆ ಮನವಿ ಮಾಡಿದ್ದೇವೆ. ಆದರೇ, ಯಾವುದೇ ಪ್ರಯೋಜವಾಗಿಲ್ಲ. ಹಾಗೇ ಜಲ ಕುಂಭ ಕಟ್ಟಿಸಿದ್ದಾಗಿಂದ ಒಮ್ಮೆಯೂ ಸ್ವಚ್ಛ ಗೊಳಿಸಿಲ್ಲ. ಕೂಡಲೇ ಸ್ವಚ್ಛತೆ ಕಾರ್ಯ ಮಾಡದಿದ್ದರೆ ಗ್ರಾಪಂ ಮುಂದೆ ಪ್ರತಿಭಟನೆ ಮಾಡುತ್ತೇವೆ.
■ ರಾಜೇಶ್ ಶಿಂಗೆ, ಸಾಮಾಜಿಕ ಹೋರಾಟಗಾರ

ಜೀರ್ಣೋದ್ಧಾರ ಕಾಮಗಾರಿಗೆ ಚಾಲನೆ



ಸವದತಿ: ನಗರದಶಿವಶರಣ ಹಡಪದ ಅಪ್ಪಣ್ಣನವರ ದೇವಸ್ಥಾನದ ಆವರಣದಲ್ಲಿ ಶಾಸಕ ವಿಶ್ವಾಸ ವೈದ್ಯ 10 ಲಕ್ಷ ರೂ. ವೆಚ್ಚದಲ್ಲಿ ಜೀರ್ಣೋದ್ಧಾರ ಕಾಮಗಾರಿಗೆ ಚಾಲನೆ ನೀಡಿದರು.

ಈ ವೇಳೆ ಹಡಪದ ಅಪ್ಪಣ್ಣನವರ ಸಮಾಜದ ವತಿಯಿಂದ ಶಾಸಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಗಣ್ಯರು ಚಂದ್ರಣ್ಣ ಶ್ಯಾಮರಾಯನವರ, ಶಿವಾನಂದ ಪಟ್ಟಣಶೆಟ್ಟಿ, ಪ್ರವೀಣ ರಾಮಪ್ಪನವರ, ಸಮಾಜದಮುಖಂಡರಾದ ಮಲ್ಲಿಕಾರ್ಜುನ ಹಡಪದ, ಮುತ್ತು ಹಡಪದ, ಚಂದ್ರಶೇಖರ ಹಡಪದ, ಮಂಜುನಾಥ ಹಡಪದ, ವಿನೋದ ಹಡಪದ, ಫಕೀರಪ್ಪ ಬಿದರಗಡ್ಡಿ, ರುದ್ರಪ್ಪ ಹುಬ್ಬಳ್ಳಿ, ಮೌಳೇಶಪ್ಪ ಹಡಪದ, ಸಮಾಜದ ಮುಖಂಡರು ಇದ್ದರು.

ಡಾ.ನಜ್ಜಾ ಪೀರ್ಜಾದೆ ಅವರ ಪುಸ್ತಕ ಬಿಡುಗಡೆ

ಬೆಳಗಾವಿ: ವಿಭಾಗದ ಪ್ರಾದೇಶಿಕ ಆಯುಕ್ತೆ ಕೆ.ಎಂ. ಜಾನಕಿ ಅವರು ಬೆಳಗಾವಿಯಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ, ಡಾ.ನಜ್ಜಾ ಪೀರ್ಜಾದೆ ಅವರು ರಚಿಸಿರುವ ಫ್ರಾಮ್ ಲ್ಯಾಂಡ್ ಟು ಲೇಔಟ್ ಪುಸ್ತಕ ಬಿಡುಗಡೆ ಗೊಳಿಸಿದರು.

ಲೇಖಕ ಡಾ.ನಜ್ಜಾ ಪೀರ್ಜಾದೆ ಬೆಳಗಾವಿ ವಿಭಾಗದ ಮಾಜಿ ಹೆಚ್ಚುವರಿ ಪ್ರಾದೇಶಿಕ ಆಯುಕ್ತರು ಹಾಗೂ ಭೂ ದಾಖಲೆಗಳ ಪ್ರಾದೇಶಿಕ ಜಂಟಿ ನಿರ್ದೇಶಕರಾಗಿ 28 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ ಅನುಭವಿ ಆಡಳಿತ ಅಧಿಕಾರಿಯಾಗಿದ್ದಾರೆ.

ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಜಾನಕಿ ಅವರು, ಈ ಕೃತಿ ಭೂ ದಾಖಲೆಗಳು, ಸರ್ವೆ ಪ್ರಕ್ರಿಯೆ ಹಾಗೂ ಕೃಷಿ ಭೂಮಿಯಿಂದ ಅನುಮೋದಿತ ಲೇಔಟ್ ವರೆಗಿನ ಕಾನೂನು ಮತ್ತು ಆಡಳಿತಾತ್ಮಕ ಪ್ರಕ್ರಿಯೆ ಇಲಾಖಾ ಅಧಿಕಾರಿಗಳು, ಆಸ್ತಿ ಮಾಲೀಕರು ಮತ್ತು ಸಾರ್ವಜನಿಕರು ಸುಲಭವಾಗಿ ಅರ್ಥಮಾಡಿಕೊಳ್ಳಲು ಅತ್ಯಂತ ಉಪಯುಕ್ತ ಮತ್ತು ಸಕಾಲಿಕ ಮಾರ್ಗದರ್ಶಕ ಗ್ರಂಥವಾಗಿದೆ ಎಂದು ಶ್ಲಾಘಿಸಿದರು.

ಪ್ರಾದೇಶಿಕ ಜಂಟಿ ನಿರ್ದೇಶಕ ಉಮೇಶ್ ಮಾತನಾಡಿ, ಕ್ಷೇತ್ರ ಅಧಿಕಾರಿಗಳು, ವಕೀಲರು, ಡೆವಲಪರ್‌ಗಳು ಹಾಗೂ ಸಾಮಾನ್ಯ ನಾಗರಿಕರಿಗೆ ಈ ಪುಸ್ತಕವು ಕರ್ನಾಟಕದ ಭೂ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ಪ್ರಾಯೋಗಿಕ ಮಾಹಿತಿ ಸಮಗ್ರ ಆಕರ ಗ್ರಂಥವಾಗಲಿದೆ ಎಂದರು.



ಈ ಕೃತಿ ರಚಿಸಿರುವ ಡಾ.ನಜ್ಜಾ ಪೀರ್ಜಾದೆ ಅವರನ್ನು ಅಭಿನಂದಿಸಿದರು.

ಬೆಳಗಾವಿ ಅಮನ್ ಅರ್ಶ್ ಪಬ್ಲಿಕೇಷನ್ ಪ್ರಕಟಿಸಿರುವ ಈ ಪುಸ್ತಕವು ಕರ್ನಾಟಕದ ಭೂ ಆಡಳಿತ ವ್ಯವಸ್ಥೆಯ ಸಮಗ್ರ ಚಿತ್ರಣ ನೀಡುತ್ತದೆ. ಟಿಪ್ಪಣ್, ಎಫ್‌ಎಂಬಿ, ಆರ್‌ಟಿಸಿ, ಪೋಡಿ, ಭೂ ಪರಿವರ್ತನೆ, ಲೇಔಟ್ ಮಾನದಂಡಗಳು, ಯೋಜನಾ ಅನುಮೋದನೆ ಮತ್ತು ರೇರಾ ಅನುಸರಣೆ ಇವೆಲ್ಲದರ ಜೊತೆಗೆ, ಆಸ್ತಿ ವಹಿವಾಟು, ವಿವಾದ ಪರಿಹಾರ ಹಾಗೂ ಭೂಮಿ, ಮೋಜಿನಿ ವಿ3, ದಿಶಾಂಕ್, ಇ-ಸ್ವತ್ತು, ಇ-ಆಸ್ತಿ ಮತ್ತು ಕಾವೇರಿ 2.0 ಡಿಜಿಟಲ್ ಪೋರ್ಟಲ್‌ಗಳ ಕುರಿತು ಪ್ರಾಯೋಗಿಕ ಮಾರ್ಗದರ್ಶನವನ್ನು ಈ ಕೃತಿ ಒಳಗೊಂಡಿದೆ.

ಸಹಾಯಕ ನಿರ್ದೇಶಕರು, ತಹಶೀಲ್ದಾರರು, ಕಂದಾಯ ಅಧಿಕಾರಿಗಳು, ಸರ್ವೆಗಳು ಸೇರಿದಂತೆ ಕಂದಾಯ ಮತ್ತು ಸರ್ವೆ, ಭೂ ದಾಖಲೆಗಳ ಇಲಾಖೆ ಹಲವಾರು ಅಧಿಕಾರಿಗಳು ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು

ಕಿರುಸುದ್ದಿ

ಇಂದು ಸತ್ಸಂಗ ಕಾರ್ಯಕ್ರಮ

ಜಮಖಂಡಿ: ತಾಲೂಕಿನ ಹುಲ್ಯಾಳ ಗ್ರಾಮದ ಗುರುದೇವಾಶ್ರಮದ ಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಮೇ 24ರಂದು ಸಂಜೆ 6 ಗಂಟೆಗೆ ತಿಂಗಳ ನಾಲ್ಕನೇ ಭಾನುವಾರದ ಮಾಸಿಕ ಕಾರ್ಯಕ್ರಮ ಗುರುದೇವ ಸತ್ಸಂಗ ಹಮ್ಮಿಕೊಳ್ಳಲಾಗಿದೆ ಎಂದು ಗುರುದೇವಾಶ್ರಮದ ಹರ್ಷಾನಂದ ಶ್ರೀಗಳು ತಿಳಿಸಿದ್ದಾರೆ. ಯಂಕಂಚಿಯ ಗುರುದೇವಾಶ್ರಮದ ಗುರುಪಾದ ಶ್ರೀಗಳು, ಷಟ್ ಸ್ಥಲ: ಭಕ್ತ ಮತ್ತು ಭಕ್ತಿ ವಿಷಯ ಕುರಿತು ಅನುಭಾವ ಹಂಚಿಕೊಳ್ಳಲಿದ್ದಾರೆ. ಗುರುದೇವ ಸಂಗೀತ ಬಳಗದಿಂದ ಸಂಗೀತ ಸೇವೆ ನಡೆಯಲಿದೆ. ಬಬಲೇಶ್ವರ ತಾಲೂಕಿನ ಕುಮಠೆ ಗ್ರಾಮದ ಶೇಖರ ಸಿದ್ರಾಮಪ್ಪ ತೇಲಿ ಮಹಾಪ್ರಸಾದ ಸೇವೆ ನೆರವೇರಿಸುವರು. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಿಳಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಹುನಗುಂದ: ತಾಲೂಕಿನ ಕಮತಗಿ ಪಟ್ಟಣದ 33/11 ಕೆವಿ ಉಪಕೇಂದ್ರದ ತುರ್ತು ನಿರ್ವಹಣಾ ಕೆಲಸ ನಿರ್ವಹಿಸುತ್ತಿರುವುದರಿಂದ ಮೇ 24ರಂದು ಭಾನುವಾರ ಬೆಳಗ್ಗೆ 11 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಕಮತಗಿ ಪಟ್ಟಣ ಪಂಚಾಯತಿ ವ್ಯಾಪ್ತಿಯ ಹಾಗೂ ಕಮತಗಿ 33/11 ಕೆವಿ ಉಪ-ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಎಫ್-1 ಸುರಳಿಕಲ್ಲ ಐಪಿ, ಎಫ್-2 ಹಿರೇಮಾಗಿ ಐಪಿ, ಎಫ್-3 ಕಮತಗಿ ಐಪಿ, ಎಫ್-4 ಅಂಬಲಿಕೊಪ್ಪ ಎನ್‌ಜೆವಾಯ್, ಎಫ್-5 ಮೂಗನೂರ ವಾಟರ್‌ಸಪ್ಲಾಯ್, ಎಫ್-6 ಕಮತಗಿ ಎಫ್-7 ರಾಮತಾಳ ಎನ್‌ಜೆವಾಯ್ ಹಾಗೂ ಎಫ್-8 ಬೇನಾಳ ಐಪಿ ಫೀಡರಗೆ ಬರುವಂತಹ ಎಲ್ಲಾ ಗ್ರಾಮಗಳಿಗೆ ಹಾಗೂ ಸುತ್ತಮುತ್ತಲಿನ ಆಯ್.ಪಿ ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಅಧ್ಯಕ್ಷರಾಗಿ ಜುಮ್ಮನ್ನವರ ಆಯ್ಕೆ




ಬಾದಾಮಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ 2026-31ರ ಐದು ವರ್ಷಗಳ ಅವಧಿಗೆ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದು, ಅಧ್ಯಕ್ಷರಾಗಿ ಎಂ.ಸಿ.ಜುಮ್ಮನ್ನವರ ಹಾಗೂ ಉಪಾಧ್ಯಕ್ಷರಾಗಿ ಶಿವು ಕಳಕಾಪೂರ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ವಿನಾಯಕ ವೈಕುಂಟೆ, ಜೆ.ಎಂ.ಬಾದಾಮಿ, ಖಜಾಂಚಿಯಾಗಿ ಚಂದ್ರಶೇಖರ ಆರಸಿಕೇರಿ, ಸಹಕಾರ್ಯದರ್ಶಿಯಾಗಿ ಎಚ್.ಎಚ್.ಕೋಣಿ, ಎಂ.ಬಿ.ಹೂಗಾರ, ಸಂಘಟನಾ ಕಾರ್ಯದರ್ಶಿಯಾಗಿ ಬಿ.ವೈ.ಗಚ್ಚನ್ನವರ, ಅಶ್ವಿನಿ ಅಂಗಡಿ, ಜಿಲ್ಲಾ ಮಹಿಳಾ ಉಪಾಧ್ಯಕ್ಷೆಯಾಗಿ ಪಿ.ಆರ್.ಚಿಕ್ಕನ್ನವರ, ಜಿಲ್ಲಾ ಸಂಘಟಕಾ ಕಾರ್ಯದರ್ಶಿಯನ್ನಾಗಿ ವಿ.ಎಸ್.ಶೆಟ್ಟರ ಇವರನ್ನು ನಾಮನಿರ್ದೇಶನ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಡಂಬೂರ ಹಾಗೂ ಸಹಾಯಕ ಚುನಾವಣಾಧಿಕಾರಿ ಪಿ.ಎಸ್.ತಿರಕಪ್ಪನವರ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂಧನ ಬೆಲೆ ಏರಿಕೆಗೆ ಮಹಾಂತೇಶ ಹಟ್ಟಿ ಆಕ್ರೋಶ

ಬಾದಾಮಿ: ಕೇವಲ ಹತ್ತು ದಿನದಲ್ಲಿ ಮೂರು ಬಾರಿ ಪೆಟ್ರೋಲ್ ಡೀಸೆಲ್ ದರ ಏರಿಸಿದ್ದ ಕೇಂದ್ರ ಸರ್ಕಾರದ ವಿರುದ್ಧ ಕೆಪಿಸಿಸಿ ವಕ್ತಾರ ಮಹಾಂತೇಶ ಲಕ್ಷ್ಮಣ ಹಟ್ಟಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ಕುರಿತು ಪ್ರತಿಕ್ರಿಯೆ ನೀಡಿರುವ ಅವರು ಇಂಧನ ಬೆಲೆ ಏರಿಕೆ ಸಾಮಾನ್ಯ ಮಾಧ್ಯಮ ವರ್ಗದವರ ಜೇಬಿಗೆ ಕತ್ತರಿ ಹಾಕುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ. ಜನಸಾಮಾನ್ಯರನ್ನ ಕೊಲ್ಲುತ್ತಿದೆ ಸಬ್ ಕಾ ಸಾಥ್ ಸಬಕಾ ವಿಕಾಸ್ ಅಂದರೆ ಚೌಕ ವಿಕಾಸಂದ್ರಿ ಎಲ್ಲಿದೆ ವಿಕಾಸ ಇದಕ್ಕೆ ಉತ್ತರ ಕೊಡಿ ಮೋದಿಜಿ ಅವರೇ ಸಿಲೆಂಡರ್ ಸಿಗದೇ ಮಹಿಳೆಯರು ಪರದಾಡುತ್ತಿದ್ದಾರೆ. ಗ್ಯಾಸ್ ಪೆಟ್ರೋಲ್ ಡೀಸೆಲ್ ಉಪಯೋಗಿಸುವ ಸಾಮಾನ್ಯ ಜನರು ನಿಮಗೆ ಶಾಪ ಹಾಕುತ್ತಿದ್ದಾರೆ ಅವರು ಕಷ್ಟಪಡುತ್ತಿರುವ ಜೀವನ ನಿಮಗೆ ಅರ್ಥವಾಗುವುದಿಲ್ಲವೇ ಜನಸಾಮಾನ್ಯರ ಬದುಕು ಅತ್ಯಂತ ದುಸ್ಥಿತಿಗೆ ಬಂದಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಮಹಾಂತೇಶ ಹಟ್ಟಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಿಧನಸುದ್ದಿ

ವೀರಭದ್ರಪ್ಪ ಸಮಗಂಡಿ



ಗುಳೇದಗುಡ್ಡ: ಪಟ್ಟಣದ ಕುರಿಹಿನಶೆಟ್ಟಿ ಸಮಾಜದ ವೀರಭದ್ರಪ್ಪ ನಾಗಪ್ಪ ಸಮಗಂಡಿ (42) ಶುಕ್ರವಾರ ನಿಧನರಾದರು. ಮೃತರಿಗೆ ತಾಯಿ, ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರಬಂಧು ಬಳಗ ಇದ್ದಾರೆ.



ಬಾದಾಮಿ: ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಶನಿವಾರ ಡಿ.ದೇವರಾಜು ಅರಸು ಅಭಿವೃದ್ಧಿ ನಿಗಮದ ವತಿಯಿಂದ ತಾಲೂಕಿನ 22 ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ಶಾಸಕ ಭೀಮಸೇನ ಚಿಮ್ಮನಕಟ್ಟಿ ವಿತರಣೆ ಮಾಡಿದರು.

ನಾಳೆಯಿಂದ ಪೌರತ್ವ ತರಬೇತಿ ಶಿಬಿರ

ಗುಳೇದಗುಡ್ಡ: ಪಟ್ಟಣದ ಗುರುಸಿದ್ದೇಶ್ವರ ಮಹಿಳಾ ಶಿಕ್ಷಣ(ಬಿ.ಎಡ್) ಮಹಾವಿದ್ಯಾಲಯದ ಆಶ್ರಯದಲ್ಲಿ 2025-26ನೇ ಸಾಲಿನ ಪೌರತ್ವ ತರಬೇತಿ ಶಿಬಿರವನ್ನು ಮೇ 25ರಿಂದ 27ರ ವರೆಗೆ ತಾಲೂಕಿನ ಸಬ್ಬಲಹುಣಸಿ ಗ್ರಾಮದಲ್ಲಿ ನಡೆಯಲಿದೆ ಎಂದು ಪ್ರಾಚಾರ್ಯ ಡಾ.ಎಚ್.ಎಸ್.ಘಂಟಿ ತಿಳಿಸಿದ್ದಾರೆ. ಸ್ಥಳೀಯ ಗುರುಸಿದ್ದೇಶ್ವರ ಬೃಹನ್ಮಠದ ಗುರುಸಿದ್ಧ ಪಟ್ಟದಾರ್ಯ ಶ್ರೀಗಳು ಹಾಗೂ ಬಸವರಾಜ ಪಟ್ಟದಾರ್ಯ ಶ್ರೀಗಳು ಕಾರ್ಯಕ್ರಮದ ಸಾನಿಧ್ಯ ಸಂಸ್ಥೆಯ ಚೇರ್ಮನ್ ರಾಜು ಜವಳಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಗ್ರಾಪಂ ಸದಸ್ಯ ಕರಿಯಪ್ಪನರಟ್ಟಿ, ರೇಣವ್ವ ನಡಶೇಸಿ, ಗ್ರಾಪಂ ಮಾಜಿ ಅಧ್ಯಕ್ಷ ರಾಮಪ್ಪ ವಾಲಿಕಾರ ಹಾಗೂ ಸಂಸ್ಥೆಯ ನಿರ್ದೇಶಕ ಮಂಡಳಿಯವರು ಉಪಸ್ಥಿತರಿರುವರು. ಮೇ 25ರಂದು ಸಂಜೆ 5 ಗಂಟೆಗೆ ಪ್ರಾಧ್ಯಾಪಕ ಪ್ರೊ.ಸಣ್ಣವೀರಣ್ಣ ದೊಡ್ಡಮನಿ ಪ್ರಜಾಪ್ರಭುತ್ವದ ಆಶಯ ಮತ್ತು ಸಂವಿಧಾನದ ಕುರಿತು ವಿಶೇಷ ಉಪನ್ಯಾಸ ನೀಡುವರು. ಪ್ರಾಚಾರ್ಯ ಎಚ್.ಎಸ್ ಘಂಟಿ ಅಧ್ಯಕ್ಷತೆ ವಹಿಸುವರು. ಮೇ 26ರಂದು ಕಾನೂನಿನ ಅರಿವು ಕುರಿತು ಸ್ಥಳೀಯ ಸಿದ್ದಣ್ಣ ಯಡಹಳ್ಳಿ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಆಪ್ತ ಸಮಾಲೋಚಕಿ ಜ್ಯೋತಿ ಮೆಣಸಿನಕಾಯಿ ಅವರು ಗ್ರಾಮೀಣ ಮಹಿಳೆಯರ ಆರೋಗ್ಯದ ಕುರಿತು ಮಾತನಾಡಲಿದ್ದಾರೆ. ಪ್ರಾಚಾರ್ಯ ಎಚ್.ಎಸ್.ಘಂಟಿ ಅಧ್ಯಕ್ಷತೆ ವಹಿಸುವರು. ಮೇ 27ರಂದು ಬೆಳಗ್ಗೆ 11 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಸಂಸ್ಥೆಯ ನಿರ್ದೇಶಕರು, ಹಿರಿಯರು ಭಾಗವಹಿಸಲಿದ್ದಾರೆ.



ಬಾದಾಮಿ: ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು ಶನಿವಾರ ಸರ್ಕಲ್ ಪೊಲೀಸ್ ಇನ್ಸಪೆಕ್ಟರ್(ಸಿಪಿಐ) ಅವರಿಗೆ ನೂತನ ವಾಹನವನ್ನು ಸಿಪಿಐ ಕರೆಪ್ಪ ಬನ್ನೆ ಅವರಿಗೆ ಹಸ್ತಾಂತರಿಸಿದರು. ಪುರಸಭೆ ಮಾಜಿ ಸದಸ್ಯರು, ಪೊಲೀಸ್ ಸಿಬ್ಬಂದಿ, ಮುಖಂಡರು ಉಪಸ್ಥಿತರಿದ್ದರು.

ಸಂತ್ರಸ್ತರ ಪುನರ್ ವಸತಿಗೆ ಆದ್ಯತೆ ನೀಡಿ

ಜಮಖಂಡಿ: ಕೇಂದ್ರದ 2013ರ ಭೂಸ್ವಾಧೀನ ಕಾಯಿದೆ ಪ್ರಕಾರ ಕೃಷ್ಣಾ ಮೇಲ್ದಂಡೆ ಯೋಜನೆಗೆ ಬಾಧಿತರಾಗಿರುವ ಸಂತ್ರಸ್ತರಿಗೆ ಪುನರ್ ವಸತಿಗೆ ಪ್ರಥಮ ಆದ್ಯತೆ ನೀಡಿ ನಂತರದಲ್ಲಿ ಭೂಸ್ವಾಧೀನ ಮಾಡಿಕೊಳ್ಳಬೇಕು. ಆದರೆ ರಾಜ್ಯ ಸರಕಾರವು ಆ ಆದೇಶ ಪಾಲಿಸುತ್ತಿಲ್ಲ ಎಂದು ರೈತ ಸಾಂತ್ವನ ಕೇಂದ್ರದ ಅಧ್ಯಕ್ಷ ಸಿ.ಆರ್.ಸುತಾರ ಹೇಳಿದರು.

ನಗರದ ಕಾನಿಪ ಸಂಘದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರಕಾರವು ರಾಜಕೀಯ ಮುಖಂಡರ ಆಣತಿಯಂತೆ ಭೂಸ್ವಾಧೀನ ಪ್ರಕ್ರೀಯೆಯನ್ನು ಮಾಡುತ್ತಿದೆ. ಇದರಿಂದ ಬಡ ರೈತರ ಹಿತ ಕಾಪಾಡುವಲ್ಲಿ ಸರಕಾರವು ಎಡವುತ್ತಿದೆ. ಅಧಿಕಾರಿಗಳು ಸ್ಥಳಕ್ಕೆ ಹೋಗಿ ಸರ್ವೆ ಮಾಡಿ ಯಾರು ವಂಚಿತರಾಗದಂತೆ ನಿವೇಶನ ಹಾಗೂ ಪರಿಹಾರ ನೀಡಬೇಕು ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗೆ ಉನ್ನತಮಟ್ಟದ ಅಧಿಕಾರಿ ನೇಮಕ ಮಾಡಬೇಕು ಎಂದರು.



ರೈತ ಸಾಂತ್ವಾನ ಕೇಂದ್ರದಿಂದ 26 ಗ್ರಾಮಗಳ ಮುಖಂಡರು ಸೇರಿ 2022 ರಲ್ಲಿ ಅಂದಿನ ನೀರಾವರಿ ಸಚಿವರಿಗೆ, ಈ ಭಾಗದ ಸಚಿವರಿಗೆ ನೀರಾವರಿ ಜಮೀನಿಗೆ 40 ಲಕ್ಷ, ಒಣ ಭೂಮಿಗೆ 30 ಲಕ್ಷ ನೀಡಲು ಒತ್ತಡ ಹಾಕಲಾಗಿತ್ತು. ಆದರೆ ಕೆಲ ರಾಜಕೀಯ ಮುಖಂಡರು ತಾವು ಮಾಡಿಸಿರುವಂತೆ ಬಿಂಬಿಸಿಕೊಳ್ಳಬಾರು, ರೈತರು ರಾಜಕಾರಣಿಗಳ ಮಾತು ಕೇಳಿ ಹಾಳಾಗಬಾರದು ಇಲಾಖೆಯ ಬೆನ್ನು ಹತ್ತಿ ತಮ್ಮ ಕೆಲಸ ಮಾಡಿಕೊಳ್ಳಬೇಕು ಎಂದರು.

ರೈತ ಮುಖಂಡರಾದ ಧರೆಪ್ಪ ದಾನಗೌಡ, ಶ್ರೀಶೈಲ ಭೂಮಾರ, ಶ್ರೀಶೈಲ ದೇಸಾಯಿ, ಗಿರೀಶ ಬಳೋಲ, ಯಾಕೂಬ ನದಾಫ್, ವಕೀಲ ಮಂಜು ಧನಗರ, ಸಿದ್ದು ಬನಜನವರ ಇದ್ದರು.

ಸಮಾಜ ಸಂಘಟನೆ ಶ್ರೇಯೋಭಿವೃದ್ಧಿಗೆ ಸದಸ್ಯತ್ವ ಮಹತ್ವಕಾರಿ: ಲೋಣಿ

ಬಸವನಬಾಗೇವಾಡಿ: ಸಮಾಜ ಸಂಘಟನೆ ಶ್ರೇಯೋಭಿವೃದ್ಧಿಗೆ ಸದಸ್ಯತ್ವವೂ ಕೂಡಾ ಮಹತ್ವಕಾರಿಯಾಗಿದೆ ಎಂದು ಅಖಿಲ ಕರ್ನಾಟಕ ಹಡಪದ ಅಪ್ಪಣ್ಣ ಸೇವಾ ಸಮಿತಿಯ ವಿಜಯಪುರ ಜಿಲ್ಲೆಯ ರಾಜ್ಯ ಸಮಿತಿ ಸದಸ್ಯ ರಮೇಶ ಲೋಣಿ ಹೇಳಿದರು.

ಪಟ್ಟಣದ ಗಣಪತಿ ವೃತ್ತದ ಸಮೀಪದ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಶುಕ್ರವಾರ ಸಂಜೆ ಅಖಿಲ ಕರ್ನಾಟಕ ಹಡಪದ ಅಪ್ಪಣ್ಣ ಸೇವಾ ಸಮಿತಿಯ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಜಾಪ್ರಭುತ್ವದ ತಳಹದಿಯಲ್ಲಿ ಒಂದು ರಾಷ್ಟ್ರ ಒಂದು ದೇಶ ಸದೃಢವಾಗಿರಬೇಕಾದರೆ ಅದಕ್ಕೆ ಅಧ್ಯಕ್ಷ ಪದಾಧಿಕಾರಿಗಳು, ಸದಸ್ಯರ ಬಲಬೇಕು ಆದಾಗ ಮಾತ್ರ ದೇಶ ಸದೃಢವಾಗಿರಲು ಸಾಧ್ಯ ಈ ಹಿನ್ನೆಲೆಯಲ್ಲಿ ಒಂದು ಸಣ್ಣ ಸಮಾಜ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಸದೃಢಗೊಳ್ಳಲು ಸದಸ್ಯರ ಬಲ ಅತೀ ಮುಖ್ಯವಾಗಿದೆ, ಈ ಹಿನ್ನೆಲೆಯಲ್ಲಿ ರಾಜ್ಯದ ಪ್ರತಿಯೊಂದು ಜಿಲ್ಲೆ, ತಾಲೂಕು, ಗ್ರಾಮಗಳಲ್ಲಿ ಹಡಪದ ಸಮಾಜ ಭಾಂದವರು ಪ್ರತಿಯೊಬ್ಬರು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವವನ್ನು ಪಡೆದುಕೊಂಡು ರಾಜ್ಯ ಸಂಘಟನೆಯ ಕೈಬಲ ಪಡಿಸಬೇಕೆಂದು ಹೇಳಿದರು.

ಅಶೋಕ ನಾವಿ ಉತ್ನಾಳ, ಮಲ್ಲೇಶಿ ನಾವಿ ಹಡಲಸಂಗ, ಸಂಜು ಶಿವಣಗಿ, ವಿಠ್ಠಲ ಹಡಪದ, ತಾಲೂಕು ಅಧ್ಯಕ್ಷ ಮಹಾಂತೇಶ ಹಡಪದ, ವೀರಭದ್ರಪ್ಪ ನಾಗೂರ, ಅಶೋಕ ಬಾಗೇವಾಡಿ, ಹುಚ್ಚಪ್ಪ ಹಡಪದ, ಸುಭಾಸ ಹಡಪದ, ಪ್ರಲ್ಹಾದ ಹಡಪದ, ವಕೀಲರಾದ ಚನ್ನು ಹಡಪದ, ಶಿವಪ್ಪ ತುಂಬಗಿ, ಈರಣ್ಣ ನಾಗೂರ, ಮಂಜು ಹಡಪದ, ಕಿರಣ ನಾಗೂರ, ರಾಘವೇಂದ್ರ ಹಡಪದ, ನಾಗೇಶ ನಾಗೂರ ಇದ್ದರು.



ಅಕ್ರಮ ಪಡಿತರ, ಬೈಕ್ ವಶ

ಬೀಳಗಿ: ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿ ಕಾಳ ಸಂತೆಯಲ್ಲಿ ಮಾರಾಟಕ್ಕೆ ಮುಂದಾದ ಗುಂಪಿನ ಮೇಲೆ ತಹಶೀಲ್ದಾರ್ ವಿನೋದ ಹತ್ತಳ್ಳಿ ನೇತೃತ್ವದ ತಂಡ ದಾಳಿ ನಡೆಸಿ 926 ಕೆ.ಜಿ. ತೂಕದ 21,483 ರೂ. ಮೌಲ್ಯದ ಅಕ್ಕಿ, 3 ಆರೋಪಿಗಳು ಹಾಗೂ 3 ಬೈಕ್ ವಶ ಪಡೆದುಕೊಂಡಿದ್ದಾರೆ.

ಬೀಳಗಿ ತಹಶೀಲ್ದಾರ್ ವಿನೋದ ಹತ್ತಳ್ಳಿ ನೇತೃತ್ವದಲ್ಲಿ ಆಹಾರ ಇಲಾಖೆ ಮತ್ತು ಪೊಲೀಸ್ ಇಲಾಖೆ ಜಂಟಿಯಾಗಿ ದಾಳಿ ನಡೆಸಿದಾಗ ಕೊರ್ತಿ ಪುನರ್ವಸತಿ ಕೇಂದ್ರದ ದುರ್ಗಾದೇವಿ ಸಮುದಾಯ ಭವನದ ಎದುರು ಪ್ಲಾಸ್ಟಿಕ್ ಕವರ್‌ನಲ್ಲಿ ಅಕ್ಕಿ ಮೂಟೆಗಳು ಪತ್ತೆಯಾಗಿದ್ದು, ಬೀಳಗಿ ಪೊಲೀಸ್ ಠಾಣೆಯಲ್ಲಿ ಏಳು ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

ಆಹಾರ ನಿರೀಕ್ಷಕರಾದ ಶಶಿಧರ ಭಜಂತ್ರಿ, ಎ.ಎಲ್.ಸನದಿ, ಕಂದಾಯ ನಿರೀಕ್ಷಕ ಮಂಜುನಾಥ ಧರಿಗೊಂಡ, ಗ್ರಾಮ ಆಡಳಿತಾಧಿಕಾರಿ ಎಸ್.ವಿ.ಶಿರೋಳ, ಎಎಸ್‌ಐ ಎನ್.ಆರ್.ಪಟೇಲ, ಹವಾಲ್ದಾರ ಲಕ್ಷ್ಮಣ ಬಾಳಾಗೊಳ ಇದ್ದರು.



ಸರ್ಕಾರ ಬಡವರಿಗಾಗಿ ವಿತರಿಸುವ ಅನ್ನಭಾಗ್ಯ ಯೋಜನೆ ಪಡಿತರವನ್ನು ಕುಟುಂಬಕ್ಕಾಗಿ ಬಳಸಿಕೊಳ್ಳದೆ ಇತರರಿಗೆ ಮಾರುವುದು ಅಕ್ಷಮ್ಯ ಅಪರಾಧ. ವಿಚಾರಣೆ ವೇಳೆ ಅನ್ನಭಾಗ್ಯ ಯೋಜನೆಯ ಅಕ್ಕಿ ಮಾರುವವರನ್ನು ಪಡಿತರ ಗುರುತಿಸಿ ಅವರ ಚೀಟಿಗಳನ್ನು ರದ್ದು ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಮಾನವೀಯತೆ ಮೆರೆದ ಪತ್ರಕರ್ತರು

ಜಮಖಂಡಿ: ಸ್ಥಳೀಯ ಟೀಚರ್ ಕಾಲೋನಿಯಲ್ಲಿ ಆಕಳು ಹೋರಿಕರುವಿಗೆ ಮುಳ್ಳು-ಕಂಟಿಯಲ್ಲಿ ಜನ್ಮ ನೀಡಿದ್ದು, ಹೋರಿ ಕರುವು ಪುಟ್ಟ ಮರಿಯಿರುವ ಕಾರಣ ಮೇಲಕ್ಕೆ ಎದ್ದು ನಿಲ್ಲಲು ಆಗದ ಸ್ಥಿತಿಯಲ್ಲಿ ಇದ್ದ ಕರುವು ಉರಿಬಿಸಿಲಿನಲ್ಲಿ ಬಿದ್ದು ಒದ್ದಾಡುವ ಸ್ಥಿತಿಯಲ್ಲಿ ಇರುವುದನ್ನು ಕಂಡ ಪತ್ರಕರ್ತರು ರಕ್ಷಣೆ ಮಾಡಲು ಮುಂದಾಗಿದ್ದಾರೆ. ಸ್ಥಳಕ್ಕೆ ಪತ್ರಕರ್ತರು ಭೇಟಿ ನೀಡಿ ನೂಲಿ ಮತ್ತು ಮುಚ್ಚಂಡಿ ಅವರ ಮನೆಯಲ್ಲಿನ ಹಾಲನ್ನು ತರಿಸಿ ನಿಪ್ಪಲ್ ಬಾಟಲ್ ಮೂಲಕ ಕರುವಿಗೆ ಹಾಲು ಉಣಿಸಿದ ಬಳಿಕ ಕರುವು ಚೇತರಿಕೆ ಹೊಂದಿದೆ. ನಿವೃತ್ತ ಶಿಕ್ಷಿ ಕಸ್ತೂರಿಬಾಯಿ ನೂಲಿ, ರುಕ್ಮಿಣಿ ಮುಚ್ಚಂಡಿ ಅವರು ತಮ್ಮ ಮನೆಯಿಂದ ಕರುವಿಗೆ ಹಾಲು ಹಾಗೂ ನಿಪ್ಪಲ್ ಬಾಟಲ್ ಕೊಟ್ಟು ಸಹಾಯ ಸಹಕಾರವನ್ನು ನೀಡಿದ್ದಾರೆ. ಪತ್ರಕರ್ತರಾದ ಶಶಿಕಾಂತ ತೇರದಾಳ, ಯಶವಂತ ಕಲೂತಿ, ಮುಸ್ತಾಫ ನಧಾಪ, ಉದಯ ಹೊಸಮನಿ ಸೇರಿ ಕರು ಹಾಗೂ ಆಕಳನ್ನು ರಕ್ಷಣೆ ಮಾಡಿ ಮಾನವೀಯತೆ ಮೆರೆದಿದ್ದಾರೆ. ಪಶು ಇಲಾಖೆಯ ಸಿಬ್ಬಂದಿಗಳಾದ ಡಾ.ಬಸವರಾಜ ನ್ಯಾಮಗೌಡ, ವಿಶ್ವನಾಥ ಹಿರೇಮಠ ಹಾಗೂ ಸ್ಥಳಿಯರಾದ ಸಂತೋಷ ಮಾನೆ, ಗೋವಿಂದ ಅವರು ಸಹ ಸಹಾಯ, ಸಹಕಾರ ನೀಡಿದ್ದಾರೆ.

ಡಿವೈಎಸ್‌ಪಿ ಕಚೇರಿಗೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಭೇಟಿ

ಜಮಖಂಡಿ: ನಗರದ ಡಿವೈಎಸ್‌ಪಿ ಕಚೇರಿಗೆ ಬಾಗಲಕೋಟೆ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಗದೀಶ ಎಂ.ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ದಾಖಲಾದ ಪ್ರಕರಣಗಳು, ಕಾನೂನು ಸೂವ್ಯವಸ್ಥೆ ಕುರಿತಾಗಿ ಡಿವೈಎಸ್‌ಪಿ ಸೈಯದ್ ರೋಷನ್ ಜಮೀರ, ಸಿಪಿಐ ಮಲ್ಲಪ್ಪ ಮಡ್ಡಿ, ಅವರಿಂದ ಮಾಹಿತಿ ಪಡೆದರು. ಠಾಣೆಯ ಪರಿಶೀಲನೆ ನಡೆಸಿದರು.

ಇಲಾಖೆಯಲ್ಲಿಯ ನಿಯಮದಂತೆ ಪ್ರತಿ ವರ್ಷ ಹಿರಿಯ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಠಾಣೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಾರೆ. ಏನಾದರೂ ಸಮಸ್ಯೆಗಳಿದ್ದಲ್ಲಿ ಅವುಗಳ ಪರಿಹಾರ ಹಾಗೂ ಮಾರ್ಗದರ್ಶನ ನೀಡುತ್ತಾರೆ ಈ ಹಿನ್ನೆಲೆಯಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಗದೀಶ ಅವರು ನಗರಕ್ಕೆ ಭೇಟಿ ನೀಡಿದ್ದರು ಎಂದು ಸಿಪಿಐ ಮಲ್ಲಪ್ಪ ಮಡ್ಡಿ ತಿಳಿಸಿದ್ದಾರೆ. ಗ್ರಾಮೀಣ ಠಾಣೆ ಪಿಎಸ್‌ಐ ಗಂಗಾಧರ ಪೂಜಾರ ಹಾಗೂ ಸಿಬ್ಬಂದಿಗಳಿದ್ದರು.



ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಹಾಲಿಂಗಪುರ: ವಿವಿಧ ವಿದ್ಯುತ್ ಮಾರ್ಗ ಕಾಮಗಾರಿ ಹಾಗೂ ಮಾನ್ಸೂನ್ ನಿಮಿತ್ತ ಮಹಾಲಿಂಗಪುರ ನಗರ(ಟೌನ್) ಮಾರ್ಗದಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಸಾರ್ವಜನಿಕರು ಸಹಕರಿಸಲು ಹೆಸ್ಕಾಂ ಶಾಖಾಧಿಕಾರಿ ರಾಜೇಶ ಭಾಗೋಜಿ ತಿಳಿಸಿದ್ದಾರೆ. ಪಟ್ಟಣದ 220 ಕೆವಿ ಕ್ವಾರ್ಟರ್ಸ್ ಬುದ್ನಿ ರೋಡ್, ಜೀರಗಾಳ ಲೇಔಟ್, ಮರೆಗುದ್ದಿ ಪ್ಲಾಟ್, ಬುದ್ನಿ ವಿಲೇಜ್, ಟೈರ್ ಫ್ಯಾಕ್ಟರಿ, ಗೋಕಾಕ್ ರೋಡ್, ಬನಶಂಕರಿ ದೇವಸ್ಥಾನ, ಮಹಾಲಿಂಗೇಶ್ವರ ದೇವಸ್ಥಾನ, ಜವಳಿ ಬಜಾರ, ಕಲ್ಪಡ, ಡಬಲ್ ರೋಡ್, ಪೆಂಡಾರಿ ಕಾಲೋನಿ, ಸಮಗಾರ ಕಾಲನಿ, ಮದೀನಾಗಲ್ಲಿ, ಢವಳೇಶ್ವರ ರಸ್ತೆ, ಬಸವನಗರ, ಎಪಿಎಂಸಿ, ಹಮಾಲ ಕಾಲನಿ ಮತ್ತು ಸರ್ಕಾರಿ ಆಸ್ಪತ್ರೆ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ತಿಳಿಸಿದ್ದಾರೆ.

ಮೇ 30ರೊಳಗೆ ಅರ್ಜಿ ಸಲ್ಲಿಸಿ

ಬಾದಾಮಿ: ಬಾದಾಮಿ, ಗುಳೇದಗುಡ್ಡ ತಾಲೂಕಿನ ಗ್ರಾಮೀಣ ಭಾಗದಲ್ಲಿ 2018 ರಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಈಗಾಗಲೇ ವಸತಿ, ನಿವೇಶನ ರಹಿತರ ಸಮೀಕ್ಷೆ ಕೈಗೊಳ್ಳಲಾಗಿತ್ತು. ಈ ಸಮೀಕ್ಷೆಯಲ್ಲಿ ಈಗಾಗಲೇ ಅರ್ಜಿ ಸಲ್ಲಿಸಿದವರನ್ನು ಹೊರತು ಪಡಿಸಿ ಸಮೀಕ್ಷೆಯಿಂದ ಬಿಟ್ಟು ಹೋಗಿರುವ ಅರ್ಜಿದಾರರು ಮರಳಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದು, ಅರ್ಹರು ಮೇ 30ರೊಳಗೆ ಅರ್ಜಿ ಸಲ್ಲಿಸಬೇಕು. ಈಗಾಗಲೇ ಅರ್ಜಿ ಸಲ್ಲಿಸಿದವರು ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಖಚಿತ ಪಡಿಸಿಕೊಳ್ಳಬೇಕೆಂದು ಅವಳಿ ತಾಲೂಕಿನ ತಾಪಂ ಇಒ ಸತೀಶ ಮಾಕೊಂಡ ಮತ್ತು ಮಲ್ಲಿಕಾರ್ಜುನ ಬಡಗೇರಿ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪದಾಧಿಕಾರಿಗಳಿಗೆ ಚಿಮ್ಮನಕಟ್ಟಿ ಸನ್ಮಾನ

ಬಾದಾಮಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ 2026-31ರ ಐದು ವರ್ಷಗಳ ಅವಧಿಗೆ ಆಯ್ಕೆಯಾಗಿರುವ ನೂತನ ಪದಾಧಿಕಾರಿಗಳನ್ನು ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು ಶನಿವಾರ ಅವರ ನಿವಾಸದಲ್ಲಿ ಸನ್ಮಾನಿಸಿ ಗೌರವಿಸಿದರು.

ತಾಲೂಕು ಘಟಕದ ಅಧ್ಯಕ್ಷ ಎಂ.ಸಿ.ಜುಮ್ಮನ್ನವರ ಹಾಗೂ ಪ್ರಧಾನ ಕಾರ್ಯದರ್ಶಿ ಶಿವು ಕಳಕಾಪೂರ, ಉಪಾಧ್ಯಕ್ಷ ವಿನಾಯಕ ವೈಕುಂಟೆ, ಜೆ.ಎಂ.ಬಾದಾಮಿ, ಖಜಾಂಚಿ ಚಂದ್ರಶೇಖರ ಆರಸಿಕೇರಿ, ಸಹಕಾರ್ಯದರ್ಶಿ ಎಚ್.ಎಚ್.ಕೋಣಿ, ಎಂ.ಬಿ.ಹೂಗಾರ, ಸಂಘಟನಾ ಕಾರ್ಯದರ್ಶಿ ಬಿ.ವೈ.ಗಚ್ಚನ್ನವರ, ಅಶ್ವಿನಿ ಅಂಗಡಿ, ಜಿಲ್ಲಾ ಮಹಿಳಾ ಉಪಾಧ್ಯಕ್ಷೆ ಪಿ.ಆರ್.ಚಿಕ್ಕನ್ನವರ, ಜಿಲ್ಲಾ ಸಂಘಟಕಾ ಕಾರ್ಯದರ್ಶಿ ವಿ.ಎಸ್.ಶೆಟ್ಟರ ಹಾಜರಿದ್ದರು.



ಕೃಷಿ ಇಲಾಖೆಗೆ ರಾಜ್ಯಮಟ್ಟದ ಪ್ರಶಸ್ತಿ



ಬಾಗಲಕೋಟೆ: ಬಾಗಲಕೋಟೆ ಕೃಷಿ ಇಲಾಖೆಯು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ 2026-27ನೇ ಸಾಲಿನ ಮುಂಗಾರು ಹಂಗಾಮಿನ ಕೃಷಿ ಇಲಾಖೆಯ ಕಾರ್ಯಾಗಾರದಲ್ಲಿ ವಿವಿಧ ಕಾರ್ಯಕ್ರಮಗಳ ಅತ್ಯುತ್ತಮ ಅನುಷ್ಠಾನಕ್ಕಾಗಿ ರಾಜ್ಯಮಟ್ಟದ ಎರಡು ಪ್ರಶಸ್ತಿ ಪಡೆದುಕೊಂಡಿದೆ.

2025-26ನೇ ಸಾಲಿನ ರಾಜ್ಯ ಬೀಜ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಜಿಲ್ಲೆಯ ಬೀಜೋತ್ಪಾದನಾ ಕೇಂದ್ರದ ಕಾರ್ಯವನ್ನು ಪ್ರಶಂಸಿಸಿ ರಾಜ್ಯ ಮಟ್ಟದಲ್ಲಿ ತೃತೀಯ ಸ್ಥಾನಪಡೆಯಿತು. ಮಣ್ಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಜಿಲ್ಲೆಯ ಮಣ್ಣು ಪರೀಕ್ಷಾ ಪ್ರಯೋಗಾಲಯದ ಕಾರ್ಯವನ್ನು ಪ್ರಶಂಸಿಸಿ ರಾಜ್ಯಮಟ್ಟದ ದ್ವಿತೀಯ ಸ್ಥಾನ ಪಡೆದುಕೊಂಡಿದೆ. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರಿಂದ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಪ್ರಶಸ್ತಿ ಲಭಿಸಿದಕ್ಕೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ ಅಭಿನಂದನೆ ಸಲ್ಲಿಸಿದ್ದಾರೆ.

ಉನ್ನತ ವ್ಯಾಸಂಗಕ್ಕೆ ಸುಸಜ್ಜಿತ ಕಟ್ಟಡ



ಬಾದಾಮಿ: ನಗರ ಹಾಗೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕಾಗಿ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಲಾಗುತ್ತಿದ್ದು, ಸದುಪಯೋಗ ಪಡಿಸಿಕೊಳ್ಳಬೇಕೆಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಶನಿವಾರ ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ರೂ.160.51 ಲಕ್ಷ ಅನುದಾನದ ವೆಚ್ಚದಡಿ ಎರಡನೇ ಮಹಡಿಯ ಭೂಮಿಪೂಜಾ ಕಾರ್ಯಕ್ರಮವನ್ನು ನೆರವೇರಿಸಿ ಮಾತನಾಡಿದರು. ನಮ್ಮ ಸರಕಾರ ಶಿಕ್ಷಣ ಆರೋಗ್ಯ ಸೇರಿದಂತೆ ಮೂಲಭೂತ ಸೌಕರ್ಯಗಳಿಗೆ ಪ್ರಮುಖ ಆದ್ಯತೆ ನೀಡಲಾಗುತ್ತಿದೆ. ಪ್ರಮುಖ ಬೇಡಿಕೆಗಳನ್ನು ಪಟ್ಟಿ ಮಾಡಿ ಹಂತ ಹಂತವಾಗಿ ಈಡೇರಿಸಲಾಗುವುದು ಎಂದು ಹೇಳಿದರು.

ತಹಶೀಲ್ದಾರ್ ಎಸ್.ಬಿ.ಬೊಮ್ಮನ್ನವರ, ಕಾಲೇಜು ಸಮಿತಿ ಸದಸ್ಯರು, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ ಹಿರೇಮಠ, ಪುರಸಭೆ ಮಾಜಿ ಅಧ್ಯಕ್ಷ ಮಂಜುನಾಥ ಹೊಸಮನಿ, ಮಾಜಿ ಸದಸ್ಯ ಶಂಕರ ಕನಕಗಿರಿ, ಮುಖಂಡರಾದ ಭೀಮಶಿ ಕಮ್ಮಾರ, ಹನಮಂತ ಜೋಗಿನ, ಶಿವಕುಮಾರ ಚೋಳನ್ನವರ, ಎಂ.ಐ.ಬಾರಾವಲಿ ಸೇರಿದಂತೆ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಮೇ 26ಕ್ಕೆ ವೀರ ಸಾವರ್ಕರ ಜಯಂತಿ

ಜಮಖಂಡಿ: ಕಳೆದ 15 ವರ್ಷದಿಂದ ಸಾವರ್ಕರ ಪ್ರತಿಷ್ಠಾನ ಸ್ಥಾಪಿಸಿ ಅವರ ಜನ್ಮ ದಿನಾಚರಣೆ ಆಚರಿಸುತ್ತ ಬಂದಿದ್ದೇವೆ. ವೀರ ಸಾವರಕರ ಜಯಂತಿ ಅಂಗವಾಗಿ ಹಿಂದೂ ಸಮಾಜದ ಎಲ್ಲ ಸಮಾಜದ ಮೂರಕ್ಕೂ ಹೆಚ್ಚು ಮಕ್ಕಳಿರುವ 11 ದಂಪತಿಗಳಿಗೆ ಸನ್ಮಾನ ಮಾಡಲಾಗುವುದು ಎಂದು ಡಾ.ರಾಕೇಶ ಲಾಡ್ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾವರಕರ ಜಯಂತಿ ಅಂಗವಾಗಿ ಮೇ 26ರಂದು ಸಂಜೆ 5.30ಕ್ಕೆ ಬಸವ ಭವನದಲ್ಲಿ ಏರ್ಪಡಿಸಿದೆ. ಅಂದು ಸಾನಿಧ್ಯದಲ್ಲಿ ರುದ್ರಾವಧೂತ ಮಠದ ಕೃಷ್ಣಾನಂದ ಅವಧೂತರು, ಮುಖ್ಯ ವಕ್ತಾರರಾಗಿ ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ, ಅಧ್ಯಕ್ಷರಾಗಿ ಸಾಹಿತಿ ಡಾ.ತಾತಾಸಾಹೇಬ ಬಾಂಗಿ ಆಗಮಿಸಲಿದ್ದಾರೆ ಎಂದರು. ಶೈಲೇಶ ಅಷ್ಟೆ ಸರ್ಕಾರವು ಮಾಡಿದ ಜನಸಂಖ್ಯಾ ನಿಯಂತ್ರಣ ಮಾಡಿದಾದ ಹಿಂದು ಸಮಾಜ ನಿಷ್ಠೆಯಿಂದ ಪಾಲಿಸಿದ್ದರ ಪರಿಣಾಮವಾಗಿ ಹಿಂದೂ ಸಮಾಜದ ಸಂಖ್ಯೆ ಇಳಿಮುಖವಾಗಿದೆ. ಸಂಖ್ಯಾಬಲದಿಂದ ಸಂಖ್ಯೆಯನ್ನು ಏರಿಸಬೇಕಾಗಿದೆ ಪಕ್ಕದ ಆಂದ್ರದಲ್ಲಿ ಈಗಾಗಲೇ ಸರಕಾರವು ಆದೇಶವನ್ನು ಹೊರಡಿಸಿದೆ ಎಂದು ಹೇಳಿದರು. ಲೋಕೇಶ ಪೂಜಾರಿ, ಕುಮಾರ ಹವಾಲದಾರ, ಕುಶಾಲ ವಾಘಮಾರೆ ಇದ್ದರು.



ಗುಣಮಟ್ಟದ ಆರೋಗ್ಯ ಸೇವೆ ನೀಡಿ



ಲೋಕಾಪುರ: ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ವಚ್ಛತೆ, ನೈರ್ಮಲ್ಯ ಮತ್ತು ಸೋಂಕು ನಿಯಂತ್ರಣ ಹೆಚ್ಚಿಸುವುದು, ರೋಗಿಗಳಿಗೆ ಸುರಕ್ಷಿತ ಮತ್ತು ಗುಣಮಟ್ಟದ ಆರೋಗ್ಯ ಸೇವೆಗಳನ್ನು ನೀಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದು ತಾಲೂಕು ವೈದ್ಯಾಧಿಕಾರಿ ಡಾ.ವೆಂಕಟೇಶ ಮಲಘಾಣ ಹೇಳಿದರು. ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾಯಕಲ್ಪ ಕಾರ್ಯಕ್ರಮದ ಅಂಗವಾಗಿ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸ್ವಚ್ಛತೆ ಮತ್ತು ಸೋಂಕು ನಿಯಂತ್ರಣ ಉತ್ತೇಜಿಸಲು 2015 ರ ಮೇ 15ರಂದು ಕಾಯಕಲ್ಪ ಯೋಜನೆಯನ್ನು ಆರಂಭಿಸಿತು ಎಂದು ವಿವರಿಸಿದರು. ಡಾ.ವಿನಯ ಕುಲಕರ್ಣಿ ಮಾತನಾಡಿ, ಸ್ವಚ್ಛತೆ, ನೈರ್ಮಲ್ಯ ಮತ್ತು ಸೋಂಕು ನಿಯಂತ್ರಣ ಅಭ್ಯಾಸಗಳನ್ನು ಉತ್ತೇಜಿಸಲು, ಸ್ವಚ್ಛತೆ ಮತ್ತು ಸೋಂಕು ನಿಯಂತ್ರಣದಲ್ಲಿ ಅತ್ಯುತ್ತಮ ಕಾರ್ಯಕ್ಷಮತೆ ತೋರಿಸುವ ಸಾರ್ವಜನಿಕ ಆರೋಗ್ಯ ಆರೈಕೆ ಸೌಲಭ್ಯ ಒದಗಿಸುವುದು ಅದನ್ನು ಉಳಿಸಿಕೊಳ್ಳಲು ನಿರಂತರ ಮೌಲ್ಯಮಾಪನದ ಸಂಸ್ಕೃತಿ ಬೆಳೆಸುವಂತೆ ಮಾಡುವುದು ಕಾಯಕಲ್ಪದ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದರು. ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳಾದ ಜೆ.ಪಿ.ಜಲಗೇರಿ, ಎ.ಎಸ್.ಮುದಕವಿ, ನಾಗಪ್ಪ ಸುಣಗಾರ ಇದ್ದರು.

ಸರ್ಕಾರಿ ಯೋಜನೆ ಬಡವರಿಗೆ ತಲುಪಲಿ

ಮಹಾಲಿಂಗಪುರ: ಸರ್ಕಾರದ ಪ್ರತಿ ಯೋಜನೆಯೂ ನಿಜವಾದ ಬಡವರಿಗೆ ತಲುಪಬೇಕು. ಆ ಮೂಲಕ ಸ್ವಸ್ಥ ಸಮಾಜ, ಸಮೃದ್ಧ ಸಮಾಜ ನಿರ್ಮಾಣವಾಗಲು ಸಾಧ್ಯ. ಆ ನಿಟ್ಟಿನಲ್ಲಿ ಶಿವಲಿಂಗ ಪೋಳ ಮತ್ತು ಮಹಾಲಿಂಗ ಮುಗಳಖೋಡ ಇವರ ತಂಡ ಬಡ ನಿರ್ಗತಿಕರನ್ನು ಗುರುತಿಸಿ ಅವರಿಗೆ ಸರ್ಕಾರದ ಯೋಜನೆಗಳು ತಲುಪುವಂತೆ ಮಾಡುತ್ತಿರುವದು ಶ್ಲಾಘನೀಯ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಸಮೀಪದ ಸೈದಾಪುರ ಕ್ರಾಸ್ ನ ಮಾರುತಿ ದೇವಾಲಯದ ಆವರಣದಲ್ಲಿ ನಡೆದ ಸಂಧ್ಯಾ ಸುರಕ್ಷಾ ವೇತನ, ವಿಧವಾ ವೇತನ, ಅಂಗವಿಕಲ ವೇತನ ಮತ್ತು ವೃದ್ಧಾಪ್ಯ ವೇತನಗಳ ಆದೇಶ ಪತ್ರ ವಿತರಿಸಿ ಮಾತನಾಡಿದರು. ಭಾಜಪ ಗ್ರಾಮೀಣ ಘಟಕದ ಪ್ರಧಾನ ಕಾರ್ಯದರ್ಶಿ ಆನಂದ ಕಂಪು, ಮುಖಂಡರಾದ ಬಸವಣ್ಣೆಪ್ಪ ಬ್ಯಾಳಿ, ಮುರಿಗೆಪ್ಪ ಗುಣದಾಳ, ಶಿವಪ್ಪ ಬಾಯಪ್ಪಗೋಳ, ಚನ್ನಪ್ಪ ಪಟ್ಟಣಶೆಟ್ಟಿ, ನಾಗಪ್ಪ ಕೇತಗೌಡ, ಶಿವಲಿಂಗಪ್ಪ ಕೌಜಲಗಿ, ಪರಮಾನಂದ ಉಳ್ಳಾಗಡ್ಡಿ, ರಾಮನಗೌಡ ಪಾಟೀಲ, ಚೆನ್ನಪ್ಪ ಬಾಯಪ್ಪಗೋಳ, ಸಿದ್ದಾರೂಢ ಕೌಜಲಗಿ, ಮುತ್ತಪ್ಪ ಪಶ್ಚಾಪುರ, ಲಕ್ಷ್ಮಣ ಉಳ್ಳಾಗಡ್ಡಿ, ಮಹಾಲಿಂಗಪ್ಪ ಬಾಯಪ್ಪಗೋಳ, ಮಲ್ಲಪ್ಪ ಬಾಯಪ್ಪಗೋಳ, ಶಿವಲಿಂಗ ಪೋಳ, ಮಹಾಲಿಂಗ ಮುಗಳಖೋಡ, ಮಲ್ಲಪ್ಪ ಕೌಜಲಗಿ, ಯಮನಪ್ಪ ಉಪ್ಪಾರ, ಆನಂದ ಬನಹಟ್ಟಿ, ವಿವೇಕ ಮಲಕಾಪುರ, ಲಚ್ಚಪ್ಪ ಲಮಾಣಿ, ಮಹಾದೇವ ಬಿಸನಾಳ ಮಲ್ಲಪ್ಪ ಬಿಸನಾಳ ಇತರರಿದ್ದರು.



ಕಿರುಸುದ್ದಿ



ವಿಜಯಪುರ: ನಗರದಲ್ಲಿ ನಡೆದ ಬ್ಯಾಡ್ಮಿಂಟನ್ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಎರಡು ಚಿನ್ನದ ಪದಕ, ಒಂದು ಬ್ರಾಂಚ್ ಗೆದ್ದ ಮುಹಿತಾ ನಾಯ್ಡು ಅವರಿಗೆ ಇಲ್ಲಿನ ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕ್ ಅಧ್ಯಕ್ಷೆ ಮಲ್ಲಮ್ಮ ಯಾಳವಾರ 5,000 ರೂ. ನಗದು ನೀಡಿ, ಸನ್ಮಾನಿಸಿದರು.

ಇಂದು ತಿಕೋಟಾದಲ್ಲಿ ಯುವಶಕ್ತಿ ಕಾರ್ಯಕ್ರಮ

ವಿಜಯಪುರ: ಜಿಲ್ಲೆಯ ತಿಕೋಟಾ ಪಟ್ಟಣದಲ್ಲಿ ಮೇ 24ರಂದು ಯುವಶಕ್ತಿ ಕಾರ್ಯಕ್ರಮ ನಡೆಯಲಿದೆ. ಅಂದು ಸಂಜೆ 5 ಗಂಟೆಗೆ ತಿಕೋಟಾ ಪಟ್ಟಣದ ಕನಕದಾಸ ಮಂಗಲ ಕಾರ್ಯಾಲಯದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಭಾಗವಹಿಸಲಿದ್ದು, ತಿಕೋಟಾ ಹಿರೇಮಠದ ಶಿವಬಸವ ಶಿವಾಚಾರ್ಯರು, ತೊರವಿಯ ಸಿದ್ಧೇಲಿಂಗೇಶ್ವರ ಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ದು ಗೌಡನವರ, ಈರನಗೌಡ ಬಿರಾದಾರ, ಮುಖಂಡರಾದ ವಿ.ಎಂ. ಪಾಟೀಲ, ಲೇಪು ಕೊಣ್ಣೂರ, ರಾಮರಾವ ದೇಸಾಯಿ, ಬಸಯ್ಯ ವಿಭೂತಿ, ಭಾಗೀರಥಿ ತೇಲಿ, ಜಕ್ಕಪ್ಪ ಯಡವೆ, ರಮೇಶ ಧರಣಾಕರ, ಮಮ್ಮುಲಾಲ ಮುಜವರ, ಜಾಕೀರ್ ಬಾಗವಾನ್, ಸಂತೋಷ ಕೋಲಾರ, ಸದಾಶಿವ ಪೂಜಾರಿ, ಭೀಮು ಹಂಗರಗಿ ಪಾಲ್ಗೊಳ್ಳಲಿದ್ದು, ಯುವ ಮುಖಂಡರಾದ ಬಾಬು ಹಂಚಿನಾಳ, ಪ್ರಕಾಶ ಜಲಗೇರಿ, ಸುರೇಶ ಕೊಣ್ಣೂರ, ಅರುಣ ಖೈರಾವ, ಸಚಿನ ಪಾಟೀಲ ಮುಂತಾದವರ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ ಎಂದು ಕಾರ್ಯಕ್ರಮದ ಉಸ್ತುವಾರಿ ಕಿರಣ ದಳವಾಯಿ (ದೇಸಾಯಿ) ತಿಳಿಸಿದ್ದಾರೆ.

ಪರಿಹಾರಕ್ಕೆ ಆಗ್ರಹ

ಕೊಲ್ಹಾರ: ತಾಲೂಕಿನ ರೋಣಿಹಾಳ ಗ್ರಾಮದ 110 ಕೆವಿ ಸ್ಟೇಷನ್‌ನಿಂದ ಯಮುಗಲ್ ಮಡ್ಡಿ ಹೋಗುವ ಮೇನ್‌ಲೈನ್ ತಂತಿ ಹರಿದು ಬಿದ್ದು ರೋಣಿಹಾಳ ಗ್ರಾಮದ ಸಂಗಪ್ಪ ಮುಕ್ಕಣ್ಣ ಹಂಡಿ ಅವರ ಹೊಲದಲ್ಲಿ ಮೇಯುತ್ತಿದ್ದ ಎರಡು ಕುರಿಗಳು ಸಾವನ್ನಪ್ಪಿರುತ್ತವೆ. ಸಾವನ್ನಪ್ಪಿದ ಕುರಿಗಳ ಕುರಿಗಾಹಿಗೆ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ತಕ್ಷಣ ಪರಿಹಾರ ಮಂಜೂರು ಮಾಡಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ವ್ಯವಹಾರ ತಾಲೂಕು ಅಧ್ಯಕ್ಷ ಸೋಮು ಬಿರಾದರ್ ಆಗ್ರಹಿಸಿದ್ದಾರೆ.

ಮಾಸಾಶನ: ಬಿಡುಗಡೆಗೆ ಆಗ್ರಹ

ಕೊಲ್ಹಾರ: ರಾಜ್ಯದ ಎಲ್ಲಾ ವಿಶಿಷ್ಟಚೇತನರ ಪ್ರತಿ ತಿಂಗಳ ಮಾಶಾಸನ ಕಳೆದ 2-3 ತಿಂಗಳಿಂದ ಜಮೆಯಾಗದೆ ವಿಶಿಷ್ಟಚೇತನರು ಹಾಗೂ ವಯೋವೃದ್ಧರು ತೊಂದರೆ ಎದುರಿಸುತ್ತಿದ್ದಾರೆ ಎಂದು ಕೊಲ್ಹಾರ ತಾಲೂಕಿನ ಕೊಲ್ಹಾರ ತಾಲೂಕು ವಿಶೇಷ ಚೇತನರ ಸಂಘದ ಕಾರ್ಯದರ್ಶಿ ಗುಲಾಬ ಮ. ಶಿರೂರು ತಿಳಿಸಿದ್ದಾರೆ. ಆರೋಗ್ಯದ ಚಿಕಿತ್ಸೆ ಪಡೆಯಲು ಔಷಧಿಗಳನ್ನು ಖರೀದಿಸಲು, ನಿತ್ಯದ ಹಾಲು, ರೇಷನ್ ಸಾಮಗ್ರಿಗಳು ಖರೀದಿಸಲು ಮತ್ತು ಮನೆ ಬಾಡಿಗೆ ಕಟ್ಟಲು ಹಣ ಇಲ್ಲದೆ ಪರದಾಡುವಂತಾಗಿದೆ. ಮುಖ್ಯಮಂತ್ರಿಗಳು ವಿಕಲಚೇತನರ ಕಡೆ ಗಮನ ಹರಿಸಿ ಆದಷ್ಟು ಬೇಗ ರಾಜ್ಯದ ಎಲ್ಲಾ ವಿಕಲಚೇತನರಿಗೆ ಮಾಸಾಶನ ಹಣ ಅವರ ಖಾತೆಗೆ ಜಮೆ ಮಾಡುವಂತೆ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.

ನಿಧನ ಸುದ್ದಿ

ಸಂಗನಗೌಡ ಬಿರಾದಾರ

ದೇವರ ಹಿಪ್ಪರಗಿ: ತಾಲೂಕಿನ ಮುಳಸಾವಳಗಿ ಗ್ರಾಮದ ಪಿಕೆಪಿಎಸ್ ಅಧ್ಯಕ್ಷ ಸಂಗನಗೌಡ ಶಿ.ಬಿರಾದಾರ ಅವರ ತಾಯಿ ಸುಮಿತ್ರಾಬಾಯಿ ಶಿ.ಬಿರಾದಾರ(85) ಶನಿವಾರ ಬೆಳಗ್ಗೆ ನಿಧನರಾದರು. ಮೃತರಿಗೆ ಮೂವರು ಪುತ್ರರು, ಇರ್ವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗ ಇದ್ದಾರೆ.





ಮುದ್ದೇಬಿಹಾಳ: ತಾಲೂಕಿನ ಚವನಭಾವಿ ಗ್ರಾಮದ ಗದ್ದೇಮ್ಮದೇವಿ, ದ್ಯಾಮವ್ವದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಕ್ರೀಡಾಕೂಟ ಹಮ್ಮಿಕೊಳ್ಳಲಾಗಿತು. ಗ್ರಾಮದ ಹಿರಿಯರಾದ ಹುಲಗಪ್ಪ ಮುತ್ಯಾ ಹಾಗೂ ಮಾಜಿ ಗ್ರಾಪಂ ಅಧ್ಯಕ್ಷ ಹಣಮಂತ ಚ.ನಾಲತವಾಡ ಜಂಟಿಯಾಗಿ ಕ್ರಿಕೆಟ್ ಟೂರ್ನಮೆಂಟ್‌ಗೆ ಚಾಲನೆ ನೀಡಿದರು.

ಸಾಧಕ ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ

ಮುದ್ದೇಬಿಹಾಳ: ತಾಲೂಕಿನ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ಧ್ವನಿ (ಕಾದ್ರೋಳ್ಳಿ ಬಣ) ಸಂಘಟನೆಯ ವತಿಯಿಂದ ವಿಜಯಪುರ ಜಿಲ್ಲೆಯ ಮಟ್ಟದ ಬೃಹತ್ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು. ಈ ವೇಳೆ ಮಾಜಿ ಶಾಸಕ ಎ.ಎಸ್.ಪಾಟೀಲ(ನಡಹಳ್ಳಿ) ಉದ್ಘಾಟನೆ ಮಾತನಾಡಿ, ದೇಶದಲ್ಲಿ ಜಾತೀಯತೆ ಹೋಗಬೇಕು. ಶೋಷಣೆ ನಿಲ್ಲಬೇಕು ಎಂದು ಮೀಸಲಾತಿಯನ್ನು ಜಾರಿಗೆ ತರಲಾಗಿದೆ. ಸ್ವತಂತ್ರ ಸಿಕ್ಕು ಇಷ್ಟು ವರ್ಷಗಳಾದರೂ ಮೂಲಭೂತ ಬದಲಾವಣೆ ಆಗಿದೆಯಾ ಇಲ್ಲವೋ ಎಂಬುದನ್ನು ಆತ್ಮ ವಿಮರ್ಶೆ ಮಾಡಿಕೊಳ್ಳುವ ಸಮಯ ಬಂದಿದೆ. ಸಮಾನತೆ ತರಬೇಕಾದರೆ ಪಕ್ಷಾತೀತವಾಗಿ ಚಿಂತನೆ ನಡೆಯಬೇಕು. ಬಡವರಲ್ಲಿ ಅತ್ಯಂತ ಬಡವರಾದವರಿಗೆ ಅವಕಾಶಗಳು ದೊರೆಯಬೇಕು ಎಂದರು. ಜಿಲ್ಲಾ ಅಧ್ಯಕ್ಷ ಬಾಲಚಂದ್ರ ಹುಲ್ಲೂರು ರವರ ನೇತ್ರತ್ವದಲ್ಲಿ ನಡೆಯಿತು. ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಸಂಸ್ಥಾಪಕ ರಾಜ್ಯಾಧ್ಯಕ್ಷ ಚಂದ್ರಕಾಂತ ಕಾದ್ರೋಳ್ಳಿ ಅಧ್ಯಕ್ಷತೆ ವಹಿಸಿದ್ದರು. ಮಹಿಳಾ ಘಟಕ ಜಿಲ್ಲಾಧ್ಯಕ್ಷ ಗೀತಾ ಮಾದರ, ಧಾರವಾಡ ಜಿಲ್ಲಾಧ್ಯಕ್ಷ ಬಸವರಾಜ ಲಗಮುವ್ವನವರ, ದಯಾನಂದ ಡಿ ದೊಡಮನಿ, ದುರಗಪ್ಪ ದೊಡಮನಿ, ಮಾರುತಿ ಶಿದ್ದಾಪುರ, ಪರಶುರಾಮ ಹೊಸಮನಿ, ಶೇಖರ ಜಟ್ಟಗಿ, ಗ್ಯಾನಪ್ಪ ಮಾದರ, ರಮೇಶ ದೊಡಮನಿ, ಸುರೇಶ ದೊಡಮನಿ, ಗೋರಕನಾಥ ಮೆಟಗಾರ, ಪರಶುರಾಮ ಬಾವಿಕಟ್ಟಿ ಸೇರಿದಂತೆ ಕನ್ನಡಪರ ಸಂಘಟನೆಯ ಮುಖಂಡರು ಇದ್ದರು.



ಮುದ್ದೇಬಿಹಾಳ: ತಾಲೂಕಿನ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ಧ್ವನಿ (ಕಾದ್ರೋಳ್ಳಿ ಬಣ) ಸಂಘಟನೆಯ ವತಿಯಿಂದ ವಿಜಯಪುರ ಜಿಲ್ಲೆಯ ಮಟ್ಟದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು. ಮಾಜಿ ಶಾಸಕ ಎ.ಎಸ್.ಪಾಟೀಲ(ನಡಹಳ್ಳಿ), ಜಿಲ್ಲಾ ಅಧ್ಯಕ್ಷ ಬಾಲಚಂದ್ರ ಹುಲ್ಲೂರ, ಸಂಸ್ಥಾಪಕ ರಾಜ್ಯಾಧ್ಯಕ್ಷ ಚಂದ್ರಕಾಂತ ಕಾದ್ರೋಳ್ಳಿ, ಮಹಿಳಾ ಘಟಕ ಜಿಲ್ಲಾಧ್ಯಕ್ಷ ಗೀತಾ ಮಾದರ ಇದ್ದರು.

ಮಕ್ಕಳ ಬೆಳವಣಿಗೆಗೆ ಅಂಗನವಾಡಿ ಪಾತ್ರ ಮಹತ್ವದ್ದು: ಡಾ.ಆನಂದ

ವಿಜಯಪುರ: ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಅಂಗನವಾಡಿ ಕೇಂದ್ರಗಳು ಮಹತ್ವದ ಪಾತ್ರವಹಿಸುತ್ತಿವೆ ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಹೇಳಿದರು.

ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಅಜೀಂ ಪ್ರೇಮ್‌ಜೀ ಫೌಂಡೇಷನ್ ಆಶ್ರಯದಲ್ಲಿ ಹೊಸದಾಗಿ ನೇಮಕವಾದ ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕಿಯರಿಗೆ ಹಮ್ಮಿಕೊಂಡ ಬುನಾದಿ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಮಕ್ಕಳ ಆರೋಗ್ಯ, ಶಿಕ್ಷಣ ಮತ್ತು ಉತ್ತಮ ಸಂಸ್ಕಾರಗಳ ಬುನಾದಿ ಬಾಲ್ಯಾವಸ್ಥೆಯಲ್ಲೇ ನಿರ್ಮಾಣವಾಗುತ್ತದೆ. ಹಾಗಾಗಿ ಅಂಗನವಾಡಿ ಶಿಕ್ಷಕಿಯರು ಹಾಗೂ ಸಹಾಯಕಿಯರು ತಮ್ಮ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸಬೇಕು ಎಂದರು.

ಮಕ್ಕಳಲ್ಲಿ ಮೌಲ್ಯಯುತ ಗುಣಗಳನ್ನು ಬೆಳಸಿ, ಉತ್ತಮ ನಾಗರಿಕರನ್ನಾಗಿ ರೂಪಿಸುವ ಕಾರ್ಯದಲ್ಲಿ, ಅಂಗನವಾಡಿ ಕಾರ್ಯಕರ್ತರ ಜವಾಬ್ದಾರಿ ಬಹಳಷ್ಟಿದ್ದು, ಈ ನಿಟ್ಟಿನಲ್ಲಿ ಪ್ರತಿ ಕಾರ್ಯಕರ್ತೆಯರು ಮುಂದಾಗಬೇಕು. ಮಕ್ಕಳು ದೇವರ ತೋಟದ ಹೂವುಗಳಿದ್ದಂತೆ. ಅವರ ಮುಗ್ಧ ಮನಸ್ಸಿನಲ್ಲಿ ಒಳ್ಳೆಯ ಸಂಸ್ಕಾರ, ಆದರ್ಶದ ಭಾವನೆಗಳನ್ನು ಮೂಡಿಸಬೇಕು. ಇಂದಿನ ಮಕ್ಕಳೇ ನಾಳೆಯ ಪ್ರಜೆಗಳಾಗಿದ್ದು, ಅವರಲ್ಲಿ ಉದಾತ್ತ ಮನೋಭಾವದ ಜೊತೆಗೆ ದೇಶಾಭಿಮಾನ ಮೂಡಿಸಬೇಕು ಎಂದರು.

ಇನ್ನೊಂದೆಡೆ ಸರ್ಕಾರ ಮಕ್ಕಳ ಹಾಗೂ ಮಹಿಳೆಯರ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ. ಅಂಗನವಾಡಿ ಶಿಕ್ಷಕಿಯರು ಅಂಗನವಾಡಿ ಕೇಂದ್ರಕ್ಕೆ ಮಾತ್ರ ಸೀಮಿತವಾಗದೆ ಗ್ರಾಮ ಮತ್ತು ಸಮುದಾಯ ಮಟ್ಟದಲ್ಲಿಯೂ ಜನರಿಗೆ ಈ ಯೋಜನೆಗಳ ಮಾಹಿತಿ ತಲುಪಿಸಿ, ಅವುಗಳ ಸದುಪಯೋಗ ಪಡೆಯಲು ಪ್ರೇರಣೆ ನೀಡಬೇಕು ಎಂದರು.

ಕಾರ್ಯಕ್ರಮದ ಹೊಸದಾಗಿ ನೇಮಕವಾದ ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕಿಯರಿಗೆ ಮಕ್ಕಳ ಆರೈಕೆ, ಪೌಷ್ಟಿಕ ಆಹಾರ, ಶಿಕ್ಷಣ ಚಟುವಟಿಕೆಗಳು ಹಾಗೂ ಆರೋಗ್ಯ ಸಂಬಂಧಿತ ವಿವಿಧ ತರಬೇತಿ ಅಧಿವೇಶನಗಳನ್ನು ನಡೆಸಲಾಯಿತು.

ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಕ್ಷೇತ್ರಮಟ್ಟದ ಅನುಭವಗಳನ್ನೂ ಹಂಚಿಕೊಳ್ಳಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಕೆ. ಚವ್ಹಾಣ, ಕಾರ್ಯಕ್ರಮಾಧಿಕಾರಿ ನಿರ್ಮಲಾ ಸುರಪುರ, ದೀಪಾಕ್ಷಿ, ಜಾನಕಿ, ಅಜೀಂ ಪ್ರೇಮಜಿ ಫೌಂಡೇಶನ್ ಜಿಲ್ಲಾ ಸಂಯೋಜಕ ಹರೀಶ ಕೆ.ಆರ್., ಅಂಗನವಾಡಿ ಶಿಕ್ಷಕಿಯರು, ಸಹಾಯಕಿಯರು ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಸದಸ್ಯರು ಇದ್ದರು.

ಜಿಗಜಿಣಗಿ ಟೀಕೆ ಸರಿಯಲ್ಲ: ಗಣಿಹಾರ

ವಿಜಯಪುರ: ತುಮಕೂರಿನಲ್ಲಿ ರಾಜ್ಯ ಸರ್ಕಾರ ಹಮ್ಮಿಕೊಂಡ ಮೂರು ವರ್ಷದ ಸಾಧನಾ ಸಮಾವೇಶದ ಬಗ್ಗೆ ಸಂಸದ ರಮೇಶ ಜಿಗಜಿಣಗಿ ಟೀಕೆ ಮಾಡಿರುವುದು ಸರಿಯಲ್ಲ. ಈ ಕುರಿತು ಟೀಕೆ ಮಾಡಲು ಅವರಿಗೆ ಯಾವ ಅರ್ಹತೆಯೂ ಇಲ್ಲ, ಏಕೆಂದರೆ ಜಿಲ್ಲೆ ಅಭಿವೃದ್ಧಿ ಕುರಿತು ಸಂಸದರ ಯಾವ ಸಾಧನೆಯೂ ಮಾಡಿಲ್ಲ ಎಂದು ಕಾಂಗ್ರೆಸ್ ಮುಖಂಡ ಎಸ್.ಎಂ.ಪಾಟೀಲ ಗಣಿಹಾರ ಆರೋಪಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದರು ತಮ್ಮ 40 ವರ್ಷದ ರಾಜಕಾರಣದಲ್ಲಿ ಜಿಲ್ಲೆಯ ಸಚಿವರಾಗಿ, ಸಂಸದರಾಗಿ, ಒಳ್ಳೆಯ ಖಾತೆಗಳನ್ನು ನಿಭಾಯಿಸಿದ್ದರೂ ಅವರು ಹೇಳಿಕೊಳ್ಳುವಂತೆ ಸಾಧನೆ ಮಾಡಿಲ್ಲ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಯಾವ ಸಾಧನೆ ಇಲ್ಲ ಎಂದು ಹೇಳುತ್ತಿರುವ, ಸಂಸದರು ಜಿಲ್ಲೆಗೆ ನೀಡಿದ ಕೊಡುಗೆಯಾದರು ಏನು ? ಎಂದರು.

ರಾಜ್ಯ ಸರ್ಕಾರ ಪಂಚಗ್ಯಾರಂಟಿ ನೀಡಿದೆ. ಬಡವರ ಸಾರ್ಥಕವಾಗಿ ಮೇಲೆತ್ತಲು ರಾಜ್ಯ ಸರ್ಕಾರ ಎಲ್ಲ ಕಾರ್ಯವನ್ನು ಮಾಡುತ್ತಿದೆ. ಪಂಚಗ್ಯಾರಂಟಿ ಕೂಡ ರಾಜ್ಯ ಸರ್ಕಾರದ ಒಂದು ಸಾಧನೆಯಾಗಿದೆ. ಆದರೆ ಟೀಕೆ ಕೇವಲ ಟೀಕೆಗಾಗಿ ಟೀಕೆ ಮಾಡಬಾರದು ಎಂದರು.

ಕಳೆದ 12 ವರ್ಷಗಳಿಂದ ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿದೆ, ನೀವು ಅಷ್ಟು ವರ್ಷಗಳಿಂದ ಸಂಸದರಾಗಿದ್ದರಿ. ಬಿಜೆಪಿ ಸರ್ಕಾರ ಬರುವ ಮೊದಲು ಹಾಗೂ ನಂತರ ಪ್ರಧಾನಿ ಮೋದಿ ಅವರ ಹೇಳಿರುವ ಭಾಷಣ ನೋಡಿದ್ದರೆ ತಮಗೆ ಅರ್ಥವಾಗುತ್ತದೆ. ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರಿಗೆ ಮೌನಿಬಾಬಾ ಎಂದು ಟೀಕಿಸಿದರು, ರೂಪಾಯಿಮೌಲ್ಯ ಕುಸಿಯುತ್ತಿದೆ ದೇಶದ ಪ್ರಧಾನಿಯೇ ಇದಕ್ಕೆ ಹೊಣೆ ಎಂದರು, ವರ್ಷಕ್ಕೆ 2 ಕೋಟಿ ಉದ್ಯೋಗ ಕೊಡುವ ಕುರಿತು ಹೇಳಿದ್ದರು, 15 ಲಕ್ಷ ರೂ. ಖಾತೆ ಜಮೆ ಮಾಡಲಾಗುವುದು ಎಂದು ಹೇಳಿದ್ದರು, ಭಯೋತ್ಪಾದನೆ ಮಟ್ಟಹಾಕಲಾಗುವುದು ಸೇರಿದಂತೆ ಹತ್ತು ಹಲವು ಕುರಿತು ಮಾತನಾಡಿದ್ದರೂ ಅವು ಏನೂ ಆಗಿಲ್ಲ, ಆದರೆ ರಾಜ್ಯ ಸರ್ಕಾರ ಕುರಿತು ಮಾತನಾಡುತ್ತಿರುವುದು ಸರಿಯಲ್ಲ ಎಂದು ದೂರಿದರು.

ಮುಖಂಡ ಡಾ.ರವಿ ಬಿರಾದಾರ, ಫಯಾಜ್ ಕಲಾದಗಿ ಇದ್ದರು.



ಮೇ 28ರಂದು ಗುರುನಮನ ಕಾರ್ಯಕ್ರಮ

ಚಡಚಣ: ಜ್ಞಾನಯೋಗಿ ಸಿದ್ದೇಶ್ವರ ಸ್ವಾಮೀಜಿಗಳ ನೆನಪಿಗಾಗಿ ಚಡಚಣ ಪಟ್ಟಣದಲ್ಲಿ ಮೇ 28ರಂದು ಗುರು ನಮನ ಕಾರ್ಯಕ್ರಮ ಹಾಗೂ ಜೋಡೆತ್ತುಗಳನ್ನು ಸಾಕುತ್ತಿರುವ ರೈತರ ವಿಶೇಷ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಮಹೇಂದ್ರಕುಮಾರ ನಾಯಕ ಫೌಂಡೇಶನ್ ಅಧ್ಯಕ್ಷ ಮಹೇಂದ್ರಕುಮಾರ ನಾಯಕ ತಿಳಿಸಿದ್ದಾರೆ.

ಶನಿವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗುರುಕೃಪಾ ಮಂಗಲ ಕಾರ್ಯಾಲಯದಲ್ಲಿ ಬೆಳಗ್ಗೆ 10 ಗಂಟೆಯಿಂದ ಕಾರ್ಯಕ್ರಮ ನಡೆಯಲಿದ್ದು, ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ಜರುಗಲಿದೆ ಎಂದು ಹೇಳಿದರು.

ಸಿದ್ದೇಶ್ವರ ಸ್ವಾಮೀಜಿಗಳು ಚಡಚಣ ಪಟ್ಟಣದಲ್ಲಿ ಮೂರು ವರ್ಷ ವಿದ್ಯಾಭ್ಯಾಸ ಮಾಡಿದ್ದರು. ಅವರ ಆಧ್ಯಾತ್ಮಿಕ ಮಾರ್ಗದರ್ಶನ, ಸಮಾಜಮುಖಿ ಚಿಂತನೆ ಹಾಗೂ ರೈತರ ಮೇಲಿನ ಅಪಾರ ಕಾಳಜಿಯನ್ನು ಸ್ಮರಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಯುವ ಮುಖಂಡ ಮಹೇಂದ್ರಕುಮಾರ ನಾಯಕ ತಿಳಿಸಿದರು.

ಸಾಧ್ವಿ ಯೋಗೇಶ್ವರಿ ಮಾತಾಜಿ ಬುರುಣಾಪುರ ಮಾತನಾಡಿ, ಸಾವಯವ ಕೃಷಿಗೆ ಮಹತ್ವ ನೀಡುತ್ತಿರುವ ಕಣೇರಿ ಸಿದ್ದಗಿರಿ ಮಠದ ಅದೃಷ್ಯ ಕಾಡಸಿದ್ದೇಶ್ವರ ಶ್ರೀಗಳ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ರೈತರ ನೋವು-ನಲಿವುಗಳಲ್ಲಿ ಭಾಗಿಯಾಗಿ ಕೃಷಿ ಜ್ಞಾನ ಹಾಗೂ ಸಂಸ್ಕೃತಿ ಬಗ್ಗೆ ಜನರಲ್ಲಿ ಜಾಗೃತಿ ಕಾರ್ಯಕ್ರಮ ಇದಾಗಿದ್ದು ಶ್ರೀಗಳ ಆಶೀರ್ವಚನದ ಲಾಭ ಪಡೆಯಬೇಕೆಂದು ಹೇಳಿದರು.

ಯೋಗಾನಂದ ಸ್ವಾಮೀಜಿ ಮಾತನಾಡಿದರು.

ಪಟ್ಟಣದ ಹಿರಿಯರಾದ ಬಾಬುಗೌಡ ಪಾಟೀಲ ಮಾತನಾಡಿ, ಕಾರ್ಯಕ್ರಮದಲ್ಲಿ 101 ಜೋಡೆತ್ತು ಕೃಷಿಕ ರೈತರ ಸೇರಿಸುವ ಪ್ರಯತ್ನ ನಡೆಯುತ್ತಿದ್ದು, ತಾಲೂಕಿನ ಎಲ್ಲಾ ರೈತರು ಸಹಕಾರ ನೀಡಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಪಟ್ಟಣ ಪಂಚಾಯತಿ ಅಧ್ಯಕ್ಷ ಮಲ್ಲಿಕಾರ್ಜುನ ಧೋತ್ರೆ ಮಾತನಾಡಿ, ಇದು ಕೇವಲ ಒಂದು ಸಂಘಟನೆಯ ಕಾರ್ಯಕ್ರಮವಲ್ಲ, ತಾಲೂಕಿನ ಪ್ರತಿಯೊಬ್ಬರ ಕಾರ್ಯಕ್ರಮವಾಗಿದೆ. ಕಾಡಸಿದ್ದೇಶ್ವರ ಸ್ವಾಮೀಜಿಗಳ ಮೆರವಣಿಗೆಯೊಂದಿಗೆ ಬರಮಾಡಿಕೊಳ್ಳಲಾಗುವುದು ಎಂದರು.

ಬಸವರಾಜ ಯಂಕಂಚಿ, ಜೆಡಿ ಪಾವಲೆ, ಅಶೋಕ ಕುಲಕರ್ಣಿ, ದಶರಥ (ನಾನಾ) ಸಂಗಾ, ಮಹಾದೇವ ಯಂಕಂಚಿ, ರಾಜಶೇಖರ ಕೋಳಿ, ಪ್ರಕಾಶಗೌಡ ಪಾಟೀಲ, ಚೇತನ್ ನಿರಾಳೆ, ಅನಿಲ್ ಸಾಲುಂಕೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಗ್ರಾಮಗಳ ಅಭಿವೃದ್ಧಿಯೇ ನನ್ನ ಮೊದಲ ಗುರಿ: ಶಾಸಕ ಮನಗೂಳಿ

ಸಿಂದಗಿ: ಗ್ರಾಮೀಣ ಪ್ರದೇಶಗಳು ಅಭಿವೃದ್ಧಿಯಾದಾಗ ಮಾತ್ರ ಕ್ಷೇತ್ರ ಅಭಿವೃದ್ಧಿಯಾಗಲು ಸಾಧ್ಯ. ಗ್ರಾಮಗಳ ಅಭಿವೃದ್ಧಿಯೇ ನನ್ನ ಮೂಲ ಮಂತ್ರ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ತಾಲೂಕಿನ ಕನ್ನೊಳ್ಳಿ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆಯ 2025-26ನೇ ಸಾಲಿನ ಮುಖ್ಯಮಂತ್ರಿ ಅವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಂಜೂರಾದ ನಡೂರ ಲಕ್ಷ್ಮೀ ದೇವಸ್ಥಾನ ಹತ್ತಿರ ಸಮುದಾಯ ನಿರ್ಮಾಣಕ್ಕಾಗಿ ಮಂಜೂರಾದ ರೂ.25 ಲಕ್ಷ ಹಾಗೂ ಆರೋಗ್ಯ ಇಲಾಖೆಯ ಆಯುಷ್ಮಾನ್ ಆರೋಗ್ಯ ಮಂದಿರ ಕಟ್ಟಡ ನಿರ್ಮಾಣಕ್ಕಾಗಿ ರೂ.65 ಲಕ್ಷ ಮೊತ್ತದ ಕಾಮಗಾರಿಗೆ ಭೂಮಿ ಪೂಜೆಯನ್ನು ನೆರವೇರಿಸಿ ಮಾತನಾಡಿದ ಅವರು, ಕನ್ನೊಳ್ಳಿ ಗ್ರಾಮದ ಬಹುದಿನಗಳ ಬೇಡಿಕೆಯಾಗಿರುವ ಆರೋಗ್ಯ ಕಟ್ಟಡ ಹಾಗೂ ಸಮುದಾಯ ಭವನದ ನಿರ್ಮಾಣ ಕಾಮಗಾರಿ ಇನ್ನು ಕೆಲವೇ ದಿನಗಳಲ್ಲಿ ಪ್ರಾರಂಭಗೊಳ್ಳುತ್ತದೆ ಎಂದರು.

ಹಂತ ಹಂತವಾಗಿ ಹೆಚ್ಚಿನ ಅಭಿವೃದ್ಧಿಗೆ ಆದ್ಯತೆ ನೀಡುತ್ತೇನೆ. ಭಾರತ ಗ್ರಾಮಗಳ ದೇಶ, ಗ್ರಾಮಗಳ ಅಭಿವೃದ್ಧಿಯಲ್ಲಿ ದೇಶದ ಅಭಿವೃದ್ಧಿ ಅಡಗಿದೆ ಎಂಬುದು ಮಹಾತ್ಮ ಗಾಂಧೀಜಿಯವರ ನಂಬಿಕೆಯಾಗಿತ್ತು. ಹೀಗಾಗಿ ಗ್ರಾಮ ಸ್ವರಾಜ್ಯದ ಚಿಂತನೆಯನ್ನು ಅವರು ಸಾರಿದರು. ಗ್ರಾಮಗಳ ಸಬಲೀಕರಣದಲ್ಲಿ ಕರ್ನಾಟಕವು ದೇಶಕ್ಕೆ ಮಾದರಿಯಾಗಿರುವುದು ಸಿದ್ದರಾಮಯ್ಯನವರ ಸರ್ಕಾರದ ಉತ್ತಮ ಆಡಳಿತ ವೈಖರಿಗೆ ಸಾಕ್ಷಿಯಾಗಿದೆ ಎಂದರು. ವಿಜುಗೌಡ ಪಾಟೀಲ, ವಿಶ್ವನಾಥ ಪಾಟೀಲ, ದೊಡ್ಡಪ್ಪ ಮಂಗೊಂಡಿ, ಕಂಟೆಪ್ಪಾ ಸಾಹುಕಾರ್ ಕಲ್ಲೂರ್, ಶಿವಶಂಕರ ನಾಗಠಾಣ, ಯಮನಪ್ಪ ಚೌಧರಿ, ದಯಾನಂದ ಕಲ್ಲೂರ, ರಾಚಪ್ಪ ತಂಬಾಕೆ, ಸಿದ್ದಪ್ಪ ಯಾಳಗಿ, ಮುತ್ತು ಮೂಡಗಿ, ಮಾಜಿ ಜಿ.ಪಂ ಸದಸ್ಯರಾದ ಶಂಕರ ಬಗಲಿ, ಭಾಗಣ್ಣ ನಾಗಠಾಣ, ಮಂಜುನಾಥ ನಾಗಠಾಣ, ಸಿದ್ದಣ್ಣ ಚೌಧರಿ, ಭಾಗಪ್ಪ ಶಿವಣಗಿ, ನಿಂಗಣ್ಣ ನಂದ್ಯಾಳ, ವಿಠ್ಠಲ ಹಡಪದ, ಸೇರಿದಂತೆ ಕಾರ್ಯಕರ್ತರು ಇದ್ದರು.



95 ಲಕ್ಷ ರೂ. ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಯತ್ನಾಳ ಭೂಮಿಪೂಜೆ

ವಿಜಯಪುರ: ನಗರದಲ್ಲಿ ಧಾರ್ಮಿಕ ದತ್ತಿ ಇಲಾಖೆ, ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ 95 ಲಕ್ಷ ರೂ. ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಭೂಮಿಪೂಜೆ ನೆರವೇರಿಸಿದರು.

ನಗರದ ವಾರ್ಡ್ ನಂ.2 ರಲ್ಲಿ ಬರುವ ಶಿವಬಸಪ್ಪ ಗದ್ದುಗೆ ದೇವಸ್ಥಾನದ ಹತ್ತಿರ ಧಾರ್ಮಿಕ ದತ್ತಿ ಇಲಾಖೆಯಿಂದ ಮಂಜೂರಿಸಲಾದ 10 ಲಕ್ಷ ರೂ. ಮೊತ್ತದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ, ವೀರಭದ್ರೇಶ್ವರ ದೇವಸ್ಥಾನದ ಹತ್ತಿರ ಧಾರ್ಮಿಕ ದತ್ತಿ ಇಲಾಖೆಯಿಂದ ಮಂಜೂರಿಸಲಾದ 15 ಲಕ್ಷ ರೂ. ಮೊತ್ತದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಹಾಗೂ ದರ್ಗಾದ ಕರಿಸಿದ್ದೇಶ್ವರ ದೇವಸ್ಥಾನ ಹತ್ತಿರ ಸನ್ 2025-26ನೇ ಸಾಲಿನ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಮತ್ತು ಧಾರ್ಮಿಕ ದತ್ತಿ ಇಲಾಖೆಯಿಂದ ಮಂಜೂರಿಸಲಾದ 70 ಲಕ್ಷ ರೂ. ಅನುದಾನದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಮೇಯರ್ ಎಂ.ಎಸ್. ಕರಡಿ, ಹಾಲುಮತ ಸಮಾಜದ ಅಧ್ಯಕ್ಷ ಮಲ್ಲು ಯಾದವಾಡ, ಸದಸ್ಯರಾದ ರಾಜಶೇಖರ ಕುರಿಯವರ, ಮುಖಂಡರಾದ ಭೀಮನಗೌಡ ಪಾಟೀಲ, ಸಾಯಬಣ್ಣ ಭೋವಿ, ಶಂಕರ ಬಾಲದಂಡಿ, ಈರಣ್ಣ ವಾಡೆದ, ಮತ್ತಿತರರು ಇದ್ದರು.



ಪ್ರತಿಯೊಬ್ಬರೂ ಕಣ್ಣಿನ ಆರೋಗ್ಯದ ಕಾಳಜಿ ವಹಿಸಲಿ: ಶ್ರೀಗಳು

ಸಿಂದಗಿ: ಇಂದಿನ ಒತ್ತಡದ ಜೀವನ ಶೈಲಿ, ಮೊಬೈಲ್ ಹಾಗೂ ಡಿಜಿಟಲ್ ಉಪಕರಣಗಳ ಅತಿಯಾದ ಬಳಕೆಯಿಂದ ಕಣ್ಣಿನ ಸಮಸ್ಯೆಗಳು ಹೆಚ್ಚುತ್ತಿದ್ದು, ಪ್ರತಿಯೊಬ್ಬರೂ ಕಣ್ಣಿನ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದು ಸಾರಂಗ ಮಠದ ಪೀಠಾಧಿಪತಿ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಹೇಳಿದರು.



ನಗರದ ಸಾರಂಗಮಠದಲ್ಲಿ ಚನ್ನವೀರ ಸ್ವಾಮೀಜಿಯವರ 35ನೇ ಪುಣ್ಯ ಸ್ಮರಣೋತ್ಸವ ಅಂಗವಾಗಿ ಚನ್ನವೀರ ಸ್ವಾಮೀಜಿ ಪ್ರತಿಷ್ಠಾನ ಸಾರಂಗಮಠ ಸಿಂದಗಿ, ಲಿಂ.ಎನ್.ಚನ್ನಯ್ಯಸ್ವಾಮಿ ಮತ್ತು ಲಿಂ.ಶಾರದಾದೇವಿ ಜನಕಲ್ಯಾಣ ಫೌಂಡೇಶನ್ ಹಾಗೂ ವಿಜಯಪುರದ ಅನುಗ್ರಹ ಕಣ್ಣಿನ ಆಸ್ಪತ್ರೆಯ ಸಹಯೋಗದಲ್ಲಿ ಹಮ್ಮಿಕೊಂಡ ಉಚಿತ ನೇತ್ರ ತಪಾಸಣೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಜನರು ಸಮಯಕ್ಕೆ ಸರಿಯಾಗಿ ನೇತ್ರ ತಪಾಸಣೆ ಮಾಡಿಸಿಕೊಳ್ಳುವುದರಿಂದ ಅನೇಕ ಕಣ್ಣಿನ ಸಮಸ್ಯೆಗಳನ್ನು ಆರಂಭದಲ್ಲಿಯೇ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ಪಡೆಯಬಹುದು. ಆರೋಗ್ಯ ಸೇವೆಯ ಮೂಲಕ ಸಮಾಜ ಸೇವೆ ಮಾಡುವ ಉದ್ದೇಶದಿಂದ ಇಂತಹ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಚನ್ನವೀರ ಸ್ವಾಮೀಜಿಯವರ ಸೇವಾ ತತ್ವಗಳನ್ನು ಸ್ಮರಿಸಿ, ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸುವುದು ಎಲ್ಲರ ಹೊಣೆಗಾರಿಕೆಯಾಗಿದೆ ಎಂದರು.

ವಿಜಯಪುರದ ಅನುಗ್ರಹ ಕಣ್ಣಿನ ಆಸ್ಪತ್ರೆಯ ವೈದ್ಯರಾದ ಡಾ. ವಿನೀತಾ ಹಾಗೂ ಡಾ. ಜವೀನ ಅವರ ನೇತೃತ್ವದ ವೈದ್ಯಕೀಯ ತಂಡ ಶಿಬಿರದಲ್ಲಿ ಭಾಗವಹಿಸಿ ಕಣ್ಣಿನ ತಪಾಸಣೆ ನಡೆಸಿತು. ಶಿಬಿರದಲ್ಲಿ 124ಕ್ಕೂ ಹೆಚ್ಚು ಜನರು ಉಚಿತ ನೇತ್ರ ತಪಾಸಣೆ ಮಾಡಿಸಿಕೊಂಡಿದ್ದು, 74 ಜನರನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಯಿತು. ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಹಿರಿಯ ನಾಗರಿಕರು ಮತ್ತು ಮಹಿಳೆಯರು ಶಿಬಿರದ ಸದುಪಯೋಗ ಪಡೆದುಕೊಂಡರು.

ಶ್ರೀಮಠದ ಉತ್ತರಾಧಿಕಾರಿ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು, ಅನುಗ್ರಹ ಆಸ್ಪತ್ರೆಯ ಆಡಳಿತಾಧಿಕಾರಿ ದತ್ತು ಹೊಸಮಠ, ಅಶೋಕ ವಾರದ, ಡಾ.ಮಹಾಂತೇಶ ಹಿರೇಮಠ, ಸೋಮಶೇಖರ ಜೋಗೂರ, ಡಾ.ನಾಗರಾಜ ಮುರಗೋಡ, ಕುಮಾರಸ್ವಾಮಿ ಜಹಾಗೀರದಾರ, ವ್ಹಿ.ಆರ್.ಪಾಟೀಲ, ಶ್ರೀದೇವಿ ಸಿಂದಗಿ, ಭೀಮಾಶಂಕರ ಅರಳಗುಂಡಗಿ, ಬಸಯ್ಯ ಮಠ ಸೇರಿದಂತೆ ಶ್ರೀಮಠದ ಭಕ್ತರು, ಸಂಸ್ಥೆಯ ಆಡಳಿತ ಮಂಡಳಿ, ಪದ್ಮರಾಜ ವಿದ್ಯಾವರ್ಧಕ ಸಂಸ್ಥೆಯ ಅಂಗ ಸಂಸ್ಥೆಯ ಪ್ರಾಚಾರ್ಯರು, ಬೋಧಕ ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಜಿ.ಪಿ.ಪೋರವಾಲ ಕಾಲೇಜಿನ ಎನ್‌ಸಿಸಿ, ಎನ್‌ಎಸ್‌ಎಸ್ ಹಾಗೂ ವಿದ್ಯಾರ್ಥಿಗಳು ಇದ್ದರು.

ಶಿಕ್ಷಣ ಕ್ಷೇತ್ರಕ್ಕೆ ಚನ್ನವೀರ ಶ್ರೀಗಳ ಕೊಡುಗೆ ಅಪಾರ: ಮನಗೂಳಿ

ಸಿಂದಗಿ: ಸಮಾಜದ ಬಡ, ಹಿಂದುಳಿದ ಹಾಗೂ ಗ್ರಾಮೀಣ ಭಾಗದ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಬೇಕು ಎಂಬ ಮಹದಾಸೆಯಿಂದ ಪದ್ಮರಾಜ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಹಾಗೂ ತಾ.ಶಿ.ಪ್ರ ಮಂಡಳಿಯನ್ನು ಸ್ಥಾಪಿಸಿ ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಕ್ರಾಂತಿ ಮೂಡಿಸಿದರು ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ನಗರದ ಸಾರಂಗಮಠದ ಲಿಂ.ಸಿದ್ಧಲಿಂಗ ಮಹಾಸ್ವಾಮೀಜಿ ಕಾನ್ಫರೆನ್ಸ್ ಸಭಾಂಗಣದಲ್ಲಿ ಚನ್ನವೀರ ಸ್ವಾಮಿಗಳ 35ನೇ ಪುಣ್ಯಸ್ಮರಣೋತ್ಸವ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಚನ್ನವೀರ ಸ್ವಾಮಿಗಳು ಧಾರ್ಮಿಕ ಕ್ಷೇತ್ರದ ಜೊತೆಗೆ ಶಿಕ್ಷಣ ಕ್ಷೇತ್ರಕ್ಕೂ ಅಪಾರ ಕೊಡುಗೆ ನೀಡಿದ ಯುಗಪುರುಷರಾಗಿದ್ದರು. ಶಿಕ್ಷಣವೆಂಬುದು ಸಮಾಜ ಪರಿವರ್ತನೆಯ ಶಕ್ತಿ ಎಂಬುದನ್ನು ಮನಗಂಡಿದ್ದ ಚೆನ್ನವೀರ ಮಹಾಸ್ವಾಮಿಗಳು ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ದಾರಿಯನ್ನು ತೆರೆದರು ಎಂದರು.

ಚನ್ನವೀರ ಮಹಾಸ್ವಾಮಿಗಳು ಜೀವನೋದ್ದಕ್ಕೂ ಸರಳತೆ, ಸೇವಾ ಮನೋಭಾವ ಹಾಗೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದರು. ಅವರು ಲಿಂಗೈಕರಾಗಿ 35 ವರ್ಷಗಳು ಕಳೆದಿದ್ದರೂ ಅವರ ತತ್ವಗಳು, ಆದರ್ಶಗಳು ಹಾಗೂ ಸೇವಾ ಮನೋಭಾವ ಇಂದಿಗೂ ಸಮಾಜಕ್ಕೆ ದಾರಿದೀಪವಾಗಿವೆ. ಯುವಪೀಳಿಗೆ ಪೂಜ್ಯರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಿಕ್ಷಣ ಮತ್ತು ಸಂಸ್ಕಾರದ ದಾರಿಯಲ್ಲಿ ಸಾಗಬೇಕು ಎಂದರು.

ಸಾರಂಗಮಠದ ಉತ್ತರಾಧಿಕಾರಿ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು ಮಾತನಾಡಿ, ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಸ್ಕಾರ ಮತ್ತು ದೇಶಭಕ್ತಿ ಬೆಳೆಸುವ ಉದ್ದೇಶದಿಂದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ ಪೂಜ್ಯರು ಇಂದಿನ ಶಿಕ್ಷಣ ಕ್ಷೇತ್ರಕ್ಕೂ ಆದರ್ಶಪ್ರಾಯರಾಗಿದ್ದಾರೆ. ಧಾರ್ಮಿಕ ಸೇವೆಯೊಂದಿಗೆ ಮಾನವೀಯ ಮೌಲ್ಯಗಳ ಬೆಳವಣಿಗೆಗೆ ಅವರು ನೀಡಿದ ಮಾರ್ಗದರ್ಶನ ಸದಾ ಪ್ರೇರಣೆಯಾಗಲಿದೆ. ಚನ್ನವೀರ ಸ್ವಾಮಿಗಳ ಸೇವೆ ಕೇವಲ ಒಂದು ಮಠಕ್ಕೆ ಸೀಮಿತವಾಗಿರಲಿಲ್ಲ ಎಂದರು.



ಮಾಡಬಾಳ ಆಯುಷ್ ಸಮುದಾಯ ಆರೋಗ್ಯಾಧಿಕಾರಿ ಚಂದ್ರಕಾಂತ ಬಿರಾದಾರ ಅವರು ಕಾಯಕಯೋಗಿ ಚೆನ್ನವೀರ ಮಹಾಸ್ವಾಮಿಗಳವರ ಕುರಿತು ಉಪನ್ಯಾಸ ನೀಡಿದರು. ಶಾಸಕ ಅಶೋಕ ಮನಗೂಳಿ ಹಾಗೂ ಧರ್ಮಪತ್ನಿ ನಾಗರತ್ನ ಮನಗೂಳಿ ಅವರಿಗೆ ಸನ್ಮಾನಿಸಿ ಗೌರವಿಸಿದರು. ಶ್ರೀಮಠದ ಪ್ರಸಾದನಿಲಯದ ವಿದ್ಯಾರ್ಥಿಗಳು ಅನಿಸಿಕೆ ವ್ಯಕ್ತಪಡಿಸಿದರು.

ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಪಾವನ ಸಾನಿಧ್ಯ ವಹಿಸಿದ್ದರು. ಅಶೋಕ ವಾರದ, ಎಂ.ಎಸ್.ಹೈಯಾಳಕರ್, ವೀರೇಶ ಜೋಗೂರ, ಡಾ. ಶರಣು ಜೋಗೂರ, ಬಿ.ಎಂ.ಸಿಂಗನಳ್ಳಿ, ವ್ಹಿ.ಪಿ.ನಂದಿಕೋಲ, ಪಿ.ವ್ಹಿ. ಮಹಲಿನಮಠ, ಎಸ್.ವೈ.ಯರಲಡ್ಡಿ, ಶರಣಗೌಡ ಪಾಟೀಲ, ಶಕುಂತಲಾ ಹಿರೇಮಠ, ಸಾಹೇಬಗೌಡ ದುದ್ದಗಿ, ಶ್ರೀದೇವಿ ಸಿಂದಗಿ ಇದ್ದರು.

ಕಿರುಸುದ್ದಿ

ಅರಣ್ಯ ಅಧಿಕಾರಿ ಜಡಿಯಪ್ಪ ವರ್ಗಾವಣೆ: ಸನ್ಮಾನ

ಮುನಿರಾಬಾದ್: ವಲಯ ಅರಣ್ಯ ಇಲಾಖೆಯಲ್ಲಿ ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ಕಾರ್ಯ ನಿರ್ವಹಿಸುತ್ತಿದ್ದ ಜಡಿಯಪ್ಪನವರು ಶುಕ್ರವಾರ ಬಿದರ ಜಿಲ್ಲೆಯ ವಲಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಪದೋನ್ನತಿ ಪಡೆದಿರುವ ಹಿನ್ನಲೆಯಲ್ಲಿ ಶನಿವಾರ ವಿವಿಧ ಸಂಘಟನೆಗಳಿಂದ ಸನ್ಮಾಸಿ ಗೌರವಿಸಲಾಯಿತು.

ಈ ವೇಳೆ ಮಾತನಾಡಿದ ಕೃಷಿ ಸಂರಕ್ಷಣಾ ಸೇವಾ ಸಮಿತಿ ಅಧ್ಯಕ್ಷ ಟಿ.ಹುಲುಗಪ್ಪ ಬಾಳೆಕಾಯಿ, ಕಳೆದ ಒಂದು ವರ್ಷ ಕಾರ್ಯನಿರ್ವಹಿಸುತ್ತಿದ್ದ ಮುನಿರಾಬಾದ್ ವಲಯದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಮರಳು ಮಾಫಿಯಾಗಳಂತಹ ಕೆಲವು ಅಕ್ರಮಗಳನ್ನು ತಡೆಯುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು.

ಜಿಲ್ಲಾ ಮಟ್ಟದ ಅಧಿಕಾರಿಗಳು ಮಟ್ಟ ಹಾಕದ ಗ್ರಾನೈಟ್ ಗಣಿಗಾರಿಕೆಗೆ ಬ್ರೇಕ್ ಕೊಟ್ಟಿರುವ ಇವರು ಇನ್ನೂ ಮುಂದಿನ ದಿನಗಳಲ್ಲಿ ಅತಿ ಉನ್ನತ ಅಧಿಕಾರಿಯಾಗಲಿ ಎಂದರು. ಉಪವಲಯ ಅರಣ್ಯ ಅಧಿಕಾರಿ ಲಿಂಗರಾಜ, ರೈತ ಕೃಷಿ ಸಂರಕ್ಷಣಾ ಸಮಿತಿ ಅಧ್ಯಕ್ಷ ಟಿ ಹುಲುಗಪ್ಪ ಬಾಳೆಕಾಯಿ, ಮಹರ್ಷಿ ವಾಲ್ಮೀಕಿ ಸಂಘದ ಅಧ್ಯಕ್ಷ ತಾರಪತಿ ನಾಯಕ, ದಲಿತ ಸಂಘರ್ಷ ಸಮಿತಿ ಅಧ್ಯಕ್ಷ ನಾಗರಾಜ, ಪದಾಧಿಕಾರಿಗಳಾದ ಪತ್ರಪ್ಪ, ವೆಂಕಟೇಶ್, ರಾಜು ಇತರರಿದ್ದರು.

ವಿವಿಧ ಬೇಡಿಕೆ ಈಡೇರಿಸಲು ಆಗ್ರಹ



ಕುಷ್ಟಗಿ: ತಾಲೂಕಿನ ಗುಮಗೇರಾ ಗ್ರಾಮದ ಸೌರ ವಿದ್ಯುತ್ ಉತ್ಪಾದನಾ ಘಟಕದಲ್ಲಿ ವಿವಿಧ ಬೇಡಿಕೆಗಳ ಈಡೇರಿಸುವಂತೆ ಒತ್ತಾಯಿಸಿ ಕಾರ್ಮಿಕರು ಅನಿರ್ದಿಷ್ಟ ಪ್ರತಿಭಟನೆ ನಡೆಸಿದರು. ತಾಲೂಕಿನ ಗುಮಗೇರಾ ಗ್ರಾಮ ಸೀಮಾದ ವ್ಯಾಪ್ತಿಯಲ್ಲಿನ ಸೋಲಾರ್ ವಿದ್ಯುತ್ ಘಟಕದಲ್ಲಿ ಕೆಲಸ ಮಾಡುವ ವಿವಿಧ ಕಾರ್ಮಿಕರ ವಿವಿಧ ಬೇಡಿಕೆಗಳಾದ ವೇತನ ಹೆಚ್ಚಳ, ಸೇವಾ ಭದ್ರತೆ, ಅರಿಯರ್ಸ್, ಕಂಪನಿ ಅನ್‌ರೋಲ್, ಪಿ.ಎಫ್. ಸ್ಥಳೀಯ ತಾಂತ್ರಿಕ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಕಾರ್ಮಿಕರು ಹಾಗೂ ಕರ್ನಾಟಕ ರಾಜ್ಯ ರೈತಪರ ಹೋರಾಟ ಸಂಘದ ಪದಾಧಿಕಾರಿಗಳು ಕಾರ್ಮಿಕರಾದ ಪರಸಪ್ಪ ಅಳ್ಳಳ್ಳಿ, ರೈತ ಸಂಘದ ಹನಮೇಶ ಎಸ್.ಎಚ್., ಶಾಖಾಪುರ, ಜಿಲ್ಲಾ ಕಾರ್ಯಾಧ್ಯಕ್ಷ ಹೊನ್ನಪ್ಪ ಎಚ್.ತಳವಾರ, ತಾಲೂಕು ಉಪಾಧ್ಯಕ್ಷ ಚಂದ್ರು ಪಾಟೀಲ, ಸಹಕಾರ್ಯದರ್ಶಿ ಮಾರುತಿ ಜರಗಡ್ಡಿ, ಬಸನಗೌಡ.ಎನ್.ಗೌಡ್ರು, ಗ್ಯಾನಪ್ಪ ವೈ.ಗುರಿಕಾರ, ಶಿವಶರಣಪ್ಪ ಗುರಿಕಾರ, ಶರಣಪ್ಪ ಅಕ್ಕಿಹುಗ್ಗಿ ಸೇರಿದಂತೆ ಇತರರಿದ್ದರು.

ಆಲ್ ಇಂಡಿಯಾ ಕರಾಟೆ ಚಾಂಪಿಯನ್‌ಶಿಪ್: ಪ್ರಶಸ್ತಿ

ಬಳ್ಳಾರಿ: ಆಲ್ ಇಂಡಿಯಾ ಕರಾಟೆ 24ನೇ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕ ತಂಡಕ್ಕೆ ಪ್ರಶಸ್ತಿ ಲಭಿಸಿದೆ. ಅಸ್ಸಾಂ ರಾಜ್ಯದ ಗುವಾಟಿಯ ಬೋಗೇಶ್ವರ ಒಳ ಕ್ರೀಡಾಂಗಣದಲ್ಲಿ ಇತ್ತೀಚೆಗೆ ವರ್ಲ್ಡ್ ಟ್ರೆಡಿಷನಲ್ ಶೋಟೋಕನ್ ಕರಾಟೆ ಫೇಡರೇಷನ್ ಆಯೋಜಿಸಿದ್ದ 24ನೇ ಆಲ್ ಇಂಡಿಯಾ ಕರಾಟೆ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಟ್ರೆಡಿಷನಲ್ ಶೋಟೋಕನ್ ಕರಾಟೆ ಅಕಾಡೆಮಿ ಕರ್ನಾಟಕದ ಬಳ್ಳಾರಿಯ ಜಿಂದಾಲ್ ಶಾಲೆಯ ಹಾಗೂ ಬಳ್ಳಾರಿ, ವಿಜಯನಗರ ಜಿಲ್ಲೆಯ ಕರಾಟೆ ಪಟುಗಳು ಭಾಗವಹಿಸಿ ವಿವಿಧ ಪ್ರಶಸ್ತಿಗಳನ್ನು ಪಡೆಯುವ ಮೂಲಕ ಗಮನ ಸೆಳೆದಿದ್ದಾರೆ. ತೋರಣಗಲ್ ಜಿಂದಾಲ್ ಶಾಲೆಯ ವಿದ್ಯಾರ್ಥಿಗಳಾದ ಯಶ್ ರಾಜ್ 12ವರ್ಷದ ಕುಮಿತೆ ವಿಭಾಗದಲ್ಲಿ ದ್ವಿತೀಯ, ಅಕ್ಷೋಭ್ಯಾ 11ನೇ ವರ್ಷದ ವಯೋಮಿತಿಯ ಕುಮಿತೆ ವಿಭಾಗದಲ್ಲಿ ತೃತೀಯ, ಸಾಗರ್ ಕವಾಸಿ 10 ವರ್ಷದ ವಯೋಮಿತಿಯ ಕುಮಿತೆ ವಿಭಾಗದಲ್ಲಿ ದ್ವಿತೀಯ, ರಿಹಾನ್ ಠಾಕೂರ್ 9 ವರ್ಷದ ವಯೋಮಿತಿಯ ಕುಮಿತೆಯಲ್ಲಿ ತೃತೀಯ, ಮಿನೀಷಾ ಮಿಸ್ತ್ರಿ 8 ವರ್ಷದ ವಯೋಮಿತಿಯ ಕುಮಿತೆ ದ್ವಿತೀಯ, ಪೀಸಾ ಅನುಪ್, ಕೊಮಟ್ಟಿ ವರುಣ್ ಬಾಬು, ಸರಸ್ವತಿ ಕುಲಕರ್ಣಿ 15 ವರ್ಷ ಮೇಲ್ಪಟ್ಟು ಗ್ರೂಪ್ ಕಟ್ಸಾದಲ್ಲಿ ತೃತೀಯ, ಧನೀಶ್ ರೆಡ್ಡಿ 10 ವರ್ಷದ ವಯೋಮಿತಿಯ ಕುಮಿತಿ ವಿಭಾಗದಲ್ಲಿ ದ್ವಿತೀಯ, ಬಿಂದಿಯಾ 13 ವರ್ಷದ ವಯೋಮಿತಿಯ ಕುಮಿತೆ ಯಲ್ಲಿ ದ್ವಿತೀಯ ಸೇರಿದಂತೆ ಅನೇಕ ವಿದ್ಯಾರ್ಥಿಗಳು ವಿವಿಧ ಪ್ರಶಸ್ತಿಗಳನ್ನು ಪಡೆಯುವ ಮೂಲಕ ಗಮನ ಸೆಳೆದಿದ್ದಾರೆ.



ಮುನಿರಾಬಾದ್: ವಲಯ ಅರಣ್ಯ ಇಲಾಖೆಯಲ್ಲಿ ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ಕಾರ್ಯ ನಿರ್ವಹಿಸುತ್ತಿದ್ದ ಜಡಿಯಪ್ಪನವರು ಶುಕ್ರವಾರ ಬಿದರ ಜಿಲ್ಲೆಯ ವಲಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಪದೋನ್ನತಿ ಪಡೆದಿರುವ ಹಿನ್ನಲೆಯಲ್ಲಿ ಶನಿವಾರ ವಿವಿಧ ಸಂಘಟನೆಗಳಿಂದ ಸನ್ಮಾಸಿ ಗೌರವಿಸಲಾಯಿತು.

ಗೋವಂಶ ರಕ್ಷಣೆಗೆ ಕಟ್ಟುನಿಟ್ಟಿನ ಕ್ರಮಕ್ಕೆ ಆಗ್ರಹ

ಕಲಬುರಗಿ: ಬಕ್ರೀದ್ ಹಬ್ಬದ ಹಿನ್ನೆಲೆದಲ್ಲಿ ಗೋವಂಶ ಹತ್ಯೆ,ಅಕ್ರಮ ಸಾಗಣೆ ಹಾಗೂ ಕುರ್ಬಾನಿ ತಡೆಗಟ್ಟಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ವಿಶ್ವ ಹಿಂದೂ ಪರಿಷತ್ ಬಜರಂಗದಳ ಸಂಘಟನೆ ನಗರ ಪೊಲೀಸ್ ಆಯುಕ್ತರಿಗೆ ಶನಿವಾರ ಮನವಿ ಸಲ್ಲಿಸಿದರು.

ಕರ್ನಾಟಕ ಗೋಹತ್ಯೆ ನಿಷೇಧ ಕಾಯ್ದೆಯಡಿ ಗೋವಂಶ ಹತ್ಯೆ ಮತ್ತು ಸಾಗಣೆ ಅಪರಾಧವಾಗಿದ್ದು, ಇದನ್ನು ತಡೆಯಲು ವಿಶೇಷ ತಂಡಗಳನ್ನು ರಚಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಿ, ಮೇ 28ರವರೆಗೆ ಜಿಲ್ಲೆಯಲ್ಲಿ ಕಟ್ಟುನಿಟ್ಟಿನ ಬಂದೋಬಸ್ತ್ ಮಾಡಬೇಕು. ಗಡಿಭಾಗಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ ವಾಹನಗಳ ತಪಾಸಣೆ ನಡೆಸಬೇಕು ಎಂದರು. ವಿಶೇಷವಾಗಿ ಕ್ಲೋಸ್ಡ್ ಟ್ಯಾಂಕರ್ ಹಾಗೂ ಅನುಮಾನಾಸ್ಪದ ವಾಹನಗಳ ಪರಿಶೀಲನೆಗೆ ಸೂಚಿಸಲಾಗಿದೆ. ಅಕ್ರಮ ಗೋಸಾಗಣೆ, ಗೋಮಾಂಸ ಮಾರಾಟ ಹಾಗೂ ಗೋಹತ್ಯೆ ಪ್ರಕರಣಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಮರುಕಳಿಸುವ ಅಪರಾಧಿಗಳ ಮೇಲೆ ವಿಶೇಷ ನಿಗಾ ವಹಿಸಿ ಜಾಮೀನು ಸಿಗದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಗೋವಂಶ ರಕ್ಷಣೆಗೆ ಡ್ರೋನ್, ಎಲೆಕ್ಟ್ರಾನಿಕ್ ಸ್ಕ್ಯಾನರ್ ಸೇರಿದಂತೆ ಆಧುನಿಕ ತಂತ್ರಜ್ಞಾನ ಬಳಸಬೇಕು. ಸಾರ್ವಜನಿಕರ ಸಹಕಾರದೊಂದಿಗೆ ಗೋ ರಕ್ಷಣಾ ಕಾರ್ಯಾಚರಣೆ ನಡೆಸುವಂತೆ ಕೂಡ ಮನವಿ ಮಾಡಲಾಯಿತು.



ಕಲಬುರಗಿ: ಬಕ್ರೀದ್ ಹಬ್ಬದ ಹಿನ್ನೆಲೆದಲ್ಲಿ ಗೋವಂಶ ಹತ್ಯೆ,ಅಕ್ರಮ ಸಾಗಣೆ ಹಾಗೂ ಕುರ್ಬಾನಿ ತಡೆಗಟ್ಟಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ವಿಶ್ವ ಹಿಂದೂ ಪರಿಷತ್ ಬಜರಂಗದಳ ಸಂಘಟನೆ ನಗರ ಪೊಲೀಸ್ ಆಯುಕ್ತರಿಗೆ ಶನಿವಾರ ಮನವಿ ಸಲ್ಲಿಸಿದರು. ಬಜರಂಗದಳ ಪ್ರಾಂತ ಸಂಯೋಜಕ ಬಸವರಾಜ ಸುಗೂರ, ನಗರ ಸಂಯೋಜಕ ರಾಘವೇಂದ್ರ ಗುತ್ತೇದಾರ್, ಗೋರಕ್ಷಾ ಪ್ರಮುಖ ಕೌಸ್ತುಭ ಕುಲಕರ್ಣಿ, ವಿಭಾಗ ಸಹ ಸಂಯೋಜಕ ಶಿವಕುಮಾರ ಸುಕಲೂರ, ಶಶಿಕುಮಾರ್ ಶೆಟ್ಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸಂಕಷ್ಟದಲ್ಲಿ ಕುರಿಗಾರರು | ನೆರವಿಗೆ ಸರ್ಕಾರಕ್ಕೆ ಮನವಿ

ಆಹಾರ, ನೀರಿಗೆ ಕುರಿಗಳ ಅಲೆದಾಟ

ಶಿವಮೂರ್ತಿ ಇಟಗಿ

ಯಲಬುರ್ಗಾ: ತಾಲೂಕಿನಲ್ಲಿ ಏಪ್ರೀಲ್ ಅಂತ್ಯದ ತಿಂಗಳದಲ್ಲಿ ತಾಪಮಾನ 30ರಿಂದ 34 ಡಿಗ್ರಿ ಸೆಲ್ಸಿಯಸ್‌ವರೆಗೂ ಏರಿಕೆಯಾಗಿದ್ದು, ಜನ-ಜಾನುವಾರುಗಳ ಬದುಕು ಹೇಳತೀರದಾಗಿದೆ.

ಮೇ ತಿಂಗಳಲ್ಲಿ ಉಷ್ಣತೆ ಭೀತಿ: ಕಳೆದ ವರ್ಷ ಇದೇ ಅವಧಿಯಲ್ಲಿ 35ಕ್ಕೂ ಅಧಿಕ ಡಿಗ್ರಿ ಸೆಲ್ಸಿಯಸ್ ಇದ್ದ ತಾಪಮಾನ ಈ ಬಾರಿ ತೀವ್ರವಾಗಿ ಏರಿರುವುದು ಬೇಸಿಗೆಯ ತೀವ್ರತೆಯನ್ನು ತೋರಿಸುತ್ತಿದ್ದು, ಮೇ ತಿಂಗಳನಲ್ಲೂ ಉಷ್ಣತೆ ಹೆಚ್ಚಾದ ಭೀತಿ ಎದುರಾಗಿದೆ. ಬೆಳಿಗ್ಗೆ 8 ಗಂಟೆಯಿಂದಲೇ ಬಿಸಿಗಾಳಿ ಬೀಸುತ್ತಿದ್ದು, ಮಧ್ಯಾಹ್ನದ ವೇಳೆಗೆ ಭೂಮಿ ಕಾವಲಿಯಂತೆ ಉರಿಯುತ್ತಿದೆ. ರಸ್ತೆಗಳು ಬಿಕೋ ಎನ್ನುತ್ತವೆ. ಸಂಜೆವರೆಗೂ ಬಿಸಿಲಿನ ತಾಪ ಕಡಿಮೆಯಾಗದಿರುವುದು ಜನರಲ್ಲಿ ಆತಂಕ ಮೂಡಿಸಿದೆ.

ಜಾಲಿ ಕಾಯಿಗಳೇ ಗತಿ: ಮಳೆ ಕೊರತೆಯಿಂದ ಮೇವು ಸಂಪೂರ್ಣ ಒಣಗಿದ್ದು, ಕೆರೆ-ಹಳ್ಳಗಳು ಬರಿದಾಗಿವೆ. ಇದರಿಂದ ಕುರಿ, ಮೇಕೆ, ಹಸು, ಎಮ್ಮೆಗಳಿಗೆ ಆಹಾರ ಮತ್ತು ನೀರಿನ ಕೊರತೆ ತೀವ್ರವಾಗಿದೆ. ಕುರಿಗಾಹಿಗಳು ದಿನಕ್ಕೆ 10ರಿಂದ 15



ಕಿ.ಮೀ ದೂರ ಸಾಗಿ ಮೇವು ಮತ್ತು ನೀರಿಗಾಗಿ ಸಾಕಷ್ಟು ಅಲೆದಾಡುವಂತಾಗಿದೆ. ಭೂಮಿ ಬರಡಾಗಿರುವುದರಿಂದ ಹಳ್ಳದ ಗಿಡಗಳು, ಜಾಲಿ ಕಾಯಿಗಳನ್ನೇ ಆಶ್ರಯಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ದಿಗಂತ ವಿಶೇಷ

ಕುರಿ, ಮೇಕೆಗಳ ಆರೋಗ್ಯ ಹದಗೆಡುತ್ತಿದೆ: ಮೇವಿನ ಕೊರತೆಯಿಂದ ಕುರಿ ಮೇಕೆಗಳ ಆರೋಗ್ಯ ಹದಗೆಡುತ್ತಿದ್ದು, ಗರ್ಭಿಣಿ ಕುರಿಗಳಲ್ಲಿ ಗರ್ಭಪಾತ ಪ್ರಕರಣಗಳು ಹೆಚ್ಚುತ್ತಿರುವುದು ಹೊಸ ಆತಂಕವಾಗಿದೆ.ಮರಿ ಹಾಕಿದ ತಾಯಿಗಳಲ್ಲಿ ಹಾಲಿನ ಉತ್ಪಾದನೆಯೂ ಕುಸಿದಿದೆ. ಜಾನುವಾರುಗಳ ಮೇಲೂ ಬಿಸಿಲಿನ ತೀವ್ರ ಪರಿಣಾಮ ಕಂಡುಬರುತ್ತಿದ್ದು, ಕುರಿ-ಮೇಕೆಗಳು ನೆರಳಿನಲ್ಲೇ ಆಶ್ರಯ ಪಡೆಯುತ್ತಿವೆ. ಹಸು, ಎಮ್ಮೆ ನೀರಿನ ಮೂಲಗಳ ಬಳಿ ನೆಲೆಸುತ್ತಿದ್ದು, ಕೆರೆಗಳಲ್ಲಿ ಮಲಗಿ ದೇಹ ತಂಪಾಗಿಸಿಕೊಳ್ಳುವ ದೃಶ್ಯಗಳು ಕಾಣಿಸಿಕೊಳ್ಳುತ್ತಿರುವದು ಸಾಮಾನ್ಯವಾಗಿವೆ.

ನೂರಾರು ಕುರಿಗಳನ್ನು ಸಾಕುವವರು ಬಯಲಿನಲ್ಲಿ ಮೇವಿಗಾಗಿ ಅಲೆದಾಡ ಬೇಕಾಗಿದೆ. ಸರ್ಕಾರ ತಕ್ಷಣ ನೆರವಿಗೆ ಬರಬೇಕು' ಎಂದು ಕುರಿಗಾಹಿ ಶಿವರಾಜ ಆರೇರ ಆಗ್ರಹಿಸಿದರು. 15 ಕಿ.ಮೀ ನಡೆದರೂ ನೀರು-ಮೇವು ಸಿಗುತ್ತಿಲ್ಲ ಎಂದು ಕುರಿಗಾಹಿ ತಮ್ಮ ಅಳಲು ತೊಡಿಕೊಂಡಿದ್ದಾರೆ.

ಮೇವು ಕೇಂದ್ರ ಆರಂಭಿಸಿ

ಮೇವು ಮತ್ತು ನೀರಿನ ಕೊರತೆ ಗಂಭೀರವಾಗಿದೆ. ತಕ್ಷಣ ಮೇವು ಕೇಂದ್ರಗಳನ್ನು ಆರಂಭಿಸಬೇಕು. ಬಿಸಿಲಿನ ಹೊಡೆತಕ್ಕೆ ಸಿಲುಕಿರುವ ಕುರಿಗಾಹಿಗಳ ಸಂಕಷ್ಟ ದಿನದಿಂದ ದಿನಕ್ಕೆ ಗಂಭೀರವಾಗುತ್ತಿದ್ದು, ತಕ್ಷಣ ಮೇವು ಬ್ಯಾಂಕ್, ಕುಡಿಯುವ ನೀರಿನ ತೊಟ್ಟಿಗಳು ಹಾಗೂ ತುರ್ತು ನೆರವಿನ ಕ್ರಮಗಳನ್ನು ಜಾರಿಗೆ ತರದಿದ್ದರೆ, ಈ ಸಾಂಪ್ರದಾಯಿಕ ಉದ್ಯೋಗವೇ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಹೆಚ್ಚಿದೆ ಎಂದು ಕುರಿಗಾಯಿಗಳಾದ ಅಂಬಣ್ಣ ತಳವಾರ, ಭೀಮನಗೌಡ ಮಾಲಿಪಾಟೀಲ, ಪರಸಪ್ಪ ಹರಿಜನ ಹೇಳತ್ತಾರೆ.

ಅಕ್ರಮ ಮದ್ಯ ಮಾರಾಟ ತಡೆಗೆ ಒತ್ತಾಯ

ಗಂಗಾವತಿ: ತಾಲೂಕಿನಾದ್ಯಂತ ಅಕ್ರಮ ಮದ್ಯ ಮಾರಾಟ ಎಗ್ಗಿಲ್ಲದೇ ನಡೆಯುತ್ತಿದ್ದು, ಕೂಡಲೇ ಅಬಕಾರಿ ಇಲಾಖೆ ಅಕ್ರಮ ಮದ್ಯ ಮಾರಾಟಗಾರರ ಮೇಲೆ ಶಿಸ್ತು ಕ್ರಮ ಜರುಗಿಸಲು ಕರವೇ ಎಂದು ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಗಿಣಿಮೋತಿ ಒತ್ತಾಯಿಸಿದರು.

ಅವರು ನಗರ ಪೊಲೀಸ್ ಠಾಣೆಗೆ ನೂತನ ಆರಕ್ಷಕ ನಿರೀಕ್ಷಕ ಪ್ರಕಾಶ ಆರ್.ಯಾತನೂರು ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು. ನಮ್ಮ ಸಂಘಟನೆಯಿಂದ ಈಗಾಗಲೇ ಅಬಕಾರಿ ಉಪ ಆಯುಕ್ತರು ಹಾಗೂ ಕೊಪ್ಪಳ ವಲಯ ಅಬಕಾರಿ ನಿರೀಕ್ಷರಿಗೆ ಮನವಿ ಸಲ್ಲಿಸಲಾಗಿದೆ. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವು ಸಿಎಲ್-2 ಸನ್ನದುದಾರರ ಎಲ್ಲಾ ಅಂಗಡಿಗಳಲ್ಲಿ ಕೌಂಟರ್ ನಿಂದ ಗ್ರಾಹಕರ ಟೇಬಲ್‌ಗಳಿಗೆ ರಾಜಾರೋಷವಾಗಿ ಮದ್ಯ ಸರಬರಾಜು ಮಾಡುತ್ತಿದ್ದು, ಇದು ಕರ್ನಾಟಕ ಅಬಕಾರಿ ನಿಯಮಗಳು 1965ರ ನಿಯಮ 5(2)ರ ಕಾಯ್ದೆಯನ್ನು ಸಂಪೂರ್ಣವಾಗಿ ಉಲ್ಲಂಘಿಸಿದಂತಾಗಿದೆ. ಈ ಅಂಗಡಿಗಳು ಚಿಲ್ಲರೆ ಮಾರಾಟದ ಪರವಾನಿಗೆಯನ್ನು ದುರುಪಯೋಗಪಡಿಸಿಕೊಂಡು, ಅಬಕಾರಿ ಶುಲ್ಕವನ್ನು ಪಾವತಿಸದೇ ಕಾನೂನುಬದ್ಧ ಮಾನದಂಡಗಳನ್ನು ಅನುಸರಿಸದೇ ಯಾವುದೇ ಮದ್ಯದ ರೇಟ್ ಬೋರ್ಡ್ ಹಾಕದೇ ಸಿಎಲ್-9 ಬಾರ್ ಮತ್ತು ರೆಸ್ಟೋರೆಂಟ್ ಗಳಂತೆ ಅನಧಿಕೃತವಾಗಿ ವರ್ತಿಸುತ್ತಿವೆ ಜಿಲ್ಲಾ ಮತ್ತು ತಾಲೂಕ ಕೇಂದ್ರ ಸ್ಥಾನದಿಂದ ಗ್ರಾಮೀಣ ಪ್ರದೇಶದಲ್ಲಿರುವ ಡಾಬಾಗಳು. ಪಾನ್ ಬೀಡಾ ಅಂಗಡಿಗಳು. ಸಣ್ಣ ಸಣ್ಣ ಕಿರಾಣಿ ಅಂಗಡಿಗಳಲ್ಲಿ ಕದ್ದು ಮುಚ್ಚಿ ಅಕ್ರಮ ಮದ್ಯ/ಬಿಯರ್/ವೈನ್ ವ್ಯಾಪಾರ ಮಾಡುತ್ತಿದ್ದು, ಅಬಕಾರಿ ಸತ್ಯಾಪನಾ ಪತ್ರ (ಇವಿಸಿ) ಪಡೆಯದೇ ಕರ್ನಾಟಕ ಅಬಕಾರಿ (ಮದ್ಯಪಾನೀಯಗಳ ಸ್ವಾಧೀನತೆ. ಸಾಗಾಣಿಕೆ. ಆಮದು ಮತ್ತು ರಫ್ತು) ನಿಯಮಗಳು, 1965ರ ಕಾಯ್ದೆಯನ್ನು ಉಲ್ಲಂಘನೆ ಮಾಡಿ ಅನ್ವಯಿಸುವ ಅಬಕಾರಿ ರಫ್ತು ಸುಂಕವನ್ನು ಭರಿಸದೇ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತ್ತಿರುವುದನ್ನು ನಮ್ಮ ಕರವೇ ಬಲವಾಗಿ ಖಂಡಿಸುತ್ತದೆ ಎಂದರು.

ಕರವೇ (ನಾರಾಯಣಗೌಡ ಬಣ) ಸಂಘಟನೆಯ ತಾಲೂಕ ಉಪಾಧ್ಯಕ್ಷ ನಿಸಾರ್, ತಾಲೂಕ ಕಾರ್ಯದರ್ಶಿ ಅಂಜನಿ ಗೊರೂರು, ಪ್ರವೀಣಕುಮಾರ, ಸಾ.ಜಾ ತಾಲೂಕ ಸಂಚಾಲಕ ಶಬ್ಬೀರ್ ಪಾಶಾ, ನಗರ ಘಟಕದ ಪದಾಧಿಕಾರಿಗಳಾದ ಅಜಯಕುಮಾರ, ಬಸಣ್ಣ ಕಲ್ಗುಡಿ ಇದ್ದರು.



ವಿಶ್ವಕರ್ಮ ಸಮಾಜದಿಂದ ಪ್ರತಿಭಾ ಪುರಸ್ಕಾರ

ಮಾನ್ವಿ: ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಬೆಂಗಳೂರುವತಿಯಿಂದ ಮೇ 31ರಂದು ಮಾಜಿ ವಿಧಾನಪರಿಷತ್ ಸದಸ್ಯರು ಹಾಗೂ ಅ.ಕ.ವಿ.ಮಹಾಸಭಾ ರಾಜ್ಯಾಧ್ಯಕ್ಷರಾದ ಕೆ.ಪಿ.ನಂಜುಂಡಿ ವಿಶ್ವಕರ್ಮ ಅವರ ನೇತೃತ್ವದಲ್ಲಿ ಬೆಂಗಳೂರಿನ ಟೌನ್‌ಹಾಲ್ ಪುಟ್ಟಣ್ಣಚೆಟ್ಟಿ ಭವನದಲ್ಲಿ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

2025-26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.75ಕ್ಕಿಂತ ಅಧಿಕ ಅಂಕವನ್ನು ಪಡೆದ ತಾಲೂಕಿನ ಆಸಕ್ತ ವಿದ್ಯಾರ್ಥಿಗಳು ಮೇ 23ರೊಳಗಾಗಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ವರ್ಗಾವಣೆ ಪ್ರಮಾಣ ಪತ್ರ. ಭಾವಚಿತ್ರವನ್ನು ದೂ.ಸಂಖ್ಯೆಗೆ 9886423935 ವಾಟ್ಸ್‌ಆ್ಯಪ್ ಮೂಲಕ ಕಳುಹಿಸಬೇಕು ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ತಾಲೂಕು ಅಧ್ಯಕ್ಷ ಕೆ.ಅಮರನಾಥ ಕೋರಿದ್ದಾರೆ.

ನಿಯಮ ಬಾಹಿರ ಬಜೆಟ್ ಮಂಡನೆ: ಆರೋಪ

ರಾಯಚೂರು: ಸ್ಥಳೀಯ ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ಕುಲಪತಿಗಳ ಅನುಪಸ್ಥಿತಿಯಲ್ಲೇ ಸಿಂಡಿಕೇಟ್ ಸಭೆ ನಡೆಸಿ, ನಿಯಮ ಬಾಹಿರವಾಗಿ 63 ಕೋಟಿ ರೂಪಾಯಿಗಳ ಆಯವ್ಯಯ (ಬಜೆಟ್) ಮಂಡಿಸಲಾಗಿದೆ ಎಂದು ಕರ್ನಾಟಕ ನಾಯಕರ ಒಕ್ಕೂಟದ ಜಿಲ್ಲಾಧ್ಯಕ್ಷ ಡಾ. ರವಿಕುಮಾರ ನಾಯಕ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯೊಲ್ಲಿ ಮಾತನಾಡಿ, ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಈ ಕ್ರಮ ಕಾನೂನು ಬಾಹಿರವಾದುದಲ್ಲದೆ ಸಂಪೂರ್ಣ ನಿಯಮಗಳ ಉಲ್ಲಂಘನೆಯಾಗಿದೆ. ?ಮೇ.21 ರಂದು ವಿಶ್ವವಿದ್ಯಾಲಯದ 2026-27ನೇ ಸಾಲಿನ ಅಂದಾಜು ಆಯವ್ಯಯದ ಕುರಿತು ಸಿಂಡಿಕೇಟ್ ಸಭೆ ಕರೆಯಲಾಗಿತ್ತು. ಆದರೆ, ಅತ್ಯಂತ ಪ್ರಮುಖವಾದ ಈ ಸಭೆಗೆ ವಿಶ್ವವಿದ್ಯಾಲಯದ ಕುಲಪತಿ ಶಿವಾನಂದ ಕೆಳಗಿನಮನಿ ಗೈರುಹಾಜರಾತಿಯಲ್ಲಿಯೂ ಸಭೆ ನಡೆಸಿ ಬಜೆಟ್ ಮಂಡಿಸಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ ಎಂದರು. ವಿಶೇಷವೆಂದರೆ, ಅದೇ ದಿನ ಬೆಳಿಗ್ಗೆ ವಿಶ್ವವಿದ್ಯಾಲಯದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗ್ರಾಮೀಣ ಶಾಸಕರು ಹಮ್ಮಿಕೊಂಡಿದ್ದ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಕುಲಪತಿಗಳು ಭಾಗವಹಿಸಿದ್ದರು. ಅಷ್ಟೇ ಅಲ್ಲದೆ, ಅತಿಥಿ ಉಪನ್ಯಾಸಕರು ಮನವಿ ಸಲ್ಲಿಸಲು ಬಂದಾಗ ಅದನ್ನು ಖುದ್ದಾಗಿ ಸ್ವೀಕರಿಸಿದ್ದರು. ಆ ಎರಡೂ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದ ಕುಲಪತಿಗಳು, ನಂತರ ನಡೆದ ಪ್ರಮುಖ ಸಿಂಡಿಕೇಟ್ ಸಭೆಗೆ ಏಕಾಏಕಿ ಏಕೆ ಗೈರಾದರು ಎನ್ನುವುದು ಆಶ್ಚರ್ಯದಾಯಕವಾಗಿದೆ ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಪ್ರಸ್ತುತ ರಜೆಯಲ್ಲಿದ್ದಾರೆ. ಅವರ ಬದಲಿಗೆ ವಿವಿಯ ಸಹಾಯಕ ಪ್ರಾಧ್ಯಾಪಕ ಸುಯಮೀಂದ್ರ ಕುಲಕರ್ಣಿ ಅವರಿಗೆ ಪ್ರಭಾರಿ ಹಣಕಾಸು ಅಧಿಕಾರಿ ಜವಾಬ್ದಾರಿ ನೀಡಲಾಗಿದ್ದು, ಅವರ ಮೂಲಕವೇ ಈ ಆಯವ್ಯಯವನ್ನು ಮಂಡಿಸಲಾಗಿದೆ. ನಿಯಮಗಳ ಪ್ರಕಾರ ಈ ಇಡೀ ಪ್ರಕ್ರಿಯೆ ಕಾನೂನು ಬಾಹೀರವಾಗಿದೆ ಎಂದು ಹೇಳಿದರು.

ರಾಜ್ಯಪಾಲರು ತಕ್ಷಣವೇ ಮಧ್ಯಪ್ರವೇಶಿಸಿ, ನಿಯಮ ಉಲ್ಲಂಘಿಸಿ ಸಭೆ ನಡೆಸಿದ ವಿಶ್ವವಿದ್ಯಾಲಯದ ಕುಲಪತಿ ಶಿವಾನಂದ ಕೆಳಗಿನಮನಿ ಹಾಗೂ ಪ್ರಭಾರಿ ಹಣಕಾಸು ಅಧಿಕಾರಿ ಡಾ. ಸುಯಮೀಂದ್ರ ಕುಲಕರ್ಣಿ ಅವರ ವಿರುದ್ಧ ಸುಮೋಟೋ ಪ್ರಕರಣ ದಾಖಲಿಸಿಕೊಳ್ಳಬೇಕು ಮತ್ತು ಈ ಇಡೀ ಪ್ರಸಂಗದ ಕುರಿತು ಉನ್ನತ ಮಟ್ಟದ ನ್ಯಾಯಾಂಗ ತನಿಖೆಗೆ ಆದೇಶಿಸಬೇಕು ಎಂದು ಒತ್ತಾಯಿಸಿದರು.

ವಿಶ್ವವಿದ್ಯಾಲಯ ಸಹಾಯಕ ಪ್ರಾದ್ಯಾಪಕರ ನೇಮಕಾತಿಯಲ್ಲಿ ಬಹುಕೋಟಿ ಅಕ್ರಮ ನಡೆದಿದ್ದು ಇದರಲ್ಲಿ ಸಿಂಡಿಕೇಟ್ ಸದಸ್ಯರು ಭಾಗಿಯಾಗಿದ್ದು, ಮೀನಾಕ್ಷಿ ಕಂಡಿಮಠ, ನಾಗರತ್ನ ಪಾಸೋಡಿಯವರು ಹೊರತು ಪಡಿಸಿ ಉಳಿದ ಎಲ್ಲಾ ಸದಸ್ಯರು ಇದರಲ್ಲಿ ನೇರವಾಗಿ ಅಕ್ರಮವಾಗಿ ಸಹಮತ ವ್ಯಕ್ತಪಡಿಸಿದ್ದಾರೆ. ಈ ಎಲ್ಲಾ ಕಾರಣಗಳಿಗಾಗಿ ಕುಲಪತಿಗಳ ಸಿಂಡಿಕೇಟ್ ಸಭೆಯಲ್ಲಿ ಭಾಗವಹಿಸಿಲ್ಲ ಎಂಬ ಅನುಮಾನವಿದೆ ಎಂದರು. ರಂಗನಾಥ ವಕೀಲ್, ಕೆ.ಶರಣುನಾಯಕ, ಜಾನ್ಸನ್, ಶ್ರೀಕಾಂತ್, ಬಸನಗೌಡ, ಬಸವರಾಜ್, ಮೌನೇಶ್ ಸೇರಿದಂತೆ ಇನ್ನಿತರರಿದ್ದರು.

ಉಡಾನ್ ಯೋಜನೆಯಡಿ ಕಲಬುರಗಿ ವಿಮಾನ ನಿಲ್ದಾಣ ಸೇರ್ಪಡೆಗೆ ಯತ್ನ: ಹರ್ಷ

ಕಲಬುರಗಿ: ಬಹುನಿರೀಕ್ಷಿತ ಕಲಬುರಗಿ-ಬೆಂಗಳೂರು ನಡುವೆ ಜೂ.10ರಿಂದ ವಿಮಾನ ಸಂಚಾರ ಪ್ರಾರಂಭವಾಗಲಿದ್ದು, ಪ್ರಯಾಣಿಕರಿಗೆ ಅನುಕೂಲಕರವಾಗಲಿದೆ ಎಂದು ಮಾಜಿ ಲೋಕಸಭಾ ಸದಸ್ಯ ಡಾ.ಉಮೇಶ್ ಜಾಧವ್ ಹರ್ಷ ವ್ಯಕ್ತಪಡಿಸಿದ್ದಾರೆ.



ಕಲಬುರಗಿ ಮತ್ತು ಬೆಂಗಳೂರು ನಡುವೆ ಜೂ.10ರಿಂದ ಸ್ಟಾರ್ ಏರ್ ಲೈನ್ಸ್ ವಿಮಾನ ಸಂಜೆ 6 ಗಂಟೆಗೆ ಬೆಂಗಳೂರಿನಿಂದ ಹೊರಟು ವಿಮಾನ ಕಲಬುರಗಿಗೆ ಸಂಜೆ 7.10ಕ್ಕೆ ಆಗಮಿಸಲಿದ್ದು ಮತ್ತು ಕಲಬುರಗಿಯಿಂದ ಸಂಜೆ 7.40ಕ್ಕೆ ತೆರಳಿದ್ದು ಬೆಂಗಳೂರಿಗೆ 8.50ಕ್ಕೆ ತಲುಪಲಿದೆ. ಸದ್ಯ ದಿನಕ್ಕೆ ಒಂದು ಬಾರಿ ವಿಮಾನ ಸಂಚಾರ ಆರಂಭವಾಗಲಿದೆ ಎಂದು ಸ್ಟಾರ್ ಏರ್‌ಲೈನ್ಸ್ ಅಧಿಕಾರಿಗಳಿಂದ ಅಧಿಕೃತವಾಗಿ ತಿಳಿದುಬಂದಿದೆ.

ಮುಂದಿನ ದಿನಗಳಲ್ಲಿ ಕಲಬುರಗಿ ಹಾಗೂ ಪ್ರಮುಖ ನಗರಗಳಿಗೆ ಸಂಪರ್ಕ ಕಲ್ಪಿಸಲು ಇತರ ವಿಮಾನ ಕಂಪನಿಗಳ ಜೊತೆ ಮಾತುಕತೆ ಪ್ರಗತಿಯಲ್ಲಿದ್ದು, ಹೆಚ್ಚಿನ ವಿಮಾನಗಳು ತನ್ನ ಸಂಚಾರವನ್ನು ಪ್ರಾರಂಭಿಸಲಿದೆ ಎಂದು ಜಾಧವ್ ಹೇಳಿದರು.

ಕೇಂದ್ರ ಸರಕಾರ ಶೀಘ್ರದಲ್ಲೇ ಕಲಬುರಗಿ ವಿಮಾನ ನಿಲ್ದಾಣವನ್ನು ಉಡಾನ್ ಯೋಜನೆ ಅಡಿಯಲ್ಲಿ ಸೇರಿಸಿಕೊಳ್ಳುವಂತೆ ಕೇಂದ್ರ ವಿಮಾನಯಾನ ಖಾತೆಯ ಸಚಿವರಿಗೆ ಹಾಗೂ ಪ್ರಧಾನ ಮಂತ್ರಿಯವರಿಗೆ ಒತ್ತಾಯಿಸಲಾಗುವುದು. ಕಲಬುರಗಿಯಿಂದ ವಿಮಾನ ಸಂಚಾರ ಪ್ರಾರಂಭವಾಗಲು ಕರ್ನಾಟಕ ಸರ್ಕಾರವು ಸಬ್ಸಿಡಿ ಹಣವನ್ನು ಕೆಕೆಆರ್‌ಡಿಬಿ ಮೂಲಕ ನೀಡಿ ಕಲ್ಯಾಣ ಕರ್ನಾಟಕ ಭಾಗದ ಸಂಪರ್ಕ ವ್ಯವಸ್ಥೆಗೆ ಹೆಚ್ಚಿನ ಅನುಕೂಲ ಮಾಡಿಕೊಟ್ಟಿರುವುದು ಉತ್ತಮ ಬೆಳವಣಿಗೆ. ವಿಮಾನ ಸಂಚಾರ ಪ್ರಾರಂಭವಾದರೆ ಈ ಭಾಗದಲ್ಲಿ ಅಭಿವೃದ್ಧಿಗೂ ಹೆಚ್ಚಿನ ಒತ್ತು ಸಿಗಲಿದ್ದು ಕೈಗಾರಿಕೆ, ವಾಣಿಜ್ಯೋದ್ಯಮ, ಪ್ರವಾಸೋದ್ಯಮ, ಕೃಷಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಬೆಳವಣಿಗೆಗೆ ಪೂರಕವಾಗಲಿದೆ ಎಂದು ತಿಳಿಸಿದ್ದಾರೆ.

ಕಲಬುರಗಿ-ಬೆಂಗಳೂರು ವಿಮಾನ ಸಂಚಾರ ಪುನಾರಂಭಕ್ಕೆ ಪೆರ್ಲ ಸಂತಸ

ಕಲಬುರಗಿ: ಕಲಬುರಗಿಯಿಂದ ಬೆಂಗಳೂರಿಗೆ ಜೂನ್ 10 ರಿಂದ ವಿಮಾನ ಸಂಚಾರ ಪುನರಾರಂಭಗೊಳ್ಳುವುದು ಹರ್ಷದ ಸಂಗತಿ ಹಾಗೂ ಉತ್ತರ ಕರ್ನಾಟಕ ಮತ್ತು ಕರಾವಳಿ ಕರ್ನಾಟಕವನ್ನು ಸಂಪರ್ಕ ಕಲ್ಪಿಸುವ ಕಲಬುರಗಿ -ಮಂಗಳೂರು ಮಧ್ಯೆ ವಿಮಾನ ಸೇವೆ ಕೂಡಲೇ ಆರಂಭಿಸಲು ಜನಪ್ರತಿನಿಧಿಗಳು ಪ್ರಯತ್ನಿಸಬೇಕೆಂದು ದಕ್ಷಿಣ ಕನ್ನಡ ಸಂಘದ ಮಾಜಿ ಅಧ್ಯಕ್ಷ ಡಾ.ಸದಾನಂದ ಪೆರ್ಲ ಒತ್ತಾಯಿಸಿದ್ದಾರೆ.



ಕಲಬುರಗಿಯಿಂದ ಬೆಂಗಳೂರಿಗೆ ವಿಮಾನ ಸಂಚಾರ ಪುನರಾರಂಭಗೊಂಡಿರುವುದರಿಂದ ರಾಜಧಾನಿಗೆ ಸಂಚರಿಸಲು ಕಲ್ಯಾಣ ಕರ್ನಾಟಕ ಭಾಗದ ಹಾಗೂ ಸುತ್ತು ಮುತ್ತಲು ಜಿಲ್ಲೆಗಳ ಜನತೆಗೆ ವರದಾನವಾಗಲಿದೆ. ಇದರಿಂದ ಕೈಗಾರಿಕೆ, ಪ್ರವಾಸೋದ್ಯಮ, ಶಿಕ್ಷಣ, ಕೃಷಿ ಸೇರಿದಂತೆ ಹಲವು ಕ್ಷೇತ್ರಗಳ ಪ್ರಗತಿಗೆ ಪೂರಕವಾಗಲಿದೆ. ಆದರೆ ಉತ್ತರ ಮತ್ತು ದಕ್ಷಿಣದ ಕರಾವಳಿ ಕರ್ನಾಟಕವನ್ನು ಜೋಡಣೆ ಮಾಡಲು ವಿಮಾನ ಸಂಪರ್ಕ ವ್ಯವಸ್ಥೆ ಅತ್ಯಂತ ಅಗತ್ಯವಾಗಿದ್ದು ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಅಕ್ಕಲಕೋಟ್ ಸೋಲಾಪುರ, ಲಾತೂರ್ ಮುಂತಾದಡೆಗಳಿಂದ ಶಿಕ್ಷಣ, ಪ್ರವಾಸೋದ್ಯಮ ಹಾಗೂ ದೇವಾಲಯಗಳ ಪ್ರವಾಸಿಗರ ಸಂಖ್ಯೆ ಅತ್ಯಧಿಕವಿದೆ ಎಂದರು.

ಪ್ರಸ್ತುತ ಬಸ್ ಗಳಲ್ಲಿ ಕನಿಷ್ಠ 17 ಗಂಟೆಗಳ ಪ್ರವಾಸ ಮಾಡಿ ಕರಾವಳಿಯ ಉಡುಪಿ ಅಥವಾ ಮಂಗಳೂರನ್ನು ತಲುಪಬೇಕಾಗಿದೆ.ಖಾಸಗಿ ವಾಹನದಲ್ಲಿ ಕನಿಷ್ಠ 12 ಗಂಟೆಗಳ ಪ್ರಯಾಣ ಸಮಯ ತಗಲುತ್ತದೆ. ಆದುದರಿಂದ ಕಲಬುರಗಿ ಮತ್ತು ಬೀದರ್ ನಿಂದ ಮಂಗಳೂರಿಗೆ ವಯಾ ಬೆಂಗಳೂರು ಮಾರ್ಗವಾಗಿ (ಒನ್ ಸ್ಟಾಪ್) ಸಂಚರಿಸುವ ವಿಮಾನ ಸೇವೆ ಅತ್ಯಂತ ಅಗತ್ಯವಾಗಿದೆ ತಿಳಿಸಿದ್ದಾರೆ.

ಪ್ರಸ್ತುತ ಬೀದರ್ ಕಲಬುರಗಿಯಿಂದ ಒಟ್ಟು ನಾಲ್ಕೈದು ಖಾಸಗಿ ಬಸ್ಸುಗಳು ವಿಜಯಪುರ ಹುಬ್ಬಳ್ಳಿ, ಅಂಕೋಲಾ, ಉಡುಪಿ, ಭಟ್ಕಳ ದಾರಿಯಾಗಿ ಮಂಗಳೂರಿಗೆ ಸಂಚರಿಸುತ್ತಿದೆ.ಯಾದಗಿರಿ ಶಹಾಪುರದಿಂದಲೂ ಖಾಸಗಿ ಬಸ್ ಸಂಚಾರವಿದೆ. ಕರಾವಳಿ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಸಂಸದರು ಜಂಟಿಯಾಗಿ ಪ್ರಯತ್ನಿಸಿ ಈ ಮಾರ್ಗದಲ್ಲಿ ವಿಮಾನ ಸೇವೆ ಆರಂಭಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಕೇಂದ್ರ ಸರ್ಕಾರವು ಉಡಾನ್ ಯೋಜನೆಯಡಿಯಲ್ಲಿ ಕಲಬುರಗಿ ಸೇರ್ಪಡೆ ಮಾಡಿ ಸಾಮಾನ್ಯ ಜನರು ಕೂಡಾ ವಿಮಾನದಲ್ಲಿ ಸಂಚರಿಸಲು ಅವಕಾಶ ಮಾಡಿಕೊಡಬೇಕು ಎಂದು ಡಾ. ಸದಾನಂದ ಪೆರ್ಲ ಪತ್ರಿಕಾ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಸ್ಕ್ಯಾನಿಂಗ್ ಸೆಂಟರ್‌ಗಳ ತಪಾಸಣೆಗೆ ನಿರ್ಣಯ

ಕೊಪ್ಪಳ: ಲಿಂಗ ಆಯ್ಕೆ ತಡೆ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನ ಮತ್ತು ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲ್ವಿಚಾರಣೆಯನ್ನು ಬಲಪಡಿಸುವ ಉದ್ದೇಶದಿಂದ ರಚನೆಯಾದ ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿ (ಪಿಸಿ ಆ್ಯಂಡ್ ಪಿಎನ್‌ಡಿಟಿ) ಕಾರ್ಯಕ್ರಮದ ಜಿಲ್ಲಾ ಸಲಹಾ ಸಮಿತಿ ಸಭೆಯು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಡಾ.ಲಿಂಗರಾಜು ಟಿ. ಅವರ ಅಧ್ಯಕ್ಷತೆಯಲ್ಲಿ ಮೇ 22ರಂದು ನಡೆಯಿತು.

ಜಿಲ್ಲಾಡಳಿತದ ಭವನದಲ್ಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲ್ವಿಚಾರಣೆಯನ್ನು ಮನ್ನಷ್ಟು ಪರಿಣಾಮಕಾರಿಯಾಗಿಸುವನಿಟ್ಟಿನಲ್ಲಿ



ಸಮಿತಿಯ ಸದಸ್ಯರು ತಮ್ಮ ಕರ್ತವ್ಯದ ನಡುವೆಯೂ ಜಂಟಿ ತಪಾಸಣೆಗೆ ಅಗತ್ಯ ಸಮಯ ಮೀಸಲಿಡಬೇಕೆಂದು ಸಭೆಯಲ್ಲಿ ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಲಿಂಗರಾಜು ಟಿ. ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಮೊದಲ ತ್ರೈಮಾಸಿಕದ ಅವಧಿ ಏಪ್ರಿಲ್‌ನಿಂದ ಇದುವರೆಗೆ ಜಿಲ್ಲೆಯಾದ್ಯಂತ ಈಗಾಗಲೇ 34 ಸ್ಕ್ಯಾನಿಂಗ್ ಕೇಂದ್ರಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಲಾಗಿದೆ. ಪ್ರಸ್ತುತ ತಪಾಸಣಾ ಪ್ರಗತಿ ಶೇ.100ರಷ್ಟಿದ್ದು, ಉಳಿದ ಕೇಂದ್ರಗಳಿಗೂ ಭೇಟಿ ನೀಡಿ ಪರಿಶೀಲನೆ ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ಕೊಪ್ಪಳದ ದಿವಟರನಗರದಲ್ಲಿನ ಶ್ರೀಮಂಗಳ ಹಾಸ್ಪಿಟಲ್ ಅವರ ಮನವಿಯನ್ನು ಪರಿಶೀಲಿಸಿ ಈ ಸ್ಕ್ಯಾನಿಂಗ್ ಸೆಂಟರನ ಪಿಸಿಪಿಎನ್‌ಡಿಟಿ ಪರವಾನಿಗೆಯನ್ನು ಪಿಸಿಪಿಎನ್‌ಡಿಟಿ ಕಾರ್ಯಕ್ರಮದಡಿಯಲ್ಲಿ ನವೀಕರಣ ಮಾಡಲು ಸಭೆಯಲ್ಲಿ ನಿರ್ಣಯಿಸಲಾಯಿತು.

ಸಭೆಯಲ್ಲಿ ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರಾದ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ರವೀಂದ್ರನಾಥ್ ಎಂ. ಹೆಚ್., ಸದಸ್ಯ ಕಾರ್ಯದರ್ಶಿ ಕಿಮ್ಸ್ ಆಸ್ಪತ್ರೆಯ ರೇಡಿಯಾಲಜಿಸ್ಟ್ ಡಾ. ದಯಾನಂದಸ್ವಾಮಿ, ಪಿಸಿಪಿಎನ್‌ಡಿಟಿ ಕಾರ್ಯಕ್ರಮದ ಸಲಹಾ ಸಮಿತಿಯ ಅಧ್ಯಕ್ಷರು ಹಾಗೂ ಮುನಿರಾಬಾದ್ ಸಮುದಾಯ ಆರೋಗ್ಯ ಕೇಂದ್ರದ ಪ್ರಸೂತಿ ತಜ್ಞರಾದ ಡಾ.ಕೆ.ಎಚ್.ತೊಗರಿ, ಜಿಲ್ಲಾ ಸಲಹಾ ಸಮಿತಿ ಸದಸ್ಯರಾದ ಮಕ್ಕಳ ತಜ್ಞರಾದ ಡಾ.ಗಿರೀಶ್, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ವಕೀಲರಾದ ಶಂಕರ ಬಿಸರಳ್ಳಿ, ರಿಲೀಫ್ ಫೌಂಡೇಶನ್ ಹೆಲ್ತ್ ಸರ್ವಿಸ್ ಕೊಪ್ಪಳದ ಎನ್‌ಜಿಓದ ಡಾ.ವಿಶ್ವನಾಥ ನಲ್ವಾಡ, ಧ್ವನಿ ಸ್ವಯಂ ಸೇವಾ ಸಂಸ್ಥೆಯ ಅಧ್ಯಕ್ಷರಾದ ಶಂಕ್ರಪ್ಪ ಬಿ ಸುರಳ್, ಅಲಾಫ್ ಹೆಲ್ತ್ ಎಜ್ಯುಕೇಶನ್ ಆ್ಯಂಡ್ ರೂರಲ್ ಡೆವಲಪಮೆಂಟ್ ಫೌಂಡೇಶನ್ ಕೊಪ್ಪಳದ ಸಲೀಮಾ ಜಾನ್ ಉಪಸ್ಥಿತರಿದ್ದರು.

ಮಕ್ಕಳಿಗೆ ಉನ್ನತ ಮಟ್ಟದ ಶಿಕ್ಷಣ ಕೊಡಿಸಿ: ಬಯ್ಯಾಪುರ

ಕುಷ್ಟಗಿ: ಮುಸ್ಲಿಂ ಸಮಾಜದಲ್ಲಿ ಶಿಕ್ಷಣದಿಂದ ಮಕ್ಕಳು ಇನ್ನು ಹೆಚ್ಚು ಹೆಚ್ಚು ಮುಂದೆ ಬರಬೇಕಾಗಿದೆ. ಪೋಷಕರು ಮಕ್ಕಳನ್ನು ಉನ್ನತ ಮಟ್ಟದ ಅಭ್ಯಾಸ ಮಾಡಿಸಲು ಮುಂದಾಗಬೇಕು. ಮಕ್ಕಳ ಬದುಕು ಆಸನಾಗುವ ಮೂಲಕ ಬದಲಾವಣೆ ಆಗಬೇಕಾಗಿದೆ ಎಂದು ಮಾಜಿ ಸಚಿವ, ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಅಮರೇಗೌಡ ಪಾಟೀಲ ಬಯ್ಯಾಪುರ ಹೇಳಿದರು.

ಪಟ್ಟಣದ ಬಿ.ಬಿ.ಫಾತಿಮಾ ಶಾದಿಮಹಲ್ ಕರೀಮ್ ಕಾಲೋನಿಯಲ್ಲಿ ತಾಲೂಕು ಅಂಜುಮನ್ ಇಸ್ಲಾಂ ಪಂಚ ಕಮಿಟಿ ಹಾಗೂ ಅಂಜುಮನ್ -ಏ-ಇಸ್ಲಾಂ ಪಂಚ ಕಮಿಟಿ ನಗರ ಘಟಕ ಮತ್ತು ಖಬರಸ್ಥಾನ ಕಮಿಟಿ ಹಾಗೂ ಅಂಜುಮನ್ ನೌಜವಾನ ಕಮಿಟಿ ಸಹಯೋಗದಲ್ಲಿ 2ನೇ ವರ್ಷದ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ದ್ವಿತೀಯ ವರ್ಷದ



ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಶೈಕ್ಷಣಿಕ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಾನಪದ ವಿದ್ವಾಂಸರು ಹಾಗೂ ಶಿಕ್ಷಕ ಡಾ.ಇಮಾಮಸಾಬ ಹಡಗಲಿ ಮಾತನಾಡಿ, ಮುಸ್ಲಿಂ ಸಮಾಜದ ಮಕ್ಕಳಲ್ಲಿ ಉತ್ತಮ ಪ್ರತಿಭೆ ಇದ್ದು ನಮ್ಮ ಮುಸ್ಲಿಂ ಸಮಾಜದ ತಾಯಂದಿರು ಮಕ್ಕಳ ಬಗ್ಗೆ ಕಾಳಜಿ ವಹಿಸಿ ಉನ್ನತ ಶಿಕ್ಷಣದ ಜೊತೆಗೆ ನಮ್ಮ ಭಾರತದ ಸಂಸ್ಕಾರ ಕಲಿಸಬೇಕು. ನಾವುಗಳು ಕನ್ನಡಿಗರು ಮತ್ತು ನಾವುಗಳು ಭಾರತೀಯರಾಗಿದ್ದು ನಮ್ಮಲ್ಲಿ ಬೇದ ಬಾವ ಇಲ್ಲ ಕೋಮು ಗಲಭೆಯ ಬಿಡಬೇಕು ಸರ್ವರಲ್ಲಿ ಒಂದಾಗಿ ಭಾವೈಕ್ಯಯ ಮೂಲಕ ನಮ್ಮ ಮಕ್ಕಳಿಗೆ ವಿದ್ಯೆಯನ್ನು ಕಲಿಸಿ ಒಳ್ಳೆಯ ಉದ್ಯೋಗ ಸ್ಥರನ್ನಾಗಿ ಮಾಡಬೇಕಾಗಿದೆ ಎಂದು ತಿಳಿಸಿದರು. ಕಾರಾಗೃಹ ಸುಧಾರಣೆ ಸೇವೆಗಳ ಮುಖ್ಯ ಅಧೀಕ್ಷಕ ಡಾ.ಐ.ಜೆ.ಮ್ಯಾಗೇರಿ ಮಾತನಾಡಿದರು.

ಮಾಜಿ ಶಾಸಕ ಹಾಗೂ ತುಂಗಭದ್ರಾ ಯೋಜನೆ ಕಡಾ ಅಧ್ಯಕ್ಷರಾದ ಹಸನಸಾಬ ದೋಟಿಹಾಳ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅಧ್ಯಕ್ಷೀಯ ಭಾಷಣ ಮಾಡಿದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಪ್ರಥಮ ಮತ್ತು ದ್ವೀತಿಯ ಸ್ಥಾನ ಪಡೆದ ಅಲ್ಪಸಂಖ್ಯಾತ ಮಕ್ಕಳಿಗೆ ಸನ್ಮಾನಿಸಿ ಗೌರವಿಸಿದರು. ಮೌಲಾನಾ ಫಜಲೇ ಅಜೀಮ್ ಮದರಸಾ ದಾರಲೂ ಊಲಮಾ ಅಶ್ರಫಿಯಾ ಸಾನಿಧ್ಯ ವಹಿಸಿದ್ದರು. ಕೆ.ಶರಣಪ್ಪ ವಕೀಲರು, ಅಂ.ಮು.ಪಂ.ಕ ಪಂಚ ಅಧ್ಯಕ್ಷ ಅಹ್ಮದ್ ಅಧೋನಿ, ಅಂ.ಮು.ಪಂ.ಕ. ಉಪಾಧ್ಯಕ್ಷ ಮೈನುದ್ದೀನ್ ಮುಲ್ಲಾ, ಬಿಜೆ. ಉಮಾದೇವಿ ಬಸಾಪುರ, ಎಚ್.ಆರ್.ಶೇಖ್, ಜ.ಖಾಜಾಸಾಬ ಅತ್ತಾರ, ಡಾ.ಶೇಖ್ ಜವ್ಹಾದ್, ಹುಸೇನ್, ಎಚ್.ಎಸ್. ಉಸ್ತಾದ್, ಮೌಲನ ಅಹ್ಮದ್ ಹುಸೇನ್, ಮೌಲಾನಾ ಜಾಫರ್ ಸಾಧಿಕ, ಮೈಬುಸಾಬ ಖುಸುಬೂ ಕಿರಾಣಿ ಅಂಗಡಿ, ಡಾ.ಬಾಬು, ಮಾಜಿ ಪುರಸಭೆ ಸದಸ್ಯ ಮೈಬುಸಾಬ ಕಮ್ಮಾರ, ರಾಜೇಸಾಬ ಗುಮಗೇರಾ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಡಾ.ಜೀವನಸಾಬ ಬಿನ್ನಾಳ ನಿರೂಪಿಸಿ, ವಂದಿಸಿದರು.

ಕಿರುಸುದ್ದಿ

ಪಕ್ಷ ಸಂಘಟನೆಗೆ ನೂತನ ಪದಾಧಿಕಾರಿಗಳ ಆಯ್ಕೆ






ಕೂಡ್ಲಿಗಿ: ಪದಾಧಿಕಾರಿಗಳ ಆಯ್ಕೆಯಿಂದ ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆಗೆ ಮತ್ತಷ್ಟು ಬಲ ನೀಡಲಿದೆ ಎಂದು ಶುಕ್ರವಾರ ತಾಲೂಕು ಮಂಡಲ ಅಧ್ಯಕ್ಷ ಬಿ.ನಾಗರಾಜ್ ತಿಳಿಸಿದರು. ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಪ್ರಮುಖ ಜವಾಬ್ದಾರಿಗಳನ್ನು ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಪಕ್ಷದ ಬಲವರ್ಧನೆಗೆ ಹಾಗೂ ಸಂಘಟನೆ ಸೇರಿದಂತೆ ಮುಂಬರುವ ದಿನಗಳಲ್ಲಿ ಸಂಘಟನೆಯನ್ನು ಚುರುಕುಗೊಳಿಸಲು ಸಹಾಯಕವಾಗಲಿದೆ ಎಂದರು.

ಭಾರತೀಯ ಜನತಾ ಪಾರ್ಟಿ ವಿಜಯನಗರ ಜಿಲ್ಲಾ ಘಟಕದ ಜಿಲ್ಲಾಧ್ಯಕ್ಷರಾದ ಎಸ್. ಸಂಜೀವರೆಡ್ಡಿ ಅವರು ಜಿಲ್ಲೆಯ ವಿವಿಧ ಮೋರ್ಚಾಗಳಿಗೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಿ ಜವಾಬ್ದಾರಿ ಹಂಚಿಕೆ ಮಾಡಿದ್ದಾರೆ. ಆಯ್ಕೆಯಾದ ಪದಾಧಿಕಾರಿಗಳು: ಮಂಡಲ ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೀತಾ, ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಚಿನ್ ಎಸ್ಸಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದುರುಗೇಶ್ ಕೂಡ್ಲಿಗಿ ಎಸ್ಟಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಂದ್ರು, ರೈತ ಮೋರ್ಚಾ ಜಿಲ್ಲಾಧ್ಯಕ್ಷರು ರೇವಣ್ಣ ನೂತನ ಪದಾಧಿಕಾರಿಗಳಿಗೆ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಶಿಕ್ಷಕರ ಸಂಘಕ್ಕೆ ನೂತನ ಪದಾಧಿಕಾರಿಗಳ ಅವಿರೋಧ ಆಯ್ಕೆ




ಹುಣಸಗಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಹುಣಸಗಿ ತಾಲೂಕು ಘಟಕದ ಅಧ್ಯಕ್ಷರು ಸೇರಿದಂತೆ ಪದಾಧಿಕಾರಿಗಳ ಸಾರ್ವತ್ರಿಕ ಚುನಾವಣೆಯಲ್ಲಿ ಎಲ್ಲ ಸ್ಥಾನಗಳಿಗೂ ಅವಿರೋಧ ಆಯ್ಕೆ ನಡೆಯಿತೆಂದು ಚುನಾವಣಾಧಿಕಾರಿ ಯಲ್ಲಪ್ಪ ಚಂದನಕೇರಿ ಹಾಗೂ ಸಹಾಯಕ ಚುನಾವಣಾಧಿಕಾರಿ ಬಸವರಾಜ್ ಕೋಳೂರ್ ಪ್ರಕಟಣೆ ಮೂಲಕ ತಿಳಿಸಿದ್ದಾರೆ. ಸಂಘದ ನೂತನ ಅಧ್ಯಕ್ಷರಾಗಿ ಹಾಜಿಮಲಂಗ, ಉಪಾಧ್ಯಕ್ಷರಾಗಿ ಗುರುನಾಥ ರಾಠೋಡ್, ಶೋಭಾ ನಾಯ್ಕೋಡಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಅಕ್ಕಮಹಾದೇವಿ ಹಾದಿಮನಿ, ಸಂಘಟನಾ ಕಾರ್ಯದರ್ಶಿಯಾಗಿ ಪ್ರಕಾಶ ಬಡಿಗೇರ, ಖಜಾಂಚಿಯಾಗಿ ಸುರೇಶ ಹಾದಿಮನಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಯಲ್ಲಪ್ಪ ಚಂದನಕೇರಿ ತಿಳಿಸಿದ್ದಾರೆ.

ಸಿಡಿಲು ಬಡಿದು 8 ಕುರಿ ಸಾವು

ಸಿರುಗುಪ್ಪ: ಕಳೆದ ಎರಡು ದಿನಗಳಿಂದ ಬಿಸಿಲಿನ ತಾಪಮಾನಕ್ಕೆ ತತ್ತರಿಸಿದ ಜನ– ಜಾನುವಾರುಗಳಿಗೆ ಗುರುವಾರ ಮಧ್ಯ ರಾತ್ರಿ ಗುಡುಗು, ಸಿಡಿಲು, ಮಿಂಚು, ಬಿರುಗಾಳಿ ಸಹಿತ ಸುರಿದ ಭಾರೀ ಮಳೆಯಿಂದ ನಗರ ತಂಪೆರೆದಿದ್ದು, ಇದೇ ವೇಳೆ ಸಿಡಿಲಿಗೆ 8 ಕುರಿಗಳು ಬಲಿಯಾದ ಘಟನೆ ಜರುಗಿದೆ.

ಘಟನೆಯ ಸ್ಥಳಕ್ಕೆ ಪಶು ವೈದ್ಯರು ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಗರದ ಹೊರವಲಯದಲ್ಲಿನ ಜಮೀನಿನಲ್ಲಿ ಬೀದರ್ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ವಲ್ಕಿ ಗ್ರಾಮದ ಹಾಲಪ್ಪ ಎಂಬುವರು ಕುರಿ ಮೇಯಿಸಲು ಹೋಗಿದ್ದ ಸಂದರ್ಭದಲ್ಲಿ ಸಿಡಿಲು ಬಡಿದ ಹಿನ್ನಲೆ 8 ಕುರಿಗಳು ಸ್ಥಳದಲ್ಲೇ ಮೃತಪಟ್ಟಿವೆ. ಕೆಲವೆಡೆ ಬಿರುಗಾಳಿಗೆ ಗಿಡ–ಮರಗಳ ರೆಂಬೆ–ಕೊಂಬೆಗಳು ನೆಲಕ್ಕುರುಳಿವೆ. ಇದರಿಂದ ಕೆಲಕಾಲ ವಿದ್ಯುತ್ ವ್ಯತ್ಯಯ ಉಂಟಾಗಿತ್ತು. ಸಿರುಗುಪ್ಪ–20.8 ಎಂ.ಎಂ, ತೆಕ್ಕಲಕೋಟೆ –12.4 ಎಂ.ಎಂ.,ಸಿರಿಗೇರಿ –14.3 ಎಂ.ಎಂ., ಎಂ.ಸೂಗುರು –4.6 ಎಂ.ಎಂ., ಹಚ್ಚೋಳ್ಳಿ –18.2 ಎಂ.ಎಂ., ರಾವಿಹಾಳ್–15.4 ಎಂ.ಎಂ., ಕರೂರು – 45.2 ಎಂ.ಎಂ., ಕೆ.ಬೇಳಗಲ್ಲು – 21.4 ಎಂ.ಎಂ., ಒಟ್ಟು ಸರಾಸರಿ –18.94 ಎಂ.ಎಂ. ಮಳೆಯಾಗಿದೆ.



ಬಳ್ಳಾರಿ: ಆಲ್ ಇಂಡಿಯಾ ಕರಾಟೆ 24ನೇ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕ ತಂಡಕ್ಕೆ ಪ್ರಶಸ್ತಿ ಲಭಿಸಿದೆ. ಟ್ರೆಡಿಷನಲ್ ಶೋಟೋಕಾನ್ ಕರಾಟೆ ಅಕಾಡೆಮಿಯ ಸಂಸ್ಥಾಪಕ, ಹಿರಿಯ ಕರಾಟೆ ತರಬೇತುದಾರ ಕಟ್ಟೆ ಸ್ವಾಮಿ ಮತ್ತು ಅಕಾಡೆಮಿಯ ತಾಂತ್ರಿಕ ನಿರ್ದೇಶಕ, ಹಿರಿಯ ಕರಾಟೆ ತರಬೇತುದಾರ ಸುಭಾಷ್ ಚಂದ್ರ, ಜಿಂದಾಲ್ ವಿದ್ಯಾಮಂದಿರದ ಪ್ರಾಚಾರ್ಯರು ಮಕ್ಕಳನ್ನು ಅಭಿನಂದಿಸಿದ್ದಾರೆ.

ಮಹಾಸಭಾ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

ಹುಣಸಗಿ: ಅಖಿಲ ಕರ್ನಾಟಕ ಚೆನ್ನದಾಸರು (ಪರಿಶಿಷ್ಟ ಜಾತಿ) ಮಹಾಸಭಾ ಸಂಘದ ತಾಲೂಕು ಘಟಕಕ್ಕೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಹಮ್ಮಿಕೊಂಡಿದ್ದ ಸಂಘದ ಕಾರ್ಯಕ್ರಮವನ್ನು ಜಿ ಪಂ. ಮಾಜಿ ಸದಸ್ಯ ಬಸವರಾಜಸ್ವಾಮಿ ಸ್ಥಾವರಮಠ ಉದ್ಘಾಟಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ದಂಡಿನ ಮಾತನಾಡಿ, ಸಮಾಜದಲ್ಲಿ ನಮ್ಮ ಹಕ್ಕುಗಳನ್ನು ಪಡೆಯಲು ಸಂಘಟನೆ ಬಹು ಮುಖ್ಯ, ಪ್ರತಿಯೊಬ್ಬ ಸದಸ್ಯರು ಸಮಾಜದ ಏಳ್ಗೆಗಾಗಿ ಶ್ರಮಿಸಬೇಕು ಎಂದು ಹೇಳಿದರು.

ಸಮಾಜದ ಜಿಲ್ಲಾಧ್ಯಕ್ಷ ರಮೇಶ ದೇವರಮನಿ, ವೆಂಕೋಬ ಕಂಚಗಾರಹಳ್ಳಿ, ಬಸವರಾಜ ಮಲಗಲದಿನ್ನಿ, ಪ. ಪಂ ಸದಸ್ಯ ಸಿದ್ರಾಮಪ್ಪ ಮುದಗಲ್, ಮರಲಿಂಗಪ್ಪ ನಾಟೇಕಾರ, ಮಲ್ಲಣ್ಣ ಕಟ್ಟಿಮನಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪದಾಧಿಕಾರಿಗಳ ಆಯ್ಕೆ: ಕನಕಪ್ಪ ಕಾಮನಟಗಿ ಅಧ್ಯಕ್ಷ, ಹಣಮಂತ ಹುಣಸಗಿ ಉಪಾಧ್ಯಕ್ಷ, ಗಿರೆಪ್ಪ ಹುಣಸಗಿ ಕಾರ್ಯದರ್ಶಿ, ತಿರುಪತಿ ಸಹ ಕಾರ್ಯದರ್ಶಿ, ಬಾಲಪ್ಪ ಖಜಾಂಚಿ, ಹಣಮಂತ ಎಚ್., ತಿಪ್ಪಣ್ಣ ಹುಣಸಗಿ, ಹಣಮಂತ ಕಚಕನೂರ್, ಮಾರುತಿ ಜುಮಲಾಪುರ, ಮಾನಪ್ಪ, ಮೌನೇಶ್ ಇವರನ್ನು ಕಾರ್ಯಕಾರಿಣಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ. ಈ ಸಂದರ್ಭದಲ್ಲಿ ಸಮಾಜದ ಹಿರಿಯರು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.



ಹುಣಸಗಿ: ಅಖಿಲ ಕರ್ನಾಟಕ ಚೆನ್ನದಾಸರು (ಪರಿಶಿಷ್ಟ ಜಾತಿ) ಮಹಾಸಭಾ ಸಂಘದ ತಾಲೂಕು ಘಟಕಕ್ಕೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಮಾಜದ ಹಿರಿಯರು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ವಿಶ್ರೀಕೃ ವಿವಿಯಲ್ಲಿ ವಿಜ್ಞಾನ ಪ್ರದರ್ಶನ ಮೇಳಕ್ಕೆ ಚಾಲನೆ

ತಂತ್ರಜ್ಞಾನ ಆಧಾರಿತ ಶಿಕ್ಷಣ ನೀಡಿ

ಬಳ್ಳಾರಿ: ವಿಶ್ವವಿದ್ಯಾಲಯಗಳು ತಂತ್ರಜ್ಞಾನ ಆಧಾರಿತ ಶಿಕ್ಷಣ ನೀಡಲು ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಹೇಳಿದರು.

ಇಲ್ಲಿನ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರೊ.ಸಿದ್ದು ಪಿ. ಆಲಗೂರ ಸಭಾಂಗಣದಲ್ಲಿ ಆಯೋಜಿಸಿರುವ ಎರಡು ದಿನಗಳ ವಿಜ್ಞಾನ ಪ್ರದರ್ಶನ–2026 ಮೇಳಕ್ಕೆ ಚಾಲನೆ ನೀಡಿ ಮಾತನಾಡಿದರು.

ಇಂದಿನ ಎಐ ಯುಗದಲ್ಲಿ ವಿಜ್ಞಾನವನ್ನು ಸ್ಥಳೀಯ ಭಾಷೆಯಲ್ಲಿ ಜನಸಾಮಾನ್ಯರಿಗೆ ತಲುಪುವ ಹಾಗೆ ರೂಪಾಂತರಗೊಳಿಸುವುದು ಅಗತ್ಯವಿದೆ. ಎಲ್ಲ ಕ್ಷೇತ್ರಗಳಲ್ಲೂ ತಂತ್ರಜ್ಞಾನ ಆವಶ್ಯಕವಾಗಿದೆ. ವಿವಿಗಳು ವಿನೂತನ ಮಾದರಿಯ ಗ್ರಂಥಾಲಯಗಳನ್ನು ಹೊಂದಬೇಕು. ಸಾಮಾನ್ಯ ವಿಜ್ಞಾನದ ಮಹತ್ವ ಕುರಿತು ಜನಸಾಮಾನ್ಯರಿಗೆ ಜ್ಞಾನ ಲಭಿಸಲು ದಾರಿದೀಪವಾಗಬೇಕು ಎಂದು ತಂತ್ರಜ್ಞಾನ ಬದಲಾದಂತೆ ಪ್ರಾದೇಶಿಕ ವಾತಾವರಣವು ಬದಲಾಗುತ್ತದೆ ಎಂಬುದಕ್ಕೆ ನಮ್ಮ ಬಳ್ಳಾರಿಯೇ ಸ್ಪಷ್ಟ ನಿದರ್ಶನವಾಗಿದ್ದು, ಬಳ್ಳಾರಿಯು ಹಸಿರೀಕರಣಗೊಂಡಿರುವುದು ಇದಕ್ಕೆ ಸಾಕ್ಷಿಯಾಗಿದೆ. ವಿಶ್ವವಿದ್ಯಾಲಯಕ್ಕೆ ಆವಶ್ಯವಿರುವ ಗ್ರಂಥಾಲಯ ಹಾಗೂ ಇನ್ನಿತರ ಮೂಲ ಸೌಲಭ್ಯಗಳನ್ನು ಒದಗಿಸಲು ವಿಶೇಷ ಆಸಕ್ತಿ ವಹಿಸುವುದಾಗಿ ತಿಳಿಸಿದರು.

ಮುಖ್ಯ ಭಾಷಣಕಾರರಾಗಿ ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್. ಕೆ.ಲೋಕನಾಥ್ ಮಾತನಾಡಿ, ಇಂದಿನ ದಿನಮಾನಗಳಲ್ಲಿ ಸ್ಮಾರ್ಟ್‌ಫೋನ್ ಗೀಳು ಬಿಟ್ಟು 'ಸ್ಮಾರ್ಟ್' (ಸ್ಪೆಸಿಫಿಕ್, ಮೆಸರೇಬಲ್, ಅಚೀವೇಬಲ್, ರಿಲೆವೆಂಟ್, ಟೈಮ್‌ಬಾಂಡ್) ಆಗಿ ಕಾರ್ಯನಿರ್ವಹಿಸಿದಲ್ಲಿ ಎಲ್ಲ ಕ್ಷೇತ್ರದ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಯಾಗುತ್ತದೆ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಮುನಿರಾಜು ಮಾತನಾಡಿ, ವೈಜ್ಞಾನಿಕ ಮೇಳಗಳು ವಿದ್ಯಾರ್ಥಿಗಳಲ್ಲಿ ಕಲಿಕಾ ವಾತಾವರಣವನ್ನು ಉತ್ತೇಜಿಸುತ್ತವೆ. ಸಂಶೋಧಕರುಗಳು ಹೊಸ ಅನ್ವೇಷಣೆ ಹಾಗೂ ಜನಪರ ಅಭಿವೃದ್ಧಿ ಚಿಂತನೆಯುಕ್ತ ವೈಜ್ಞಾನಿಕ ವಿಚಾರಗಳನ್ನು ಹೆಚ್ಚಾಗಿ ಹೊರತರಬೇಕು ಎಂದರು.

ಅನ್ವಯಿಕ ವಿಜ್ಞಾನ ನಿಕಾಯದ ಡೀನ್ ಪ್ರೊ. ಹನುಮೇಶ ವೈದ್ಯ ಅವರ ಮಾರ್ಗದರ್ಶನದಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ವಿದ್ಯಾರ್ಥಿಗಳಿಂದ ನಿರ್ಮಿತವಾದ ವೆಬ್‌ಸೈಟ್ ಮಾದರಿ (ಎಐ ಇಂಟಿಗ್ರೇಟೆಡ್ ಡೈನಾಮಿಕ ಮಾಡೆಲ್), ಬೆಸ್ಟ್ ಆಫ್ ಬಳ್ಳಾರಿ ಹಾಗೂ ಆಸ್ಕ ವಿಎಸ್‌ಕೆಯು (ವಿಎಸ್‌ಕೆಯು ಚಾಟ್ ಜಿಪಿಟಿ) ಗಳನ್ನು ಗಣ್ಯರು ಅನಾವರಣಗೊಳಿಸಿದರು.

ವಿವಿಯ ಮೌಲ್ಯಮಾಪನ ಕುಲಸಚಿವ ಪ್ರೊ. ಎನ್.ಎಂ.ಸಾಲಿ, ವಿತ್ತಾಧಿಕಾರಿ ಸ್ಫೂರ್ತಿ ಕೆ.ಜಿ., ಶುದ್ಧ ವಿಜ್ಞಾನ ನಿಕಾಯದ ಡೀನ್ ಪ್ರೊ.ಉದಯ್ ಕುಮಾರ್ ಖಿಡ್ಕೆ, ಕಾರ್ಯಕ್ರಮದ ಸಹ ಸಂಚಾಲಕ ಡಾ.ಪಿ.ಶರತ್ ಕುಮಾರ ವೇದಿಕೆಯಲ್ಲಿದ್ದರು.



ವಿಜ್ಞಾನವು ಶೋಧನೆ ಮತ್ತು ಕ್ರಿಯಾತ್ಮಕ ವಿಚಾರಗಳಿಗೆ ವೇದಿಕೆಯಾಗಿದೆ. ವಿಜ್ಞಾನ ಬೆಳೆದಷ್ಟು ಸವಾಲುಗಳು ಸಾಕಷ್ಟು ಉದ್ಭವಿಸುತ್ತವೆ. ರಾಮನ್ ಪರಿಣಾಮವನ್ನು ಹಲವಾರು ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಬಳಸುತ್ತಿದ್ದೇವೆ. ಈ ನಿಟ್ಟಿನಲ್ಲಿ ಸಂಶೋಧನೆಗಳಲ್ಲಿ ಎಲ್ಲರೂ ಹೆಚ್ಚಾಗಿ ತೊಡಗಿಸಿಕೊಳ್ಳಬೇಕು.

■ **ಮಹಮ್ಮದ್ ಹಾರೀಸ್ ಸುಮೇರ್, ಜಿಪಂ ಸಿಇಒ**

ಮಾಸಾಶನ ನೀಡುವಂತೆ ಆಗ್ರಹ



ಹಗರಿಬೊಮ್ಮನಹಳ್ಳಿ: ಮೂರು ನಾಲ್ಕು ತಿಂಗಳಿಂದ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ವೇತನ ಹಾಗೂ ವಿಶಿಷ್ಟಚೇತನರಮಾಸಾಶನ ಬರುತ್ತಿಲ್ಲ, ನಕಲಿ ಅಂಗವಿಕಲರ ಪತ್ತೆಯ ನೆಪದಲ್ಲಿ ಮಾಶಾಸನ ನಿಲುಗಡೆ ಮಾಡಿರುವುದು ಸರಿಯಲ್ಲ, ಕೂಡಲೇ ಮಾಸಾಶನ ನೀಡುವಂತೆ ಆಗ್ರಹಿಸಿ ಅಂಗವಿಕಲ ಮತ್ತು ಪೋಷಕರ ಒಕ್ಕೂಟದಿಂದ ಪ್ರತಿಭಟಿಸಲಾಯಿತು.

ಶುಕ್ರವಾರ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಬಳಿಕ ಆಡಳಿತ ಸೌಧಕ್ಕೆ ತೆರಳಿ ಈ ವಿಷಯವಾಗಿ ಉಪ ತಹಶೀಲ್ದಾರ್ ಶಿವಕುಮಾರ್ ಗೌಡ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಅಂಗವಿಕಲರ ಮತ್ತು ಪಾಲಕರ ಒಕ್ಕೂಟದ ತಾಲೂಕ ಅಧ್ಯಕ್ಷೆ ಬಿ.ರೇಣುಕಮ್ಮ ಮಾತನಾಡಿ, ಕಳೆದ ಮೂರ್ನಾಲ್ಕು ತಿಂಗಳಿಂದ ಅಂಗವಿಕಲರವೇತನ,ವೃದ್ಧಾಪ್ಯ ವೇತನಮತ್ತು ಸಂಧ್ಯಾ ಸುರಕ್ಷಾ ವೇತನಗಳು ಬರುತ್ತಿಲ್ಲ, ಬಹುತೇಕ ಅರ್ಹ ಫಲಾನುಭವಿಗಳು ಮಾಶಾಸನವನ್ನು ಅವಲಂಬಿಸಿ ಕುಟುಂಬವನ್ನು ನಿರ್ವಹಣೆ ಮಾಡುತ್ತಿದ್ದು, ಯಾವುದೋ ನೆಪ ಹೇಳಿಕೊಂಡು ಮಾಶಾಸನ ತಡೆಯಿಂದಾಗಿ ಅರ್ಹ ಫಲಾನುಭವಿಗಳು ಜೀವನ ನಿರ್ವಹಣೆ ತೊಂದರೆ ಆಗಿದೆ. ಫಲಾನುಭವಿಗಳು ಬೀದಿಗೆ ಬರುವ ಪರಿಸ್ಥಿತಿ ಬಂದೊದಗಿದೆ. ಕೂಡಲೇ ಮಾಶಾಸನವನ್ನು ನೀಡುವಂತೆ ಆಗ್ರಹಿಸಿದರು.

ಅಂಗವಿಕಲ ಮತ್ತು ಪಾಲಕರ ಒಕ್ಕೂಟದ ರಂಗಪ್ಪ ದಾಸರ, ಉಸ್ಮಾನ್ ಬಾಷಾ, ಡೊಳ್ಳಿನ ಬಸವರಾಜ, ಸರೋಜಮ್ಮ ಇತರರು ಪಾಲ್ಗೊಂಡಿದ್ದರು.

ನಮ್ಮ ಕುಟುಂಬದಲ್ಲಿ ತಂದೆ ಮತ್ತು ನಾನು ಪಾರ್ಶವಾಯು ಪೀಡಿತರು. ತಿಂಗಳಿಗೊಮ್ಮೆ ಬರುವ ಮಾಶಾಸನವೇ ನಮ್ಮ ಜೀವನಕ್ಕೆ ಆಧಾರ ಮಾಶಾಸನದಿಂದಾಗಿಯೇ ಕುಟುಂಬ ನಿರ್ವಹಣೆ ಔಷಧಿ ಖರ್ಚು ವೆಚ್ಚಗಳನ್ನು ನಿಭಾಯಿಸುತಿದ್ದೀವಿ. ಕಳೆದ ಮೂರು ತಿಂಗಳಿಂದ ಮಾಶಾಸನ ಬರುತ್ತಿಲ್ಲ, ಔಷಧಿ ಇತರ ಖರ್ಚು ವೆಚ್ಚಗಳಿಗೆ ತೊಂದರೆ ಆಗಿದೆ.

■ **ಆಳವುಂಡಿ ಗುರುಬಸವರಾಜ, ಮೂಲವಿ ಗ್ರಾಮ**



ಅಕ್ರಮ ಬಡಾವಣೆಗಳ ತೆರವು ಕಾರ್ಯಾಚರಣೆ

ಬಳ್ಳಾರಿ: ನಗರದಲ್ಲಿ ಸರ್ಕಾರಿ ಜಾಗವನ್ನು ಅತಿಕ್ರಮಣ ಮಾಡಿ ನಿವೇಶನಗಳನ್ನು ಮಾಡಿದ, ರಾಜ ಕಾಲುವೆಗಳನ್ನು ಒತ್ತುವರಿ ಮಾಡಿ ನಿರ್ಮಾಣ ಮಾಡಿದ ಅಕ್ರಮ ಬಡಾವಣೆಗಳನ್ನು ಜಿಲ್ಲಾಡಳಿತ ತೆರವುಗೊಳಿಸಿದೆ.

ಅಪರ ಜಿಲ್ಲಾಧಿಕಾರಿ ಮಹಮದ್ ಜುಬೇರ್, ಉಪ ವಿಭಾಗ ಅಧಿಕಾರಿ ರಾಜೇಶ್ ಎಚ್ .ಡಿ.ಅವರ ನೇತೃತ್ವದಲ್ಲಿ ತೆರವು ಕಾರ್ಯಾಚರಣೆ ಕಳೆದ ಸುಮಾರು ದಿನಗಳಿಂದ ನಡೆದಿದ್ದು, ಅಧಿಕಾರಿಗಳ ತಂಡ ಯಾರ ಮುಲಾಜಿಗೂ ಒಳಗಾಗದೇ, ಯಾರ ಒತ್ತಡಕ್ಕೂ ಮಣಿಯದೇ ತೆರವು ಕಾರ್ಯಾಚರಣೆಗೆ ಮುಂದಾಗಿದೆ. ನಗರದ ಪಾತ್ರ ಬೂದಿಹಾಳ ಪ್ರದೇಶದಲ್ಲಿ ಬೆಳ್ಳಂ ಬೆಳಿಗ್ಗೆ ಜೆಸಿಬಿ ವಾಹನ ಮೂಲಕ ಅಧಿಕಾರಿಗಳ ತಂಡ ತೆರಳಿ ಅತಿಕ್ರಮಣ ಮಾಡಿದ ಪ್ರದೇಶಗಳನ್ನು ತೆರವುಗೊಳಿಸುವ ಮೂಲಕ ಬಿಸಿ ಮುಟ್ಟಿಸಿದರು. ಸರ್ವೆ ನಂ.26ರಲ್ಲಿ 3.27 ಎಕರೆಯಲ್ಲಿ ಅಕ್ರಮವಾಗಿ ತಲೆಎತ್ತಿದ್ದ ಬಡಾವಣೆ, ಸರ್ವೆ ನಂ. 125 (ಪಿ) ನಲ್ಲಿ ರಾಜಕಾಲುವೆ ಸಮೇತ 7.8.ಎಕರೆ ಪ್ರದೇಶವನ್ನು ಜಿಲ್ಲಾಡಳಿತ ತೆರವುಗೊಳಿಸಿ ವಶಕ್ಕೆ ಪಡೆಯಿತು. ಅಧಿಕಾರಿಗಳು, ಯಾವ ಪ್ರಭಾವಿಗಳದ್ದೂ ಬಿಡೋಲ್ಲ, ಸರ್ಕಾರಿ ಸ್ಥಳವನ್ನು ಯಾರೇ ಇರುವರು, ಅತಿಕ್ರಮಣ, ಕಬಳಿಕೆ ಮಾಡಿದ್ದರೂ ಬಿಡುವ ಮಾತೆ ಇಲ್ಲ, ಯಾರ ಒತ್ತಡಕ್ಕೂ ಮಣಿಯದೇ ಮೇಲಧಿಕಾರಿಗಳ ನಿರ್ದೇಶನದಂತೆ ತೆರವು ಕಾರ್ಯಾಚರಣೆ ಮುಂದುವರೆಸುತ್ತೇವೆ, ಇಬ್ಬರು ಪ್ರಭಾವಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಚರ್ಚೆಗೆ ಗ್ರಾಸ: ನಗರದ ಸರ್ವೆ ನಂ.125(ಪಿ) ರಲ್ಲಿ ರಾಜಕಾಲುವೆ ಜಾಗ ಒತ್ತುವರಿ ಮಾಡಿ, ಒಟ್ಟು 7.87 ಎಕರೆ ಜಾಗವನ್ನು ರಾಜಕೀಯ ಪ್ರಭಾವಿ ನಾಯಕರ ಬೆಂಬಲ ಹೊಂದಿರುವ ವ್ಯಕ್ತಿಯೊಬ್ಬರು ಜನರಿಗೆ ಅಕ್ರಮವಾಗಿ ನಿವೇಶನಗಳನ್ನು ಮಾಡಿ ಹಂಚಿಕೆ ಮಾಡಿದ್ದರು ಎನ್ನಲಾಗಿದೆ. ಒಂದು ನಿವೇಶನ, ಕನಿಷ್ಠ 1.50ರಿಂದ 4 ಲಕ್ಷಕ್ಕೆ ಮಾರಾಟ ಮಾಡಿ, ಹಣವನ್ನು ಪಡೆದಿದ್ದಾರೆ. ಸುಮಾರು 38ಕ್ಕೂ ಹೆಚ್ಚು ಜನರಿಗೆ ಮಾರಾಟ ಮಾಡಿದ್ದಾರೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಇದು ರಾಜಕೀಯ ವಲಯದಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಕಾಂಗ್ರೆಸ್‌ನ ಮಹಾನಗರ ಪಾಲಿಕೆ ಸದಸ್ಯೆ ಉಮಾದೇವಿ ಅವರ ಪತಿ ಶಿವರಾಜ್ ಎನ್ನುವವರು ಬಡ ಜನರಿಗೆ ಸರ್ಕಾರಿ ಸ್ಥಳವನ್ನು ತೋರಿಸಿ ನಿವೇಶನಗಳನ್ನು ಮಾರಾಟ ಮಾಡಿದ್ದಾರೆ ಎನ್ನುವ ಆರೋಪಗಳು ಕೇಳಿ ಬಂದಿದೆ. ತೆರವು ಕಾರ್ಯಾಚರಣೆಯಲ್ಲಿ ಸರ್ವೆ ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಅಧಿಕಾರಿಗಳು ಇದ್ದರು.



ಮತದಾರರ ಪಟ್ಟಿಯ ಪರಿಷ್ಕರಣೆ ಸಹಕಾರ ನೀಡಿ: ಡಿಸಿ

ಯಾದಗಿರಿ: ಮತದಾರರ ಪಟ್ಟಿಯ ವಿಶೇಷ, ಸಮಗ್ರ ಪರಿಷ್ಕರಣೆ ಪಾರದರ್ಶಕವಾಗಿ ಮಾಡಲಾಗುತ್ತಿದ್ದು,ಇದಕ್ಕಾಗಿ ರಾಜಕೀಯ ಪಕ್ಷಗಳವರು ಅವಶ್ಯಕ ಸಹಕಾರ ನೀಡುವಂತೆ ಜಿಲ್ಲಾಧಿಕಾರಿ ರಾಹುಲ್ ಪಾಂಡ್ವೆ ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿ, ಚುನಾವಣಾ ಆಯೋಗದಿಂದ ರಾಜ್ಯದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಜೂನ್ 20ರಿಂದ ಪ್ರಾರಂಭಗೊಳಿಸಲಿದ್ದು, ವೇಳಾಪಟ್ಟಿಯನ್ನು ಪ್ರಕಟಿಸಿರುತ್ತದೆ. ಈ ಮಾಹಿತಿಯನ್ನು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳವರು ಗಮನಿಸಬೇಕು. ಯಾವುದೇ ದೂರುಗಳಿಗೆ ಅವಕಾಶ ನೀಡದೆ, ಜಿಲ್ಲಾಡಳಿತಕ್ಕೆ ಸಹಕರಿಸಲು ಅವರು ಸಲಹೆ ನೀಡಿದರು.

ವಿಶೇಷ ಸಮಗ್ರ ಪರಿಷ್ಕರಣೆ ಸುಗಮವಾಗಿ ಕೈಗೊಳ್ಳಲು ಮತಗಟ್ಟೆ ಮಟ್ಟದ ಅಧಿಕಾರಿಗಳ ಜೊತೆ ಸಹಕರಿಸಲು ಬೂತ್ ಮಟ್ಟದ ಏಜೇಂಟರನ್ನು ನೇಮಕ ಮಾಡಿ ಸಲ್ಲಿಸುವಂತೆ ಹಾಗೂ ಎಸ್‌ಐಆರ್ ಪ್ರಕ್ರಿಯೆಯಲ್ಲಿ ರಾಜಕೀಯ ಪಕ್ಷಗಳ ಪಾತ್ರದ ಕುರಿತಾಗಿ ತಿಳಿಸಿದರು.



ಒಟ್ಟಿನಲ್ಲಿ ವಿಶೇಷ ಸಮಗ್ರ ಪರಿಷ್ಕರಣೆಯು ಪಾರದರ್ಶಕವಾಗಿ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾ ಚುನಾವಣಾಧಿಕಾರಿ ರಮೇಶ ಕೋಲಾರ, ಸಹಾಯಕ ಆಯುಕ್ತರು ಶ್ರೀಧರ ಗೋಟೂರ, ಕಾಂಗ್ರೆಸ್ ಮುಖಂಡ ಸ್ಯಾಮಸನ್ ಮಾಳಿಕೇರಿ, ಬಿಜೆಪಿ ಮುಖಂಡ ಶ್ಯಾಮ್ಸನ್, ಶಂಕರ್ ಸೂನಾರ್, ಬಹು ಜನ ಸಮಾಜ ಪಕ್ಷದ ದೇವಾನಂದ್ ಕೊಳ್ಳಿ, ಜೆಡಿಎಸ್ ಶಾಂತಪ್ಪ ಜಾಧವ್ ಇದ್ದರು.

ಸಾಧನೆಗೆ ಅಧ್ಯಯನ ಅಗತ್ಯ: ಸುಭಾಷ್

ಹೂವಿನಹಡಗಲಿ: ಸಾಧನೆಗೆ ಅಧ್ಯಯನ ಅಗತ್ಯ ಎಂದು ಮಲ್ಲಾಪುರ ವಿದ್ಯಾ ಅಭಿವೃದ್ಧಿ ಸಂಘದ ಅಧ್ಯಕ್ಷ ಸುಭಾಷ್ ಕೆ. ಹೇಳಿದರು.

ಸಮೀಪದ ಹಂಪಸಾಗರ ಗ್ರಾಮದಲ್ಲಿ ಜ್ಞಾನಧಾರೆ ವಿನೂತನ ಮಾರ್ಗದರ್ಶಿ ಶಿಕ್ಷಣ ಕೇಂದ್ರದ ಬೇಸಿಗೆ ಶಿಬಿರದ ಸಮಾರೋಪ ಹಾಗೂ 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಸನ್ಮಾನ ನೆರವೇರಿಸಿ ಅವರು ಮಾತನಾಡಿದರು.

ಎಸ್ಸೆಸ್ಸೆಲ್ಸಿ ನಂತರ ಉನ್ನತ ಶಿಕ್ಷಣವನ್ನು ಚೆನ್ನಾಗಿ ಓದಿ ಹೆತ್ತವರ ಆಸೆಗಳನ್ನು ಪೂರೈಸುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಿರಿ ಎಂದು ತಿಳಿಸಿದರು. ಮುಖ್ಯ ಅತಿಥಿ ಬಸವರಾಜ ಅಕ್ಕಿ ಗ್ರಾಮೀಣ ಪ್ರದೇಶದಲ್ಲಿ ಎಸ್ಸೆಸ್ಸೆಲ್ಸಿ ಸೇರಿದಂತೆ ವಿವಿಧ ತರಗತಿ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರದ ಮೂಲಕ ಮೂಲಭೂತ ಕಲಿಕಾ ಕೌಶಲ್ಯಗಳನ್ನು ಬೆಳೆಯುತ್ತಿರುವುದು ಉತ್ತಮ ನಡೆ ಎಂದು ಹೇಳಿದರು.

ಶಿಬಿರದ ನಿರ್ದೇಶಕ ಲಿಂಗೇಶ್ ಪಿ.ಎಲ್. ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಶಿಬಿರಕ್ಕೆ ಮಕ್ಕಳನ್ನು ಕಳುಹಿಸಿದ ಪಾಲಕ ಪೋಷಕರಿಗೆ ಮತ್ತು ಸಹಕರಿಸಿದ ಎಲ್ಲರಿಗೂ ಧನ್ಯವಾದ ತಿಳಿಸಿದರು.



ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸಿಂಚನ ಪ್ರಕಾಶನದ ವತಿಯಿಂದ ವಿದ್ಯಾರ್ಥಿಗಳಿಗೆ ಕಿರು ಕಾಣಿಕೆಯನ್ನು ಗಣ್ಯರು ವಿತರಿಸಿದರು. ಕಾರ್ಯದರ್ಶಿ ಬ್ರಹ್ಮಾನಂದ, ಶಿಕ್ಷಕರಾದ ಸರಸ್ವತಿ ಲಿಂಗೇಶ್, ಶಿಲ್ಪಾ ವಿ., ಮಂಜುಳಾ ಡಿ., ಪ್ರಸಾದ್‌ಕುಮಾರ್ ಎಸ್. ಉಪಸ್ಥಿತರಿದ್ದರು. ಶಿಬಿರದ ಮಕ್ಕಳು ತಮ್ಮ ಅನಿಸಿಕೆಗಳನ್ನು ತಿಳಿಸಿದರು. ನಂತರ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಪಕ್ಷಾತೀತವಾಗಿ ಮಾದಿಗರ ಸಂಘಟನೆ

ವಿಜಯನಗರ: ಮಾದಿಗರು ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ತೀರಾ ಹಿಂದುಳಿದಿದ್ದಾರೆ. ಅವರನ್ನು ಸಂಘಟಿಸಲು 'ಕರ್ನಾಟಕ ಮಾದಾರ ಮಹಾಸಭಾ' ಮೂಲಕ ಆರಂಭವಾಗಿದೆ. ಪ್ರತಿ ಜಿಲ್ಲೆಯಲ್ಲಿ ಪಕ್ಷಾತೀತವಾಗಿ ಸದಸ್ಯತ್ವ ಅಭಿಯಾನಕ್ಕೆ ಚುರುಕು ನೀಡಲಾಗಿದೆ ಎಂದು ಮಾಜಿ ಸಚಿವರೂ ಆದ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಎಚ್.ಆಂಜನೇಯ ಹೇಳಿದರು.

ಹೊಸಪೇಟೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಸದಸ್ಯತ್ವ ಅಭಿಯಾನದಲ್ಲಿ ಪಾಲ್ಗೊಳ್ಳುವುದಕ್ಕೆ ಮುನ್ನ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಚಿವ ಕೆ.ಎಚ್.ಮುನಿಯಪ್ಪ ಅವರ ಅಧ್ಯಕ್ಷತೆಯಲ್ಲಿ ಮಹಾಸಭಾ ಆರಂಭಗೊಂಡಿದೆ. ಸದ್ಯ ಎಲ್ಲಾ ಜಿಲ್ಲೆಗಳಲ್ಲಿ ಹಂಗಾಮಿ ಅಧ್ಯಕ್ಷರು, ತಾಲ್ಲೂಕು ಅಧ್ಯಕ್ಷರನ್ನು ನೇಮಿಸಿ, ಮುಂದಿನ ದಿನಗಳಲ್ಲಿ ಚುನಾವಣೆ ಮೂಲಕ ಆಯ್ಕೆ ಮಾಡಲಾಗುವುದು.

ಮಹಾಸಭಾ ವತಿಯಿಂದ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸುವ ಉದ್ದೇಶ ಇದೆ. ಇದಕ್ಕಾಗಿ ಬೆಂಗಳೂರು ಸುತ್ತಮುತ್ತ 30 ಎಕರೆ ನಿವೇಶನ ಒದಗಿಸಲು ಸರ್ಕಾರವನ್ನು ಕೇಳಿಕೊಂಡಿದ್ದೇವೆ ಎಂದರು.

ಸರ್ಕಾರ ಒಳಮೀಸಲಾತಿ ವಿಚಾರದಲ್ಲಿ ಇಟ್ಟಿರುವ ಹೆಜ್ಜೆ ತೆಗೆದುಕೊಂಡಿರುವ ನಿರ್ಧಾರಗಳು ಸ್ವಾಗತಾರ್ಹ. ಆದರೆ 15 ಹುದ್ದೆಗಳಿಗಿಂತ ಕಡಿಮೆ ಇರುವ ಹುದ್ದೆಗಳಿಗೆ ಒಳಮೀಸಲಾತಿ ಅನ್ವಯ ಆಗುವುದಿಲ್ಲ ಎಂಬ ಸರ್ಕಾರದ ನಿರ್ಧಾರಕ್ಕೆ ನಮ್ಮ ಪ್ರಬಲ ಆಕ್ಷೇಪ ವ್ಯಕ್ತಪಡಿಸಿದ್ದೇವೆ. ಇದನ್ನು ಸಹ ಸರಿಪಡಿಸುವುದಾಗಿ ಮುಖ್ಯಮಂತ್ರಿ ಅವರು ಭರವಸೆ ನೀಡಿದ್ದಾರೆ ಎಂದರು.

ಮಾದಿಗ ಸಮಾಜದ ಮುಖಂಡರಾದ ಹಿರಣ್ಯಯ್ಯ, ಎಂ.ಸಿ.ವೀರಸ್ವಾಮಿ, ನಿಂಬಗಲ್ ರಾಮಕೃಷ್ಣ, ಎಚ್.ಶೇಷು, ಬಸವರಾಜ, ರಾಮಾಂಜನೇಯ, ಮಲ್ಲಿಕಾರ್ಜುನ ಕೊಟಗಿನಾಳ ಉಪಸ್ಥಿತರಿದ್ದರು.

ಉತ್ತಮ ಮಳೆ: ತೊಗರಿ ಬಿತ್ತನೆಗೆ ಸಿದ್ಧತೆ

▶ **ಪುಷ್ಪವತಿ ಬಸಯ್ಯ ಜಿಎಂ**

ದಿಗಂತ ವಿಶೇಷ

ಕುರುಗೋಡು: ಕಳೆದ ಎರಡು ಮೂರು ದಿನಗಳಿಂದ ಮಳೆಯಾಗಿದ್ದು, ಗುರುವಾರ ಬಿತ್ತನೆ ಚಿಗುರಿದೆ. ಬಹುತೇಕ ಈ ಭಾಗದಲ್ಲಿ ಆಗಾಗ ಮಳೆಯಿಂದ ಭೂಮಿಯು ಕೃಷಿ ಚಟುವಟಿಕೆ ಸಮಗ್ರವಾಗಿ ಮಾಗಿ ಹುಣ್ಣಿಮೆಯ ದಿನಗಳ ನಂತರ ಬೆಳೆ ಬಿತ್ತನೆ ಸಾಕ್ಷಿ ಕಂಡಿದೆ.

ಕೃತಿಕ ಮಳೆಗೆ ತಂಪಾದ ಇಳೆ: ಕೃಷಿ ಚಟುವಟಿಕೆಯತ್ತ ರೈತರ ತೊಗರಿ ಬಿತ್ತನೆಗೆ ಬಹುತೇಕ ಒಲವು ಕಂಡು ಕೊಳ್ಳಲಿದ್ದಾರೆ. ಕುರುಗೋಡು ಸಮೀಪದ ಶಿರಿಗೇರಿ ಮುದಟ್ಟನೂರು ಹಾಗೂ ಕುರುಗೋಡು ತಾಲೂಕಿನ ಸೋಮಲಾಪುರ ಲಕ್ಷ್ಮಿಪುರ ಇತರೆಕಡೆ ಕೆಂಪು ತೊಗರಿಗೆ ಬಿತ್ತನೆಗೆ ಕಾರ್ಯಕ್ಕೆ ಒಂದು ಪ್ರಾರಂಭಿಕವಾಗಿದ್ದು, ಕೆಲ ಹೊಲಗಳಲ್ಲಿ ಹಸಿಹ ಹದ ಹೆಚ್ಚಾಗಿದ್ದು, ಕಾರಣ ಬಹುತೇಕ ರೈತರು ಮಧ್ಯಾಣ ಬಿತ್ತನೆಗೆ ಮಗ್ನರಾಗಿದ್ದಾರೆ ಕೃತಿಕಾ ಮಳೆಯು ಗುರುವಾರ ಮಧ್ಯೆ ರಾತ್ರಿ ಗುಡುಗು ಸಿಡಿಲಿನೊಂದಿಗೆ ಸುರಿದು ಆರಂಭದಲ್ಲಿ ಭರವಸೆ ಮೂಡಿಸಿದೆ. ಈ ವರ್ಷ ಕೃತಕ ಮಳೆ ಬಂದರೆ ರೋಹಿಣಿ ಮಳೆ ಕೃಷಿ ಚಟುವಟಿಕೆಗಳಿಗೆ ಬಿತ್ತನೆಗೆ ಪೂರಕವಾಗಿ ಬೆಳೆಗೆ ಸುರಿಯಲಿದೆ ಎಂಬ ನಂಬಿಕೆ ರೈತರಲ್ಲಿ ಪ್ರತೀತಿ ಇದೆ. ಬಿಸಿಲ ತಾಪಕ್ಕೆ ತಂಪರೆದ ಮಳೆರಾಯ ಜಮೀನುಗಳಲ್ಲಿ ಕೃಷಿ ಚಟುವಟಿಕೆಗೆ ಭೂಮಿ ಹದ ಮಳೆಯೊಂದಿಗೆ ಬೀಸಿದ ಗಾಳಿಗೆ ಕೆಲವು ಪ್ರದೇಶಗಳಲ್ಲಿ ಮರಗಳು ಉರುಳಿವೆ. ಕೆಲವು ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಿದೆ.

ಬಿಸಿಲಿನ ತಾಪಕ್ಕೆ ಹೈರಾಣಾಗಿದ್ದ ಜನರಿಗೆ ಈ ಮಳೆ ವರದಾನವಾಗಿದೆ. ಮಣ್ಣು ಹದವಾಗುತ್ತಿದ್ದಂತೆಯೇ ರೈತರು ಬಿತ್ತನೆ ಕಾರ್ಯಕ್ಕೆ ಹಾಗೂ ಭೂಮಿ ಸಿದ್ಧತೆಗೆ ಮುಂದಾಗುವ ಸಂಭ್ರಮದಲ್ಲಿದ್ದಾರೆ. ತಾಲ್ಲೂಕಿನ ಅಂತರ್ಜಲ ಮಟ್ಟ ಸುಧಾರಣೆಗೂ ಸಹಕಾರಿಯಾಗಲಿದೆ ಎಂದು ಜನರು ಅಂದಾಜಿಸಲಾಗಿದ್ದು ಕೆಲವೆಡೆ ಹಳ್ಳ ಕೊಳ್ಳಗಳಲ್ಲಿ ನೀರು ನಿಂತಿದೆ. ಇದು ಜಾನುವಾರುಗಳಿಗೆ ಹಾಗೂ ಪ್ರಾಣಿ ಪಕ್ಷಿಗಳಿಗೆ ಅನುಕೂಲವಾಗಿದೆ. ಒಟ್ಟಿನಲ್ಲಿ ಹಲವಾರು ದಿನಗಳಿಂದ ಬಿರು ಬಿಸಿಲು ತಾಪಕ್ಕೆ ರೋಸಿ ಹೋಗಿದ್ದ ಜನರಿಗೆ ಕೃತಿಕ ಮಳೆ ಇಳೆ ತಂಪು ಮಾಡಿದೆ ಎನ್ನಬಹುದು.

ವಾರ್ಷಿಕ ತೊಗರಿ ಧರ: ಕೇಂದ್ರ ಬೆಂಬಲ ಬೆಲೆಯಲ್ಲಿನ 14 ಬೆಳೆಗಳ ಪೈಕಿ ದ್ವಿಧಳ ಧ್ಯಾನ್ ತೊಗರಿಗೆ 8450 ನಿಗದಿ ಮಾಡಲಾಗಿದೆ. (ಈ ಸಲ 450 ಧರ) ರೈತರಿಗೆ ದೊರೆಯಲಿದೆ.



ಬಹುತೇಕ ಉತ್ತಮ ಹದ ಬಿತ್ತನೆ ಕೈಗೊಳ್ಳಬಹುದು. ಇದು ಮುಂಗಾರು ಪೂರ್ವಮಳೆಯಾಗಿದ್ದು, ನಂತರ ದಿನಗಳು ಮಳೆ ಬಿದ್ದರೆ ಬೆಳೆ ಬೆಳವಣಿಗೆ ಅನುಕೂಲವಾಗಲಿದೆ.

■ **ದೇವರಾಜ್, ಹಿರಿಯ ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರ**

ತೈಲ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ



ಹಗರಿಬೊಮ್ಮನಹಳ್ಳಿ: ಕೇಂದ್ರ ಸರ್ಕಾರದ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಕ್ರಮ ಖಂಡಿಸಿ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಪಟ್ಟಣದ ಬಸವೇಶ್ವರ ವೃತ್ತದ ಬಳಿ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಕೇಂದ್ರ ಸರ್ಕಾರ ವಾರದಲ್ಲಿ ಮೂರು ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಕ್ರಮವನ್ನು ಪಕ್ಷವು ಬಲವಾಗಿ ಖಂಡಿಸುತ್ತದೆ. ದೇಶದಲ್ಲಿ ಈಗಾಗಲೇ ದುಡಿಯುವ ವರ್ಗದ ಜನರು ಆರ್ಥಿಕ ಸಂಕಷ್ಟದಲ್ಲಿದ್ದಾರೆ.

ಜನರ ಮೇಲಿನ ಆರ್ಥಿಕ ಹೊರೆಯನ್ನು ತಡೆಯಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಂಧನದ ಮೇಲೆ ವಿಧಿಸುತ್ತಿರುವ ಅತಿಯಾದ ತೆರಿಗೆಯನ್ನು ಕೂಡಲೇ ಕಡಿತಗೊಳಿಸಬೇಕು ಎಂದು ಹೇಳಿದರು.

ಪಕ್ಷದ ತಾಲೂಕು ಕಾರ್ಯದರ್ಶಿ ಬಿ.ಮಾಳಮ್ಮ, ಜಿಲ್ಲಾಮುಖಂಡ ಆರ್.ಎಸ್.ಬಸವರಾಜ, ತಾಲೂಕು ಮುಖಂಡರಾದ ಎಸ್.ಜಗನ್ನಾಥ, ಎಂ.ಆನಂದ್, ಕೆ.ಗಾಳೆಪ್ಪ, ಕೆ.ರಮೇಶ್, ಕೆ.ಅಂಜಿನಮ್ಮ, ಪಿ.ಚಾಂದಾಭಿ, ಜಿ.ರಮೇಶ್, ಕೆ.ರಾಮಣ್ಣ, ದುರುಗಮ್ಮ, ರಂಗಪ್ಪ, ದಾಸರ, ಕರಿಬಸಮ್ಮ ಇತರರಿದ್ದರು.